ಅಧ್ಯಕ್ಷರು : ಈಗ ಸಭೆಯನ್ನು ಇಲ್ಲಿಗೆ ಮುಕ್ತಾಯ ಮಾಡಿ ಮಧ್ಯಾಹ್ನ 3 ಗಂಟೆವರೆಗೂ ಮುಂದೂಡಿದ್ದೇನೆ.

(ಸದನವು ಮಧ್ಯಾಹ್ನ 1.53ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(3-17 ಗಂಟೆಗೆ ಸಭೆ ಪುನಃ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರೆಸಬಹುದು.

ಅವಿಶ್ವಾಸ ನಿರ್ಣಯದ ಬಗ್ಗೆ ಮುಂದುವರಿದ ಚರ್ಚೆ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ನಿನ್ನೆಯ ದಿವಸ ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿ 20-25 ನಿಮಿಷ ಮಾತನಾಡಿದ ಮೇಲೆ ಮುಂದೆ ಮಾತನಾಡುವುದಕ್ಕೆ ಆಗಲಿಲ್ಲ. ಈಗ ನಾನು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತಿದ್ದೇನೆ. ನಿನ್ನೆಯ ದಿವಸ ಈ ಕಡೆಯಲ್ಲಿ ಇರುವಂಥ ಹಿರಿಯ ಮಾಜಿ ಮುಖ್ಯಮಂತ್ರಿಗಳು, ಹಿರಿಯ ಸದಸ್ಯರಾದ ಶ್ರೀ ಬಂಗಾರಪ್ಪನವರು, ಮೊಯಿಲಿಯವರು, ನಾಗೇಗೌಡರು, ನಾಣಯ್ಯನವರು 'ಕಾನೂನು ಓದಿಬನ್ನಿ, ನಿಯಮಾವಳಿಗಳನ್ನು ತಿಳಿದುಕೊಂಡು ಬನ್ನಿ ಎಂದು ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಹಿರಿಯ ಸದಸ್ಯರಾದ ಶ್ರೀ ನಂಜೇಗೌಡರು ಇನ್ನೂ ಚೆನ್ನಾಗಿ ನಾನು ಬಿಸಿ ಮುಟ್ಟುವ ರೀತಿಯಲ್ಲಿ ಹೇಳುತ್ತಿದ್ದೆ? ನೀವು ನೇರವಾಗಿ ಹೇಳಿದಿರಿ ಎಂದು ಹೇಳಿದರು. ನಾನು ಅವರೆಲ್ಲರಿಗೂ ಕೂಡ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನನ್ನಲ್ಲಿ ಏನು ಕೊರತೆ ಇದೆ, ಕಾನೂನು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ನಿಶ್ಚಯ ಮಾಡಿದ್ದೇನೆ. ಅಧ್ಯಕ್ಷರೇ, ನಾನು ತುಂಬ ಹಳ್ಳಿಯಿಂದ ಬಂದವನು. ನಾನು ನನ್ನ ಅಪ್ಪನಿಗೆ ಹೇಳುತ್ತಿದ್ದೆ ಹೆಚ್ಚು ಓದಿಸಿ ಅಂತ. ಆದರೆ ಅವರು ಹೆಚ್ಚು ಓದಿಸಲಿಲ್ಲ. ಅವರು ಹೇಳುತ್ತಿದ್ದರು 'ನೀನು ಹೆಚ್ಚು ಓದಿಕೋಬೇಡ, ಹೆಚ್ಚು ತಿಳಿದುಕೊಳ್ಳುವುದಕ್ಕೆ ಹೋಗಬೇಡ. ಈ ಕಾನೂನು ಬಹುತೇಕವಾಗಿ ಉಪಯೋಗವಾಗುವಂಥಾದ್ದು ಭ್ರಷ್ಟರನ್ನು, ಕೊಲೆಗಡುಕರನ್ನು ರಕ್ಷಣೆ ಮಾಡುವುದಕ್ಕೆ ಹೊರತಾಗಿ ಜನರ ಹಿತ ರಕ್ಷಣೆಗೋಸ್ಕರ ಅಲ್ಲ ಇದು. ಉದ್ದೇಶ ಒಳ್ಳೆಯದು ಇದ್ದರೂ ಸಹ ಅದರ ದಿಕ್ಕು ಬೇರೆಯಾಗಿದೆ. ಅದಕ್ಕಾಗಿ ನಿನಗೆ ಏನೂ ಗೊತ್ತಿಲ್ಲದಿದ್ದರೆ ಕಾನೂನನ್ನು ತಿಳಿದುಕೊಂಡಿರುವಂಥ ಜನ ಬಹಳ ಮಂದಿ ಇದ್ದಾರೆ. ಓದಿದವರು ಬಹಳ ಜನ ಇದ್ದಾರೆ. ಅವರನ್ನು ಕೇಳಿ ತಿಳಿದುಕೊಳ್ಳಬಹುದು. ಎಲ್ಲವನ್ನೂ ನಂಬಬೇಡ. ಸರಿಯೆಂದು ತಿಳಿದುಕೊಂಡು ಮುಂದೆ ಹೋಗು, ಇಲ್ಲದಿದ್ದರೆ ನಿನ್ನನ್ನು ಸಿಕ್ಕಿಸಿಬಿಡುತ್ತಾರೆ. ಎಂದು ಅವರು ಹೇಳಿದ್ದರು. ಮಾನ್ಯ ಉಪಾಧ್ಯಕ್ಷರೇ, ನಿನ್ನೆ ದಿವಸ ನನಗೆ ಎಚ್ಚರ ಬಂದಿದೆ.

ಸನ್ಮಾನ್ಯ ಅಧ್ಯಕ್ಷರೇ, ನನಗೆ ದುಃಖ ಆಗುವಂತಾದ್ದು, ಇಷ್ಟೆಲ್ಲಾ 8 ತಿಂಗಳಿಂದ ಹಗಲು ದರೋಡೆಯಾಗುತ್ತಿದೆ ಎಂದು ಜನರು ಮಾತನಾಡುತ್ತಿದ್ದಾರೆ, ಲೂಟಿಯಾಗುತ್ತಿದೆ ಎಂದು ಮಾತನಾಡುತ್ತಾ ಇದ್ದಾರೆ, ಸರ್ಕಾರದ ಖಜಾನೆ ಖಾಲಿಯಾಗುತ್ತಿದೆ ಎಂದು ಮಾತನಾಡುತ್ತಾ ಇದ್ದರೆ, ಒಬ್ಬ ಅಧಿಕಾರಿ ಹೊರಗಡೆ ಬಂದು ಇದೆಲ್ಲಾ ಆಗುತ್ತಾ ಇದೆ, ಸಹಿಸಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ, ಎಂದು ಹೇಳಲಿಲ್ಲ. ಇನ್ನೊಬ್ಬ ಮಹಾರಾಷ್ಟ್ರದ ಖೈನಾರ್ ಆಗುವುದಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ, ಬಹಳ ಪ್ರಾಮಾಣಿಕ

ಅಧಿಕಾರಿಗಳು ಇದ್ದಾರೆ. ಅವರಿಗೆ ಅವಕಾಶಗಳು ಇಲ್ಲ, ಅವರನ್ನು ಬೇರೆ ಕಡೆ ಎತ್ತಿದ್ದಾರೆ ಏಕೆ? ಪ್ರಾಮಾಣಿಕ ಅಧಿಕಾರಿಗಳು ಇಲ್ಲಿದ್ದರೆ, ಹಿಂದೆ ಮಾಡಿದಂಥದ್ದು ಬಹಿರಂಗವಾಗುತ್ತದೆ, ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ನಾವು ಮಾಡಿದ್ದನ್ನು ಬಹಿರಂಗ ಮಾಡುತ್ತಾರೆ, ಕಷ್ಟವಾಗುತ್ತದೆ ಎಂದು ಬಹಳ ವ್ಯವಸ್ಥಿತವಾಗಿ ಪ್ರಾಮಾಣಿಕ ಅಧಿಕಾರಿಗಳನ್ನು ಎತ್ತಿ ಹಾಕಿದ್ದಾರೆ, ಸ್ವಾಮಿ ನಿಷ್ಟೆ ಇರುವಂತಹವರನ್ನು, ಮುಖ್ಯಮಂತ್ರಿಗಳ ಭಾಷೆಯಲ್ಲಿ ಹೇಳುವುದಾದರೆ, ನಾನಂದುಕೊಂಡಿದ್ದೇನೆ, ಸ್ವಾಮಿ ನಿಷ್ಠೆ, ಯಾರಿಗಿರಬೇಕು? ಈ ರಾಜ್ಯದ ಜನತಾ ಜನಾರ್ಧನ ಯಾರಿದ್ದಾನೆ, ಅವನು ನಮ್ಮ ಸ್ವಾಮಿ, ನಮ್ಮ ಆರಾಧ್ಯ ದೇವತೆ. ಆ ಅರ್ಥದಲ್ಲಿ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೆ.

ಆದರೆ, ಇರುವ ಅಧಿಕಾರಿಗಳು, ನಡವಳಿಕೆಗಳನ್ನೆಲ್ಲಾ ನೋಡಿದಮೇಲೆ, ಸ್ವಾಮಿ ನಿಷ್ಟೆ ಎಂದರೆ, ಅಧಿಕಾರ ನಡಸುವಂಥ ಜನ, ನಾವೇನಿದ್ದೇವೆ, ನಾವೇ ನಿಮಗೆ ದೇವರು ನಮ್ಮನ್ನು ರಕ್ಷಣೆ ಮಾಡಿಕೊಂಡು, ನಾವು ಹೇಳಿದಹಾಗೆ ಕೇಳಿಕೊಂಡು ಬಿದ್ದಿರು, ಇಲ್ಲದೇಹೋದರೆ ಹುಷಾರ್ ಇದಕ್ಕೆ ಸ್ವಾಮಿನಿಷ್ಠೆ ಎನ್ನುತ್ತಾರೆ. ಆ ರೀತಿಯ ಪ್ರಾಮಾಣಿಕ ಅಧಿಕಾರಿಗಳನ್ನು ಎತ್ತಿಹಾಕಿ, ಇವರಿಗೆ ಸಹಕಾರ ಕೊಡುವಂಥ ಅಧಿಕಾರಿಗಳನ್ನು ಹಾಕಿಕೊಂಡಿದ್ದಾರೆಂದು ಜನ ಮಾತನಾಡುತ್ತಾರೆ. ಜನ ಮಾತನಾಡುವುದಕ್ಕೆ ಶುರು ಮಾಡಿದ್ದಾರೆ, ನಾನು ಹೇಳುವುದಿಲ್ಲ. ಏಕೆಂದರೆ, ದಾಖಲೆಗಳು ಇಲ್ಲ. ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ಹೆಸರನ್ನು ಹೇಳಿ, ಅವರು, ನಾವೆಲ್ಲಾ ಇಲ್ಲಿ ಬಂದಿದ್ದೇವೆ. ಇಲ್ಲದೇ ಹೋಗಿದ್ದರೆ, ನಾವು ಎಲ್ಲೋ ಬೀದಿಯಲ್ಲಿ, ರಸ್ತೆಯಲ್ಲಿ ಇರಬೇಕಾಗಿತ್ತು. ಶಾಸನ ಸಭೆಯ ಸದಸ್ಯರಾಗಿ, ಅವರು ಮುಖ್ಯಮಂತ್ರಿಗಳು, ನಾನು ವಿರೋಧ ಪಕ್ಷದ ನಾಯಕನಾಗಿ ಬಂದಿದ್ದೇನೆ. ಯಾವುದೋ ಹಳ್ಳಿಯಿಂದ ಬಂದ, ಬಡಬೋರೇಗೌಡ ರೈತನ ಮಗ ನಾನು. ಅವರ ಸ್ಯಾಕ್ರಿಫೈಸ್, ಅವರ ಹೋರಾಟ, ಅಂದಿನ ಕರಾಳ ದಿವಸಗಳ ವಿರುದ್ಧ ಹೋರಾಟ ಮಾಡಿ, ಹನಿ ಹನಿ ರಕ್ತವನ್ನು ಸುರಿಸಿ, ತಂದುಬಿಟ್ಟರು ಆವತ್ತಿದ್ದಂಥ ಸರ್ವಾಧಿಕಾರಿ ಸರ್ಕಾರವನ್ನು ಅವರ ಹೆಸರನ್ನು ಹೇಳಿಕೊಂಡು ಅಧಿಕಾರ ನಡೆಸುವಂಥ ಜನ, ಒಂದು ವಿರೋಧಪಕ್ಷವಾಗಿ ಹೋರಾಟ ಮಾಡಿ, ಜನ ಮನ್ನಣೆಯನ್ನು ಗಳಿಸಿಕೊಂಡು ನಮ್ಮ ದೇವೇಗೌಡರು ಇಲ್ಲಿ ಕುಳಿತಿದ್ದಾರೆ. ಇವರು ಆವತ್ತಿನ ದೇವೇಗೌಡರೇ ಎಂದು ನನಗೆ ಈಗ ಅನುಮಾನ ಬರುತ್ತದೆ.

ಅವತ್ತು ವಿರೋಧ ಪಕ್ಷದಲ್ಲಿದ್ದುಕೊಂಡು ಹೋರಾಟ ಮಾಡುತ್ತಿದ್ದರು. ರೈತನ ಮಗ, ರೈತರ ಹಿತರಕ್ಷಣೆಗೆ ಹೋರಾಟ ಮಾಡುತ್ತಾರೆ ಎಂದು ಹೇಳಿಕೊಂಡರಲ್ಲ. ಅದೇ ದೇವೇಗೌಡರು ಇವರು ಹೌದೋ ಅಲ್ಲವೋ ಎಂಬ ಅನುಮಾನ ಬರುವ ರೀತಿಯಲ್ಲಿ ಇವತ್ತು ಆಡಳಿತವನ್ನು ಈ ಸರ್ಕಾರ ನಡೆಸುತ್ತಾ ಇದೆ. ಸನ್ಮಾನ್ಯ ಅಧ್ಯಕ್ಷರೇ, ದೇವೇಗೌಡರು ಏನು ಹೇಳಿದರು. ನೀರಾವರಿ ಸಚಿವರಾಗಿ ತಾವು ಏನು ಹೇಳಿದಿರಿ. ನಾನು ನೀರಾವರಿ ಸಚಿವನಾಗಿದ್ದಾಗ, ರಾಮಕೃಷ್ಣ ಹೆಗಡೆಯವರಿಗೆ ರೈತರ ಬಗ್ಗೆ ಕಾಳಜಿ ಇಲ್ಲ, ನೀರಿಗೆ ದುಡ್ಡು ಕೊಡಲಿಲ್ಲ, ಏಕೆ ಬೇಕು ಆ ಕುರ್ಚಿ ಎಂದು ಕಿತ್ತುಹಾಕಿ ಬಂದರು. ಹೊಗೆದು, ಹೊಗೆದು ಬಂದರು. ಜನ ಅಂದುಕೊಂಡರು. ನೀರು ಕೊಡುವ ಗೌಡರು ಬಂದರು ಎಂದು ನಂಬಿಬಿಟ್ಟರು. 8 ತಿಂಗಳಲ್ಲಿ ರೈತರು ನೆಗದುಬಿದ್ದುಹೋದರು. ಮಣ್ಣು ತಿನ್ನುವ ಸ್ಥಿತಿಗೆ ಬಂದರು. ಒಂದು ಹೊಸ ನೀರಾವರಿ ಯೋಜನೆಗೆ ಒಂದು ಪೈಸೆ ಕೊಡಲಿಲ್ಲ. ದುಡ್ಡು ಇದೆ ಎಂದು ಹಣಕಾಸಿನ ಸಚಿವರು ಹೇಳುತ್ತಾರೆ. ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಮುಂದೆ ಕಷ್ಟಕಾಲ ಬರಬಹುದು. ಇಂದಿರಾ ವಿಕಾಸ ಪತ್ರ ತೆಗೆದುಕೊಳ್ಳಿ, 5 ಅಥವಾ ಐದೂವರೆ ವರ್ಷದಲ್ಲಿ ಡಬಲ್ ಆಗುತ್ತದೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಆಗಲಿಲ್ಲ. ನೀರಾವರಿ ಯೋಜನೆಗೆ ದುಡ್ಡು ಕೊಡಲಿಲ್ಲ. ಬರಗಾಲದಲ್ಲಿ ತತ್ತರಿಸಿ ಹೋಗಬೇಕಾದರೆ, ಒಂದು ರೂಪಾಯಿ ಹಣವನ್ನು ಬಿಡುಗಡೆ ಮಾಡದೇ, ನಾನು ರೈತರ ಪರ, ರೈತರ ಪರ ಎಂದು ಹೇಳಿಕೊಂಡು ಹೋಗುತ್ತಿದ್ದಾರೆ.

ಶ್ರೀ ಜಿ. ಬಸವಣ್ಣೆಪ್ಪ : ಪಾಯಿಂಟ್ ಆಫ್ ಆರ್ಡರ್...

ಶ್ರೀ ಬಿ.ಎಸ್. ಯಡಿಯೂರಪ್ಪ : ಹೋರಾಟ ಮಾಡಿದ್ದೇನೆ ಎಂದು ಹೇಳಿದರು, ಏನು ಹೋರಾಟ ಮಾಡಿದರು. ಇವತ್ತು ತುಂಬಾ ನೊಂದು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ನಿರೀಕ್ಷೆ ಮಾಡಿದ್ದೆ. ನಮ್ಮ ರಾಜ್ಯದಲ್ಲಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿ ಬಂದಮೇಲೆ, ಎಲ್ಲವನ್ನೂ ಬದಿಗೊತ್ತಿ ರಸಗೊಬ್ಬರವನ್ನು ಕಡಿಮೆ ದರದಲ್ಲಿ ಕೊಡುತ್ತಾರೆಂದು ಅಂದುಕೊಂಡಿದ್ದೆ. ಬೇರೆ ರಾಜ್ಯಕ್ಕಿಂತ ಕಡಿಮೆ ಬೆಲೆಯಲ್ಲಿ ರಸಗೊಬ್ಬರ ಕೊಡುತ್ತಾರೆಂಬುದು ಸುಳ್ಳಾಯಿತು. ಇಡೀ ರಾಜ್ಯದಲ್ಲಿ ಬೇರೆ ರಾಜ್ಯಗಳಿಗಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟವಾಗುತ್ತಿದೆ. ರೈತರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ.

ಶ್ರೀ ಜಿ. ಬಸವಣ್ಣೆಪ್ಪ : ಪಾಯಿಂಟ್ ಆಫ್ ಆರ್ಡರ್, ವಿರೋಧಪಕ್ಷದ ನಾಯಕರು ಗುರುತರವಾದ ಆಪಾದನೆ ಮಾಡಿದ್ದಾರೆ. ನೀರಾವರಿ ಯೋಜನೆಗಳಿಗೆ 8 ತಿಂಗಳಿಂದ ಒಂದು ಪೈಸೆ ಕೂಡ ಕೊಟ್ಟಿಲ್ಲ. ಜನ ಮಣ್ಣು ತಿಂದುಹೋಗಿದ್ದಾರೆಂದು....

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ವಿರೋಧಪಕ್ಷದ ನಾಯಕರು ಮಾತನಾಡುವಾಗ, ಯಾರೂ ಡಿಸ್ಟರ್ಬ್ ಮಾಡಬೇಡಿ. ದಯಮಾಡಿ ನಾನು ವಿನಂತಿ ಮಾಡುತ್ತೇನೆ. ನಮಗೂ ಉತ್ತರ ಕೊಡುವುದಕ್ಕೆ ಅವಕಾಶ ಇದೆ. ನಾವು ಯಾವಾಗಲೂ ಸ್ಪೋರ್ಟಿವ್ ಆಗಿ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲಿಯೇ ಇದ್ದಾರೆ. ಅವರು ಉತ್ತರ ಕೊಡುವುದಕ್ಕೆ ಸಮರ್ಥರಿದ್ದಾರೆ. ಏಕೆ ನಿಮ್ಮ ಸಪೋರ್ಟ್ ಬೇಕು ಸಧ್ಯಕ್ಕೆ. ಯಾವಾಗ ಸಪೋರ್ಟ್ ಬೇಕೋ ಆಗ ಕೇಳುತ್ತಾರೆ, ಕೈಎತ್ತಿ. ಸಧ್ಯಕ್ಕೆ ಸುಮ್ಮನೆ ಕೇಳಿಕೊಳ್ಳಿ. ಅವರು ಏನು ಉತ್ತರ ಕೊಡಬೇಕೋ ಅದನ್ನು ಕೊಡುತ್ತಾರೆ. ಅವರು ಇಲ್ಲದೇ ಹೋಗಿದ್ದರೆ, ಮಂತ್ರಿಮಂಡಲದ ಯಾವ ಸದಸ್ಯರೂ ಇಲ್ಲವೆಂದಾಗ, ನಿಮಗೇ ವಹಿಸಿಕೊಟ್ಟಿದ್ದರೆ ಆಗ ಹೇಳಬಹುದಿತ್ತು. ಅವರು ಇದ್ದಾರೆ, ಹೇಳುತ್ತಾರೆ ತೆಗೆದುಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಸ್ನೇಹಿತರಾದ ಖರ್ಗೆಯವರು ಹೇಳಿದ್ದಕ್ಕೆ, ನನ್ನ ಮನಸ್ಸಿಗೆ ಬೇಸರವಾಗುತ್ತಿದೆ. ನಾವು ಕೈ ಎತ್ತುವುದಕ್ಕೆ ಇದ್ದೇವೆ, ಅವರು ಹೇಳಿದಾಗ ನೀವು ಕೈ ಎತ್ತಿ, ಅವರನ್ನು ಡಿಪೆಂಡ್ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ ಎಂದು ಹೇಳತಕ್ಕಂಥಾದ್ದು ಸರಿಯಾದುದಲ್ಲ. ನಾವೆಲ್ಲರೂ ಸದಸ್ಯರು ಈ ಸದನದಲ್ಲಿ, ಆ ತರಹ ಮಾತನಾಡಬಾರದು. ಈ ಸದನದಲ್ಲಿ ವಿರೋಧಪಕ್ಷದ ನಾಯಕರು ಮಾತನಾಡುವಾಗ ಸತ್ಯಾಂಶಗಳನ್ನು ಇಟ್ಟುಕೊಂಡು, ವಿಚಾರಗಳನ್ನು ಇಟ್ಟುಕೊಂಡು ಮಾತನಾಡಬೇಕು. ಇದು ಸದನ. ಆ ರೀತಿ ಮಾತನಾಡದೇ ಹೋದಾಗ, ಪಾರ್ಲಿಮೆಂಟರಿ ಸಿಸ್ಟಂನೊಳಗೆ ಇಂಟರ್‌ವೀನ್ ಆಗತಕ್ಕಂಥಾದ್ದು, ಅವರ ಮಾತು ಸರಿಯಿಲ್ಲವೆಂದು ಹೇಳುವುದಕ್ಕೆ ನಮಗೆ ಅವಕಾಶವಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಬಸವಣ್ಣೆಪ್ಪನವರು ಹಿರಿಯ ಸದಸ್ಯರು. ಪಾಯಿಂಟ್ ಆಫ್ ಆರ್ಡರ್ ಎತ್ತಬೇಕಾದರೆ ಅದು ವ್ಯಾಲಿಡ್ ಆಗಿರಬೇಕು. ಅಥವಾ ಇಂಟರ್‌ಫಿಯರ್ ಆಗಬೇಕಾದರೆ, ದಯವಿಟ್ಟು ಸ್ವಲ್ಪ ಯೀಲ್ಡ್ ಆಗುತ್ತೀರಾ ಎಂದು ಕೇಳಿದರೆ, ನಮ್ಮ ನಾಯಕರು ಕುಳಿತುಕೊಳ್ಳುತ್ತಾರೆ. ಮಾನ್ಯ ಸದಸ್ಯರಾದ ಲಕ್ಷ್ಮಯ್ಯನವರಿಗೆ ಒಂದು ಕಾಂಪೋಸ್ ಮಾತ್ರೆ ಕೊಟ್ಟುಕೊಂಡು ಒಳಗೆ ಕರೆದುಕೊಂಡರೆ ಒಳ್ಳೆಯದು.

ಅವರಿಗೇನಾದರೂ ಹಾರ್ಟ್ ಮೇಲೆ ಪ್ರಾಬ್ಲಮ್ ಆದರೆ, ಅವರು ಆ ರೀತಿ ನಿಂತುಕೊಳ್ಳುತ್ತಾ ಇದ್ದರೆ, ಏನಾದರೂ ತೊಂದರೆ ಅದರೆ ಏನು ಮಾಡುವುದು.

ಶ್ರೀ ಹೆಚ್.ಆರ್. ಲಕ್ಷ್ಮಯ್ಯ : ಇಡೀ ರಾಜ್ಯದಲ್ಲಿ ಮಣ್ಣು ಯಾರು ತಿನ್ನುತ್ತಾರೆ. ಇಂತಹ ವಿಷಯಗಳೇನಾದರೂ ಇದ್ದರೆ, ನಾನು ಅಪಾಲಜಿ ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಪ್ರತಿ ಸಾರಿ ಒಬ್ಬರು ಈ ಸದನದಲ್ಲಿ ಇರುತ್ತಾರೆ. ಹಿಂದೆ ಹನುಮೇಗೌಡರು ಎಂದು ಇದ್ದರು. ಅವರಿಗೆ ಕೋಪ ಬಂತು ಎಂದರೆ, ಅವರು ಸುಮ್ಮನೆ ಇರುತ್ತಿರಲಿಲ್ಲ. ಅವರ ಸ್ಥಾನವನ್ನು ತುಂಬುವುದಕ್ಕೆ ಲಕ್ಷ್ಮಯ್ಯನವರು ಬಂದಿದ್ದಾರೆ. ನನಗೆ ಹನುಮೇಗೌಡರ ಬಗ್ಗೆ ಬಹಳ ಗೌರವವಿದೆ.

ಶ್ರೀ ಜೆ.ಹೆಚ್. ಪಟೇಲ್ : ಅವರು ಮಣ್ಣು ತಿಂದಿದ್ದಾರೆಂದರೆ, ಹೋದ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಮೊದಲು ತಿಂದರು, ಬಿ.ಜೆ.ಪಿ. ಯವರು ಅನಂತರ ತಿಂದರು. ಮಣ್ಣು ತಿನ್ನುವುದು ಎಂದರೆ ಹಾಗಲ್ಲ, ಸಾಂಕೇತಿಕವಾಗಿ ಸೋಲುವುದು ಎಂದರ್ಥ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಹಿಂದೆ, ಅವರು ತಿಂದಿದ್ದರು, ಅನೇಕ ಸಾರಿ ನೀವು ಹೇಳಿಕೊಳ್ಳುತ್ತೀರಿ. ನಾವು ಮಣ್ಣಿನ ಮಕ್ಕಳು ಇದ್ದೇವೆ, ಮಣ್ಣಿನ ಮಕ್ಕಳಿದ್ದೇವೆಂದು. ಅಂದರೆ, ಅವರ ಮಾತಿನಲ್ಲಿ ಮಣ್ಣು ತಿಂದರು ಎಂದರೆ, ಮಣ್ಣು ಯಾರು ತಿಂದರು...

ಉಪಾಧ್ಯಕ್ಷರು : ಮಣ್ಣಿನ ಬಗ್ಗೆ ವ್ಯಾಖ್ಯಾನ ಸಾಕು. ಈಗ ವಿರೋಧಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರಿಸಿ. ಅವರು ಮಾತನಾಡುವಾಗ, ಬೇರೆ ಸದಸ್ಯರು ಯಾರೂ ಮಧ್ಯೆ ಪ್ರವೇಶ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಮುಖ್ಯಮಂತ್ರಿಗಳು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು ಒಂದು ವರ್ಷಕ್ಕೆ 500 ಮೆಗಾವಾಟ್ಸ್ ವಿದ್ಯುತ್ ಕಳ್ಳತನವಾಗುತ್ತಿದೆ. ಅಧಿಕಾರಿಗಳು ಶಾಮೀಲಾಗಿ ಈ ಅವ್ಯವಹಾರ ನಡೆಸಿದ್ದಾರೆ. ಒಂದು ಸಾವಿರ ಕೋಟಿ ರೂಪಾಯಿ ಒಂದು ವರ್ಷಕ್ಕೆ ಲಾಸ್ ಆಗುತ್ತಿದೆ. ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಸಹ ಇತ್ತೀಚೆಗೆ ತಾವೇ ಬಂದು ಕೆಲವು ಕೈಗಾರಿಕೋದ್ಯಮಿಗಳು ಮತ್ತು ಪ್ರಭಾವಿ ಶಾಲಿಗಳು ಕೆ.ಇ.ಬಿ. ಅಧಿಕಾರಿಗಳ ಮತ್ತಿತರ ಸಿಬ್ಬಂದಿವರ್ಗ ಶಾಮೀಲೊಂದಿಗೆ ಅಪಾರ ಪ್ರಮಾಣದ ವಿದ್ಯುತ್‌ನ್ನು ಕಳುವು ಮಾಡಿದ್ದಾರೆ ಎನ್ನುವುದು ನನ್ನ ಗಮನಕ್ಕೂ ಬಂದಿದ್ದು ಅದು ದಿಗ್ಭ್ರಮೆಯನ್ನುಂಟು ಮಾಡಿದೆ. ನಾನು ಇಷ್ಟೇ ಹೇಳುವುದು ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಹೇಳಿಕೆಯನ್ನು ಕೊಟ್ಟಿದ್ದುದು 10-5-95,ಅದಕ್ಕಿಂತ ಒಂದು ತಿಂಗಳ ಮುಂಚೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟರು. ಈ ರಾಜ್ಯದ ಒಬ್ಬ ಮುಖ್ಯಮಂತ್ರಿಯಾಗಿ ಆ ಇಲಾಖೆಯನ್ನು ನೋಡುವಂತಹ ಒಬ್ಬ ಉಪ ಮುಖ್ಯಮಂತ್ರಿಯಾಗಿ ಇಲ್ಲಿ ಎಲ್ಲಾ ದಾಖಲೆಗಳು ಇದೆ. ನಿಮ್ಮ ಕಣ್ಣು ಮುಂದೆ ಒಂದು ಸಾವಿರ ಕೋಟಿ ರೂಪಾಯಿಗಳ ವಿದ್ಯುತ್ ಕಳುವು ಆಗುತ್ತದೆ. ಆ ಅಧಿಕಾರಿಗಳನ್ನು ಪತ್ತೆ ಹಚ್ಚಿ ಈ ಅವ್ಯವಹಾರವನ್ನು ತಪ್ಪಿಸಿ, ಆ ಒಂದು ಸಾವಿರ ಕೋಟಿ ರೂಪಾಯಿಗಳ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ಬರುವಂತೆ ನೋಡಿಕೊಳ್ಳದಿದ್ದ ಮೇಲೆ ಅದು ಸಾಧ್ಯವಾಗದಿದ್ದ ಮೇಲೆ, ಅದು ನಿಮಗೆ ಗೊತ್ತಿಲ್ಲದೇ ಇದ್ದರೆ ಪರವಾಗಿರಲಿಲ್ಲ, ಗೊತ್ತಿದೆ ನಿಮಗೆ ಅದನ್ನು ಮಾಡುವುದಕ್ಕೆ ಆಗಲಿಲ್ಲ ಅಂದ ಮೇಲೆ ನೀವು ಹೇಗೆ ಅಧಿಕಾರದಲ್ಲಿ ಮುಂದುವರಿಯುತ್ತೀರಿ? ಗೊತ್ತಿಲ್ಲದೇ ಇರುವಂತಹ ಸಂಗತಿ ಬಗ್ಗೆ ನಾನು ಮಾತನಾಡುವುದಿಲ್ಲ.

ಇದು ನಿಮಗೆ ಗೊತ್ತಿರುವಂತಹ ಸಂಗತಿ. ಹಿಂದೆ ಇದ್ದವರಿಗೆ ಗೊತ್ತಿತ್ತೋ ಇಲ್ಲವೋ ಅದು ನನಗೆ ಗೊತ್ತಿರಲಿಲ್ಲ. ಒಂದು ವೇಳೆ ಗೊತ್ತಿದ್ದರೂ ಕಣ್ಣು ಮುಚ್ಚಿಕೊಂಡಿದ್ದರು ಎಂದು ಇಟ್ಟುಕೊಳ್ಳೋಣ. ನಿಮಗೆ ಇದು ಗೊತ್ತಾಯಿತಲ್ಲ. ಗೊತ್ತಾದ ಮೇಲೆ ಆ ಒಂದು ಸಾವಿರ ಕೋಟಿ ರೂಪಾಯಿಗಳಲ್ಲಿ ಯಡಿಯೂರಪ್ಪನವರೇ 8 ತಿಂಗಳಲ್ಲಿ 500 ಕೋಟಿ ಲೂಟಿ ತಪ್ಪಿಸಿ, ಸರ್ಕಾರದ ಖಜಾನೆಗೆ ತಂದಿದ್ದೇನೆ. ಇನ್ನು 500 ಕೋಟಿ ರೂಪಾಯಿಗಳನ್ನು ನಾಲ್ಕು ತಿಂಗಳಲ್ಲಿ ತರುತ್ತೇನೆ. ಅದಕ್ಕೆ ನಾವು ನಿಂತು ನಿಮಗೆ ಬೆಂಬಲ ಕೊಡುತ್ತೇವೆ ನಿಮ್ಮವರು ಕೊಡದಿದ್ದರೆ ಆದರೆ ಇವತ್ತು ಏನಾಗಿದೆ? ಇವತ್ತು ಯಾವ ಕೆ.ಇ.ಬಿ.ಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳ ಬಗ್ಗೆ ಈ ರೀತಿ ನೀವು ಮಾತನಾಡಿ ಎಲ್ಲರಲ್ಲಿ ಒಂದು ನೈತಿಕ ಸ್ಥೈರ್ಯವನ್ನು ಹಾಳುಮಾಡುವಂತಹ ಒಂದು ಪ್ರಯತ್ನ, ಅದನ್ನು ಸರಿಪಡಿಸುವಂತಹ ಪ್ರಯತ್ನ ಮಾಡದೇ ಇದ್ದಾಗ, ನಾವು ಏನು ಅಂದುಕೊಂಡಿದ್ದೇವೆ, ಜನ ಏನು ಮಾತನಾಡುತ್ತಿದ್ದಾರೆ, ಈ ತರಹ ಬೆದರಿಸಿ, ಸಾವಿರ ಕೋಟಿ ಏನು ಲೂಟಿ ಆಗುತ್ತಿತ್ತು, ಅವರೆಲ್ಲರೂ ಬಂದು ನಿಮ್ಮನ್ನು ಭೇಟಿ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಹಿಂದಗಡೆಯಿಂದ ಮಾಡಿಕೊಳ್ಳುತ್ತಿದ್ದೀರಿ ಎಂದ ಜನ ಮಾತನಾಡಿಕೊಳ್ಳುವುದಿಲ್ಲವೇ? ಅಂದರೆ ನಿಮಗೆ ಲೂಟಿ ಆಗುತ್ತಿರುವುದು ಗೊತ್ತಿದೆ.

ಅದನ್ನು ಸರಿ ಮಾಡಬೇಕು ಎನ್ನುವಂತಹ ಪೊಲಿಟಿಕಲ್ ವಿಲ್ ಇಲ್ಲ, ಸರಿಪಡಿಸಬೇಕು ಎನ್ನುವಂತಹ ಕಳಕಳಿ ಇಲ್ಲ, ಖಜಾನೆ ತುಂಬಬೇಕು ಎನ್ನುವಂತಹ ಕಳಕಳಿ ಇಲ್ಲ. ಈ ರೀತಿ ಗುರುತು ಮಾಡಿ ಯಾವುದೇ ರೀತಿಯಾದಂತಹ ಲಾಭ ಮಾಡಿಕೊಳ್ಳುವುದಕ್ಕೆ ಇವರು ಮಾಡುತ್ತಿದ್ದಾರೆಂದು ಮುಖ್ಯಮಂತ್ರಿಗಳ ಬಗ್ಗೆ ಉಪ ಮುಖ್ಯಮಂತ್ರಿಗಳ ಬಗ್ಗೆ ಮಾತನಾಡಿಕೊಂಡರೆ ನಿಮಗೆ ಅಗೌರವ ಬರುವುದಿಲ್ಲವೇ? ಇದೇ ದೇವೇಗೌಡರೇ ಹಿಂದೆ ಇದ್ದವರು. ನಾವು ಏತಕ್ಕೆ ಕೇಳುತ್ತೇವೆ ಅಂದರೆ ನೀವು ಅಭಿವೃದ್ಧಿ ಕಾರ್ಯ ಏನೂ ಮಾಡಲಿಲ್ಲ, ಯಡಿಯೂರಪ್ಪನವರೇ ನೋಡುತ್ತೀರಿ ಲೋಕಸಭೆಯ ಚುನಾವಣೆ ಬರುತ್ತದೆ. ನಿಮಗೆ ಎಷ್ಟು ಕೋಟಿ ಬೇಕು ನಿಮ್ಮ ಕ್ಷೇತ್ರಕ್ಕೆ ಕೊಡುತ್ತೇನೆ ಚೆಲ್ಲುತ್ತೇನೆ. ಆದರೂ ಇಲ್ಲಿ ಏನು ಲೂಟಿ ಆಗುತ್ತಿದೆ ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ ಎಂದು ಹೇಳಿದ್ದರೆ, ನಾವು ಒಪ್ಪಿಕೊಳ್ಳಬಹುದಾಗಿತ್ತು. ತಾವು ಅಧಿಕಾರಕ್ಕೆ ಬಂದ ತಕ್ಷಣ ಈ ಮಾತನ್ನು ಹೇಳಿದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ತಾವು ಅಧಿಕಾರಕ್ಕೆ ಬಂದು 8 ತಿಂಗಳ ನಂತರವೂ ಸಹ ಈ ಲೂಟಿ ನಡೆಯುವುದನ್ನು ನೋಡಿಕೊಂಡು, ಕೈ ಕಟ್ಟಿಕೊಂಡು ನೀವು ಕುಳಿತಿದ್ದೀರಿ ಎಂದು ಹೇಳುವುದಾದರೆ ನೀವು ಅಧಿಕಾರದಲ್ಲಿ ಮುಂದುವರಿಯುವಂತಹ ನೈತಿಕ ಹಕ್ಕು ಇದೆಯೇ? ಆಮೇಲೆ ನೀವು ರೈತನ ಮಕ್ಕಳು. ರಾಜ್ಯದಲ್ಲಿ ಬರಗಾಲ ಇದೆ ಪರಿಸ್ಥಿತಿ ಸರಿ ಇಲ್ಲ.

ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನೋಡಿ ಹೋದ ಕಡೆ ಎಲ್ಲಾ ಭಾಷಣ ಮಾಡಿದರು. ನೋಡಿ ನಿಮಗೆ ವಿದ್ಯುತ್ ಕೊಡುತ್ತಿದ್ದಾರೋ? 8 ಗಂಟೆ ಸರಿಯಾಗಿ ವಿದ್ಯುತ್ ಕೊಡುತ್ತೇವೆಂದು ಜನರಲ್ಲಿ ಓಟು ತೆಗೆದುಕೊಂಡು ಬಂದಿರಿ ಮೋಟಾರ್ ಸುಟ್ಟು ಹೋಗುತ್ತಿದೆ ನೀವು ಹಾಳಾಗಿ ಹೋಗುತ್ತಿದ್ದೀರಿ ಅಂದರೆ ಫ್ರೀ ಆಗಿ ವಿದ್ಯುತ್ ಕೊಡತ್ತಿರುವುದಕ್ಕೆ ಮೋಟಾರ್ ಸುಟ್ಟು ಹೋಗುತ್ತದೆ. ರೈತನ ಪಂಪ್‌ಸೆಟ್‌ಗಳಿಗೆ ಕರೆಂಟ್ ಹೋಗುವುದಿಲ್ಲ ಅವನ ಪಂಪುಸೆಟ್ಟುಗಳಿಗೆ ನಿಮ್ಮ ವಿದ್ಯುತ್ ಸರಿಯಾಗಿ ಹೋದರೆ ಲಾಭ ಏನಾಗುತ್ತದೆ ಸ್ವಾಮಿ, ಕೈಗಾರಿಕೆ ಮಾಲೀಕರಿಗೆ ಕಾನೂನು ಬಾಹಿರವಾಗಿ ವಿದ್ಯುತ್ ಸರಬರಾಜು ಮಾಡಿದರೆ, ಸಾವಿರಾರು ಕೋಟಿ ರೂಪಾಯಿಗಳು ಯಾರ್ಯಾರಿಗೂ ಲಾಭ ಆಗಬಹುದು ಎಂದು ಜನ ಮಾತನಾಡಿಕೊಳ್ಳುವುದಿಲ್ಲವೇನು? ಅದಕ್ಕೆ ಪರೋಕ್ಷವಾಗಿ ತಾವು ಬೆಂಬಲ ಕೊಡುತ್ತಿದ್ದೀರಿ ಎಂದು ಜನ ನಿಮ್ಮ ಮೇಲೆ

ಅಪನಂಬಿಕೆ ಪಡುವುದಿಲ್ಲವೇನು? ಇದರ ಬಗ್ಗೆ ಸುದೀರ್ಘವಾಗಿ ಅಕ್ಕಪಕ್ಕದಲ್ಲಿ ಸ್ನೇಹಿತರಾಗಿರುವಂತಹ ಸನ್ಮಾನ್ಯ ದೇವೇಗೌಡರು ಮತ್ತು ಜೆ.ಹೆಚ್. ಪಟೇಲ್‌ರವರು ಯೋಚನೆ ಮಾಡಬೇಕು. ಕೊಜೆಂಟ್ರಿಕ್ಸ್, ಬೆಳಿಗ್ಗೆ ಎದ್ದರೆ ಕೊಜೆಂಟ್ರಿಕ್ಸ್ ಕೊಜೆಂಟ್ರಿಕ್ಸ್ ಕುಳಿತರೆ ಕೊಜೆಂಟ್ರಿಕ್ಸ್ ಏನು ಹೇಳಿದಿರಿ ಸ್ವಾಮಿ ನೀವು.

ನಾನಾಗಲಿ ನನ್ನ ಸಚಿವ ಸಂಪುಟದ ಯಾವುದೇ ಸದಸ್ಯನಾಗಲಿ ಆ ಎಂ.ಒ.ಯು. ಓದೇ ಇಲ್ಲ, ಅದನ್ನು ತೆಗೆದು ಯಾರೂ ನೋಡಿಲ್ಲ. ಆದರೂ 31-7-95ರ ಒಳಗೆ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳು ಅದಕ್ಕೆ ಅನುಮತಿ ಕೊಡಿದ್ದದರೆ ಹುಷಾರ್"? ಎಂದು ಹೇಳಿದ್ದೀರಿ. ತಾವು ಅದನ್ನೆಲ್ಲಾ ಓದಿ ನೋಡಿಕೊಂಡು, ಈಗ ಏನು ನಾವು ವಿದ್ಯುತ್ ಉತ್ಪನ್ನ ಮಾಡುತ್ತಿದ್ದೇವೆ, ಅದರ ರೇಟ್‌ನ್ನು ತಿಳಿದುಕೊಂಡು, ಬೇರೆ ರಾಜ್ಯದಲ್ಲಿ ಏನು ರೇಟ್ ಇದೆ ಅಂತ ತಿಳಿದುಕೊಂಡು ಈ ಕಡೆ ಕುಳಿತುಕೊಂಡಿರತಕ್ಕಂಥ ಮೊಯಿಲಿ ಸಾಹೇಬರು ಮತ್ತು ಬಂಗಾರಪ್ಪ ಸಾಹೇಬರು ಅದು ನಮ್ಮದು ಅಂತ ತಿಳಿದುಕೊಂಡು ಬಿಟ್ಟಿದ್ದಾರೆ. ಆ ಪಾಪದ ಕೂಸು ನಮ್ಮದು ಅಂತ ತಬ್ಬಿಕೊಳ್ಳಲು ಹೊರಟಿದ್ದೀರಿ. ಅದರ ಬಗ್ಗೆ ನಾನು ಆಮೇಲೆ ಬರುತ್ತೇನೆ. ಇವರಿಗೆ ಗೊತ್ತೇ ಇಲ್ಲ. ಸನ್ಮಾನ್ಯ ದೇವೇಗೌಡರಿಗೂ ಪ್ರಧಾನಮಂತ್ರಿಗಳಿಗೂ ಇಷ್ಟೊಂದು ಆತ್ಮೀಯ ಸಂಬಂಧ ಇದೆ, ನೀವು ಒಂದು ಗದವು ಕೊಟ್ಟ ಹಾಗೆ ಮಾಡು, ನಾನು ಕ್ಲಿಯರ್ ಮಾಡುತ್ತೇನೆ ಎಂದು ಪಟೇಲರು ಸ್ಪೀಕರ್ ಕೊಠಡಿಯಲ್ಲಿ ನನಗೆ ಏನಾದರೂ ಹೇಳಿ ಕೊಟ್ಟಿದ್ದೀರೋ? ನಿಮ್ಮ ಹತ್ತಿರ ಮಾತನಾಡುವುದನ್ನು ಮುಂದಿನ ಪೀಳಿಗೆ ಕಲಿಯಬೇಕು ಸ್ವಾಮಿ. ಖಂಡಿತವಾಗಿ ಕಲಿಯಬೇಕು, ನಾವು ಇನ್ನು ಬಚ್ಚಾಗಳು ಇದ್ದೇವೆ. ನಿಮ್ಮ ಮುಂದೆ ಅದಕ್ಕೆ ಈಗ ಪ್ರಯತ್ನ ಮಾಡುತ್ತಿದ್ದೇನೆ. ಏನು ಸ್ವಾಮಿ ಕೊಜೆಂಟ್ರಿಕ್ಸ್ ಓದಿಲ್ಲವೇ? ಎಂ.ಒ.ಯು. ಬಂಗಾರಪ್ಪ ಅಥವಾ ಮೊಯಿಲಿಯವರ ಕಾಲದ ಪಿ.ಪಿ.ಎ ಏನು ಅಂತ ಓದಿಲ್ಲವೇ? ಅದು ಏನು ಆಗಬಹುದು ಎಂದು ಈ ಸದನದಲ್ಲಿ ಈ ನಾಡಿನ ಜನಗಳ ಪ್ರತಿನಿಧಿಗಳಾಗಿರುವಂತಹ ನಮ್ಮ ಮುಂದೆ ಇರುವುದಕ್ಕೆ ಮೀನಾಮೇಷ ಏತಕ್ಕೆ? ಇಡುತ್ತೇವೆ, ನೀವು ಯಾರು ಕೇಳುವುದಕ್ಕೆ ನಮಗೆ ಖುಷಿ ಬಂದಾಗ ನಾವು ಇಡುತ್ತೇವೆ. ಸ್ವಾಮಿ, ನಾವು ಈ ಸದನದ ಒಳಗಡೆ ನೀವು ಬರುತ್ತಿದ್ದ ಹಾಗೆ, ನೀವು ಪ್ರಾಮಾಣಿಕವಾಗಿರಬೇಕು ಎಂದು ಜನ ನಿರೀಕ್ಷೆ ಮಾಡುತ್ತಿರುವಂತಹ ಕಾಲದಲ್ಲಿ ಎಂ.ಒ.ಯು. ಪಿ.ಪಿ.ಎ. ಬಿಸಾಕಿ ಕೊಟ್ಟು, ಎಲ್ಲರನ್ನು ಕರೆದು ನೋಡಿ ಇಷ್ಟೊಂದು ಕಡಿಮೆ ಆಗುತ್ತದೆ ಇಷ್ಟು ವಿದ್ಯುತ್ ಕೊರತೆ ಇದೆ, ಅದಕ್ಕಾಗಿ ಇದನ್ನು ಮಾಡುತ್ತಿದ್ದೇವೆಂದು ಹೇಳಿ ಇದನ್ನು ಮಾಡಿದಾಗ ನಾವು ಕೂಗುವುದಕ್ಕೆ ಶುರು ಮಾಡುತ್ತಿದ್ದಂತೆಯೇ, ಅವತ್ತು ಒಪ್ಪಂದ ಆಗಿದ್ದಕ್ಕಿಂತ ಸುಮಾರು 750 ಕೋಟಿ ರೂಪಾಯಿಗಳು ಕಡಿಮೆ ಆಯಿತು. ಈಗ ನಾನು ನಿಮಗೆ ಹೇಳುತ್ತೇನೆ, ನಿಮ್ಮಲ್ಲಿ ಕಳಕಳಿ ಇದ್ದರೆ, ಪ್ರಾಮಾಣಿಕತೆ ಇದ್ದರೆ, ಕುಂತು ಮಾತನಾಡಿದರೆ ನಾನು ಆ ಎಲ್ಲಾ ವಿವರಕ್ಕೆ ಹೋಗುತ್ತೇನೆ. ಒಂದು ಸಾವಿರ ಕೋಟಿ ರೂಪಾಯಿಗಳು ಸರ್ಕಾರದ ಖಜಾನೆಗೆ ಉಳಿಯುತ್ತದೆ ಅವರೇ ಏಕೆ ಬೇಕು. ತಾವು ಗ್ಲೋಬಲ್ ಟೆಂಡರ್ ಏತಕ್ಕೆ ಕರೆಯುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಹೇಳಿದಹಾಗೆ ಅನೇಕ ಜನ ನಾವು ವಿದ್ಯುತ್ ಉತ್ಪಾದನೆ ಮಾಡಿಕೊಡುತ್ತೇವೆಂದು ಅರ್ಜಿಗಳು ಹಾಕಿದ್ದಾರಲ್ಲ, ಅವರು ಹೇಳಿದ್ದಾರಲ್ಲ, ಅದನ್ನೆಲ್ಲಾ ತಾವು ಏತಕ್ಕೆ ಗುಟ್ಟಾಗಿ ಇಟ್ಟಿದ್ದೀರಿ? ಅವರ ಷರತ್ತುಗಳನ್ನು ಹೇಳಿದ್ದಾರಲ್ಲ, ಅದನ್ನು ಏತಕ್ಕೆ ಹೇಳುತ್ತಿಲ್ಲ? ನಾನು ನಿಮ್ಮ ಮನೆ ವ್ಯವಹಾರವನ್ನು ಕೇಳುತ್ತಿಲ್ಲ ಸ್ವಾಮಿ. ಈ ನಾಡಿನ ಜನಗಳ ವಿಷಯಕ್ಕೆ ಸಂಬಂಧಪಟ್ಟಿದ್ದನ್ನು ನಾವು ಕೇಳುತ್ತಿದ್ದೇವೆ ಅದನ್ನು ಹೇಳುವುದಕ್ಕೆ ತಾವು ತಯಾರಾಗಿಲ್ಲ, ನೀವು ಏನು ಹೇಳುತ್ತೀರಿ ಮಾತು ಎತ್ತಿದರೆ ಸನ್ಮಾನ್ಯ ಜೆ.ಹೆಚ್. ಪಟೇಲರು ಸಾಕ್ಷಿ. ತಾವು ಹಿರಿಯರು ಇದ್ದೀರಿ

ಲೋಕಸಭೆಯಲ್ಲಿ ಕೆಲಸ ಮಾಡಿದ್ದೀರಿ. ಈ ದೇಶದ ಇತಿಹಾಸದಲ್ಲಿ ಬೋಫೋರ್ಸ್ ಇರಬಹುದು, ಕರ್ನಾಟಕ ರಾಜ್ಯದ ಬೇರೆ ಬೇರೆ ಹಗರಣಗಳು ಇರಬಹುದು. ನಾನು ಆ ಕಡೆ ನೋಡಿ ಮಾತನಾಡುವುದಿಲ್ಲ, ಏಕೆಂದರೆ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ ನೀವು ಏನಿದ್ದರೂ ಆ ಕಡೆ ನೋಡಬೇಕು ಈ ಕಡೆ ನೋಡಬಾರದು ಎಂದು ಯಾವುದಾದರೂ ಒಂದು ಉದಾಹರಣೆ ಕೊಡುತ್ತೀರಾ ಸ್ವಾಮಿ ಸಾಕ್ಷಿ ಸಿಕ್ಕದ್ದು, ದಾಖಲೆ ಸಿಕ್ಕದ್ದು ನನ್ನ ಅವಿಶ್ವಾಸ ನಿರ್ಣಯ ಕೊಟ್ಟಿರತಕ್ಕಂಥ ಒಂದೇ ಒಂದು ಉದ್ದೇಶ, ನನ್ನನ್ನು ನೀವು ಆ ಕಡೆ ಕುಳಿತಿರತಕ್ಕಂಥವರು ನಂಬಬೇಕಾಗಿಲ್ಲ ತಾವು ಸ್ವಾಮಿ ನಿಷ್ಠರು ಇದ್ದೀರಿ? ನಾವು ಯಾರನ್ನು ಪ್ರತಿನಿಧಿಸುತ್ತಿದ್ದೇವೆಯೋ ಈ ನಾಡಿನ ಜನ, ಅವರು ರೋಸಿ ಹೋಗಿದ್ದಾರೆ, ಅವರು ಬೇಸತ್ತು ಹೋಗಿದ್ದಾರೆ ಅವರು ದುಡ್ಡು ಕೊಟ್ಟರೂ ಏನೂ ಕೆಲಸ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ, ಹಿಂದೆ ದುಡ್ಡು ಕೊಟ್ಟಿದ್ದರೆ ಕೆಲಸ ಆಗುತ್ತಿತ್ತು ಎಂದು ಹೇಳುತ್ತಿದ್ದಾರೆ.

ಸ್ವಾಮಿ ಅಧಿಕಾರಿಗಳ ಹೆಸರನ್ನು ಹೇಳಬಹುದೇ? ಇಲ್ಲಿ ಬಂದು ರಕ್ಷಣೆ ಕೊಡುತ್ತೇನೆದು ನನಗೆ ಪ್ರಾಮೀಸ್ ಮಾಡುತ್ತೀರಾ ಸ್ವಾಮಿ. ಬೆಂಗಳೂರು ನಗರದ ಈ ಜಿಲ್ಲೆಯಲ್ಲಿ ನಾನು ಸಚಿವರನ್ನು ಫೋನ್ ಮಾಡಿ ಕೇಳಿದೆ, ಸ್ವಾಮಿ ಅವರು ಬಂದು ಹೇಳುತ್ತಿದ್ದಾರೆ ಜನ ಮಾತನಾಡುತ್ತಿದ್ದಾರೆ ಸಬ್ ರಿಜಿಸ್ಟ್ರಾರ್ ವರ್ಗಾವಣೆಗೆ 35-40 ಲಕ್ಷ ಒಬ್ಬರಿಗೆ, ಇದು ಹೇಗೆ ಸಾಧ್ಯ ಎಂದು ನಾನು ಕೇಳಿದೆ. ಇದನ್ನು ನಂಬುವುದಕ್ಕೆ ಸಾಧ್ಯ ಇಲ್ಲ ಎಂದು ನಾನು ಹೇಳಿದೆ. ನಾನು ಈಗಲೂ ನಂಬುವುದಿಲ್ಲ ನೀವು ಆಮೇಲೆ ಹೇಳಿ. ಉತ್ತರ ಕೊಡಬೇಕಾದರೆ ಅವರು ಹೇಳಿದರು ನಿಮಗೆ ಗೊತ್ತಿಲ್ಲ ಯಡಿಯೂರಪ್ಪ 5-6ಲಕ್ಷ ರೂಪಾಯಿಗಳ ಜಮೀನು ರಿಜಿಸ್ಟರ್ ಮಾಡಿಸುತ್ತೇವೆ. ಈ 45-50 ಲಕ್ಷ ಆಗಿದೆ, ಬಂಗಾರ ಆಗಿದೆ ಅಂತ ಜಾಲಪ್ಪನವರೇ ಹೇಳಿದರು. ದಿನಕ್ಕೆ 2-3 ಲಕ್ಷ ತೆಗೆದುಕೊಂಡು ಹೋಗುತ್ತಾರೆ. ವರ್ಗಾವಣೆಯಲ್ಲಿ ಇದು ನಡೆಯುತ್ತಿದೆ ಇದಕ್ಕೆ ಎಲ್ಲರೂ ಜವಾಬ್ದಾರರು ನಾನು ಇಲ್ಲ ಅಂತ ಹೇಳುವುದಿಲ್ಲ, ಹಿಂದೆಯೂ ನಡೆಯುತ್ತಿತ್ತು, ಯಡಿಯೂರಪ್ಪನವರೇ ಎಂದು ನೀವು ಹೇಳಬಹುದು ನಾನು ಇಲ್ಲ ಅಂತ ಹೇಳುವುದಿಲ್ಲ. ನಿಮ್ಮ ಕಾಲದಲ್ಲಿ ಇದು ನಿಲ್ಲಬೇಕು ಎಂದು ಜನ ಬದಲಾವಣೆಯನ್ನು ತಂದರು. ಅಧಿಕಾರಿಗಳು ಅಲ್ಲಿ ಕುಳಿತವರು ಹೊರಗಡೆ ಕುಳಿತವರು ಮಾತನಾಡುತ್ತಾರೆ. ಏನಪ್ಪ ಇದು ನಾವೇ ಕೊಟ್ಟಿದ್ದೇವೆ ನಾವೇ ತೆಗೆದುಕೊಳ್ಳುತ್ತಿದ್ದೇವೆ. ಈ ಪರಿಸ್ಥಿತಿ ಬಂತು.

ಒಬ್ಬರು ಬಂದರು ನನ್ನ ಹತ್ತಿರ ಸ್ವಾಮಿ ಒಬ್ಬ ಮಂತ್ರಿಗಳ ಹತ್ತಿರ ನೇರವಾಗಿ ನಿಮಗೆ ಅವರು ಹೇಳುತ್ತಾರೆ ಮಂತ್ರಿಗಳು ನೇರವಾಗಿ ದುಡ್ಡು ಕೇಳುವಂತಹ ಪರಿಸ್ಥಿತಿ ಬಂತಲ್ಲ ಯಡಿಯೂರಪ್ಪನವರೇ ಅಂತ. ಆಗ ನಾನು ಹೇಳಿದೇ, ಅದು ಆಗುವುದಿಲ್ಲ ನೋಡಪ್ಪ ನಾನು ನಿನ್ನೆ ಸಿಕ್ಕಿ ಬಿದ್ದಿದ್ದೇನೆ ಅದಕ್ಕೆ ಸಾಕ್ಷಿ ಬೇಕು ಬಂದು ಹೇಳುತ್ತೀಯಾ ಎಂದು ನಾನು ನಂಬುವುದಕ್ಕೆ ಸಾಧ್ಯ ಇಲ್ಲ, ದೇವೇಗೌಡರ ಮಂತ್ರಿಮಂಡಲದಲ್ಲಿ ಅದನ್ನು ನೀನು ಆರೋಪ ಮಾಡುತ್ತೀಯಾ? ಆ ರೀತಿ ಆರೋಪ ಮಾಡುತ್ತೀಯೇನು? ಮಾಡಕೂಡದು ಎಚ್ಚರ ಅಂತ ಹೇಳಿ ಕಳುಹಿಸಿದ್ದೇನೆ. ತಾಕತ್ತು ಇದ್ದರೆ, ನಿಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಲು ಸಿದ್ಧರಾಗಿ. ನಾನು ಕೊಟ್ಟಿದ್ದೇನೆ ಅಂತ ಮುಖ್ಯಮಂತ್ರಿಗಳು ಎದುರುಗಡೆ ಮತ್ತು ನಮ್ಮ ಜೆ.ಹೆಚ್. ಪಟೇಲ್‌ರಂತಹ ಪ್ರಾಮಾಣಿಕರು ಇನ್ನೊಬ್ಬರು ಇಲ್ಲ, ಅವರ ಜೊತೆಗೆ ಬಾ ನಾನು ಹೇಳುತ್ತೇನೆ ಬೇಕಾದರೆ ಆದರೆ ನಾನು ಹಾಗೆ ಸುಮ್ಮನೇ ಮಾತನಾಡುವುದಕ್ಕೆ ರೆಡಿ ಇಲ್ಲ, ಇಲ್ಲಿ ಈ ರೀತಿ ಜನ ಮಾತನಾಡುತ್ತಿರುವುದು. ನಾನು ನಂಬುವುದಿಲ್ಲ ಸ್ವಾಮಿ ಖಂಡಿತವಾಗಿ ನಾನು ನಂಬುವುದಿಲ್ಲ, ಆದರೆ ಈ ನಾಡಿನ ಜನ ನಿಮ್ಮ ಬಗ್ಗೆ ಈ ರೀತಿ ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. ಇದಕ್ಕೆ ಪರಿಹಾರ ಹುಡುಕುತ್ತೀರಾ ಸ್ವಾಮಿ. ಬಹಳ ಪ್ರಾಮಾಣಿಕವಾಗಿ ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿದರು ಸನ್ಮಾನ್ಯ ದೇವೇಗೌಡರು. ಯಾವ

ಸ್ಥಿತಿಗೆ ತಂದುಬಿಟ್ಟಿದ್ದೀರಿ ಸ್ವಾಮಿ ನಮ್ಮನ್ನು. ನಮ್ಮ ಕೈ ಕಾಲು ಎಲ್ಲಾ ಕತ್ತರಿಸಿ ಓಡಾಡು ಅಂತ ಹೇಳಿದಂತೆ ಆಗಿದೆ ವಿರೋಧಪಕ್ಷದವರ ಪರಿಸ್ಥಿತಿ. ಬರಗಾಲ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ ಕುಳಿತುಕೊಳ್ಳಲು ಹೋದಾಗ ಸೌಜನ್ಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ನಾನು ಇರುವುದಿಲ್ಲ ಅಂತ ತಿಳಿಸಿದರು. ಅದಕ್ಕೆ ಉಪ ಮುಖ್ಯಮಂತ್ರಿಗಳನ್ನು ಕಳುಹಿಸಿದರು. ಅವರು ಬಂದಿದ್ದರು. ಅವರು ಬಹಳ ಚೆನ್ನಾಗಿ ಮಾತನಾಡಿದರು.

ನೀವು ಎಷ್ಟು ಬುದ್ಧಿವಂತರೆಂದರೆ, ಧರಣಿ ಕುಳಿತಿದ್ದವರು ನಾವು, ಯಡಿಯೂರಪ್ಪನವರ ಜೊತೆ ದೇವೇಗೌಡರು ಬರಗಾಲದ ಬಗ್ಗೆ ಧರಣಿಯಲ್ಲಿ ಕುಳಿತಿದ್ದಾರೆಂದು ಜನ ತಿಳಿದುಕೊಂಡು ಬಿಟ್ಟರು. ಸ್ವಾಮಿ ನಿಮಗೆ ಗೌರವನೇ? ನಿಮಗೆ ಒಪ್ಪಿಗೆಯೇ? ನಾವು ಧರಣಿ ಕುಳಿತಿದ್ದಾಗ ನೀವೂ ಕುಳಿತಿರಲಿಲ್ಲವೇ ಸ್ವಾಮಿ? ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಧರಣಿ ಕುಳಿತುಕೊಳ್ಳುವುದಕ್ಕೆ ಪರ್ಮನೆಂಟ್ ಆಗಿ ಟೆಂಟ್ ಹಾಕಿಕೊಡುತ್ತೇನೆಂದು ನಾವು ಹೇಳಿದ್ದೀರಲ್ಲಾ! ನರಸಿಂಹರಾಯರು ಈ ದೇಶದ ಪ್ರಧಾನಿಯವರಿಗೆ ಗಡವು ಕೊಟ್ಟಿದ್ದು 31-7-95. ಅದು ಆಗಲಿಲ್ಲ. ಏಕೆ ಕೊಜೆಂಟ್ರಿಕ್ಸ್ ಬಗ್ಗೆ ಇನ್ನೂ ಮಾತನಾಡುತ್ತೀರಿ? ಗಡವು ಕೊಟ್ಟು ಅದು ಆಗಲಿಲ್ಲವೆಂದು ಮೇಲೆ ಕೈ ಬಿಡಬೇಕಾಗಿತ್ತಲ್ಲಾ ನೀವು? ನರಸಿಂಹರಾಯರು, ಇಡೀ ದೇಶವನ್ನು ನಾನು ನೋಡಬೇಕು ಎಂದು ಹೇಳುತ್ತಾರೆ. ಕರ್ನಾಟಕ ಒಂದೇ ಅಲ್ಲ, ದೇವೇಗೌಡರು ನಾವೂ ತುಂಬಾ ಚೆನ್ನಾಗಿ ಇರಬಹುದು, ಬೇರೆ ವಿಷಯಗಳು ಬಂದಾಗ ನಾವು ತಕ್ಷಣ ಕೆಲಸ ಮಾಡಿಕೊಡಬಹುದು, ಇದು ವಿಧಾನವಾಯಿತೆಂದು ಅವರು ಗಡವು ಕೊಟ್ಟಿದ್ದಾರೆ, ನಾನು ಮಾಡುವುದಿಲ್ಲ ಟೆಂಟ್ ಹಾಕಿಸುತ್ತೇನೆ ಬಂದು ಕುಳಿತುಕೊಳ್ಳಲಿ ನಿಮ್ಮ ರಾಜ್ಯದ ಮುಖ್ಯ ಮಂತ್ರಿ ಎಂದು ಹೇಳಿದರೆ ಎಷ್ಟು ನೋವು ಮತ್ತು ಅಪಮಾನ ಆಗಬಹುದು? ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ? ಹೀಗೇನಾದರೂ ನಾಳೆ ಹೇಳಿಬಿಟ್ಟರು ಅಂಥ ಇಟ್ಟುಕೊಳ್ಳಿ, ಇದು ಎಷ್ಟರಮಟ್ಟಿಗೆ ಆ ಕಡೆ ಕುಳಿತಿರತಕ್ಕಂಥ ನಮ್ಮ ಸ್ನೇಹಿತರಿಗೆ ಸರಿ ಎನಿಸುತ್ತದೆ ಎಂಬುದು ನಿಮಗೆ ಬಿಟ್ಟದ್ದುದು. ಈ ಉಸಿರು ಕಟ್ಟುವಂಥ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. 30 ಜನ ಇದ್ದಾಗಲೂ ಕೆಲಸ ಮಾಡಿದ್ದೇನೆ, 4 ಜನ ಇದ್ದಾಗಲೂ ನಾವು ಕೆಲಸ ಮಾಡಿದ್ದೇವೆ, ಈಗ 40 ಇದ್ದಾಗಲೂ ನಾವು ಕೆಲಸ ಮಾಡುತ್ತಿದ್ದೇವೆ. ಎಷ್ಟು ಸಂಖ್ಯೆ ಎನ್ನುವುದು ಮುಖ್ಯ ಅಲ್ಲ. ಆದರೆ, ವ್ಯವಸ್ಥಿತವಾಗಿ ಇಡೀ ರಾಜ್ಯದಲ್ಲಿ, ಒಂದು ನೂರು ಉದಾಹರಣೆಗಳನ್ನು ಕೊಡುತ್ತೇನೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಎಂತೆಂಥಾ ಪ್ರಾಮಾಣಿಕ ಅಧಿಕಾರಿಗಳು ಇದ್ದರು? ನಾವು ಹೋದಾಗ ಅವರು ಬಹಳ ಸೌಜನ್ಯದಿಂದ ಮಾತನಾಡುತ್ತಿದ್ದರು. ನಮ್ಮ ಕ್ಷೇತ್ರದ ಕೆಲಸ ಆಗಬೇಕೆಂದು ಹೋದರೆ ಅಧಿಕಾರಿಗಳು ಒಳ್ಳೆಯ ರೀತಿಯಿಂದ ಮಾತನಾಡುತ್ತಿದ್ದರು. ಈಗ ನಮ್ಮ ಜಿಲ್ಲಾ ಮಂತ್ರಿಗಳಾದ ಜೆ.ಹೆಚ್. ಪಟೇಲರಿಗೆ ಪುರುಸೊತ್ತು ಇಲ್ಲ, ಇಡೀ ರಾಜ್ಯ, ದೇಶ, ಹೊರ ದೇಶಗಳಿಗೆ ಹೋಗಿ ಶಿವಮೊಗ್ಗ ಜಿಲ್ಲೆಯನ್ನು ಅವರು ಮರೆತುಬಿಟ್ಟಿದ್ದಾರೆ. ನನ್ನ ಕ್ಷೇತ್ರದ ಎಲ್ಲಾ ಕೆಲಸಗಳು ಸ್ಮಾರಕಗಳಾಗಿವೆ. ನನ್ನ ಕ್ಷೇತ್ರದ ಎಲ್ಲಾ ಕೆಲಸ ಕಾರ್ಯಗಳು ನಿಂತೆ ಹೋಗಿವೆ. ಯಡಿಯೂರಪ್ಪನವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡುತ್ತೀರೋ, ಬಿ.ಜೆ.ಪಿ. ಯವರನ್ನು ಗೆಲ್ಲಿಸುತ್ತೀರೋ, ನೋಡಿ ನಿಮ್ಮ ಪರಿಸ್ಥಿತಿ ಏನಾಗುತ್ತದೆ? ಎಂದು ನನ್ನ ಕ್ಷೇತ್ರದ ಎಲ್ಲಾ ಕೆಲಸ ಕಾರ್ಯಗಳು ನಿಂತು ಹೋಯಿತು. ಸಾರ್ವಜನಿಕವಾಗಿ ಏನು ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ರಸ್ತೆಗಳಿಗೆ ಟಾರು ಇಲ್ಲ, ಗುಂಡಿಗಳನ್ನು ಮುಚ್ಚಿಲ್ಲ, ಈ ನಿಮಿಷದವರೆಗೆ ಯಾವುದೇ ಕೆಲಸಗಳ ಮಂಜೂರಾತಿ ಇಲ್ಲ. ವಾಹನಗಳು ರಸ್ತೆ ಮೇಲೆ ಹೋಗುವುದಕ್ಕಾಗುವುದಿಲ್ಲ.

ಈ ಪರಿಸ್ಥಿತಿ ನನ್ನ ಕ್ಷೇತ್ರ ಒಂದೇ ಅಲ್ಲದೆ ಇಡೀ ರಾಜ್ಯದಲ್ಲಿ ಇರುವುದರಿಂದ ನಿಮಗೆ ಒಂದು ರೀತಿಯ ಧನ್ಯವಾದಗಳನ್ನು ಅರ್ಪಿಸಬೇಕಾಗುತ್ತದೆ. ಎಲ್ಲರನ್ನೂ

ಸರಿಸಮಾನವಾಗಿ ಇದರಲ್ಲಾದರೂ ನೋಡಿಕೊಂಡಿದ್ದೀರಿ. ನಾನು ಜುಲೈ 2ನೇ ತಾರೀಖಿನಿಂದ 31ನೇ ತಾರೀಖಿನವರೆಗೆ ರಾಜ್ಯದಲ್ಲಿ ಪ್ರವಾಸ ಮಾಡಿ ಬಂದಾದ ಮೇಲೆ, ನಮ್ಮ ಮುಖ್ಯಮಂತ್ರಿ ದೇವೇಗೌಡರು ಎಲ್ಲಾ ಕ್ಷೇತ್ರವನ್ನು ಸರಿಸಮನಾಗಿ ನೋಡಿಕೊಂಡಿದ್ದಾರೆ. ಅದರಲ್ಲಿ ಹಾಸನ ಜಿಲ್ಲೆಯವರನ್ನು ಬಿಟ್ಟು ಎಂದು ಗೊತ್ತಾಯಿತು. ಹಾಸನ ಜಿಲ್ಲೆ ಅಭಿವೃದ್ಧಿ ಕೆಲಸಕ್ಕೆ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಅದರಲ್ಲಿ 50 ಲಕ್ಷ ರೂಪಾಯಿಗಳನ್ನು ತಮ್ಮ ಮಗ ಎಂ.ಎಲ್.ಎ., ಆಗಿರುವ ಕ್ಷೇತ್ರಕ್ಕೆ ಮಾತ್ರ ಬಿಡುಗಡೆ ಮಾಡಲಾಗಿದೆ. ಹಾಸನ ಜಿಲ್ಲೆಯ ಅವರ ಮಗ ಪ್ರತಿನಿಧಿಸುವ ತಾಲ್ಲೂಕಿಗೆ 50 ಲಕ್ಷ ಕೊಟ್ಟು, ಉಳಿದ ತಾಲ್ಲೂಕುಗಳಿಗೆ ಕಡಿಮೆ ಕೊಟ್ಟಿರುವುದು ಏಕೆ? ಅವರು ಏನು ಪಾಪ ಮಾಡಿದ್ದರು? ನಮಗೆ ಅನ್ಯಾಯ ಮಾಡಿದರೂ ಪರವಾಗಿಲ್ಲ ನಿಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಸರಿಸಮನಾಗಿಯಾದರೂ ಕೊಡಬಹುದಾಗಿತ್ತಲ್ಲ? ಸ್ವಾಮಿ ತಾವು ದೊಡ್ಡವರು, ನಮಗೆ ಉಪದೇಶ ಮಾಡುತ್ತಿದ್ದೀರಿ, ನಿಮ್ಮ ಮಾರ್ಗದರ್ಶನದಲ್ಲಿ ನಮ್ಮ ಕೊರತೆಗಳನ್ನು ಸರಿ ಮಾಡಿಕೊಳ್ಳುತ್ತೇವೆ. ಮೊನ್ನೆ ತಾವು ಏನು ಮಾಡಿದಿರಿ ಸ್ವಾಮಿ? ಸನ್ಮಾನ್ಯ ಮುಖ್ಯಮಂತ್ರಿಗಳು ವಿದೇಶ ಪ್ರವಾಸಕ್ಕೆ ಭಾರತದ ಪ್ರತಿನಿಧಿಯಾಗಿ ಹೋದಾಗ, ಮತ್ತು ಇತ್ತೀಚೆಗೆ ಸಿಂಗಪುರಕ್ಕೆ ಹೋದಾಗ, ಆ ವಿದೇಶಿ ನೆಲದಲ್ಲಿ ನಿಂತು ಪಕ್ಷ ರಾಜಕಾರಣದ ವಿಷಯವನ್ನು ಮಾತನಾಡಬಹುದೇ? ಕೇಂದ್ರ ಸರ್ಕಾರವನ್ನು ಅಥವಾ ಮಹಾರಾಷ್ಟ್ರ ಸರ್ಕಾರವನ್ನು ಟೀಕೆ ಮಾಡಬಹುದೇ? ಎನ್‌ರಾನ್ ಅಗ್ರಿಮೆಂಟ್ ಅನ್ನು ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಕ್ಯಾನ್ಸಲ್ ಮಾಡಿದ್ದಾರೆಂದು ತಾವು ಹೇಳಬಹುದೇ? ಕನಿಷ್ಠವಾದಂಥ ಅಪೇಕ್ಷಣೀಯ ನಡವಳಿಕೆ, ಸೌಜನ್ಯವಾದರೂ ವಿದೇಶಕ್ಕೆ ಹೋದಾಗ ನಮ್ಮ ದೇಶದ ಬಗ್ಗೆ, ನಮ್ಮ ರಾಜ್ಯದ ಬಗ್ಗೆ ತಾವು ತೋರಿಸಬೇಕಾಗುತ್ತಲ್ಲಾ? ಈ ರಾಜ್ಯದ ಘನತೆ ಗೌರವ, ಸೌಹಾರ್ಧತೆಯನ್ನು ಕಾಪಾಡಬಹುದೆಂದು ಈ ನಾಡಿನ ನಾಲ್ಕೂವರೆ ಕೋಟಿ ಜನ ತಮ್ಮನ್ನು ಅಧಿಕಾರದಲ್ಲಿ ಕೂರಿಸಿದ್ದಾರೋ? ತಾವು ಹೋಗಿ ಏಕೆ ಹೀಗೆ ಮಾತನಾಡಿದಿರಿ? ನಿಮ್ಮ ಪತ್ರಿಕೆಗಳಿಗೆ ರಿಲೀಸ್ ಮಾಡಿದ ಹೇಳಿಕೆಗಳ ಪ್ರತಿಗಳನ್ನು ನಾನು ಇಟ್ಟುಕೊಂಡಿದ್ದೇನೆ.

ಯಾವ ಸರ್ಕಾರ ಬಂದರೆ ಏನು? ಜನಕ್ಕೆ ಎರಡು ಹೊತ್ತು ಊಟ ಸಿಕ್ಕು, ಕುಡಿಯುವುದಕ್ಕೆ ನೀರು ಸಿಕ್ಕು ಇರುವುದಕ್ಕೆ ಶೆಲ್ಟರ್ ಸಿಕ್ಕು ಕೈಗೆ ಕೆಲಸ ಸಿಕ್ಕಿದರೆ ಸಾಕು. ಅಲ್ಲಿ ಕುಳಿತರೆ ಏನು? ಇಲ್ಲಿ ಕುಳಿತರೆ ಏನು? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲರೂ ಆ ಕಡೆ ಕುಳಿತುಕೊಳ್ಳುವುದಕ್ಕೆ ಸಾಧ್ಯವೋ? ಇಲ್ಲಿ ಕುಳಿತವರೆಲ್ಲಾ ಪಾಪ ಮಾಡಿದ್ದೇವೆಂದಲ್ಲ, ಮೊದಲು ಒಬ್ಬರನ್ನು ನೋಡಿದರು ಜನಕ್ಕೆ ಸರಿ ಬರಲಿಲ್ಲ, ಈಗ ಇನ್ನೊಬ್ಬರಿಗೆ ಅಧಿಕಾರ ಕೊಟ್ಟಿದ್ದಾರೆ. ತಾವು 5 ವರ್ಷ ಪೂರ್ಣ ಮಾಡಿ. ಆದರೆ 8 ತಿಂಗಳಿಗೇ ಈ ಒಂದು ದುಸ್ಥಿತಿಗೆ ಬಂದಿದ್ದೀರಿ. ನಿಮ್ಮ ರಾಜಕೀಯ ಲಾಭಕ್ಕೋಸ್ಕರ ಎಲ್ಲಾ ಸತ್ಸಂಪ್ರದಾಯಗಳನ್ನು, ಸೌಜನ್ಯಪೂರ್ಣ ನಡವಳಿಕೆಗಳನ್ನು ಭಾರತೀಯ ಸ್ವಾಭಿಮಾನವನ್ನು ಗಾಳಿಗೆ ತೂರುವಂಥ ಮಾತನ್ನು ನೀವು ಏನು ಆಡಿದ್ದೀರಿ ಅದು ಎಷ್ಟು ದುಃಖ ತರುವಂತಾದ್ದು ಸ್ವಾಮಿ? ಯಾರು ಸ್ವಾಮಿ ಈ ಮೈಣಾಲಘೋರೆಯವರು? ಯಾರು ಸ್ವಾಮಿ ಈ ಜೈಪಾಲ್ ರೆಡ್ಡಿಯವರು? ಅವರು ನಿಮ್ಮ ಪಕ್ಷದ ನಾಯಕರು ತಾನೆ? ಅಖಿಲ ಭಾರತ ನಾಯಕರು ತಾನೆ. ಎನ್‌ರಾನ್ ಬಗ್ಗೆ ಹೋರಾಟ ಮಾಡಿದರಲ್ಲಾ? ಸ್ವಾಗತ ಮಾಡಿದರಲ್ಲಾ ಅದನ್ನು ರದ್ದು ಮಾಡುವುದಕ್ಕೆ. ಈಗ ನಮ್ಮ ದೇವೇಗೌಡರು ಅಖಿಲ ಭಾರತ ನಾಯಕರು. ಈಗ ರಾಜ್ಯದ ನಾಯಕರಾಗಿದ್ದು ಸಾಕಾಗಿ ದೇಶದ ರಾಜಕೀಯಕ್ಕೆ ಹೋಗುತ್ತಿದ್ದಾರೆ. ರಾಮಕೃಷ್ಣ ಹೆಗಡೆಯವರು ಇಲ್ಲಿ ರಾಜಕಾರಣ ಮಾಡಿ ಅನೇಕ ವರ್ಷಗಳಾದ ನಂತರ ದೇಶದ ರಾಜಕಾರಣಕ್ಕೆ ಹೋದರು. ನಿಮ್ಮ ಪಕ್ಷದ ಅಖಿಲ ಭಾರತ ನಾಯಕರು ವಿರೋಧ ಮಾಡಿದಂಥ ಎನ್‌ರಾನ್ ಯೋಜನೆ ಬಗ್ಗೆ, ತಾವು ವಿದೇಶಕ್ಕೆ ಹೋಗಿದ್ದಂಥ ಸಂದರ್ಭದಲ್ಲಿ

ಇನ್ನೊಂದು ರಾಜ್ಯದ ತೀರ್ಮಾನದ ಬಗ್ಗೆ ಹಗುರವಾಗಿ ಮಾತನಾಡಿರುವುದು ಎಷ್ಟರಮಟ್ಟಿಗೆ ಸರಿ? ನೀವು ಅಧಿಕಾರಕ್ಕೆ ಬಂದ ಮೇಲೆ ನಾವು ಏನೇನೋ ಅಂದುಕೊಂಡಿದ್ದೆವು. ನೀವು ಬಂದ ಮೇಲೆ ವಿರೋಧ ಪಕ್ಷದವರ ಕೈ ಕಾಲುಗಳನ್ನು ಕತ್ತರಿಸಿ ಈ ಸ್ಥಿತಿಗೆ ತಂದಿದ್ದೀರಿ.

ಆಮೇಲೆ ಆ ಸಮಿತಿಗಳ ವ್ಯವಸ್ಥೆ ಇತ್ತಲ್ಲ, ಆಗ ಮುಖ್ಯ ಮಂತ್ರಿಗಳಾಗಿದ್ದರಲ್ಲಿ, ಸರಿಸಮಾನವಾಗಿ 15-20 ವರ್ಷ ಆ ಕುರ್ಚಿಯಲ್ಲಿ ಕುಳಿತಿದ್ದರಲ್ಲ, ಅವರಿಗೆ ಬುದ್ಧಿ ಇರಲಿಲ್ಲವೇ, ತಿಳುವಳಿಕೆ ಇರಲಿಲ್ಲವೇ ಅನೇಕ ಸಮಿತಿಗಳನ್ನು ಮಾಡಿ, ಶಾಸಕರುಗಳಿಗೆ ಜವಾಬ್ದಾರಿ ಕೊಟ್ಟಿದ್ದರಲ್ಲಿ ನೀವು ಕೊಡಬೇಡಿ, ನಿಮ್ಮ ಮೂಲಾಜಲ್ಲಿ ಒಂದು ತೃಣ ಆಗಿರುವುದಕ್ಕೆ ಇಷ್ಟ ಇಲ್ಲ, ಈ ಕಡೆಯವರಿಗೆ. ಆದರೆ ದುಃಖವಾಗಿರುವುದು ಏಕೆಂದರೆ ಈಗ 8 ತಿಂಗಳಾಯಿತಲ್ಲ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವಂಥ ಸಮಿತಿಗಳನ್ನು ನೇಮಕ ಮಾಡಿದ್ದರೋ? ಹೆಚ್ಚು ಕಡಿಮೆ ವಿರೋಧ ಪಕ್ಷಗಳವರು 93 ಜನ ಇದ್ದೇವೆ. ತಮಗೆ ಅರ್ಥವಾಗುವುದಿಲ್ಲವೆ, ತಾವು ರಾಜಕೀಯ ಮುತ್ಸದ್ದಿಗಳಿದ್ದೀರಿ, ಮುಂದಿನ ರಾಜಕಾರಣವನ್ನು ಹೇಗೆ ಮಾಡಬೇಕೆಂದು ನಮಗೆ ಕಲಿಸಿದ್ದೀರಿ. ಅಜೀರ್ಣ ಆಗುವಷ್ಟು ಬಹುಮತ ಇರುವಂಥ ಕಾಲದಲ್ಲಿ, ಗೊತ್ತಿಲ್ಲದೆ ನಮಗೆ ಬೇಕೆಂದು ನೀವು ಕೇಳಿಬಿಟ್ಟು, ಯಾವುದಾದರು ಸಮಿತಿ ಸದಸ್ಯ, ಅಧ್ಯಕ್ಷ ಎಂದು ಜವಾಬ್ದಾರಿ ಕೊಟ್ಟು ಬಿಟ್ಟರೆ, ಅವನ ಪ್ರಭಾವ ಬೆಳೆಯುತ್ತ ಅವನ ಪಕ್ಷದ ಪ್ರಭಾವ ಬೆಳೆಯುತ್ತ ನಮ್ಮದೇನು, ಅಧಿಕಾರಿಗಳು ಯಾಕೆ ಸ್ವಾಮಿ, ನಾವು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿರುತ್ತಾರೆ. ಯಾರನ್ನೋ ನಾಮಿನೇಶನ್ ಮಾಡಿ, ಏನೋ ಮಾಡಿ, ಸಮಿತಿ ಮಾಡಿ, ಹಾಗೆ ಮಾಡಿದ್ದರೂ ಸ್ವಾಗತ ಮಾಡುತ್ತಿದ್ದೆ.

ಇದುವರೆಗೂ ಸಕ್ರಮ ಮಾಡುವಂಥ ಸಮಿತಿಗಳನ್ನು ಮಾಡಲಿಲ್ಲ. ಪಾಟೀಲರಿಗೆ ಪುರುಸೊತ್ತಿಲ್ಲ. ಉಪ ಮುಖ್ಯಮಂತ್ರಿಗಳಲ್ಲವಾ? ಪ್ರವಾಸೋದ್ಯಮ, ಈ ಆಶ್ರಯ ಯೋಜನೆಯಡಿ ಮನೆಗಳನ್ನು ಹಂಚುವುದಕ್ಕಾಗಿ ಇದುವರೆಗೂ ಸಮಿತಿಗಳನ್ನು ಮಾಡಲಿಲ್ಲ. ಆಮೇಲೆ ಮಾನ್ಯ ಬಂಗಾರಪ್ಪನವರು ತಂದಿದ್ದ 'ಆರಾಧನ' ಯೋಜನೆಯಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಬೇಕಾದ ಹಣವನ್ನು ಡಿಸೆಂಬರ್‌ನಿಂದ ಬಿಡುಗಡೆ ಮಾಡಿಲ್ಲ. ಈ ಆರಾಧನ ಯೋಜನೆಗೆ ನೇಮಕವಾಗಿದ್ದ ಶಾಸಕರ ಅಧ್ಯಕ್ಷತೆಯ ಸಮಿತಿಯ ಮೀಟಿಂಗ್‌ನ್ನೂ ಕರೆದಿಲ್ಲ, ಆಮೇಲೆ ಲ್ಯಾಂಡ್ ಟ್ರಿಬ್ಯೂನಲ್ ಮೀಟಿಂಗ್‌ನ್ನು ಸಹಾ ಕರೆಯಲೇ ಇಲ್ಲ. ಈ ರೀತಿಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರವನ್ನು ಮಾಡುತ್ತಿದ್ದಾರೆ. ಬಡವರನ್ನು ಉದ್ಧಾರ ಮಾಡುವಂಥ ಸರ್ಕಾರ ಅಲ್ಲವೇ ನಿಮ್ಮದು? 1-4-95ರಿಂದ ಯಾವುದೇ ಮಂಡಲ ಪಂಚಾಯಿತಿಗಳಿಗೆ ಬೀದಿ ದೀಪಗಳ ವ್ಯವಸ್ಥೆಗೂ ಹಣವನ್ನು ಕೊಟ್ಟಿಲ್ಲ, ಹಳ್ಳಿಯ ಉದ್ಧಾರಕರು ಬಂದಿರುವಂಥ,

3.50 ಪಿ.ಎಂ

ರೈತರ ಮಕ್ಕಳ ಅಧಿಕಾರಕ್ಕೆ ಬಂದಂಥ, ಗ್ರಾಮೀಣ ಜನರ ಅಭಿವೃದ್ಧಿಗೋಸ್ಕರ ತನು-ಮನ-ಧನ ಮತ್ತು ತನ್ನ ರಕ್ತವನ್ನು ಕೊಡುತ್ತೇನೆ ಎಂದು ಹೇಳಿ ಅಧಿಕಾರಕ್ಕೆ ಬಂದಂಥ ಸರಕಾರದವರು ಕಳುಹಿಸಿರುವ ಮೊದಲನೇ ಸುತ್ತೋಲೆ ಇದು. ಆಶ್ರಯ ಯೋಜನೆಯಡಿಯಲ್ಲಿ ಯಾವುದೇ ಪ್ರಪೋಸಲ್‌ನ್ನು ಕಳುಹಿಸಿಕೊಡ ಕೂಡದು. ಈಗಾಗಲೇ ಆಗಿರುವ ಮನೆಗಳು ಫೈನಲ್‌ನಲ್ಲಿ ಇದ್ದರೆ ಕಳುಹಿಸಿಕೊಡಿ, ಅರ್ಧಬರ್ಧ ಆಗಿದ್ದರೆ ಬಿಲ್ ಕೊಡಬೇಡಿರಿ. ಆ ಸರ್ಕ್ಯುಲರ್‌ನ್ನು ನಾನು ಕೊಡುತ್ತೇನೆ. ಏಕೆಂದರೆ ನಾನು ಮಾತನಾಡಿ ಬೇಕಾಗಿದ್ದಲ್ಲಿ, ಅದಕ್ಕೆ ಪೂರಕವಾದ ದಾಖಲೆಗಳನ್ನು ಇಟ್ಟುಕೊಳ್ಳಬೇಕು. ಪ್ರೆಸ್‌ನ ಮಿತ್ರರಿಗೂ ಕೂಡ ಪ್ರತಿಗಳನ್ನು ಕೊಡುತ್ತೇನೆ. ನೆರಳು ಭಾಗ್ಯ. ಏನೇ ಮಾಡಿದರೂ ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ, ಆ ಸೂರು

ತೆಗೆದು, ಆ ಗೂಡನ್ನೂ ತೆಗೆದು, ಬಡವರು ಏನೋ ಹಂಚನ್ನು ಹಾಕಿಕೊಂಡು ಇರೋಣ ಅಂದರೆ ನೆರಳು ಭಾಗ್ಯ ಕಾರ್ಯಕ್ರಮವನ್ನೇ ನಿಲ್ಲಿಸಿ ಬಿಟ್ಟರು. ಮಾನ್ಯರೇ, 175 ತಾಲ್ಲೂಕುಗಳಲ್ಲಿ ಕನಿಷ್ಠ 100 ತಾಲ್ಲೂಕುಗಳಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ ಮುಂತಾಗಿ ಕೊಡಲಿಲ್ಲ. ಏಕೆಂದರೆ ಕಂಪ್ಯೂಟರ್‌ನಿಂದ ಶೀಟ್ ಬರಬೇಕೆಂತೆ. ಆ ನೆಪ ಮಾಡಿಕೊಂಡು ನಿಲ್ಲಿಸಿದ್ದಾರೆ. ಪಾಪ, ಸೊಸೆ ಮಗ, ಮೊಮ್ಮಕ್ಕಳು ಅಷ್ಟಿಷ್ಟು ಎಂದು 75 ರೂ.ಗಳು ಬಂದರೆ, ಒಂದಿಷ್ಟು ಊಟ ಹಾಕುತ್ತಾ ಇದ್ದರು. ಈಗ ಆ ಹಣ ಬಂದಿಲ್ಲವಲ್ಲ ಎಂದು ಊಟ ಹಾಕುವುದನ್ನೂ ಕೂಡ ನಿಲ್ಲಿಸಿಬಿಟ್ಟರು, ಆ ವೃದ್ಧರ ಊಟವೂ ನಿಂತು ಹೋಯಿತು. ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಲು ನಿಮಗೆ ಪುರುಸೊತ್ತಿಲ್ಲ.

ನಮ್ಮ ಹಣಕಾಸಿನ ಸಚಿವರು ನಮ್ಮ ಬೊಕ್ಕಸ ತುಂಬಿದೆ ಎಂದು ಹೇಳುತ್ತಾ ಇದ್ದಾರೆ. ಅದಕ್ಕೆ ನಾನು ಹೇಳುವುದಾದರೆ ನಾಯಿಯ ಮೊಲೆಯಲ್ಲಿ ಹಾಲಿದ್ದರೆ ಯಾರಿಗೆ ಲಾಭವಾಗುತ್ತದೆ ಸ್ವಾಮಿ? ನಾಡಿನ ಜನರಿಗೆ ಉಪಯೋಗವಾಗುವಂಥ ಕೆಲಸವಾಗಬೇಕು. ಜನರು ಬೆವರು ಸುರಿಸಿದಂಥ ಶ್ರಮದ ತೆರಿಗೆಯ ಹಣ ಅದು. ಆ ಹಣವನ್ನು ಟ್ರೆಜರಿಯಲ್ಲಿಟ್ಟುಕೊಂಡು ಪೂಜೆ ಮಾಡಲು ಜನರು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೋ? ಜಿಲ್ಲಾಪಂಚಾಯತಿ, ಮಂಡಲ ಪಂಚಾಯತಿ, ತಾಲ್ಲೂಕು ಪಂಚಾಯತಿ ಹೊಸ ಕಾಮಗಾರಿಕೆಗಳ ಒಂದು ಪೈಸೆಯನ್ನು ಕೂಡ ಕೊಟ್ಟಿಲ್ಲ, ಈ ಬಗ್ಗೆ ನೀವು ಉತ್ತರ ಕೊಡಿ. ಇದು ನೋ ಕಾನ್ಫಿಡೆನ್ಸ್ ಮೋಶನ್ ಆದ್ದರಿಂದ ನೀವು ಹೇಳಬೇಕಾಗುತ್ತದೆ. ಹೊಸ ಕೆಲಸಕ್ಕೆ ನೀವು ಒಂದು ಪೈ ಹಣವನ್ನು ಕೂಡ ಬಿಡುಗಡೆ ಮಾಡಲಿಲ್ಲ. ಅನ್‌ಗೋಯಿಂಗ್ ವರ್ಕ್ಸ್‌ಗಳಿಗೆ ಹೋಗಬೇಕೆಂದು, ವಿರೋಧ ಪಕ್ಷದ ನಾಯಕರುಗಳ ಸಭೆಯನ್ನು ಕರೆದಂಥ ಸಂದರ್ಭದಲ್ಲಿ ತಾವು ಕ್ರಿಯಾ ಯೋಜನೆ ಮಂಜೂರಾಗಿಲ್ಲವೆಂದು ಹೇಳಿದ್ದೀರಿ. ಆದರೂ ಕೆಲಸ ತೆಗೆದುಕೊಳ್ಳಿ ಎಂದು ಹೇಳಿದ್ದೀರಿ. ಆದರೆ ಈ ನಿಮಿಷಕ್ಕೂ ಯಾವುದೇ ಜಿಲ್ಲಾಪರಿಷತ್‌ನಲ್ಲಿಯೂ ಕ್ರಿಯಾ ಯೋಜನೆಯು ಮಂಜೂರಾಗಿಲ್ಲ. ಅದು ಎಸ್ಟಿಮೇಟ್ ಆಗಿ ಮಾಡುವುದರೊಳಗಾಗಿ ಈ ವರ್ಷವು ಮುಗಿದು ಹೋಗುತ್ತದೆ. ನಿಮ್ಮ ಸಾಧನೆ ಅಂದರೆ ಕರ್ನಾಟಕ ರಾಜ್ಯದ ಒಂದು ಪ್ರಗತಿಯನ್ನು ಸುಮಾರು ಎರಡು ವರ್ಷಗಳಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗಿಬಿಟ್ಟಿದ್ದೀರಿ.

ಏಕೆ ಎರಡು ವರ್ಷಗಳಷ್ಟು ಹಿಂದಕ್ಕೆ ಎಂದು ಹೇಳುತ್ತಿದ್ದೇನೆ ಅಂದರೆ, ಆ ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್, ಹೋದ ವರ್ಷ ಕೆಲಸ ಮಾಡುವಂಥ ಕಾಲ. ಆದರೆ ಎಲ್ಲಾ ಕಡೆಯಲ್ಲಿ ಭ್ರಷ್ಟಾಚಾರ ನಡೆಯುತ್ತಾ ಇದೆ, ನೀರಾವರಿ ಯೋಜನೆಯಲ್ಲಿ ಪೀಸ್ ವರ್ಕ್ ಎಂದು ಹೇಳಿ ಲೂಟಿ ಮಾಡುತ್ತಾ ಇದ್ದಾರೆ. ಸಿಓಡಿ ತನಿಖೆ ಮಾಡುತ್ತಿದ್ದಾರೆ. 450 ಕೋಟಿ ರೂಪಾಯಿಗಳ ಭ್ರಷ್ಟಚಾರ ನಡೆದು ಹೋಗಿದೆ. ಇದಕ್ಕೆ ಉತ್ತರವನ್ನು ಕೊಡುವಾಗ ಹೇಳುತ್ತೀರೋ? ಅದಕ್ಕಾಗಿ ನಾನು ಕಾಮಗಾರಿಗಳನ್ನು ನಿಲ್ಲಿಸಿದ್ದೆ, ಇಂಥಿಂಥವರನ್ನು ಮನೆಗೆ ಕಳುಹಿಸಿದ್ದೆ, ಇಂಥವರ ಮನೆಗಳನ್ನು ಜಪ್ತಿ ಮಾಡಿದೆ, ಲೂಟಿ ಮಾಡುತ್ತಿದ್ದುದನ್ನು ತಂದು ಸರಕಾರದ ಖಜಾನೆಗೆ ತುಂಬಿದೆ ಎಂದು ಹೇಳುತ್ತೀರಿ. ನಿಮ್ಮ ಕಾಲದಲ್ಲಿಯೇ ಪೀಸ್ ವರ್ಕ್ ಮಾಡಿ ಎಂದು ಹೇಳುತ್ತಿದ್ದೀರಿ. ಅದಕ್ಕೆ ಬೇಕಾದ ಸರಕಾರಿ ಆಜ್ಞೆಯನ್ನು ಕಳುಹಿಸಿಕೊಡುತ್ತೇನೆ. ನೀವು ಅಧಿಕಾರಿಗಳಿಗೆ ಏನು ಹೇಳಿದ್ದೀರಿ? ಎಲ್ಲಾ ಕೆಲಸವನ್ನು ಕಂಟ್ರಾಕ್ಟರ್‌ಗಳ ಜೊತೆಯಲ್ಲಿ ಕಟ್ಟಿಕೊಳ್ಳಬೇಡಿ, ಪೀಸ್‌ವರ್ಕ್ ಮಾಡಿಸಿ, ಅವರಿಗಿಂತ ಚೆನ್ನಾಗಿ ಕೆಲಸ ಮಾಡಿದ್ದೇವೆಂದು ಹೇಳುವ ಹಾಗೆ ಕಾಂಪಿಟ್ ಮಾಡಿ ಕೆಲಸವನ್ನು ಚೆನ್ನಾಗಿ ಮಾಡಿ ಎಂದು ಹೇಳಿದ್ದೀರಿ. ಜನತಾ ದರ್ಶನದಲ್ಲಿ ಹೇಳುವುದನ್ನು ನೋಡಿದರೆ ನಮ್ಮ ಮುಖ್ಯಮಂತ್ರಿಯವರನ್ನು ನೋಡಿದರೆ ಕನಿಕರ ಉಂಟಾಗುತ್ತಿದೆ. ಯಾವುದೋ ಉತ್ಸಾಹದಲ್ಲಿ ಏನೋ ಹೇಳುತ್ತಾ ಇದ್ದಾರೆ. ಅಪ್ಪಾ ನೀವು ಏನಾದರೂ ಮಾಡಿ ನನಗೆ ಕೆಟ್ಟ

ಹೆಸರು ಬಂದಿದೆ. ಅವನು ನೋಡಿ ಯಡಿಯೂರಪ್ಪ ಭೂತ ಬೆನ್ನು ಹತ್ತಿದ ಹಾಗೆ ಬೆನ್ನುಹತ್ತಿದ್ದಾನೆ. ನೀವು ಕೆಲಸವನ್ನು ಶುರು ಮಾಡಿ. ಕೆಲಸಗಳು ಶುರುವಾಯಿತು ಎಂದು ನಾನು ಕೂಡ ಹೋದೆ. ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬಾರದು. ನಾನು ಈ ಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಣೆ ಮಾಡುತ್ತಿದ್ದೇನೆ. ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ. ನಿಮ್ಮ ಜನತಾ ದರ್ಶನದ ಪ್ರವಾಸದ ಕಾಲದಲ್ಲಿ ಭೀಕರ ಬರಗಾಲದಲ್ಲಿ ನಾಡಿನ ಜನರು ತತ್ತರಿಸುತ್ತಿರುವಾಗ, ಬರಗಾಲ ಕಾಮಗಾರಿ ನಡೆಯುತ್ತಿರುವ ಒಂದು ಸ್ಥಳಕ್ಕೆ ಹೋಗಿ ನೋಡಿ ಬಂದಿದ್ದೀರೋ? ಬಂದಿದ್ದೇನೆ ಎಂದು ಹೇಳಿದರೆ ನಾನು ನೋ ಕಾನ್ಫಿಡೆನ್ಸ್ ಮೋಶನ್‌ನ್ನು ಓಂದಕ್ಕೆ ತೆಗೆದುಕೊಳ್ಳುತ್ತೇನೆ. ಬರಗಾಲದ ಪರಿಸ್ಥಿತಿಯ ಬಗ್ಗೆ ನೀವು ಅಧಿಕಾರಗಳ ಜೊತೆಗೆ ವಿಚಾರವನ್ನು ಮಾಡಿದ್ದೀರೋ? ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆ, ಇಷ್ಟು ಖರ್ಚು ಮಾಡಿದ್ದೇವೆ ಎಂಬ ಬಗ್ಗೆ ಉತ್ತರ ಕೊಡಿ. ಹಾಗಿದ್ದರೂ ಕೂಡ ತಾವು ಅಧಿಕಾರದಲ್ಲಿ ಮುಂದುವರಿಯ ಬೇಕೇ ಸ್ವಾಮಿ? 3-20 ರೂ.ಗಳಿಗೆ ನಾವು ಜನರಿಗೆ ಅಕ್ಕಿಯನ್ನು ಕೊಡಲಿಲ್ಲವೆ ಎಂದು ಕೇಳಬಹುದು? ನಿಮಗೆ 120 ಕೋಟಿಗಳ ಭಾರ ಬಂತು. ಮಾನ್ಯ ನಾಗೇಗೌಡರು ದಯಮಾಡಿ ಕೇಳಬೇಕು. ತಾನು ಮಂತ್ರಿಯಾಗಬಹುದೆಂದು ಅವರು ಆಸೆ ಇಟ್ಟುಕೊಂಡಿದ್ದರು. ವೆಟರ್‌ನರಿ ಆಸ್ಪತ್ರೆಗಳ ಸುಧಾರಣೆಯಾಗಬಹುದು, ಇನ್ನಷ್ಟು ಆಸ್ಪತ್ರೆಗಳು ನಮಗೆ ಸಿಗಬಹುದೆಂದು ನಾನು ಅದರಲ್ಲಿ ನಂಬಿಕೆ ಇಟ್ಟುಕೊಂಡಿದ್ದೆ. ಅವರು ಮಂತ್ರಿಯಾಗಿದ್ದಾಗ ಕ್ಷೀರ ಯೋಜನೆ ಕೊಟ್ಟರಿ ಬಡವರ ಮಕ್ಕಳಿಗೆ ಮನೆಯಲ್ಲಿ ಹಾಲು ಸಿಗುತ್ತಾ ಇಲ್ಲ ನಾವು ಸರಕಾರದವರು ಕುಡಿಸುತ್ತಿದ್ದೇವೆ ಅಂದರು. ಈಗ ಏಕೆ ನಿಲ್ಲಿಸಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ : ಇವರ ಹಾಲು ಕುಡಿದು ಮಕ್ಕಳಿಗೆ ಭೇದಿ ಶುರುವಾಯಿತು, ಅದು ಜಾಸ್ತಿಯಾದುದರಿಂದ ಆ ಯೋಜನೆ ಬೇಡ ಎಂದು ಬಿಟ್ಟಿದ್ದಾರೆ.

ಶ್ರೀ ಎಸ್. ರಾಜಣ್ಣ : ಹಾಲು ಎನ್ನುವುದು ಪೆರಿಶಬಲ್ ಪದಾರ್ಥ, ಅದನ್ನು ಹಾಳು ಮಾಡಬಾರದು, ಅದನ್ನು ಮಕ್ಕಳಿಗಾದರೂ ಕೊಡೋಣ ಎಂದು ಕೊಟ್ಟಿದ್ದಾರೆ. ರೈತರು ಹೆಚ್ಚಾಗಿ ಹಾಲು ಉತ್ಪಾದನೆಯಲ್ಲಿ ತೊಡಗಿದ್ದರಿಂದ ಅದು ಮೋರಿಗೆ ಹೋಗುತ್ತಾ ಇತ್ತು, ಅದಕ್ಕಾಗಿ ಅದನ್ನು ಮಕ್ಕಳಿಗೆ ಕೊಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಕನಿಷ್ಠ 10-12 ಲಕ್ಷ ಜನರು ಕಳೆದ ಮೂರು - ನಾಲ್ಕು ವರ್ಷಗಳಿಂದ ಕಡು ಬಡವರು ಹಸಿರು ಕಾರ್ಡ್ ಸಿಗದೇ ಅಕ್ಕಿ ಸಿಗುತ್ತಾ ಇಲ್ಲ ಎಂದು ನಾನು ಹೇಳಿದೆ. ಅದಕ್ಕೆ ಪ್ರೊಪೋಸಲ್ ಬಂದಿಲ್ಲ ಎಂದು ಹೇಳಿದರು. ಇವೊತ್ತು ತಾವು ಅಲ್ಲಿ ಕುಳಿತುಕೊಂಡು ಇಲ್ಲಿ ಕುಳಿತಿರತಕ್ಕಂಥ ನನಗೆ ಹೀಗೆ ಉತ್ತರ ಕೊಟ್ಟರೆ ಹೇಗೆ? ಪ್ರಿಂಟ್ ಆಗುತ್ತಾ ಇದೆ ಅಂದರೆ ಅದಕ್ಕೂ ನಮಗೂ ಏನ ಸಂಬಂಧ? ನೀವು ಎಲ್ಲಿ ಪ್ರಿಂಟ್ ಮಾಡಿಸುತ್ತೀರಿ? ಯಾರಿಗೆ ಆ ಕೆಲಸವನ್ನು ಕೊಡುತ್ತೀರಿ? ಅದರಲ್ಲಿ ಯಾರ ಫೋಟೋ ಹಾಕಿಕೊಳ್ಳುತ್ತೀರಿ? ಮಹಾತ್ಮಾಗಾಂಧಿ ಫೋಟೋ ಹಾಕಿಸಿಕೊಳ್ಳುತ್ತೀರೋ ಅಥವಾ ನಿಮ್ಮದೇ ಹಾಕಿಸಿಕೊಳ್ಳುತ್ತೀರೋ ಅದು ನಮಗೆ ಗೊತ್ತೂ ಇಲ್ಲ, ಅದರಿಂದ ನಮಗೇನೂ ಬೇಸರವೂ ಇಲ್ಲ. ಕಾರ್ಡ್ ಕೊಟ್ಟು ಅದರ ಮೂಲಕ ಬಡವರಿಗೆ ಅಕ್ಕಿ ಸಿಗಬೇಕು. ಅದನ್ನು ಮಾಡಲಿಲ್ಲ ಎಂದು ನೀವು ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು ಎಂದಷ್ಟೇ ನಾವು ಕೇಳುವುದು. ಬೇರೆ ಏನೂ ನಮಗೆ ಸಂಬಂಧವಿಲ್ಲ, ಅವರು ಹಾಲು ಕೊಡುತ್ತಿದ್ದ ಹಣವನ್ನು ಇಲ್ಲಿ ಅಕ್ಕಿಗೆ ಇವರು ಕೊಟ್ಟರು. ಇದರಿಂದ ನಿಮ್ಮ ದೊಡ್ಡತನ ಏನು ಬಂತು? ನೀವು ಏನು ಕೊಟ್ಟಿದ್ದೀರಿ? ಇರುವ ಕಾರ್ಯಕ್ರಮದ ಹೆಸರನ್ನು ಬದಲಿಸಿ ನೀವೊಂದು ಕಾರ್ಯಕ್ರಮವನ್ನು ಮಾಡುವುದು. ಕೋಳಿಮೊಟ್ಟೆ ಕೊಡುತ್ತೇವೆಂದು ಒಮ್ಮೆ

ಹೇಳಿದರು. ಇನ್ನೂ ಏನೇನೋ ಹೇಳಿದರು. ಹೀಗೆ ಜನರ ಜೀವನದ ಜೊತೆಗೆ ಚೆಲ್ಲಾಟವಾಡಲು ನಾವು ಏನು ರಾಜಕಾರಣ ಮಾಡಲು ಹೊರಟಿದ್ದೇವೆ ಇದಕ್ಕೆ ಕೊನೆಯಾಗಬೇಕೆಂದು ನನ್ನ ಕಳಕಳಿ.

ಒಂದು ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆ ಎಂದು ಹೇಳಿದರು. ಕಟ್ಟಿದ ಅರ್ಧಂಬರ್ಧ ಮನೆಗಳಿಗೂ ಕೂಡ ಇದುವರೆಗೂ ಹಣವನ್ನು ಕೊಡಲಿಲ್ಲ. ಹಾಗಾದರೆ ನಿಮ್ಮ ಸಾಧನೆ ಏನು? ನಾವು ನಿಮ್ಮ ಬಗ್ಗೆ ಎಷ್ಟೊಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೆವು? 6 ತಿಂಗಳ ಕಾಲ ನಾವು ಬಾಯಿ ಮುಚ್ಚಿಕೊಂಡಿದ್ದೆವು. ನಿಮಗೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಅವಕಾಶ ಕೊಡಬೇಕಾಗುತ್ತದೆ. ಹಣಸಂಗ್ರಹಣೆ ಮಾಡಿಕೊಳ್ಳಬೇಕು, ಹಿಂದೆ ಆಗಿರತಕ್ಕಂಥ ತಪ್ಪುಒಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು. ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಘೋಷಣೆ ಮಾಡುತ್ತಾರೆ. ಹಳ್ಳಿಗಳಿಗೆ ಹೋಗಿ ಕೆಲಸ ಮಾಡಿ ಕಛೇರಿಯಲ್ಲಿ ಕುಳಿತುಕೊಳ್ಳುತ್ತೀರೋ? ಹುಷಾರ್, ನಾನು ದೇವೇಗೌಡ ಮುಖ್ಯಮಂತ್ರಿ. ಹಳ್ಳಿಗಳಿಗೆ ಹೋಗಿ ಬಡವರ ಪಟ್ಟಿ ಮಾಡಿ. ಅಧಿಕಾರಿಗಳು ಎಲ್ಲರೂ ಎರಡು ತಿಂಗಳುಗಳು ಹಳ್ಳಿಗಳಿಗೆ ಹೋಗಿಯೇ ಹೋದರು. ಹಾಗಾದರೆ ನೀವು ಬರುವುದಕ್ಕಿಂತ ಮುಂಚೆ ಅಧಿಕಾರಿಗಳು ಸತ್ತಿದ್ದರೆ? ಕಚೇರಿಗಳು ಸತ್ತಿದ್ದವೇ? ಅಲ್ಲಿರತಕ್ಕಂಥ ಅಧಿಕಾರಿಗಳು ಮೊದಲು ಮೊಯಿಲಿಯವರ ಕಾಲದಲ್ಲಿ ಅಂಥವರ ಪಟ್ಟಿಯನ್ನು ಮಾಡಿಲ್ಲವೆ? ಹೊಸದಾಗಿ ಒಂದು ಪಟ್ಟಿ. ಇದನ್ನು ಮಾಡಿಕೊಂಡು ಬಾ... ಹೋಗಲಿ ಮಾಡಿಕೊಳ್ಳಲಿ ಅಂದರೆ ನಮ್ಮ ಶಾಸಕರು ಸುಮ್ಮನೇ ಇರಬೇಕೇ? ಅವರು ಹೊಸದಾಗಿ ಬಂದ ಯುವಕರು. ಮೀಟಿಂಗ್ ಕರೆದರೂ ಕೂಡ ಇಲ್ಲ ನಾವು ಕ್ಷೇತ್ರಕ್ಕೆ ಹೋಗುತ್ತೇವೆ. ಮಾನ್ಯ ದೇವೇಗೌಡರು ಹೇಳಿದ್ದಾರೆ ನಾವೆಲ್ಲರೂ ಬಡವರನ್ನು ನೋಡಬೇಕೆಂತೆ.

ಸಾಲಾಗಿ ನಿಂತು ಅರ್ಜಿಗಳನ್ನು ತೆಗೆದುಕೊಂಡು ಬಂದು ಸೈಟ್ ಹಂಚಬೇಕೆಂತೆ. ನಾನೂ ಕೂಡ ಏನೋ ಬಡವರ ಕೆಲಸ ಎಂದು ಹೋದೆ. ಸ್ವಾಮಿ ಬೆಳಿಗ್ಗೆಯಿಂದ ಸುಮಾರು 700 ಜನರು ಸಾಲಿನಲ್ಲಿ ನಿಂತಿದ್ದಾರೆ. ಅರ್ಜಿಗಳು ಎಷ್ಟಿದ್ದಾವೆ ಸ್ವಾಮಿ? 120 ಅರ್ಜಿಗಳು? ನಾನು ವ್ಯಂಗವಾಗಿ ಏನೋ ಹೇಳಬೇಕೆಂದು ಹೇಳುತ್ತಾ ಇಲ್ಲ. ಜವಾಬ್ದಾರಿಯಿಂದ ಹೇಳುತ್ತಾ ಇದ್ದೇನೆ. ಇರುವ 120 ಅರ್ಜಿಗಳಿಗೆ 600-700 ಜನರು ಬೆಳಿಗ್ಗೆಯಿಂದ ಸಾಲಾಗಿ ನಿಂತಿದ್ದಾರೆ. ಇದು ಏನು ಎಂದು ನೋಡಿದರೆ ಹೊಸದಾಗಿ ಅರ್ಜಿಗಳನ್ನು ಭರ್ತಿ ಮಾಡಿ ಕೊಡುವುದು ಎಂದು ತಿಳಿಯಿತು. ನಾವೆಲ್ಲರೂ 48 ವರ್ಷಗಳ ಈ ಸ್ವತಂತ್ರ ಭಾರತದಲ್ಲಿ ಸೈಟ್, ಮನೆಗಳು ಇಲ್ಲದೇ ಬೀದಿಯಲ್ಲಿ ನಿಂತಿದ್ದೇವೆ. ಅಂಥ ಒಂದು ಅಫಿಶೀಯಲ್ ಸೀಲ್‌ನ್ನು ನಮ್ಮ ರಾಜ್ಯದ ಮುಖ್ಯಮಂತ್ರಿ ದೇವೇಗೌಡರು ಒತ್ತಿದ್ದರು. ನಿಮ್ಮ ಪ್ರಕಾರ 50 ಲಕ್ಷಕ್ಕೆ ಎಷ್ಟು ಅರ್ಜಿಗಳು ಬಂದಿರಬಹುದು? ಏಕೆಂದರೆ ಅಂಕಿಅಂಶಗಳು ನಿಮ್ಮ ಹತ್ತಿರವೇ ಇದೆ. ಯಾವುದೇ ದಾಖಲೆಗಳನ್ನು ನಮಗೆ ಕೊಡಬೇಡಿ. ಹುಷಾರ್ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಅವರು ಗಡ ಗಡ ನಡುಗುತ್ತಾರೆ. ಯಾವ ಅಧಿಕಾರಿಗಳು ಸ್ವಾಮಿ ನೀವ್ಯಾರೂ ನಮ್ಮ ಜೊತೆಗೆ ಬರಬೇಡಿ. ಬಹುಪರಾಕ್ ಹೇಳಿಕೊಂಡು ಅಲ್ಲಿ ಇರಿ, ನಮ್ಮದ್ದೇನು ಅಡ್ಡಿ ಇಲ್ಲ. ಅರ್ಜಿ ಬಂದವುಗಳಿಗೆ ಕಳೆದ 8 ತಿಂಗಳುಗಳಲ್ಲಿ ಸೈಟ್ ಕೊಡಲು ಜಮೀನು ತೆಗೆದುಕೊಂಡಿದ್ದೇನೆ. ಬಂಗಾರಪ್ಪನವರ ಬಗ್ಗೆ ಏನೇನೊ ಹೇಳಬಹುದು. ಆದರೆ ಕಾನೂನು ಏನೇ ಇದ್ದರೂ ಅದನ್ನು ಬದಿಗಿಟ್ಟು ಸೈಟ್ ಹಂಚಿಕೆ ಮಾಡಿದರು. ಆದರೆ ನಿಮ್ಮ ಕಾಲದಲ್ಲಿ ಒಬ್ಬನಿಗೂ ಸೈಟ್ ಕೊಡಲಿಲ್ಲ.

ಮುಂಚೆ ಏನೋ ಹೇಳಿದಿರಿ ಸ್ವಾಮಿ ನಾನು, ಮರೆತುಬಿಟ್ಟಿದ್ದೇನೆ, ಎಲ್ಲಾ ಹೇಳಿದರೆ ನಿಮಗೆ ಸಿಟ್ಟು ಬರುತ್ತದೇನೋ, ಇವತ್ತು ನಗು ಮುಖದಲ್ಲಿದ್ದೀರಿ, ಸಂತೋಷ. ಏನು ಹೇಳಿದರು, ಅವರು ಹಳ್ಳಿಗಳಿಗೆ ಹೋಗಿದ್ದರು. ನಮ್ಮ ಹೆಣ್ಣುಮಕ್ಕಳು ಶಾಲೆಗಳ ಹತ್ತಿರ ಶೌಚಾಲಗಳಲ್ಲಿಲ್ಲ, ದೇವೇಗೌಡರಿಗೆ ಆ ದೃಶ್ಯದ ಅರಿವು ಚುನಾವಣೆ ಸಮಯದಲ್ಲಾಯಿತು.

ಎಂತಹ ಕಳಕಳಿ ಸ್ವಾಮಿ, ಶೌಚಾಲಯ ಕಟ್ಟಿದಿರಾ? ಯಡಿಯೂರಪ್ಪನವರೇ ನಿಧಾನಕ್ಕೆ ಕಟ್ಟುತ್ತೇನೆ, ಇನ್ನೂ ನಾಲ್ಕು ಕಾಲು ವರ್ಷ ಇದೆ, ನಿಮ್ಮವರು ಬಿಡುತ್ತೀರಾ ಸ್ವಾಮಿ? ನಾವು ಬಿಡಲು ರೆಡಿ ಇದ್ದರೂ, ಮೊಯಿಲಿಯವರು ಖರ್ಗೆಯವರು ನಾವೆಲ್ಲ ಒಂದಾದರೆ ಅಲ್ಲೊಂದಿಷ್ಟು ಜನರನ್ನು ತೆಗೆದುಕೊಂಡು ಏನಾಗುತ್ತದೋ ನೋಡೋಣ ಇನ್ನೂ ಎರಡು ದಿವಸ ನಿಮ್ಮ ಪ್ರಭಾವೀ ಭಾಷಣ ಕೇಳಿ ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಇವರು ಬರೀ ಮೊಯಿಲಿ ಎಂದು ಹೇಳಿಬಿಟ್ಟಿರಲ್ಲ, ಇದು ಸರಿ ಇಲ್ಲ. ನನಗೆ ಬಹಳ ಅನುಮಾನಗಳು ಬಂದಿವೆ. ಅನೇಕ ಸಾರಿ ನನ್ನ ಬೆಂಬಲ ತೆಗೆದುಕೊಂಡು ಕೇವಲ ಇವರು ಮೊಯಿಲಿ ಖರ್ಗೆ ಒಂದಾಗುತ್ತಿದ್ದಾರಲ್ಲ, ಇದು ಸರಿಯಲ್ಲ. ಆದ್ದರಿಂದ ಇವರಿಬ್ಬರ ಹೊಂದಾಣಿಕೆ ಒಳ್ಳೆಯ ಸಂಬಂಧವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ನಾಗರಾಜ್ ಒಪ್ಪಾರೋ ಇಲ್ಲವೋ, ನಮ್ಮ ಕಡೆಯಿಂದ ಅವರು ನಮ್ಮವರೇ ಎಂದು ತೀರ್ಮಾನ ಮಾಡಿದ್ದೇವೆ. ನಿಮ್ಮ ಹೆಸರು ಹೇಳಿದರೆ ಬೇರೆಯವರು ಎಂದು ಆಗುತ್ತಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರಿಬ್ಬರು ಒಂದಾಗಿ ನಾಗರಾಜ್‌ರವರನ್ನು ಸೇರಿಸಿಕೊಳ್ಳುವುದಕ್ಕೆ ಅವರದೇನು ಅಭ್ಯಂತರ ಇಲ್ಲವೇ ಎಂದು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ನೇರವಾಗಿ ಶ್ರೀರಾಮರೆಡ್ಡಿಯವರು ಜೊತೆಯಲ್ಲಿ ಬಂದೇ ಬರುತ್ತಾರೆ ಅವರು ನನ್ನ ಸ್ನೇಹಿತರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಏನು ಹೇಳಿದಿರಿ, ಏನು ಯಡಿಯೂರಪ್ಪನವರೇ ಅದ್ಯಾರೋ ರೈಲ್ವೆ ಸಚಿವ ಜಾಫರ್‌ಶರೀಫ್‌ರ ಬಗ್ಗೆ ಏಕೆ ಮಾತನಾಡುತ್ತೀರಿ? ಇಲ್ಲಿರುವ ಅನೇಕ ಜನ ನೂರಾರು ಎಕರೆ ಕಾನೂನು ಬಾಹಿರವಾಗಿ ಹೊಡೆದಿರುವವರು ಇದ್ದಾರೆ. ಹೌದೇ ಸ್ವಾಮಿ ಸಂತೋಷ ನಾನು ಭಗವಂತನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ಆ ಕಡೆಯವರು ಈ ಕಡೆಯವರು ಯಾರೇ ಇರಬಹುದು, ಕಾನೂನು ಬಾಹಿರವಾಗಿ ಆ ಕಡು ಬಡವರಿಗೆ ಮನೆ ಕಟ್ಟಿಕೊಳ್ಳಲು ಬಿಡದೇ ಇರುವಂತಹ ಕೆರೆ ಕಟ್ಟೆಗಳನ್ನು 50-60 ಲಕ್ಷ ಬೆಲೆಬಾಳುವ ಜಮೀನುಗಳ ಪಟ್ಟೆ ಕೊಡುತ್ತೇನೆ, ನಿಮಗೆ ಆಕಸ್ಮಾತ್ ಮುಖ್ಯಮಂತ್ರಿಯಾಗಿ ಮುಂದುವರಿಯುವುದಕ್ಕೆ ಅವರು ಬಿಟ್ಟರೆ ಅಥವಾ ಇವತ್ತಿನ ಅವಿಶ್ವಾಸ ಸೂಚನೆಯಲ್ಲಿ ನೀವು ಉಳಿದು ಹೋದರೆ ಮಾಡುತ್ತೀರಾ ಸ್ವಾಮಿ? ಅರೆ, ಆ ಸ್ಥಾನದಲ್ಲಿ ಕುಳಿತು ಸರಿ ಮಾಡಿ ಎಂದು ಏಕೆ ಅವರ ಬಗ್ಗೆ ಕೇಳುತ್ತೀರಿ, 13 ಸಾವಿರ ಎಕರೆ ತಿಂದವರಿದ್ದಾರಲ್ಲ, ಅವರಿಗೆ ರಕ್ಷಣೆ ಕೊಡುತ್ತೀರೋ? ನಿಜವಾದರೆ ನೀವೇನು ಮಾಡಿದ್ದೀರಿ ಅಂದರೆ ಅರ್ಥವೇನು ಗೊತ್ತಾ ಜನ ಮಾಡಿಕೊಂಡಿರುವುದು? ನಾನು ಯಾರೋ ಒಬ್ಬರ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡರೆ ಟ್ರೆಜರಿ ಬೆಂಚಿನಲ್ಲಿ ಅಥವಾ ಆ ಕಡೆ ಕುಳಿತಿರುವ ಅನೇಕ ಜನರು ಇಕ್ಕಟ್ಟಿಗೆ ಸಿಕ್ಕಿಕೊಂಡು ಬಿಡಬಹುದು ಎಂಬ ಭಯ ಇದ್ದರೆ ನಾನು ಸದನದಲ್ಲಿ ಹೇಳುತ್ತೇನೆ, ನಮ್ಮದು ಯಾರದೂ ಅಭ್ಯಂತರ ಇಲ್ಲ, ನೀವು ಉತ್ತರ ಕೊಡುವಾಗ ಬಹಿರಂಗ ಮಾಡಬೇಕು, ಯಡಿಯೂರಪ್ಪನವರು ಸೇರಿಸಿ.

ಕಳೆದ 13 ವರ್ಷಗಳ ರಾಜಕಾರಣದಲ್ಲಿ ನಿಮ್ಮ ಸರ್ಕಾರದ ಒಂದು ಋಣ ಕಾನೂನುಬಾಹಿರವಾಗಿ ಯಡಿಯೂರಪ್ಪನವರೇ ನೀವು ಮಾಡಿಕೊಂಡಿದ್ದೀರಿ ಎಂದಿದ್ದರೆ, ದಯಮಾಡಿ ನಿಮ್ಮ ದಾಖಲೆಗಳನ್ನು ನಾನು ಕೇಳುವುದಿಲ್ಲ. ಏಕೆಂದರೆ ನಿಮ್ಮ ಹತ್ತಿರ ಇರುತ್ತೆ, ನನ್ನ ಬಗ್ಗೆ ಮಾತನಾಡಬೇಕಾದರೆ ಬೇರೆಯವರ ಬಗ್ಗೇನೂ ನಾನು ಕೇಳುವುದಿಲ್ಲ. ತಾವು ದಯಮಾಡಿ ಪ್ರಕಟಿಸಬೇಕು. ಆ ಪವಿತ್ರ ಸ್ಥಾನದಲ್ಲಿ ಕುಳಿತುಕೊಂಡು, ಇಷ್ಟು ಹಗಲು ದರೋಡೆ ನಡೆಯುತ್ತಿದ್ದರೂ ಸಹ, ಅಂಕಿಅಂಶಗಳು ಗೊತ್ತಿದೆ, ದಾಖಲೆಗಳಿವೆ, ಆದರೂ ಅವರಿಗೆ ರಕ್ಷಣೆ ಕೊಡುತ್ತಿದ್ದೀರಿ ಎಂದು ಅಂದುಕೊಳ್ಳುವುದಿಲ್ಲವೇ

ಮುಖ್ಯಮಂತ್ರಿಗಳೇ. ತಾವು ಯೋಚನೆ ಮಾಡಬೇಕಾಗುತ್ತದೆ. ಸ್ವಾಮಿ ಈ ಖನಿಜ ಸಂಪತ್ತು ಫಾರೆಸ್ಟ್ ಪ್ರೊಡ್ಯೂಸ್‌ಗಳಿಗೆಲ್ಲ ಯಾವುದೋ ಕಾಲದಲ್ಲಿ ಇಂಡಸ್ಟ್ರಿ ಬರಲಿ ಎಂದು ನಾಮಿನಲ್ ಪ್ರೈಸ್‌ಗೆ ಅದೆಲ್ಲ ಕೊಟ್ಟಿದ್ದೆವು. ದೇವೇಗೌಡರು ಲೋಕಸಭೆಯಲ್ಲಿ ಮಾತನಾಡಿದರು, ಒಂದು ಅಂದಾಜಿನ ಪ್ರಕಾರ ಸರ್ಕಾರದ ಖಜಾನೆಗೆ 250 ಕೋಟಿ ಬರುತ್ತದೆ, ಯಾರ ಮೂಲಾಜು? ಏಕೆ ಮಾಡುವುದಿಲ್ಲ, ಏಕೆ ತರುವುದಿಲ್ಲ ಫೈಲುಗಳನ್ನು ಗೊತ್ತಿಲ್ಲ ನನಗೆ ಏಕೆ ಅಂತ. ಕರ್ನಾಟಕಕ್ಕೆ ವಿದೇಶಿ ಬಂಡವಾಳ ತಂದು ಕೈಗಾರಿಕೆ ಪ್ರಾರಂಭ ಮಾಡಿ ಲಕ್ಷಾಂತರ ಜನರಿಗೆ ಉದ್ಯೋಗ ಕೊಡುತ್ತೇವೆಂದು ಪಟೇಲರು ನೀವು ದೇಶಪಾಂಡೆಯವರು ಹೋಗೇ ಹೋದಿರಿ, ಅದೆಷ್ಟು ಜನ ಬಂದರು, ಅದೇನಾದರೂ, ಅದೆಷ್ಟು ಜನಕ್ಕೆ ಉದ್ಯೋಗ ಕೊಟ್ಟಿರಿ. ದೇಶಪಾಂಡೆಯವಂತೂ ಆರೋಗ್ಯವಾಗಿ ಆನಂದವಾಗಿದ್ದಾರೆ, ನಮ್ಮ ರಾಜ್ಯದ ಜನರನ್ನು ನಿಮ್ಮ ಹಾಗೆ ನಗುವ ಹಾಗೆ ಮಾಡಿ ಸ್ವಾಮಿ ಆಕಸ್ಮಾತ್ ಅಧಿಕಾರದಲ್ಲಿ ಮುಂದುವರೆದರೆ ಸ್ವಾಮಿ ಇಲ್ಲಿ ಪಿಜಿಆರ್ ಸಿಂಧ್ಯಾರವರಿದ್ದಾದಲ್ಲ, ಅವರ ಮನೆಯ ಪಕ್ಕದ ಪಕ್ಕದ ಪಕ್ಕದ ಸೈಟ್, ಅಲ್ಲೇ ಓಡಾಡ್ತೀರಲ್ಲ ನೋಡಿರಬಹುದು. ನಿಮ್ಮದಲ್ಲ ಅಂದೆ,

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ರೆಫರ್ ಮಾಡುವ ಪಿಜಿಆರ್ ಸಿಂಧ್ಯಾರ ಮನೆಯ ಪಕ್ಕದ ಪಕ್ಕದ ಎಂದರೆ ಆ ಸೈಟ್‌ಗೇನು ಒಂದು ನಂಬರಿಲ್ಲವೇ? ಆ ಸೈಟನ್ನು ನಾನು ಅಕ್ರಮವಾಗಿ ತೆಗೆದುಕೊಂಡಿದ್ದೇನೋ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಏ ಕುಳಿತುಕೊಳ್ಳೋ ನೀನೇನು ಹೇಳುವುದು...

(ಗದ್ದಲ - ಕೂಗಾಟ)

(ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರು ಮಾತನಾಡಬೇಡಿ, ಹೋಂ ಮಿನಿಸ್ಟರ್ ಇದ್ದಾರೆ ಪೋಲೀಸರು ಅವರ ಕೈಲಿದ್ದಾರೆ, ಹಗುರವಾಗಿ ನಮ್ಮ ಪಿಜಿಆರ್ ಸಿಂಧ್ಯಾ ಅವರು ಸಿಟ್ಟು ಮಾಡಿಕೊಂಡು ಏಕವಚನದಲ್ಲಿ ಮಾತನಾಡಿದರು, ತಿರುಗಿಬೀಳಬೇಡಿ ಅಪ್ಪಾ, ನಿಮ್ಮ ಹೆಸರು ಹಿಡಿದು ಪೋಲೀಸರಿಗೆ ಇನ್ನೇನು ಸೂಚನೆ ಕೊಟ್ಟು ಇನ್ನೇನು ಆಗುತ್ತದೆಯೋ, ಅಪ್ಪಚ್ಚುರಂಜನ್‌ಗೆ ಹೇಗಾಯಿತು, ಬೇಡಪ್ಪಾ ನಾವೆಲ್ಲ ಹೊಸಬರಿದ್ದೇವೆ. ನಮಗೆ ಜನ ಬೆಂಬಲ ಇಲ್ಲ

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಡೀ ಕರ್ನಾಟಕ ರಾಜ್ಯದಲ್ಲಿ ಗೃಹಸಚಿವರು ರಕ್ಷಣೆ ಕೊಡಬೇಕಾದ ಒಬ್ಬ ಸಚಿವರು ಎಂದು ನಾವು ಭಾವಿಸಿದ್ದೇವೆ, ಅವರಿಗೊಂದು ಸ್ಥಾನ ಕೂಡ ಕೊಟ್ಟಿದ್ದೇವೆ, ಇಂತ ಒಬ್ಬ ಗೃಹಮಂತ್ರಿ ಜನತೆಯಿಂದ ಆರಿಸಿಬಂದ ಒಬ್ಬ ಪ್ರತಿನಿಧಿ ಬಗ್ಗೆ ಈ ರೀತಿ ಅಗೌರವವಾಗಿ ಮಾತನಾಡುತ್ತಿರುವುದು ಸದನದಲ್ಲೇ ಕಾಣುತ್ತಿರುವ ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಇವರ ನಡವಳಿಕೆ ಯಾವ ರೀತಿ ಇದೆ.

ಅಧ್ಯಕ್ಷರು : ಯಾರ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ : ವಿಶ್ವೇಶ್ವರ ಹೆಗಡೆ ಬಗ್ಗೆ ಕುಳಿತುಕೊಳ್ಳಯ್ಯ ನೀನು ಅಂದರೆ, ಇದು ನ್ಯಾಯ ಎಂದು ತಮಗೆ ಅನ್ನಿಸಿದರೆ, ಇಡೀ ಕರ್ನಾಟಕಕ್ಕೆ ಯಾವ ರೀತಿ ರಕ್ಷಣೆ ಸಿಗುತ್ತೆ ಎನ್ನುವುದರ ಬಗ್ಗೆ ತಾವೇ ತೀರ್ಮಾನ ಮಾಡಬೇಕು ಸ್ವಾಮಿ,

ಏಕೆಂದರೆ ಸದನದಲ್ಲಿ ನೀವೊಬ್ಬರೇ ನಮ್ಮ ರಕ್ಷಣೆಗೆ ಬರುವುದು, ಹೊರಗಡೆ ನಮ್ಮ ರಕ್ಷಣೆಗೆ ಬರುವುದು ಯಾರೂ ಇಲ್ಲ. ಇಲ್ಲಾದರೂ ರಕ್ಷಣೆ ಬೇಕಲ್ಲ.

(ಕೂಗಾಟ - ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ : ಆ ರೀತಿ ಹಾವಭಾವದಿಂದ ಈ ಸದನದಲ್ಲಿ ನಡೆದುಕೊಂಡಿರುವುದರಿಂದ ನನ್ನ ಭಾವನೆಗಳಿಗೆ ಅಗೌರವವಾಗುತ್ತದೆ ಎಂದು ನನಗೆ ಅನ್ನಿಸಿದೆ. ಇದರಿಂದ ನನ್ನ ಕ್ಷೇತ್ರದ ಜನತೆಗೂ ತೋರಿಸಿರುತ್ತಿರುವ ಅವಮಾನ ಆಗುತ್ತದೆ ಇದು. ಪಕ್ಕದಲ್ಲಿರುವವರು ಹಾವಭಾವ ನೋಡಿಯೋ ಏನೋ ಇವರು ಯಾವ ವಿಚಾರಕ್ಕೆ ಒಳಪಟ್ಟಿದ್ದಾರೆಂದು ನಮಗೆ ಅನುಮಾನವಾಗುತ್ತಿದೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಗೃಹಮಂತ್ರಿಗಳು ಏಕವಚನದಲ್ಲಿ ಹೇಳಿದರು ಅಂದರು, ಅಯ್ಯಾ ಎಂದರೆ ಸ್ವರ್ಗ, ಎಲ್ಲವೋ ಎಂದರೆ ಎಂದರೆ ನರಕ - ಅವರು ಅಯ್ಯಾ ಅಂದರೆ

ಶ್ರೀ ಕೆ.ಎಸ್. ಈಶ್ವರಪ್ಪ : ಸರಿ ನಮ್ಮ ಗೃಹಸಚಿವರ ರಕ್ಷಣೆಗೆ ಉಪ ಮುಖ್ಯಮಂತ್ರಿಗಳು ಬಂದಿದ್ದಾರೆ, ಇದನ್ನು ರಾಜ್ಯದ ಜನತೆ ತೀರ್ಮಾನ ಮಾಡುತ್ತಾರೆ, ಇನ್ನೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಅರ್ಥವಾಗದಿರುವ ಸಂಗತಿ, ನಮ್ಮ ಶಾಸಕರಿಗೆ ಗೃಹಸಚಿವರಿಗೆ ಇದಕ್ಕಿಂತ ಹೆಚ್ಚಿಗೆ ಏನು ನಿರೀಕ್ಷೆ ಮಾಡುತ್ತಾರೆ. ಅಪ್ಪಚ್ಚುರಂಜನ್‌ಗೆ ಕತ್ತಿನಪಟ್ಟಿ ಹಿಡಿದುಕೊಂಡು ಎಳೆದಾಡಿದರು ಅಂತ ಪತ್ರಿಕೆಯಲ್ಲಿ ಬಂತು, ಮುಖ್ಯಮಂತ್ರಿಗಳು ಅವತ್ತು ರಕ್ಷಣೆ ಕೊಡಬೇಕಾಗಿತ್ತು, ನೀವು ಅಲ್ಲ ಅಂದಿರಿ, ಹೌದು ಎಂದು ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ ಸ್ವಾಮಿ? ನಮ್ಮ ಲಾ ಮಿನಿಸ್ಟರ್ ಕಾನೂನು ಹೇಳಿಕೊಡಬೇಕಾದವರು, ರಕ್ಷಣೆ ಕೊಡಬೇಕಾದವರು ಅವರು - ಅವರೇ ತಪ್ಪು ಮಾಡಿದಾಗ ನೀವು ರಕ್ಷಣೆ ಕೊಡುವುದಕ್ಕಾಗುತ್ತದೆಯೇ ನೋಡೋಣ, ನಾವು ಪ್ರಿವಿಲೇಜ್ ಮೂವ್ ಮಾಡಬೇಕು, ನಿಮ್ಮ ಸರ್ಕಾರ ಇರುತ್ತದೆಯೇ, ನೋಡಿ ಚರ್ಚೆ ಮಾಡೋಣ. ನಮ್ಮ ಗೃಹಸಚಿವರಿಂದ ಬೇರೆ ಏನೂ ನಿರೀಕ್ಷೆ ಮಾಡಬೇಡಿ. ಅಧಿಕಾರದ ಮದ, ಠೇಂಕಾರ ಕ್ಷಣಕ್ಷಣಕ್ಕೆ ಅಹಂಕಾರ, ತಮ್ಮ ನಡವಳಿಕೆಯಲ್ಲಿ ಪ್ರದರ್ಶನವಾಗುತ್ತಿದೆ, ಶೋಭೆ ತರುವುದಲ್ಲ ನಿಮಗೆ ದಾಖಲೆಗಳನ್ನು ತೆಗೆದುನೋಡಿ ಸ್ವಾಮಿ.

ಬಡವರ ಕಣ್ಣೀರನ್ನು ಒರೆಸುವಂತಹ ಭಾಗ್ಯವಿಧಾತ ಅಂದುಕೊಂಡು ಜನ ನಿಮಗೆ ಅಧಿಕಾರ ಕೊಟ್ಟರೆ, ಯಾವ ಸ್ಥಿತಿಗೆ ನಮ್ಮನ್ನು ನೀವು ತಂದು ಬಿಟ್ಟರಿ, ಹೀಗಿದ್ದರೂ ನಿಮ್ಮನ್ನು ಅಧಿಕಾರದಲ್ಲಿ ಮುಂದುವರಿಯಬೇಕು ಎಂದು ಹೇಳಬೇಕೇ? ಈ ಸರಕಾರವನ್ನು ಕಡೆಗೆ ನಾವು ತಂದೆರು ಎಂದು ಹೇಳಿಬಿಡಬಹುದು. ಮದನ್‌ಗೋಪಾಲ್ ಇದ್ದಾರೆ, ಇಲ್ಲಿ ಅವರ ಬಗ್ಗೆ ಚರ್ಚೆ ಮಾಡಿದೆವು. ಕೆಲವರು ಪ್ರಾಮಾಣಿಕರಿದ್ದಾರೆ. ಒಳ್ಳೆಯ ಇಲಾಖೆಗೆ ತಂದು ಸರಿ ಮಾಡಬೇಕೆಂದು ಹೇಳಿದಿರಿ. ಕಂಪಲ್ಷನ್ ಇತ್ತು ಯಾವುದೋ ರಾಜಕಾರಣದ್ದು ಯಾವುದೇ ಕಾರಣಕ್ಕೋಸ್ಕರ ಯಾರನ್ನೋ ಈ ಕಡೆಯವರನ್ನು ತೃಪ್ತಿಪಡಿಸುವುದಕ್ಕೋ ಪಡಿಸಬೇಕಾಗುತ್ತು. ಯಾವ ಅಧಿಕಾರಿ ಎಲ್ಲಿ ಇಡುವುದಕ್ಕೆ ಬಿಡುತ್ತಿದ್ದೇವೆ. ನಾನು ಹೇಳಿದ ಹಾಗೆ ಡಿ.ಸಿ. ಕೇಳಬೇಕು, ನಾನು ಹೇಳಿದ ಹಾಗೆ ಎಸ್.ಪಿ. ಕೇಳಬೇಕು, ತಾನು ಮಾಡಬಾರದ್ದನ್ನು ಮಾಡಿದರೂ ನೋಡಿಕೊಂಡು ಸುಮ್ಮನಿರಬೇಕು. ಇದನ್ನು ನೋಡಿಕೊಂಡು ಕುಳಿತಿರುವಂತಹ ಅಧಿಕಾರ ವರ್ಗ. ಇದರ ವಿರುದ್ಧ ಪ್ರತಿಭಟನೆ ಮಾಡುವಂತಹ ನೈತಿಕ ಹಕ್ಕು ಇಲ್ಲದೆ, ಇದೆಲ್ಲಕ್ಕೂ ಹೊಂದಿಕೊಂಡು ಹೋಗುವುದಕ್ಕೆ ಕೈ ಕಟ್ಟಿ ಕುಳಿತಿರುವಂತಹ ಒಂದು ಸಮಾಜ, ಪ್ರತಿನಿಧಿಗಳಾಗಿ ನಾವು ಕುಳಿತಿರುವಂತಹ ಪರಿಸ್ಥಿತಿ ಇದೆ. ಗ್ರಾನೈಟ್ ವ್ಯವಹಾರದಲ್ಲಿ 200ಕೋಟಿ ಬರಬಹುದೆಂದು ನಾನು ಹೇಳಿದ್ದೆ. ಒಂದು ಸಮಿತಿ ಮಾಡಿದ್ದೆವು. ಅದರಲ್ಲಿ ನಾನೂ ಸದಸ್ಯನಿದ್ದೆ

ಖಾಸಗಿಯವರಿಗೆ ಕೊಡಬಾರದೆಂದು ಪ್ರತಿಭಟನೆ ಮಾಡಿದೆವು. ಯಾವ ಕಾಲದಲ್ಲೂ ಟ್ಯಾಕ್ಸ್ 25-30 ಕೋಟಿ ದಾಟಲಿಲ್ಲ.

ಮದನಗೋಪಾಲ ಬಂದ ಮೂರು ತಿಂಗಳಲ್ಲಿ 34 ಕೋಟಿಗೆ ತಂದ, ಅದನ್ನು ನೀವೇ ಹೇಳಿಕೆ ಕೊಟ್ಟಿದ್ದೀರಿ. ಒಂದು ವರ್ಷಕ್ಕೆ 190 ಕೋಟಿ ಬರುತ್ತಿತ್ತು. ಆತ್ಮಸಾಕ್ಷಿಯಾಗಿ ಹೇಳುತ್ತೀರೋ? ಈಗ ಅವನನ್ನು ಬೇರೆ ಕಡೆಗೆ ಜಿಲ್ಲಾಧಿಕಾರಿಯಾಗಿ ವರ್ಗಾವಣೆ ಮಾಡುವುದಕ್ಕೆ ಗ್ರ್ಯಾನೈಟ್ ವ್ಯವಹಾರದಲ್ಲಿ ಪ್ರಭಾವವಿರುವ ಜನ ಬೆನ್ನು ಹತ್ತಿರುತ್ತಾರೆ. ಸಚಿವ ಸಂಪುಟದ ಸದಸ್ಯರೇ ಇದಕ್ಕೆ ಒತ್ತಾಯ ತರುವಂಥಾದ್ದು ಕಾಣುತ್ತಿದೆ. ಆಕಸ್ಮಾತ್ ನೀವು ಮುಖ್ಯಮಂತ್ರಿಯಾಗಿ ಮುಂದುವರಿದು ಬಿಟ್ಟರೆ ಇದಕ್ಕೆ ಯೀಲ್ಡ್ ಆಗಬೇಡಿ. ಒಳ್ಳೆಯವರಿಗೆ ಜಾಗವಿಲ್ಲವೆನ್ನುವ ಪರಿಸ್ಥಿತಿ ಇವತ್ತು ತರಬೇಡಿ, ಅಷ್ಟೇ ಸಾಕು. ಮೇ 31ಕ್ಕೆ ವರ್ಗಾವಣೆ ಮುಗಿಸುತ್ತೇವೆಂದು ಹೇಳಿದಿರಿ, ಅವರವರ ಮಕ್ಕಳು ಶಾಲೆಗೆ ಸೇರಿಕೊಂಡು, ಹಾಲು ಕುಡಿದುಕೊಂಡು, ನೆಮ್ಮದಿಯಿಂದ ಇರಬಹುದು ಎಂದು ಘೋಷಣೆ ಆದರೆ, ಮೇ 31ಕ್ಕೆ ಮುಗಿಯಲಿಲ್ಲ ಜೂನ್ 30ಕ್ಕೆ ಅಟ್ ಎನಿ ಕಾಸ್ಟ್ ಮುಗಿಸುತ್ತೇವೆ, ಮುಂದೆ ಹೋಗುವುದಿಲ್ಲ ಎಂದು ಹೇಳಿದಿರಿ ಆಗಲಿಲ್ಲ. ಜುಲೈ 31 ಆಗಲಿಲ್ಲ, ಆಗಸ್ಟ್ 8 ಇನ್ನೂ ಮುಗಿದಿಲ್ಲ.

ಸರಕಾರಿ ನೌಕರರಿಗೆ ಹೆಂಡತಿ ಮಕ್ಕಳು ಇಲ್ಲವೇ, ಅವರು ಗೌರವದಿಂದ ಬದುಕುವ ಅಗತ್ಯ ಇಲ್ಲವೇ? ಯಾವ ದೇವರು ನಿಮ್ಮನ್ನು ಕ್ಷಮಿಸುತ್ತಾನೆ. ಕಳೆದ 4-5 ತಿಂಗಳಿಂದ ವರ್ಗಾವಣೆಯಿಂದಾಗಿ ಶಾಸಕರ ಮಂತ್ರಿಗಳ ಮನೆ ಬಾಗಿಲಲ್ಲಿ ಬಂದು ಭಿಕ್ಷುಕರಂತೆ ನಿಲ್ಲುವ ಹೀನಸ್ಥಿತಿ ಬಂದಿದೆ. 4-5 ತಿಂಗಳಿಂದ ಸರಕಾರದ ಅಭಿವೃದ್ಧಿ ಕಾರ್ಯ ಆಗಲಿಲ್ಲ, ನೌಕರರಿಗೆ ಸಂಬಳ ಕೊಡುವುದು ತಪ್ಪಲಿಲ್. ನಮ್ಮ ಹಣಕಾಸಿನ ಸಚಿವರು ನಮ್ಮ ಖಜಾನೆ ಭರ್ತಿ ಇದೆ, ತುಂಬಿದೆ ಎಂದು ಹೇಳುತ್ತಾರೆ. ಏನು ಮಾಡಿದಿರಿ? ಸರಕಾರ ನೌಕರರಿಗೆ ಸಂಬಳ ಕೊಟ್ಟಿರಿ. ಅದಕ್ಕಾಗಿ ಜನ ನಿಮಗೆ ಓಟು ಕೊಟ್ಟರೇ? ಅದಕ್ಕಾಗಿ ಜನ ನಿಮಗೆ ಓಟು ಕೊಟ್ಟರೇ? ದಾಖಲೆ ಕೇಳುತ್ತೀರಿ? ಇತಿಹಾಸದಲ್ಲಿ ನೀವು ಬರುವುದಕ್ಕೆ ಮುಂಚೆ ದಾಖಲೆಗಳನ್ನು ಕೊಟ್ಟು ತೆಗೆದುಕೊಂಡು ಹೋಗುತ್ತೀರಲ್ಲ, ಸ್ವಾಮಿ ಅದಕ್ಕೆ ಹೊಸ ವ್ಯವಸ್ಥೆ ಮಾಡಬೇಕಾಗುತ್ತದೆ. ಜನ ಇಂದು ಮಾತನಾಡುತ್ತಿದ್ದಾರೆ ವರ್ಗಾವಣೆಗೆ 1-2 ಲಕ್ಷ ಕೊಡದಿದ್ದರೆ ಕೆಲಸ ಆಗುವುದಿಲ್ಲ ಯಾರೋ ಬಂದು ನನ್ನ ಹತ್ತಿರ ಹೇಳುತ್ತಾರೆ, ನಾನು ಅವರಿಗೆ ಛೇಮಾರಿ ಹಾಕಿ ಕಳಿಸಿದೆ. ಹೀಗೆ ಏಕೆ ಹೇಳುತ್ತೀರಿ ಎಂದು ಹೇಲಿದೆ. ಸಬ್ ರಿಜಿಸ್ಟ್ರಾರ್‌ಗೆ 40-50 ಲಕ್ಷ ಕೊಟ್ಟು ವರ್ಗಾವಣೆ ಮಾಡಿಕೊಳ್ಳುತ್ತಿದ್ದೇವೆಂದು ಯಾರೋ ಬಂದು ಹೇಳಿದಾಗ ನಾನು ಸಾದ್ಯವಿಲ್ಲ ದೇವೇಗೌಡರ ಸರಕಾರದಲ್ಲಿ ಹೀಗೆ ಹೇಳುತ್ತೀರಿ ಅದು ಸಾಧ್ಯವಿಲ್ಲವೆಂದು ಹೇಳಿದೆ. ಇಲ್ಲ ಸ್ವಾಮಿ ಆಗಿದೆ ಎಂದು ಹೇಳಿದರು ನೋಡೋಣ. ಮಂತ್ರಿಗಳೇ ಕರೆದು, ಅಲ್ಲಿ ಇಲ್ಲಿ ಏಕೆ ಹೋಗುತ್ತೀರಿ ನೇರವಾಗಿ ಬಾ ಎಂದು ಹೇಳಿದರಂತೆ, ಇದನ್ನು ಅವರು ಬಂದು ಹೇಳಿದರು. ನಾನು ಹೇಳಿದೆ ಅವರು ಹಾಗೆ ಹೇಳಿಲ್ಲ. ದಾಖಲೆ ತೆಗೆದುಕೊಂಡು ಬಾ, ಫೋಟೋ ತೆಗೆದುಕೊಂಡು ಬಾ, ಎಂದು ನಾನು ಹೇಳಿದೆ. ನಮ್ಮ ಮಂತ್ರಿಗಳ ಬಗ್ಗೆ ನೇರ ಬಂದು ದುಡ್ಡು ಕೊಡು, ನೇರವಾಗಿ ನೀನೇ ಬಂದು ಮಾಡಿಸಿಕೋ, ಮಧ್ಯದಲ್ಲಿ ನಾವೇಕೆ?

ನಾನು ವಿರೋಧ ಪಕ್ಷದಲ್ಲಿ ಇರಬಹುದು, ಅವರು ಆಡಳಿತ ಪಕ್ಷದಲ್ಲಿ ಇರಬಹುದು ನಮ್ಮ ಸರಕಾರದ ಬಗ್ಗೆ ಹೇಳುವುದಕ್ಕೆ ನಿನಗೆ ಎಷ್ಟು ಧೈರ್ಯ ಎಂದು ಹೇಳಿದ್ದೇನೆ. ಆದರೆ ಜನ ಮಾತನಾಡುತ್ತಿದ್ದಾರೆ ಅದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೇ, ಎಲ್ಲೋ ಒಂದು ಕಡೆಗೆ ನಾನು ಬಿಜಿನೆಸ್ ಅನ್ನು ರೆಗ್ಯುಲೇಟ್ ಮಾಡಬೇಕಾಗುತ್ತದೆ. ಈ ತರಹದ ಸ್ವೀಪಿಂಗ್ ರಿಮಾರ್ಕ್ಸ್ ಜನರಲ್ ನೇಚರ್ ಮಾಡಬಾರದು. ನಾಳೆ ತ್ರೂ ಮೀಡಿಯ ಜನರಿಗೆ ಸರ್ಕ್ಯುಲೇಟ್ ಆಗುತ್ತದೆ. ನಾನು ಯಾರಿಗೂ ಡಿಫೆನ್ಸ್ ಮಾಡತಕ್ಕಂತಹ ಮೂಡಿನಲ್ಲಿ ಇಲ್ಲ. ಸ್ಪೆಸಿಫಿಕ್ ಅಲಿಗೇಷನ್ಸ್ ಇದ್ದರೆ ಕೊಡಿ. ಕನ್ಸರ್ನ್ಡ್ ಪೀಪಲ್ಸ್ ಯಾರಿರುತ್ತಾರೋ ಅವರು ಆನ್ಸರಬಲ್ ಆಗಿರುತ್ತಾರೆ. ಜನ ಮಾತನಾಡುತ್ತಾರೆ ಎನ್ನುವುದನ್ನು ಇಂಟರಪ್ರಿಟ್ ಮಾಡಿದರೆ, ಅದೆಲ್ಲಾ ಕಡತದೊಳಗೆ ಹೋದರೆ ಚೆನ್ನಾಗಿರುತ್ತದೆಯೇ ಎಂದು ಯೋಚನೆ ಮಾಡಿ. ನನ್ನದು ಒಂದೇ ಸಮಸ್ಯೆ. ನಾನಿಲ್ಲಿ ಕುಳಿತಿರತಕ್ಕಂತಹ ಪ್ರತಿ ಕ್ಷಣ ಕೂಡ, ಈ ಸ್ಥಾನದ ಗೌರವ ಕಾಪಾಡಬೇಕು ಮತ್ತು ಈ ಸದನದ ಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂದು ಇದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಒಳ್ಳೆಯ ಕಾಲದಲ್ಲಿ ಕುಳಿತಿಲ್ಲ ಸ್ವಾಮಿ. ಒಳ್ಳೆಯ ಸರಕಾರವಿದ್ದಾಗ ನೀವು ಅಲ್ಲಿ ಕುಳಿತಿದ್ದರೆ, ನೀವು ಅದನ್ನು ಕೇಳುವಂತಹ ಪರಿಸ್ಥಿತಿ ಇರುತ್ತಿರಲಿಲ್ಲ. ಅದನ್ನು ಹೇಳುವಂತಹ ಪರಿಸ್ಥಿತಿಯಲ್ಲಿ ನಾನು ಇದ್ದೇನೆಂಬ ದುಃಖ ನನಗೂ ಆಗುತ್ತಿದೆ. ಆ ಗೌರವವನ್ನು ಕಾಪಾಡಬೇಕೆಂಬ ಕಳಕಳಿಗೆ ನಾನೂ ಕೂಡ ತಲೆಬಾಗುತ್ತೇನೆ. ಮುಖ್ಯಮಂತ್ರಿಗಳು ಏನು ಹೇಳಿದರು, ವರ್ಗಾವಣೆಯಲ್ಲಿ ಏನು ಆಗಬಾರದಾಗಿತ್ತೋ ಅದೆಲ್ಲಾ ಆಗಿ ಹೋಯಿತು. ಇದನ್ನು ನಾನು ಹೇಳಿದನೇ ಪತ್ರಿಕೆಯಲ್ಲಿ ಮುಖಪುಟದಲ್ಲಿ ಬಂತು. ಉಪ ಮುಖ್ಯಮಂತ್ರಿಗಳು ಅದಕ್ಕೆ ಹಿಂದೆ ಮುಂದೆ ನೋಡದೆ ತಾವೂ ಅದೇ ಮಾತನ್ನು ಹೇಳಿದಿರಿ. ವರ್ಗಾವಣೆಯಲ್ಲಿ ಆಗಬಾರದ್ದು ಆಗಿ ಹೋಯಿತು ಎಂದರೆ ಏನು ಅರ್ಥ? 50,000 ಹುದ್ದೆಗಳನ್ನು ವರ್ಗಾವಣೆ ಮಾಡಿದಿರಿ. ಟಿ.ಎ.ಡಿ.ಎ.ಗೆ ಎಷ್ಟು ಕೋಟಿಯಾಯಿತು ಇದು ಅಗತ್ಯ ಇತ್ತೇ? ಅಗತ್ಯವಿರುವಂತಹ ನಿಮ್ಮ ಸರಕಾರದ ಅನುಕೂಲತೆಗೋಸ್ಕರ ಆಗಬೇಕಾದ ವರ್ಗಾವಣೆ ಒಂದು ರೀತಿ ಜನ ವ್ಯಾಪಾರವಾಗುವಂತಹ ಮಟ್ಟಕ್ಕೆ ಬಂದಿದೆಯಲ್ಲ. ಅವರಿಗೆ ಹೆಂಡತಿ ಮಕ್ಕಳು ಇಲ್ಲವೇ? 4-5, 6 ತಿಂಗಳಾದರೂ ವರ್ಗಾವಣೆಯಾಗದಿದ್ದರೆ ಅವರು ಬದುಕುವುದು ಹೇಗೆ ಅವರ ಮಕ್ಕಳನ್ನು ಶಾಲೆಗೆ ಹೇಗೆ ಸೇರಿಸುವುದು. ಅವರು ಓಟು ಕೊಟ್ಟಿಲ್ಲವೇ? ಇದು ಇವತ್ತಿನ ಪರಿಸ್ಥಿತಿ. ವಾಸ್ತವ ಸ್ಥಿತಿಯನ್ನು ನಾನು ನಿಮಗೆ ಹೇಳುತ್ತಿದ್ದೇನೆ. 4-5 ದಾಖಲೆ ಕೊಟ್ಟು ಬಿಡುತ್ತೇನೆ, ನಿನ್ನೆಯಿಂದ ದಾಖಲೆ ಬೇಕೆಂದು ಹೇಳಿದ್ದೀರಿ. 2-3 ಮಂತ್ರಿಗಳದ್ದು ಮಾತ್ರ ಕೊಡುತ್ತೇನೆ ಉಳಿದದ್ದು ಇನ್ನೊಂದು ಸಲ ಕೊಡುತ್ತೇನೆ. ನಾನು ಅವಿಶ್ವಾಸ ನಿರ್ಣಯ ತಂದದ್ದು, ಅಭಿವೃದ್ಧಿ ಕಾರ್ಯ ಆಗಲಿಲ್ಲವೆಂದು ಅಲ್ಲ. ಅವಿಶ್ವಾಸ ನಿರ್ಣಯ ತಂದದ್ದು ಸಚಿವ ಸ್ಥಾನದಲ್ಲಿರುವಂತಹ ಜನವೇ ಯಾರಿಗೆ ರಕ್ಷಣೆ ಕೊಡಬೇಕಾಗಿತ್ತು ಅವರಿಗೆ ರಕ್ಷಣೆ ಕೊಡದೆ, ಹೇಗೆ ಹೇಗೋ ಕೆಲಸ ಮಾಡಿಕೊಂಡು ಹೋಗುವಂತಹ ಒಂದು ಪರಿಸ್ಥಿತಿ ಬಂದಿದೆ ಇನ್ನು ತಡೆಯುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ಗೊತ್ತಾಯಿತು. ಕಾನೂನು ಸುವ್ಯವಸ್ಥೆ ಏನಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಬೇಕಾಗಿರುವವರು ಈ ರಾಜ್ಯದ ಗೃಹ ಸಚಿವರು. ಇವರ ಕಾಲದಲ್ಲಿ ಆದಂತಹ ಕೊಲೆ ಸುಲಿಗೆ ದರೋಡೆ, ಅಂಕಿ ಅಂಶ ನಾನು ಇನ್ನೂ ಬಂದಿಲ್ಲ.

ಒಬ್ಬ ಶಾಸಕ ರಂಜನ್‌ಅಪ್ಪಚ್ಚು ಅವರನ್ನು ಯಾವ ರೀತಿ ಮಾಡಿದಿರಿ? ಮುಖ್ಯಮಂತ್ರಿಗಳ ಹತ್ತಿರ ಕೈಜೋಡಿಸಿ ನೀವು ಹೇಳಿದ್ದರೆ ನಾವೇ ಬರುತ್ತಿದ್ದೆವು. ಜನತಾ ದರ್ಶನ ಎಂದು ನೀವೇ ಹೇಳಿ ಬನ್ನಿ, ನಿಮ್ಮ ಸಮಸ್ಯೆಗಳಿಗೊಂದು ಕೈಮುಗಿದು ಪ್ರಾರ್ಥನೆ ಮಾಡಿ ಎಂದು ನೀವು ಹೇಳಿದಂತೆ ಕರೆದುಕೊಂಡು ಬಂದರೆ. ನಿಮಗೆ ತಕ್ಕಂತೆ ನಡೆದುಕೊಳ್ಳಬೇಕೇ ಸ್ವಾಮಿ. ನಮ್ಮಗ್ದೇ ಆದ ರೀತಿಯಲ್ಲಿ ಪ್ರತಿಭಟನೆ ವ್ಯಕ್ತಪಡಿಸಬಹುದು. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಮ್ಮ ದೇಶದ ರೀತಿಯಲ್ಲಿ

ಹೇಳಬಹುದು. ಅಲ್ಲಿಗೆ ಬಂದಾಗ ಏನೋ ಸಣ್ಣ ಪುಟ್ಟ ಘಟನೆಯಾದರೆ, ನಿಮ್ಮ ಗೃಹ ಸಚಿವರು ರಂಜನ್ ಅಪ್ಪಚ್ಚು ಎನ್ನುವ ಶಾಸಕರ ಕತ್ತಿನ ಸಣ್ಣ ಹಿಡಿಲ್ಲಾಡುತ್ತಾರೆ. ಲಾಠಿ ಛಾರ್ಜ್ ಆಗುತ್ತದೆ, ಎಲ್ಲಾ ಪತ್ರಿಕೆಗಳ ಮುಖ ಪುಟದಲ್ಲಿ ಬರುತ್ತದೆ. ಪೋಲೀಸ್ ಅಧಿಕಾರಿಗಳು ಕ್ಷಮಾಪಣೆ ಕೇಳುತ್ತಾರೆ. ನಮ್ಮವರು ಹೇಳುತ್ತಾರೆ ಮೈಲ್ಡ್‌ಲಾರ್ ಛಾರ್ಜ್ ಎಂದು. ಅವಿಶ್ವಾಸ 'ನಿರ್ಣಯ ಇಲ್ಲದಿದ್ದರೆ ನಾವೇನು ಮಾಡಬೇಕಾಗುತ್ತದೆ. ಸನ್ಮಾನ್ಯ ಗೃಹ ಸಚಿವರು ಈ ಎಲ್ಲಾ ಕಾರಣಕ್ಕೋಸಕರ ಒಂದುಕ್ಷಣ ಸಹ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಮುಂದುವರಿಯುವಂಥ ನೈತಿಕ ಹಕ್ಕಿಲ್ಲ, ರಾಜೀನಾಮೆ ಕೊಡಿ ಎಂದು ಕೇಳಬೇಕಾಗುತ್ತದೆ. ಅದಕ್ಕೆ ನಾನು ದಾಖಲೆಗಳನ್ನು ಕೊಡುತ್ತೇನೆ. ಸರೀಯೇ ಅದು. ಒಬ್ಬರಾದರೂ ಕೊಡಬಹುದಾಗಿತ್ತು. ನಮ್ಮ ಕೋಳಿಫಯಾಜ್ ಶವಸಂಸ್ಕಾರಕ್ಕೆ ಹೋದಂಥ ಸಚಿವರಾದ ರೋಷನ್ ಬೇಗ್ ಬಗ್ಗೆ ನೀವು ಏನು ಹೇಳಿದ್ದೀರಿ, ಅದು ಕಡಿತದಲ್ಲಿದೆ, ಅದನ್ನು ನಾನು ಕೊಡುತ್ತೇನೆ. ಅವರನ್ನು ರಾಜೀನಾಮೆ ಕೊಡಿ ಎಂದು ನಾನು ನೆಪರೇಟಾಗಿ ಕೇಳಬೇಕು. ದಾಖಲೆಗಳೆಲ್ಲವನ್ನೂ ನಿಮ್ಮ ಕಣ್ಣಮುಂದಿಡಬೇಕು. ಸ್ವಾಮಿ, ಪತ್ರಿಕೆಗಳನ್ನು ನೋಡಿದಿರಾ? ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ. ಬಡ್ಡಿಯ ಆಸೆಗೋಸ್ಕರ ಸರ್ಕಾರಿ ಖಜಾನೆಯಿಂದ ಆರು ಕೋಟಿ ರೂಪಾಯಿಗಳನ್ನು ಡ್ರಾ ಮಾಡಿ, ಟ್ರೆಜರಿಯಿಂದ ರಾಷ್ಟ್ರೀಯ ಬ್ಯಾಂಕಿನಲ್ಲಿ ನಿಮ್ಮ ಒಬ್ಬ ಸಚಿವರು ದುಡ್ಡು ಇಟ್ಟಿದ್ದಾರೆ ಎಂದು ಒಂದು ಬಂದಿದೆಯಲ್ಲ, ಅದರ ದಾಖಲೆ ಸಿಕ್ಕಿದರೆ ನೀವು ರಾಜೀನಾಮೆ ಕೊಡುತ್ತೀರೋ ಯಾವುದನ್ನು ನಿಮಗೆ ಕೊಡಲಿ. ಅಥವಾ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಹಾಸ್ಟೆಲ್ ಇಲ್ಲದೇ ಹಣ ಮಂಜೂರು ಮಾಡಿದಂಥ....

ಅಧ್ಯಕ್ಷರು : ಪ್ರತಾಪಚಂದ್ರ ಶೆಟ್ಟಿಯವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ. ತಾವು ಯೀಲ್ಡ್ ಆಗುತ್ತೀರಾ? ಇದಕ್ಕೆ ಮಾನ್ಯ ಯಡಿಯೂರಪ್ಪನವರು ಯೀಲ್ಡ್ ಆಗಬೇಕು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ತಾವು ನೈತಿಕತೆ ಬಗ್ಗೆ ಮಾತನಾಡುತ್ತಿದ್ದೀರಿ. ರಾಜೀನಾಮೆ ಬಗ್ಗೆ ಮಾತನಾಡುತ್ತಿದ್ದೀರಿ. ತಾವು ಯೀಲ್ಡ್ ಆದರೆ ಒಂದು ವಿಚಾರ ಹೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದರ ಅಗತ್ಯವಿಲ್ಲ ಸ್ವಾಮಿ. ಸಮಯದ ಅಭಾವ ಇದೆ. ಈ ಪ್ರಶ್ನೆ ನಾನು ಏತಕ್ಕೆ ಹೇಳುತ್ತೇನೆ ಎಂದರೆ ಮಂತ್ರಿಮಂಡಲದಲ್ಲಿ ಒಂದು ಸಾಮೂಹಿಕ ಹೊಣೆಗಾರಿಕೆ ಇದೆ. ಈ ಸಾಮೂಹಿಕ ಹೊಣೆಗಾರಿಕೆಯ ನೇತೃತ್ವವನ್ನು ವಹಿಸಿರುವಂಥ ಒಬ್ಬ ಮುಖ್ಯಮಂತ್ರಿಗಳು ಈ ರೀತಿ...

(ಗೊಂದಲ)

4.20 ಪಿ.ಎಂ.

ಅಧ್ಯಕ್ಷರು : ಮಾನ್ಯ ಪ್ರತಾಪಚಂದ್ರ ಶೆಟ್ಟರೇ, ಅವರು ಯೀಲ್ಡ್ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಗುರುತರವಾದಂಥ ಆರೋಪಗಳನ್ನು ಸಚಿವ ಸಂಪುಟದಲ್ಲಿರುವವರ ಬಗ್ಗೆ ಗಮನಿಸಿಯೂ ಕೂಡ ಅವರನ್ನು ವಜಾ ಮಾಡದಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ನಿಮ್ಮ ಸರ್ಕಾರ ಏತಕ್ಕೆ ಇರಬೇಕು? ಅಥವಾ ಈ ರೀತಿ ವ್ಯಕ್ತಿಗಳನ್ನು ರಕ್ಷಣೆ ಮಾಡುವಂಥ ಮುಖ್ಯಮಂತ್ರಿಗಳನ್ನು ರಾಜೀನಾಮೆ ಕೊಡಿ ಎಂದು ಕೇಳದೇ, ಅವಿಶ್ವಾಸ ನಿರ್ಣಯ ಮಂಡನೆ ಮಾಡದೆ, ನಾವು ಏನು ಮಾಡಬೇಕು? ತಮಗೆ ಸಾಕ್ಷಿ ಬೇಕಲ್ಲ, ಕೊಡುತ್ತೇನೆ. ಕಾನೂನು ಸುವ್ಯವಸ್ಥೆಯಲ್ಲ ಹಾಳಾಗಿ ಹೋಗಿದೆ, ರೌಡಿ ಗುಂಪುಗಳು ಬಹಿರಂಗವಾಗಿ ಹಗಲು

ಹೊತ್ತಿನಲ್ಲೇ ಹೊಡೆದಾಡುತ್ತಿರುವ ಒಂದು ಸನ್ನಿವೇಶ ಇರಬೇಕಾದರೆ, ಸುಮಾರು 28 ಗುರುತರ ಮೊಕದ್ದಮೆಗಳನ್ನು ಎದುರಿಸುತ್ತಿದ್ದಂಥ ಕುಖ್ಯಾತ ರೌಡಿ ಕೋಳಿಫಯಾಜ್ ಅವರ ಶವಸಂಸ್ಕಾರಕ್ಕೆ ಸನ್ಮಾನ್ಯ ರೋಷನ್ ಬೇಗ್ ಸಚಿವರು ಹೋಗಿದ್ದರು. ಸ್ವಾಮಿ, ಮುಖ್ಯಮಂತ್ರಿಗಳು ಏನು ಮಾತನಾಡದಿದ್ದರೆ ಅದರ ಬಗ್ಗೆ ನಾನೇನು ದುಃಖಪಡುತ್ತಿರಲಿಲ್ಲ, ತಾವೇನು ಹೇಳಿದ್ದೀರಾ? ಮಂತ್ರಿ ಭೇಟಿ ಮಾಡಿದ ಚಿತ್ರವನ್ನು ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಇಂಡಿಯನ್ ಎಕ್ಸ್‌ಪ್ರೆಸ್ ಎಲ್ಲಾ ಪತ್ರಿಕೆಯಲ್ಲೂ ಬಂದಿದೆ. ಮಂತ್ರಿ ಭೇಟಿ ಮಾಡಿದ ಚಿತ್ರವನ್ನು ಪತ್ರಿಕೆಗಳಲ್ಲಿ ನಾನು ನೋಡಿದ್ದೇನೆ ಎಂದು ತಾವು ಹೇಳಿದ್ದುದು. ಅದೇ ರೀತಿಯಾಗಿ ಈ ಭೇಟಿಯ ಔಚಿತ್ಯ ಪ್ರಶ್ನಿಸಿ ವಾಚಕರವಾಣಿಯಲ್ಲಿ ಈ ಬೆಳಿಗ್ಗೆ ಬಂದ ಪತ್ರಿಕೆಗಳನ್ನು ಗಮನಿಸಿದ್ದೇನೆ. ಒಬ್ಬ ಮಂತ್ರಿಯ ನಡವಳಿಕೆಗಳ ಬಗೆಗೆ ಮಾಧ್ಯಮಗಳು ಏನು ಹೇಳುತ್ತವೆ ಎನ್ನುವುದನ್ನು ಮುಖ್ಯಮಂತ್ರಿಯಾಗಿ ಗಮನಿಸಬೇಕಾಗುತ್ತದೆ. ತುಂಬ ಸಂತೋಷ "ಇದನ್ನಂತೂ ನಾನು ಗಂಭೀರವಾಗಿ ತೆಗೆದುಕೊಂಡಿದ್ದೇನೆ" ಎಂದು ನೀವು ಹೇಳಿದಿರಿ. ಮಂತ್ರಿ ರೋಷನ್ ಬೇಗ್ ಮತ್ತು ಜನತಾದಳದ ಇಬ್ರಾಹಿಂ ಪಾರ್ಥಿವ ಶರೀರದರ್ಶನ ಮಾಡಿದರೆಂದು ಓದಿದ್ದೇನೆ. ಇಬ್ರಾಹಿಂ ಅವರಿಗೇನೂ ಫಯಾಜ್ ಸಂಬಂಧಿಯಂತೆ. ಅವರು ಹೋಗಿದ್ದು ಸರಿ. ರೋಷನ್ ಬೇಗ್ ಭೇಟಿಯನ್ನು ನಾನು ಸಮರ್ಥನೆ ಮಾಡಿಕೊಂಡಿಲ್ಲ, ಅದನ್ನು ಗಮನಿಸಿದ್ದೇನೆ ಎಂದು ಹೇಳಿದ್ದೇನೆ ಅದೊಂದು ಆರೋಗ್ಯಕರ ಬೆಳವಣಿಗೆ ಎಂದು ಹೇಳುವುದಿಲ್ಲ ಈ ಬಗೆಗೆ ಕೈಗೊಳ್ಳಲಿರುವ ಮುಂದಿನ ಕ್ರಮ ಏನೆಂಬುದನ್ನು ಈಗ ಪ್ರಕಟಿಸುವುದಿಲ್ಲ "ಮುಂದೆ ಹೋಗಿ ಹೇಳಿದಿರಿ. "ರಾಜಕಾರಣಿಗಳು ಪೋಲೀಸರು ಮತ್ತು ರೌಡಿಗಳ ನಡುವಿನ ಅಪವಿತ್ರ ಮೈತ್ರಿಯೇ ದಿನೇ ದಿನೇ ಹೆಚ್ಚುತ್ತಿರುವ ರೌಡಿ ಹಾವಳಿಗೆ ಮುಖ್ಯ ಕಾರಣ" ಎಂದು ತಾವು ಹೇಳಿದಿರಿ. ಎರಡು ಮೂರು ಸಂಗತಿ. ಒಂದು ಸನ್ಮಾನ್ಯ ರೋಷನ್ ಬೇಗ್‌ರವರು ಆ ಕ್ಷೇತ್ರದ ಶಾಸಕರಾಗಿ, ಸಚಿವರಾಗಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದೆ, ನನ್ನ ಡ್ಯೂಟಿ ಆ ಕ್ಷೇತ್ರದ ಶಾಸಕನಾಗಿ, ಈ ಸುದ್ದಿ ಕೇಳಿದ ತಕ್ಷಣ ಗಡಿಬಿಡಿಯಾಗಬಹುದು ಎಂದು ಹೇಳಿ ತಾವು ಕೋಳಿಫಯಾಜ್‌ಯವರ ಪಕ್ಕದಲ್ಲಿ ನಿಂತು ನೋಡುತ್ತಿರುವಂಥ ಒಂದು ಮನುಷ್ಯತ್ವದ ಒಂದು ದೃಷ್ಟಿಯಿಂದ ನೀವು ಅಲ್ಲಿ ಡ್ಯೂಟಿ ಮಾಡಿದ್ದೀರಿ ಎಂದು ನಾವು ತಿಳಿದುಕೊಳ್ಳಬಹುದು. ಆದರೆ, ಕೊಲೆ, ಸುಲಿಗೆ, ದರೋಡೆ ಈ ರೀತಿಯ 28 ಮೊಕದ್ದಮೆಗಳನ್ನು ಎದುರಿಸುವಂಥ ಒಬ್ಬ ವ್ಯಕ್ತಿಯ ಶವಸಂಸ್ಕಾರ ಇರಲಿ, ಸತ್ತಾಗ ಆಗಲೀ ನೀವು ಹೋದರೆ ಅಧಿಕಾರಿಗಳ ಮೇಲೆ ಪರಿಣಾಮವೇನಾಗಬಹುದು. ಬೇಡ. ಅನಿವಾರ್ಯವಾಗಿ ಹೋಗುವ ಪ್ರಸಂಗ ಬಂತು, ಬೇರೆ ರೀತಿಯ ಸಂಬಂಧಗಳು ಇವೆ ಎನ್ನುವುದಾದರೆ, ನಾನು ಪ್ರೂವ್ ಮಾಡಿದರೆ ತಾವು ನಿಜವಾಗಲೂ ಸಹಾ ಆತ್ಮಸಾಕ್ಷಿಯಾಗಿ ನಡೆದುಕೊಳ್ಳುತ್ತೇನೆ ಎಂದು ಇಲ್ಲೇನು ಹೇಳಿದ್ದೀರಲ್ಲ, ಹಾಗೆ ನಡೆದುಕೊಳ್ಳುತ್ತೀರಾ ಸ್ವಾಮಿ. ದಾಖಲೆಗಳು ಬೇಕಾ? ವಿಶ್ವಾಸ ಇಡಲೇ? ದಾಖಲೆ ಕೊಡಲೇ? ಇದಿಷ್ಟೇ ಅಲ್ಲ, ಇನ್ನೂ ಇದೆ. ಬಹಳಷ್ಟು ಇದೆ. ನಿಮ್ಮ ಗೃಹಸಚಿವರಿಗೆ ಗೊತ್ತಿರಲಿಕ್ಕಿಲ್ಲ ಇವರು ಯಾರು ಎಂದು ತಮಗೆ ಪರಿಚಯ ಇದೆಯಾ ಸ್ವಾಮಿ.

(ಈ ಹಂತದಲ್ಲಿ ಒಂದು ಫೋಟೋವನ್ನು ತೋರಿಸಿದರು.)

ಕೋಳಿಫಯಾಜ್ ಎಂದು. ಕೊಲೆಯಾಗಿರುವಂಥ ವ್ಯಕ್ತಿ. ಈ ಕಡೆ ಇನ್ನೊಬ್ಬರು ಇದ್ದಾರೆ ಸ್ವಾಮಿ, ತೋರಿಸುತ್ತೇನೆ ನೋಡಿ. ಇವರು ಯಾರು ಸ್ವಾಮಿ. ಯಾರಿಗಾದರೂ ಕಾಣುತ್ತಿದೆಯೇ?

(ಈ ಹಂತದಲ್ಲಿ ಮತ್ತೊಂದು ಫೋಟೊವನ್ನು ತೋರಿಸಿದರು)

ಕಾಣುತ್ತಿದೆ. ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ. ಕೊಲೆ, ಸುಲಿಗೆ ಮಾಡುವಂಥ ವ್ಯಕ್ತಿಗಳ ಜೊತೆಗೆ ಹಾರ ಹಾಕಿಸಿಕೊಂಡು ಜೊತೆಗೆ ಇರುವಂಥ ಒಂದು ದುಸ್ಥಿತಿ ನಮ್ಮ ರಾಜ್ಯವನ್ನು ಕಾಡುತ್ತಿದೆ ಎಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ. ಅವರನ್ನು ಮನೆಗೆ ಕಳುಹಿಸುತ್ತೀರಾ? ಇಷ್ಟೇ ಅಲ್ಲ, ಮಾನ್ಯ ಅಧ್ಯಕ್ಷರೇ, ಐದು ನಿಮಿಷ ಸದನವನ್ನು ಮುಂದೂಡಿ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಯಡಿಯೂರಪ್ಪನವರೇ, ತಾವು ಏನು ಮಾಡಿದ್ದೀರಿ ಎಂದು ನಾನು ಹೇಳುತ್ತೇನೆ. ಸ್ವಲ್ಪ ಯೀಲ್ಡ್ ಆಗಿ.

(ಗೊಂದಲ)

ಅಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಅವರು ವಿಷಯವನ್ನು ಹೇಳುವುದಕ್ಕೆ ನೀವು ಅಡ್ಡಿ ಮಾಡಬಾರದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೊಂದು ವಿಚಾರವನ್ನು ಹೇಳುತ್ತೇನೆ. ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ನಾನು ನಿಂತಿದ್ದೇನೆ. ಮಾನ್ಯ ಗೃಹಸಚಿವರಿಗೆ ಗೊತ್ತಿರಲಿಕ್ಕಿಲ್ಲ. ಇತ್ತೀಚಿಗೆ ತನ್ವೀರ್ ಅಹಮದ್ ಎಂಬ ಗೂಂಡಾ ವ್ಯಕ್ತಿ ತನ್ನ ಟೆಲಿಫೋನ್ ಬೂತ್ ಒಂದನ್ನು ಉದ್ಘಾಟಿಸಲು ಬೇಗ್ ಸಾಹೇಬ್ರನ್ನು ಕರೆಸಿದ್ದ. ಅಲ್ಲದೆ ರೋಷನ್ ಬೇಗ್ ಅವರ ಎಲ್ಲಾ ಕಾರ್ಯಕ್ರಮಗಳಲ್ಲಿ ಪ್ರಮುಖ ವ್ಯಕ್ತಿಯಾಗಿ ಕಾಣಿಸಿಕೊಂಡ" ತನ್ವೀರ್ ಅಹಮದ್ ಮೇಲೂ ಹತ್ತಾರು ಮೊಕದ್ದಮೆಗಳು ಇವೆ. ನೂರಾರು ಎಂದು ಹೇಳಿದರೆ ಪಿಜಿಆರ್ ಸಿಂಧ್ಯಾರವರು ಲಾ ಎಲ್ಲಾ ಅವರಿಗೆ ಗೊತ್ತಿದೆ. ಗೃಹಸಚಿವರು ಬೇರೆ. ಮತ್ತೆ ಹಿಡಿದುಕೊಂಡು ಬಿಡುತ್ತಾರೆ ನನಗೆ. ಈ ತನ್ವೀರ್ ಅಹಮದ್ ಜೊತೆಗೆ ಒಳಗಡೆ ಬಂದರೆ ಇನ್ನು ಯಾರ್‍ಯಾರಿನ್ನೋ ಸಿಗುತ್ತಿಲ್ಲ ಎಂದು ಪೋಲೀಸನವರು ಹುಡುಕುತ್ತಿದ್ದಾರಲ್ಲ, ಅವರೆಲ್ಲರ ಜೊತೆಗೆ ಇರುವಂಥ ಕ್ಯಾಸೆಟ್ಟು ನಾನು ನಿಮಗೆ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಎರಡು ನಿಮಿಷ ಬಿಡುವು ಮಾಡಿಕೊಂಡು ಒಳಗಡೆ ಬಂದರೆ ಕ್ಯಾಸೆಟ್ ನೀವು ನೋಡಿ. ನಿಮಗೆ ಗೊತ್ತಿಲ್ಲ ಎಂದರೆ ಗೃಹಸಚಿವರಾಗಿ ಒಂದು ಕ್ಷಣವೂ ಮುಂದುವರೆಯುವುದಕ್ಕೆ ಹೇಗೆ ಸಾಧ್ಯ.

(ಈ ಹಂತದಲ್ಲಿ ಕ್ಯಾಸೆಟ್ ಒಂದನ್ನು ತೋರಿಸಿದರು)

ನಿಮ್ಮ ಸಚಿವಸಂಪುಟದ ವ್ಯಕ್ತಿಯ ಬಗ್ಗೆ ಪತ್ರಿಕೆಯವರು ಬರೆದಾಗ ಟೀಕೆ ಮಾಡಿದಾಗ, ಇದು ಆಗುವುದಿಲ್ಲ, ನೀವು ಮಾಡುವುದಕ್ಕೆ ಬಿಡುವುದಿಲ್ಲ, ಇದು ರಾಂಗ್ ಸಿಗ್ನಲ್ ಹೋಗುತ್ತೆ. ಕೊಲೆ, ದರೋಡೆ ಮಾಡುವಂಥವರ ಜೊತೆಗೆ ಸಂಬಂಧ ಇರುವಂಥವರನ್ನು ಸಚಿವಸಂಪುಟದಲ್ಲಿ ಇಟ್ಟುಕೊಳ್ಳುವುದು ಗೌರವ ಅಲ್ಲ ಎಂದು ಹೇಳಿ ನೀವು ವಜಾ ಮಾಡದಿದ್ದರೆ, ನಿಮಗೆ ನಾವು ಗೌರವವನ್ನು ಕೊಡುತ್ತಿದ್ದೆವು. ಸ್ವಾಮಿ ನೀವು ಬೇಕು ಎಂದರೆ ಕ್ಯಾಸೆಟ್ ಕಳುಹಿಸಿಕೊಡುತ್ತೇನೆ. ಬರುತ್ತೀರಾ ಮುಖ್ಯಮಂತ್ರಿಗಳೇ. ಸಾಕ್ಷಿ ಕೇಳಿದರಲ್ಲ, ಬನ್ನಿ ಒಳಗಡೆ, ನಾನು ಕೊಡುತ್ತೇನೆ. ನಿಮಗೇನಾದರೂ ಕಿಂಚಿತ್ ಜವಾಬ್ದಾರಿ ಇದ್ದರೆ, ತಾವು ಏನು

ಮಾಡುತ್ತೀರಾ, ಅವರ ರಾಜೀನಾಮೆಯನ್ನು ನಾವು ಒಪ್ಪುವುದಿಲ್ಲ, ಇದೆಲ್ಲವನ್ನು ನೋಡಿ, ಕೈ ಕಟ್ಟಿಕೊಂಡು, ಕುಳಿತಿರುವಂಥ ರಾಜ್ಯದ ಮುಖ್ಯಮಂತ್ರಿ, ಒಂದುಕ್ಷಣ ಮುಂದುವರಿಯುವಂಥ ನೈತಿಕ ಹಕ್ಕಿಲ್ಲ ಅಂಥ ನನ್ನ ಅಭಿಪ್ರಾಯ. ಈ ರಾಜ್ಯದ ಜನರ ಅಭಿಪ್ರಾಯ ಆ ಕಡೆ ಇರುವವರು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ಈ ಅಭಿಪ್ರಾಯ ನಾನು ನಿಮಗೆ ಹೇಳುತ್ತಿದ್ದೇನೆ. ಏಕೋ ಮಾನ್ಯ ಮುಖ್ಯಮಂತ್ರಿಗಳು ಸುಮ್ಮನೇ ಇದ್ದಾರೆ. ನಾನು ನಿಮಗೆ ಕ್ಯಾಸೆಟ್ ಕಳಿಸಿಕೊಡುತ್ತೇನೆ. ನಿಮ್ಮ ಬಗ್ಗೆ ಪೂರ್ಣ ವಿಶ್ವಾಸ ಇರುವುದು, ಅದಕ್ಕಾಗಿ ನಾನು ನಿಮಗೆ ಕಳಿಸಿಕೊಡುತ್ತೇನೆ.

ಅಧ್ಯಕ್ಷರು : ನನಗೆ ಎಲ್ಲರೂ ಹೀಗೆಯೇ ಮಾಡುತ್ತಿದ್ದಾರೆ. ಉಪ ಮುಖ್ಯಮಂತ್ರಿಗಳೇ, ನನಗೆ ಎಲ್ಲಾ ಆಸೆ ತೋರಿಸುತ್ತಾರೆ, ಕೊಡುತ್ತೇನೆ, ಕೊಡುತ್ತೇನೆ ಎಂದು. ಯಾರು ಏನೂ ಕೊಡುವುದೇ ಇಲ್ಲ, ಅವರು ಕೊಡುತ್ತೇನೆ ಕೊಡುತ್ತೇನೆಂದು ಹೇಳಿ ಅಲ್ಲಿಯೇ ಇಟ್ಟುಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಡೀ ರಾತ್ರಿ ನಿದ್ದೆ ಮಾಡಲಿಲ್ಲ, ನಾನು ಕಾನೂನು ಓದಿಲ್ಲ, ಬರವಣಿಗೆ ಗೊತ್ತಿಲ್ಲ, ನಿನ್ನೆ ಕಾನೂನು ಪುಸ್ತಕ ಇಟ್ಟುಕೊಂಡು ಮಾತನಾಡಬೇಕು ಎಂದು ಮಾನ್ಯ ವೀರಪ್ಪ ಮೊಯಿಲಿಯವರು, ಖರ್ಗೆಯವರು, ನಮ್ಮ ಮಾನ್ಯ ಬಂಗಾರಪ್ಪನವರು ಮತ್ತು ಆ ಕಡೆ ನಮ್ಮ ಸ್ನೇಹಿತರಾದ ನಾಗೇಗೌಡರು ಹೇಳಿದರು, ಮಾನ್ಯ ಕಾನೂನು ಸಚಿವರೂ ಹೇಳಿದರು.

ಅಧ್ಯಕ್ಷರು : ನೀವು ಇಷ್ಟು ದಾಖಲೆ ಕೊಡುತ್ತೀರಿ ಎಂದು ಗೊತ್ತಿದ್ದರೆ ನಾನೂ ಒಂದು ಬ್ಯಾಗ್ ತರುತ್ತಿದ್ದೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಯಾವುದು ಕ್ಯಾಸೆಟ್ ಅದು, ಕಳ್ಳ ಕುಳ್ಳ ಚಿತ್ರದ ಕ್ಯಾಸೆಟ್ ಅದು.

ಶ್ರೀ ಹೆಚ್.ಎನ್. ನಂಜೇಗೌಡ : ನಿಮಗೆ ಕ್ಯಾಸೆಟ್ ಪ್ಲೇ ಮಾಡುವುದನ್ನು ಕೊಡುವುದು ಬೇಡವೇ?

ಅಧ್ಯಕ್ಷರು : ಏನೋ ಕೊಟ್ಟರೆ ನಾನು ಇಟ್ಟುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೆದ್ದಾರಿ ದರೋಡೆ, ಕೊಲೆ ಅತ್ಯಾಚಾರ ಸುಲಿಗೆ ನಡೆಯುತ್ತಾ ಇದೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಸ್ವಾಮಿ? ನಾನು ಸ್ವಲ್ಪ ವಿಶ್ವಾಸ ಇರುವುದಕ್ಕೆ ಇಲ್ಲಿ ತಂದೆ, ಇಲ್ಲದಿದ್ದರೆ ಏಕೆ ಸ್ವಾಮಿ? ಅದನ್ನು ಕಟ್ಟಿಕೊಂಡು ನನಗೇನಾಗಬೇಕಾಗಿದೆ. ಏನು ಹೇಳಿದರು ಅವರು? ತಾವು ಹೇಳುತ್ತೀರಿ ಬೆಂಗಳೂರು ಮಹಾನಗರದಲ್ಲಿ ಚಾಕು ಚೂರಿ ಸಂಸ್ಕೃತಿ ಪ್ರಾರಂಭ ಆಗಿ ಕೊಲೆ, ಸುಲಿಗೆ ದರೋಡೆ ಇವೆಲ್ಲಕ್ಕೂ ಕಾರಣ ನನ್ನ ಬೆಂಗಳೂರಿನಲ್ಲಿರತಕ್ಕ ಪೋಲೀಸ್ ಅಧಿಕಾರಿಗಳು ಕಾರಣ. ಎಲ್ಲರನ್ನೂ ಎತ್ತಿ ಹಾಕಿಬಿಡುತ್ತೇನೆ, ಎತ್ತಿ ಹಾಕಿ ಎಲ್ಲಿಗೆ ಕಳಿಸಿಬಿಡುತ್ತೀರಿ? ಇಲ್ಲಿ ಕೊಲೆ, ಸುಲಿಗೆ ಆಗುತ್ತಿರುವುದು, ಇಡೀ ರಾಜ್ಯದಲ್ಲಿ ಕೊಲೆ, ಸುಲಿಗೆ ಆಗಲು ಸಹಕಾರ ಕೊಡಿ ಎಂದು ಕಳಿಸಿದಿರಾ, ಹಂಚಿದೀರಾ, ಡಿಸ್ಟ್ರಿಬ್ಯೂಟ್ ಮಾಡಿದಿರಾ? ಒಂದು ಪೋಲೀಸ್ ಇಲಾಖೆ ಬಗ್ಗೆ ರಾಜ್ಯದ ಮುಖ್ಯಮಂತ್ರಿಯಾಗಿ ಈ ರೀತಿ ಸಚಿವರನ್ನು ಇಟ್ಟುಕೊಂಡು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳದೇ ಪೋಲೀಸ್ ಅಧಿಕಾರಿಗಳ ಬಗ್ಗೆ ಟೀಕೆ ಮಾಡುವ ನೈತಿಕ ಹಕ್ಕು ಏನು ನಿಮಗೆ ಇದೆಯೇ ಸ್ವಾಮಿ? ಎಲ್ಲಿದೆ ನೈತಿಕ ಹಕ್ಕು. ಬೇಡ, ಕೆಲವರು ಇದ್ದಾರೆ, ನೀವು ಕ್ರಮ ತೆಗೆದುಕೊಳ್ಳಿ. ಸರಿ ಮಾಡಿ, ಬಹಿರಂಗವಾಗಿ ಹೇಳುತ್ತೇನೆ.

ಪೋಲೀಸ್ ಇಲಾಖೆಯ ನೈತಿಕ ಸ್ಥೈರ್ಯವನ್ನು ಹಾಳು ಮಾಡುತ್ತೀರಿ. ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕ ಪೋಲೀಸ್ ಕಮೀಷನರ್ ಅವರನ್ನು ಓಡಿಸುತ್ತೀರಿ. ಬೆಂಗಳೂರಿನಲ್ಲಿದ್ದ ಪೋಲೀಸ್ ಕಮೀಷನರ್ ಶ್ರೀ ಕೋದಂಡರಾಮಯ್ಯ ಪ್ರಾಮಾಣಿಕವಾಗಿ ಇದ್ದದ್ದು ಅಪರಾಧವಾಯಿತು. ನಮ್ಮ ಗೃಹ ಸಚಿವರಿಗೆ, ನಮ್ಮ ಮುಖ್ಯಮಂತ್ರಿಗಳಿಗೆ ಇದೇನು ನಿಮ್ಮ ಸರ್ಕಾರದ ನಡವಳಿಕೆ, ಆಡಳಿತ ನಡೆಸುತ್ತಿರುವಂತಹ ವೈಖರಿ. ಮೊನ್ನೆ ಏನು ಹೇಳಿದಿರಿ ಸ್ವಾಮಿ? ಪೋಲೀಸ್ ಆಫೀಸರ್ ಕಳೆದ ಜನವರಿಯಿಂದ ಜುಲೈವರೆಗೆ ಐನೂರು ಮೊಕದ್ದಮೆಗಳು ಈ ರೀತಿ ದಾಖಲು ಆಗಿದ್ದಾವೆ. ಪಂಜಾಬಿನಿಂದ, ಕಾಶ್ಮೀರದಿಂದ ಉಗ್ರಗಾಮಿಗಳ ನೆಲೆ ಇದಾಗಿದೆ. ಚಾಕು, ಪಿಸ್ತೂಲು ಹಿಡಿದುಕೊಂಡು ಹೋರಾಟ ಮಾಡುವವರ ಸಂಖ್ಯೆ ಜಾಸ್ತಿ ಆಗಿದೆ. ಯಾರು ಹೇಳುತ್ತಾರೆ? ನಿಮ್ಮ ಲಾ ಅಂಡ್ ಆರ್ಡರ್ ಅಧಿಕಾರಿಗಳು ಹೇಳುತ್ತಾರೆ, ಪತ್ರಿಕಾ ಹೇಳಿಕೆಗಳನ್ನು ಕೊಡುತ್ತಾರೆ. ಎಲ್ಲಾ ಪತ್ರಿಕೆಯ ಮುಖಪುಟದಲ್ಲಿ ಬರುತ್ತದೆ. ಇದನ್ನು ಕೈಕಟ್ಟಿಕೊಂಡು ನೋಡಿಕೊಂಡಿರುವ ಸರ್ಕಾರ. ಸಣ್ಣ ಮನಸ್ಸು ಇರತಕ್ಕ ನೈತಿಕ ಹಕ್ಕು ಇಲ್ಲದ ಸರ್ಕಾರ, ಶಕ್ತಿ ಇಲ್ಲದಂತಹ ಸರ್ಕಾರ. ಇದೆಲ್ಲಾ ಇದ್ದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಉದ್ದಗಲಕ್ಕೂ ಜನತಾ ದರ್ಶನಕ್ಕೆ ಹೋಗುತ್ತಾರೆ. ಜನತಾ ದರ್ಶನಕ್ಕೆ ಹೋಗುತ್ತಾರೆ. ಮೊನ್ನೆ ಏನಾಯಿತು ಸ್ವಾಮಿ? ಇನ್ನೊಂದು ತಲೆ ತಗ್ಗಿಸುವಂತಹ ಸಂಗತಿ. ಆಗಸ್ಟ್ 1ನೇ ತಾರೀಖು ಬಿಜಾಪುರದ ಕಂದುಗಲ್ಲು ಹನುಮಂತರಾಯ ಸಭಾಂಗಣದಲ್ಲಿ ಮಾತನಾಡುತ್ತಾ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ 28ಲೋಕಸಭಾ ಕ್ಷೇತ್ರಗಳಲ್ಲೂ ಜನತಾ ದಳ ಗೆಲ್ಲಬೇಕಾಗಿದೆ. ಮುಸ್ಲಿಮರು ಅಲ್ಲಾನ ಹೆಸರಿನಲ್ಲಿ ಪ್ರತಿಜ್ಞೆ ಮಾಡಬೇಕೆಂದು ರಾಜ್ಯದ ಮುಖ್ಯಮಂತ್ರಿಯಾಗಿ ಕರೆ ಕೊಟ್ಟರಲ್ಲ, ನಾಣಯ್ಯನವರು ಹೇಳಿದರು, ಅವರು ಇನ್ನೊಂದು ಒಳ್ಳೆಯ ಕೆಲಸ ಮಾಡಿದ್ದಾರೆ, ಏಕೋ ಗೊತ್ತಿಲ್ಲ. ಮುಖ್ಯಮಂತ್ರಿಗಳನ್ನು ಸಿಗಿಸುವುದಕ್ಕೋ ಅಥವಾ ನಾವು ಇರುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆಂದು ಹೊಸ ಪದ್ಧತಿ ಏನಾದರೂ ಜಾರಿ ಮಾಡಿದ್ದೀರೋ? ಮುಖ್ಯಮಂತ್ರಿಗಳು ಹೇಳಿದ್ದುದು ನಿಜ ಎಂದು ಹೇಳಿದ್ದೀರಿ, ತುಂಬಾ ಸಂತೋಷ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಗಳು ಬಂದು ಸಭೆಯಲ್ಲಿ ಆಡಿರತಕ್ಕ ಮಾತನ್ನು ಹೇಳಿದರು. ಅದು ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರದ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದಾರೆ. ನಾನು ಬಿಜಾಪುರಕ್ಕೆ ಹೋದಾಗ ಪತ್ರಿಕಾ ಪ್ರತಿನಿಧಿಗಳು ಈ ಪ್ರಶ್ನೆಯನ್ನು ಕೇಳಿದರು. ನಾನು ಏನು ಹೇಳಿದ್ದೇನೆ ಅಂದರೆ, ಮುಖ್ಯಮಂತ್ರಿಗಳು ಏನನ್ನು ಹೇಳಿದ್ದಾರೆ? ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜಾತ್ಯಾತೀತ ಸ್ವರೂಪಕ್ಕೆ ಬದ್ಧರಾಗಿರತಕ್ಕ ಒಂದು ಪಕ್ಷ ಜನತಾ ದಳ ಯಾವುದು ಇದೆ, ಆ ಜನತಾ ದಳದ ಜೊತೆಯಲ್ಲಿ ಜಾತ್ಯಾತೀತಕ್ಕೆ ಸಂಬಂಧಪಟ್ಟಿರತಕ್ಕವರು ಅಥವಾ ಅದರಲ್ಲಿ ನಂಬಿಕೆ ಇರತಕ್ಕ ಪಕ್ಷಗಳು ಎಲ್ಲರೂ ಕೂಡ ಮುಖ್ಯ ವಾಹಿನಿಯಲ್ಲಿ ಬರಬೇಕು ಎಂದು ಮುಖ್ಯಮಂತ್ರಿಗಳು ಹೇಳಿದರೆ ತಪ್ಪಾಗುತ್ತದೆಯೇ ಜಾತ್ಯಾತೀತ ವ್ಯವಸ್ಥೆಯಲ್ಲಿ ಜಾತಿ ರಾಜಕಾರಣ ಮಾಡುತ್ತಿರುವವರ ಜೊತೆಯಲ್ಲಿ ಕೈಗೂಡಿಸಿ ಕೂರುತ್ತೇವೆ ಎಂದು ಹೇಳುತ್ತಿರತಕ್ಕ ನಮ್ಮ ಪಕ್ಷದ ವಾದ, ನಮ್ಮ ಪಕ್ಷದ ಫಿಲಾಸಫಿ. ಆದ್ದರಿಂದ ನಾನು ಹೇಳಿದೆ. ಮುಖ್ಯಮಂತ್ರಿಗಳು ಯಾವುದೇ ಸಮಾರಂಭ ಆಗಲಿ, ಅದು ಮುಸಲ್ಮಾನರ ಸಮಾರಂಭ ಆಗಲಿ ಅಥವಾ ಹಿಂದೂಗಳ ಸಮಾರಂಭ ಆಗಲಿ, ಸಿಕ್ಕರ ಸಮಾರಂಭ ಆಗಲಿ ಅಂತಹ ಸಮಾರಂಭಗಳಲ್ಲಿ ಜಾತ್ಯಾತೀತ ವ್ಯವಸ್ಥೆಯಲ್ಲಿ ನಂಬಿಕೆ ಇರತಕ್ಕ ನಾವೆಲ್ಲರೂ ಯಾವುದು ಜನತಾ ದಳ ಈ ಜಾತ್ಯಾತೀತ ಶಕ್ತಿಗಳನ್ನು ನಿರ್ಮಾಣ ಮಾಡಿ ಜಾತೀಯತೆಯ ವಿರುದ್ಧ ಹೋರಾಟ ಮಾಡುತ್ತಿರತಕ್ಕಂತಹ ಸಂದರ್ಭದಲ್ಲಿ ಈ ತರಹ ಕರೆಯನ್ನು ಕೊಡತಕ್ಕದ್ದು ಈ

ರಾಜ್ಯದ ರಾಷ್ಟ್ರದ ಸಮಗ್ರತೆಯನ್ನು ಕಾಪಾಡುವುದರಲ್ಲಿ ನೇರವಾಗಿ ಮಾಡಬೇಕಾಗಿರತಕ್ಕ ಕರ್ತವ್ಯ ಇದು ಎಂದು ಹೇಳಿದ್ದೇನೆ. ಮುಖ್ಯಮಂತ್ರಿಗಳು ಹೇಳಿರತಕ್ಕ ಭಾಷೆಯನ್ನು ಅವರ ವೈಖರಿಯನ್ನು ನಾನು ಸಮರ್ಥನೆ ಮಾಡುತ್ತೇನೆ. ಮುಖ್ಯವಾಗಿ ಜಾತ್ಯಾತೀತ ವ್ಯವಸ್ಥೆಯಲ್ಲಿ ಎಲ್ಲರೂ ಬನ್ನಿ ನೀವು ಕೂಡ ಬನ್ನಿ. ದೇಶವನ್ನು ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಒಡೆಯಬೇಡಿ ಎಂದು ಹೇಳುತ್ತಿರತಕ್ಕ ಕಲ್ಪನೆ ನಮ್ಮದು ಇದೆ. ನಮ್ಮ ಜೊತೆಗೆ ಬನ್ನಿ, ನಮ್ಮ ಜೊತೆ ಬನ್ನಿ ಎಂದು ಹೇಳುತ್ತಿರತಕ್ಕ ಮಾತನ್ನು ಇವತ್ತೂ ಹೇಳುತ್ತೇನೆ, ನಾಳೆಯೂ ಹೇಳುತ್ತೇನೆ. ಯಡಿಯೂರಪ್ಪನವರಿಗೂ ಕೂಡ ನಾನು ನೇರವಾಗಿ ಸ್ವಾಗತ ಮಾಡುತ್ತೇನೆ ಆಹ್ವಾನ ಕೊಡುತ್ತೇನೆ.

ಅಧ್ಯಕ್ಷರು : ನೀವು ಬೇಕೆಂತಲೇ ಹೇಳಿದಿರಿ ಎಂದು ಕಾಣುತ್ತದೆ ಒಂದೆರಡು ನಿಮಿಷ ರೆಸ್ಟ್ ಬೇಕು ಎಂದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇವತ್ತು ರಾತ್ರಿ 12 ಗಂಟೆಯವರೆಗೆ ಮಾತನಾಡಬೇಕೆಂದು ತೀರ್ಮಾನ ಮಾಡಿದ್ದೇನೆ.

ಅಧ್ಯಕ್ಷರು : ರೆಸ್ಟ್ ಇಲ್ಲದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ರೆಸ್ಟ್ ಇಲ್ಲ. ಯಾವಾಗ ಮಾನ್ಯ ಮುಖ್ಯಮಂತ್ರಿಗಳು ಅಥವಾ ಇತರೆ ಸಚಿವರು ಒಂದು ಚೀಟಿ ಕಳಿಸಿ ಯಡಿಯೂರಪ್ಪನವರೇ ನಾವು ಮನೆಗೆ ಹೋಗುವುದಕ್ಕೆ ನೀವು ಕೊಟ್ಟಿರುವ ದಾಖಲೆ ಸಾಕು. ದಯಮಾಡಿ ಹೆಚ್ಚು ಕೆಣಕಬೇಡಿ ಎಂದು ಜೆ.ಹೆಚ್. ಪಟೇಲ್ ಚೀಟಿ ಕಳಿಸುವವರೆಗೆ ನಾನು ಮಾತನಾಡುತ್ತೇನೆ. ಯಾವ ಪೀಪಲ್ಸ್ ರೆಪ್ರೆಸೆಂಟಿಟೀವ್ ಆಕ್ಟ್ ಪ್ರಕಾರ ಯಾವುದೇ ಮತದ, ಸಮುದಾಯದ ಹೆಸರಿನಲ್ಲಿ ಓಟು ಕೇಳಬಾರದು ಎನ್ನುವುದು ಚುನಾವಣೆ ಸಮಯದಲ್ಲಿ ಮಾತ್ರ ಸೀಮಿತವಾಗಿಲ್ಲ, ಅಲ್ಲಾನ ಹೆಸರು ಹೇಳಿ ಪೂಜೆ ಮಾಡಿ ಒಳ್ಳೆಯ ಕೆಲಸ ಮಾಡಿ ಎಂದು ಹೇಳಿದ್ದರೆ ನಾನು ಸ್ವಾಗತ ಮಾಡುತ್ತಿದ್ದೆ. ಜನತಾ ದರ್ಶನದ ಹೆಸರಿನಲ್ಲಿ ಆ ಕಡೆ ನಿಮ್ಮ ಪಕ್ಷದ ಅಧ್ಯಕ್ಷರಾದ ಶ್ರೀ ಇಬ್ರಾಹಿಂ ಅವರನ್ನು ಕೂರಿಸಿಕೊಂಡು ನಾವು 29 ಲೋಕಸಭಾ ಕ್ಷೇತ್ರ ಗೆಲ್ಲಬೇಕಾಗಿದೆ ಅಲ್ಲಾನ ಹೆಸರಿನಲ್ಲಿ ಪ್ರಮಾಣ ಮಾಡಿ ಎಂದು ಮುಗ್ಧರನ್ನು, ಜಾತೀಯ ವಿಷ ಬಿತ್ತಿ ಓಟ್ ಬ್ಯಾಂಕ್ ಮಾಡುವ ರಾಜಕಾರಣ ಇದೆಯಲ್ಲಾ, ಇದು ತಲೆತಗ್ಗಿಸುವ ವಿಚಾರ ಮತ್ತು ಕ್ಷಮಾಪಣೆಯನ್ನು ಕೇಳಬೇಕಾಗುತ್ತದೆ. ಅದನ್ನು ಓಟ್ ಬ್ಯಾಂಕ್ ಮಾಡಿ ನಿಮ್ಮ ರಾಜಕಾರಣಕ್ಕೋಸ್ಕರ ಈ ಸಮಾಜವನ್ನು ಒಡೆಯುವಂತ ಈ ಜನತಾ ದಳದ, ಈ ಡೋಂಗಿ ಜಾತ್ಯಾತೀತ ರಾಜಕಾರಣ ಏನು ಇದೆ, ಯಾವ ಜಾತ್ಯಾತೀತ ವಾದವನ್ನು ಕಾಯುವ ಈ ರಾಜ್ಯದ ಮುಖ್ಯಮಂತ್ರಿಯಾಗಿ ಹೊಣೆಗಾರಿಕೆ ಏನು ಇದೆ, ಹೊಣೆಗಾರಿಕೆ ಹೊತ್ತಿರುವ ನೀವು ಅದನ್ನು ಗಾಳಿಗೆ ತೂರುವಂತಹ ಈ ಸಂದರ್ಭದಲ್ಲಿ ಜಾತಿಯ ವಿಷ ಬೀಜ ಬಿತ್ತಿ ಅದರ ಆಧಾರದ ಮೇಲೆ ನೀವು ರಾಜಕಾರಣ ಮಾಡಲು ಹೊರಟಿರುವಂತಹ ಈ ಸಂದರ್ಭದಲ್ಲಿ ಏನು ಹೇಳಿದಿರಿ? ಅಷ್ಟಕ್ಕೇ ನಿಲ್ಲಿಸಿದಿರಾ? ನಾಣಯ್ಯನವರೇ ಏನು ಹೇಳುತ್ತೀರಿ? ನಮ್ಮ ಜೊತೆಗೆ ಬನ್ನಿ ಎಂದು ಹೇಳುತ್ತಾರೆ. ಅಲ್ಲಿ ಏನು ಹೇಳುತ್ತಾರೆ. ಅಲ್ಲಾನ ಹೆಸರಿನಲ್ಲಿ ನೀವೆಲ್ಲಾ ಓಟು ಕೊಡಿ. 28 ಲೋಕಸಭಾ ಕ್ಷೇತ್ರ ಗೆಲ್ಲಬೇಕಾಗಿದೆ. ನೋಡಿ ಆ ಬಿಜೆಪಿಯವರು ಜಾತಿವಾದಿಗಳು ಬರುತ್ತಾರೆ ಎಂದು ಹೇಳುತ್ತೀರಿ.

ಬಿಜೆಪಿಭೂತ ಅಂದರೆ ನಿಮ್ಮ ಓಟು ಅವರ ಹಿತ ಮಾಡುವುದಿಲ್ಲ. ಅವರ ಕಣ್ಣೀರನ್ನು ಒರೆಸುವುದಿಲ್ಲ. ಅವರು ನೆಮ್ಮದಿಯಿಂದ ಗೌರವದಿಂದ ಸ್ವಾಭಿಮಾನದಿಂದ ಬಾಳಿ ಬದುಕುವಂತಹ ವ್ಯವಸ್ಥೆ ಮಾಡುತ್ತೇವೆ ಓಟು ಕೊಡಿ ಎಂದಲ್ಲ. ಬಿಜೆಪಿ ಭೂತವನ್ನು ತೋರಿಸಿ ಅವರನ್ನು ಒಡೆದು ಓಟು ತೆಗೆದುಕೊಳ್ಳುವಂತಹ ಕಾಲ

ಮುಗಿದು ಹೋಗಿದೆ. ಈ ದೇಶದ ಅಲ್ಪಸಂಖ್ಯಾತ ಮುಸ್ಲಿಮರಿಗೆ ಅರ್ಥ ಆಗಿದೆ, ಇವತ್ತು ರಾಜಕಾರಣ ಯಾರು ಮಾಡುತ್ತಿದ್ದಾರೆ ಎಂದು. ಯಾವ ರೀತಿ ಸ್ವಾರ್ಥಕ್ಕೋಸ್ಕರ ಸಮಾಜವನ್ನು ಛಿದ್ರ ಛಿದ್ರ ಮಾಡಿ ಇವತ್ತು ಈ ದುಸ್ಥಿತಿಗೆ ತಂದಿರುವಂತಹ ಈ ಕೆಟ್ಟ ರಾಜಕಾರಣದ ಅರಿವು ಆಗಿದೆ, ಗೊತ್ತಿಲ್ಲದೆ ಅಧಿಕಾರ ಕೊಟ್ಟಿದ್ದರು. ಈ ಸಾರಿ ಹೋದಾಗ ಅವರೇ ಮುಸ್ಲಿಮರು ಬುದ್ಧಿ ಕಲಿಸುವಂತಹ ಕಾಲ ಹತ್ತಿರ ಬರುತ್ತಿದೆ, ಕಾದು ನೋಡೋಣ. ಆದರೆ ಇದು ಎಷ್ಟರಮಟ್ಟಿಗೆ ನಿಮಗೆ ಗೌರವ ತರುವಂತಹದು? ಅಲ್ಲಿ ಏನು ಹೇಳುತ್ತಾರೆ. ಪ್ರತಿ ಜಿಲ್ಲೆಗೆ ಒಂದು ಕೋಟಿ ರೂಪಾಯಿಯನ್ನು ರೆಸಿಡೆನ್ಷಿಯಲ್ ಸ್ಕೂಲ್ಗೋಸ್ಕರ ಮಂಜೂರು ಮಾಡುತ್ತೇನೆಂದು ಅಲ್ಲಿ ಘೋಷಣೆ ಮಾಡುತ್ತಾರೆ. ಪ್ರತಿ ಜಿಲ್ಲೆಗೆ ಮುಸ್ಲಿಮ್ ಏರಿಯಾದಲ್ಲಿ ಅಲ್ಪಸಂಖ್ಯಾತರಿಗೆ ಒಂದು ಕೋಟಿ ರೂಪಾಯಿಯನ್ನು ರೆಸಿಡೆನ್ಷಿಯಲ್ ಸ್ಕೂಲ್ಗೆ ಕೊಡುತ್ತೇನೆಂದು ಹೇಳುತ್ತೀರಿ. ಇದಕ್ಕಾಗಿಯೋ ತಾವು 'ಜನತಾ ದರ್ಶನ' ಮಾಡುವುದಕ್ಕೆ ಹೊರಟಿರಾ? ಪತ್ರಿಕೆಗಳಲ್ಲಿ ಬಂದಿರುವುದನ್ನು ಓದಬೇಕೇ? ಅನಂತರ ನಾನು ಕಾನೂನು ಹಾಗೂ ಸುವ್ಯವಸ್ಥೆ ಬಗ್ಗೆ ಹೇಳಿದೆ.

ಶ್ರೀ ಜೆ.ಹೆಚ್. ಪಟೇಲ್ : ಇತ್ತೀಚೆಗೆ ಲಿಂಗಾಯತರದು ಒಂದು ಸಮ್ಮೇಳನ ನಡೆದಾಗ ನನ್ನನ್ನು ಕರೆದರು. ಆಗ ನಾನು 'ನಿಜವಾಗಿಯೂ ನೀವುಗಳೆಲ್ಲರೂ ಬಸವಣ್ಣನವರ ತತ್ವವನ್ನು ಒಪ್ಪುವುದಾದರೆ ಜನತಾ ದಳಕ್ಕೆ ಓಟು ಕೊಡಿ, ಬಿ.ಜೆ.ಪಿ.ಗೆ ಓಟು ಕೊಡಬೇಡಿ' ಎಂದು ಹೇಳಿದೆ. ಇದರಲ್ಲಿ ತಪ್ಪೇನಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮೆಡಿಕಲ್ ಕಾಲೇಜ್ ಕೊಡುತ್ತೇವೆ, ಓಟು ಕೊಡಿ, ರೆಸಿಡೆನ್ಷಿಯಲ್ ಸ್ಕೂಲೇ ಕೊಡುತ್ತೇವೆ, ಓಟು ಕೊಡಿ ಎಂದು ಏಕೆ ಕೇಳಿರಬಾರದು?

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತೆ ತಪ್ಪಿಲ್ಲ. ಆದರೆ, ಜೆ.ಹೆಚ್. ಪಟೇಲರು 'ನಾನು ಲಿಂಗಾಯುತ, ನೀವೆಲ್ಲರೂ ಲಿಂಗಾಯುತರಾಗಿರುವುದರಿಂದ ಓಟು ಕೊಡಿ' ಎಂದರೆ ತಪ್ಪು.

ಶ್ರೀ ವಾಟಾಳ್ ನಾಗರಾಜ್ : ಬಸವಣ್ಣನವರ ತತ್ವವನ್ನು ಯಾರು ಒಪ್ಪಿದ್ದಾರೋ ಅವರೆಲ್ಲರೂ ಜನತಾ ದಳಕ್ಕೆ ಮತ ಕೊಡಬೇಕೆಂದು ಪಟೇಲರು ಹೇಳುವ ಮಾತು. ಬಸವಣ್ಣನವರ ತತ್ವವನ್ನು ಪಟೇಲರು ಪಾಲಿಸುತ್ತಿದ್ದಾರೆ. ಆದರೆ, ಇವರ ತತ್ವವನ್ನು (ಬಸವಣ್ಣನವರು) ಪಾಲಿಸಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜೆ.ಹೆಚ್. ಪಟೇಲರು ತಾವು ಉಪ ಮುಖ್ಯಮಂತ್ರಿ ಎಂದು, ಲಿಂಗಾಯತರೆಂದು, ಬಸವಣ್ಣನವರ ಹೆಸರನ್ನು ಹೇಳಿ ಲಿಂಗಾಯತರಿಂದ ಓಟು ತೆಗೆದುಕೊಂಡು ಅವರು ಉದ್ಧಾರವಾಗಲಿಲ್ಲ. ಬಂಗಲೆ, ಮಹಲುಗಳನ್ನು ಕಟ್ಟಿಕೊಂಡು ಮೆರೆಯುವವರು; ರಸ್ತೆಯಲ್ಲಿ ತಿರುಗಾಡುವಂಥ ಭಿಕಾರಿಗಳು, ಕೋಟ್ಯಾಧಿಪತಿಗಳಾದ ರಾಜಕಾರಣಿಗಳು, ಅವರ ಬಗ್ಗೆ ಏನು ಬದಲಾವಣೆಯಾಯಿತು, ಈ ಕೆಲಸ ಮಾಡುತ್ತಿದ್ದೀರಲ್ಲ, ಹೇಳುವುದು ವೇದಾಂತ... ಈ ಕನ್ನಡ ಗಾದೆ ಹೇಳಿದರೆ ನೋವಾಗಬಹುದು. ನಿಮಗೆ ಗಾದೇ ಚೆನ್ನಾಗಿ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಗಾದೆಯನ್ನು ಹೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಗಾದೆ ಹೇಳಿದರೆ ಅವರಿಗೆ ಅರ್ಥವಾಗುವುದಿಲ್ಲ. 'ಇನ್ನು 48 ಗಂಟೆಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಭಾರೀ ಶಸ್ತ್ರಚಿಕಿತ್ಸೆ ಮಾಡುವುದಾಗಿ' ದಿನಾಂಕ 25ರಂದು ಮಾನ್ಯ ಮಂತ್ರಿಗಳು ಘೋಷಿಸಿದರು. ಶಸ್ತ್ರಚಿಕಿತ್ಸೆಯನ್ನು ಯಾರು ಯಾರಿಗೆ ಮಾಡಿದರು? ಇದೇ ಸಂದರ್ಭದಲ್ಲಿ ಬೆಂಗಳೂರಿನ ಹೆಸರು ಕೊಂಚವೂ

ಹಾಳಾಗಬಾರದೆಂದು ಉನ್ನತಾಧಿಕಾರಿಗಳನ್ನು ನೇಮಿಸಿ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದಿರಿ. ನಿಮ್ಮ ಕಾಲದಲ್ಲಿ ಏನೇನಾಗಿದೆ? ನೀವು ನಿಮ್ಮ ಅಧಿಕಾರಿಗಳಿಗೆ ಯಾವುದೇ ದಾಖಲೆಯನ್ನು ಕೊಡಬೇಡಿ ಎಂದು ಹೇಳಿದ್ದೀರಲ್ಲಾ. ಯಡಿಯೂರಪ್ಪ ಭೂತ, ಹುಷಾರ್, ಅವರಿಗೆ ಅಧಿಕಾರಿಗಳೇನಾದರೂ ದಾಖಲೆಗಳನ್ನು ಕೊಟ್ಟರೆ ಎತ್ತಂಗಡಿ ಮಾಡುತ್ತೇನೆಂದು ಹೇಳಿದ್ದಾರಲ್ಲ, ಪಾಪ, ಅವರು ಇದರ ಬಗ್ಗೆ ಏನೂ ಹೇಳಲು ಬರುವುದಿಲ್ಲ. ಕೊಲೆ ಮತ್ತು ಇರಿತದ ಪ್ರಕರಣಗಳು 80, ಕಳ್ಳತನ ಮತ್ತು ದರೋಡೆ ಪ್ರಕರಣಗಳು ಒಟ್ಟು 1300, ಮಹಿಳೆಯರನ್ನು ರಸ್ತೆಯಲ್ಲಿ ಅಡ್ಡ ಗಟ್ಟಿ ಆಭರಣಗಳನ್ನು ಕಿತ್ತುಕೊಂಡಿರುವ ಪ್ರಕರಣಗಳು 101, ಬೇಕಾದರೆ ಅಷ್ಟು ಹೆಸರುಗಳನ್ನು ಕೊಡುತ್ತೇವೆ. ಸಿಂಧ್ಯರವರೆ, ಈಗ ನಾವು ಹುಷಾರಾಗಿ ಬಿಟ್ಟಿದ್ದೇವೆ. ಇಲ್ಲದಿದ್ದರೆ ಗೃಹ ಸಚಿವರು ಪ್ರತಿಯೊಂದರ ಬಗ್ಗೆಯೂ ದಾಖಲೆ ಕೇಳುತ್ತಾರೆ. ವಂಚನೆ ಪ್ರಕರಣಗಳು 153, ವರದಕ್ಷಿಣೆಯ ಪ್ರಕರಣದಲ್ಲಿ 47 ಜನರು ಮರಣ 20 ಮತ್ತು ಕೊಡಗು ಜಿಲ್ಲೆಯ ಸೋಮವಾರ ಪೇಟೆಯಲ್ಲಿ.... ಸ್ವಾಮಿ, ಇದರಿಂದ ನನಗೆ ದುಃಖವಾಗುತ್ತದೆ. ನಾನು ಹೇಳಬೇಕಾದ ಮುಖ್ಯವಾದ ವಿಷಯವನ್ನೇ ಹೇಳಲಿಲ್ಲ, ಇಲ್ಲದಿದ್ದರೆ, ದೇವೇಗೌಡರು ಬೇಜಾರು ಮಾಡಿಕೊಳ್ಳುತ್ತಾರೆ. ನಾಣಯ್ಯನವರೇ, ತಾವು ತಮ್ಮ ಕೊಡಗಿನಲ್ಲಿ ಏನು ಮಾಡಿದಿರಿ? ಈಗ ತಿಳಿಯಿತು, ನಾನು ಬ್ರೀಫ್ಕೇಸ್ ತಂದಿದ್ದರ ಉದ್ದೇಶ ಇದರ ರಕ್ಷಣೆ ಇದೆಯೇ ಇಲ್ಲವೋ? ಎಂದು ಎಲ್ಲರಿಗೂ ಹೇಳಿದೆ, ಅನಂತರ, ನಾನು ನಿಮ್ಮ ರಕ್ಷಣೆಗೆ ಇದ್ದೇನೆ ಎಂದು ಸುಮ್ಮನಾದೆ. ಮೂರು ದಿವಸಗಳಿಂದ ಸಭೆ ಮುಂದಕ್ಕೆ ಹೋಗುತ್ತಿದೆ, ಮಾತನಾಡುವುದಕ್ಕೆ ಅವಕಾಶ ಕೊಡದೆ ಕಾರ್ಯಕಲಾಪಸಾಗುತ್ತಿದೆ. ಇನ್ನು ಬ್ರಿಫ್‌ಕೇಸ್ ತೆಗೆದುಕೊಂಡು ಏನು ಮಾಡಬೇಕು? ರಕ್ಷಣೆ ಇಲ್ಲವಲ್ಲ, ಬ್ರೀಫ್‌ಕೇಸ್ ಗತಿ ಏನು? ಜನರ ರಕ್ಷಣೆ ಏನಿದೆ, ಅದನ್ನು ಕಾಯುವಂಥ ಕೆಲಸ ಮಾಡಿದ್ದೇನೆ. ಇವರು ಕೊಡಗಿಗೆ ಹೋದಾಗ ಏನು ಮಾಡಿದರು? ಅಲ್ಲಿ ಯಾರದೋ ಎಂದು ಮನೆಗೆ ಹೋಗಿ ಅಲ್ಲಿನ ಅಭ್ಯರ್ಥಿ ಯಾರೆಂದು ನಿರ್ಣಯಿಸಿದಿರಿ. ನೂರಕ್ಕೆ ಶೇಕಡ 95ರಷ್ಟು ಮುಸ್ಲಿಮರ ಓಟು ಕೊಡುತ್ತೇವೆ, ಜೀವಿಜಯ ರವರು ಗೇಲ್ಲುತ್ತಾರೆ, ಎಷ್ಟು ದುಡ್ಡು ಬೇಕಾದರೂ ಕೊಡುತ್ತೇನೆಂದು ಕೆ.ಎಂ. ಇಬ್ರಾಹಿಂ ಎನ್ನುವರನು ಪ್ರಮಾಣ ಮಾಡಿದ. ಇದರ ಬಗ್ಗೆ ನೂರಾರು ಪತ್ರಿಕೆಗಳನ್ನು ಕೊಡುತ್ತೇನೆ; ಅವರು ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದಂತೆ ಮಾತನಾಡುತ್ತಾರೆ, ಪತ್ರಕರ್ತರಿದ್ದಾರೆ, ಪತ್ತಿಕೆಗಳಲ್ಲಿ ಈ ವಿಷಯ ಬಂತು. ಇದರ ಬಗ್ಗೆ ದೇವೆಗೌಡರು ಎಷ್ಟು ಸಿಟ್ಟು ಮಾಡಿಕೊಂದಿದ್ದಾರೆಂದರೆ, 'ನೀವು ಮೂರ್ಖರಿದ್ದೀರಿ, ನಾನು ಏನೇನು ಮಾತನಾಡುತ್ತೇನೆಂದು ಗೊತ್ತಿಲ್ಲದೆ ಮಾತನಾಡುತ್ತೇನೆ' ಅಲ್ಲಿರುವ ಮುಸ್ಲಿಮರಲ್ಲಿ ಶೇಖಡಾ 95 ರಷ್ಟು ಓಟನ್ನು ಕೊಡಿಸುತ್ತೇನೆಂದು ಹೇಳುತ್ತಾರೆ. ಅದರೇ, ಮುಖ್ಯಮಂತ್ರಿಗಳು, 'ನಮಗೆ ಗೊತ್ತಿಲ್ಲ, ಪತ್ರಿಕೆಗಳಲ್ಲಿ ಬಂದಿದೆ, ನಾನು ಎಲ್ಲಿಂದ ಸಾಕ್ಷಿ ತರಲಿ? ನಿಮಗೆ ಎಷ್ಟು ದುಡ್ಡು ಬೇಕಾದರೂ ಕೊಡುತ್ತೇನೆ, ಬಿ.ಜೆ.ಪಿ.ಯವರನ್ನು ಸೋಲಿಸಬೇಕು, ಜೀವಿಜಯರವರನ್ನು ಗೆಲ್ಲಿಸಬೇಕು' ಇದು 'ಜನತಾದಳ ದರ್ಶನ'ದ ತೀರ್ಮಾನ. ಇದು ಸಾಕೇ? ಇದು ಯಾವ ಚುನಾವಣೆ? ಪಾರ್ಲಿಮೆಂಟ್ ಚುನಾವಣೆಗೆ ಈ ಸಿದ್ಧತೇಯೇ? ಅವರು ಅಸೆಂಬ್ಲಿ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆಂದು ತಿಳಿದುಕೊಂಡಿದ್ದೀರಾ? ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದನೆಂದರೆ, ನಾನು ಒಬ್ಬ ಏಕೈಕ ನಾಯಕನೆಂದು ಪ್ರದರ್ಶಿಸುವುದಕ್ಕೆ ಜನತಾ ದರ್ಶನಕ್ಕೆ ಹೋದಾಗ ಪಾಪ ಏನು ಮಾಡಬೇಕು? ಮೈಮರೆತು ಏನೋ ಮಾಡುವಂಥ ಒಂದು ಪರಿಸ್ಥಿತಿ ಅವರಿಗೆ ಬಂದಿದೆ ಎನ್ನುವುದಾದರೆ ಕೆಲವು ಸಂದರ್ಭಗಳಲ್ಲಿ ನಾವು ದುಃಖ ಪಡಬೇಕಾಗುತ್ತದೆ. ತಾವು ಜನತಾ ದರ್ಶನಕ್ಕೆ ಹೋದಿರಲ್ಲ, ಅಲ್ಲಿ ನಿಮ್ಮ ಕಣ್ಮುಂದೆಯೇ ಲಾಕಪ್ ಡೆತ್ ಆದರೆ, ಸೋಮವಾರ ಪೇಟೆಯಲ್ಲಿ ಗೃಹ ಸಚಿವರಾದ

ಸಿಂಧ್ಯರವರಿಂದ ತಮ್ಮ ಕತ್ತಿನ ಪಟ್ಟಿ ಎಳೆಸಿಕೊಂಡು ಅವಮಾನ ಉಂಡ ಸದಸ್ಯೀದ ಅಪ್ಪಚ್ಚು ರಂಜನ್ ತಮ್ಮ ಮಾನವ ಚಿಂತೆ ಮಾಡದೇ, ಲಾಕಪ್ ಡೆತ್ ನಡೆದ ಸ್ಥಳಕ್ಕೆ ಹೋಗಿ ಹೋರರಾಟ ಮಾಡಿ ಕೆಲಸ ಮಾಡುತ್ತಾರೆ. ಆದರೆ, ಅಲ್ಲಿಗೆ ಹೋಗಲು ಮುಖ್ಯ ಮಂತ್ರಿಗಳಿಗೆ ಬಿಡುವುವಿರಲಿಲ್ಲ, ಹೋಗಲಿಲ್ಲ, ಅದನ್ನೂ ನಾನು ನಿರೀಕ್ಷೆಯೂ ಮಾಡಿರಲಿಲ್ಲ ಅದನ್ನು ನಾನು ನಿರೀಕ್ಷೆಯೂ ಮಾಡುವುದಿಲ್ಲ. ನಾನು ಕೈಮುಗಿಧು ಪ್ರಾರ್ಥಿಸುತ್ತೇನೇ:

ಕೊನೇ ವರ್ಷ ನಿಮ್ಮ ಮಂತ್ರಿ ಮಂಡಲದ ಗೃಹ ಸಚಿವರು ತಾವು ಹೋಗಬೇಕಾಗಿತ್ತು ಎಂದು ಹೇಳಬೇಕಾಗಿತ್ತು. ಅವರನ್ನು ಕಳುಹಿಸಿದ್ದೀರಾ? ಇವೊತ್ತು ಗೃಹ ಸಚಿವರನ್ನು ಮುಖ್ಯಮಂತ್ರಿಗಳು ತಮ್ಮ ರಕ್ಷಣೆಗೆ ಇಟ್ಟು ಕೊಂಡಿದ್ದಾರೆಯೇ? ಜನರು ಏನು ತಿಳಿದುಕೊಳ್ಳುತ್ತಾರೆ? ಅವರನ್ನು ತಾವು ಬಾಡಿಗಾರ್ಡ ಆಗಿ ಇಟ್ಟುಕೊಳ್ಳುವಂಥ ಅಗತ್ಯವಿಲ್ಲ, ಇಡೀ ರಾಜ್ಯಕ್ಕೆ ಬಾಡಿಗಾರ್ಡ್ ಆಗಿರಬೇಕು. ತಾವು ಮುಖ್ಯಮಂತ್ರಿಗಳ ಜೊತೆ ಏಕೆ ಹೋಗುತ್ತೀರಿ? ಏಕೆ ನೀವು ರಕ್ಷಣೆ ತೆಗೆದುಕೊಂಡು ಹೋಗುತ್ತೀರಿ? ನಿಮಗೆ ಭಯವೇ? ಬಿ.ಜೆ.ಪಿ..... ಭೂತಯ..... ಸತ್ಯಾಗ್ರಹ..... ಚಲುವಳಿ.... ಜನರನ್ನು ಕರೆದುಕೊಂಡು ಇದರ ಬಗ್ಗೆ ಪತ್ರಿಕೆಗಳಲ್ಲಿ ಏನು ಬರೆದಿದ್ದಾರೆಂದರೆ 'ಮುಖ್ಯಮಂತ್ರಿಗಳಾದ ದೇವೇಗೌಡರು ಹೋದಾಗ ಸಾವಿರಾರು ಸಂಖ್ಯೆಯಲ್ಲಿ ಜನರು ಕೈಮುಗಿದು ಅರ್ಜಿಗಳನ್ನು ಹಿಡಿದುಕೊಂಡಿದ್ದಂಥ ದೃಶ್ಯ ಅವರು ನಾಲ್ಕು ಗಂಟೆಗಳ ಕಾಲ ತಡವಾಗಿ ಹೋಗಿದ್ದರಿಂದ ....ಅಲ್ಲಿ ನಿಂತಿದ್ದ ಜನರು ಯಾರೆಂದರೆ, ನಿವೇಶನ ಇಲ್ಲದವರು, ಮನೆಗಳಿಲ್ಲದವರು, ತಿನ್ನುವುದಕ್ಕೆ ಅನ್ನವಿಲ್ಲದವರು, ಬಿತ್ತನೇ ಬೀಜ ಇಲ್ಲದವರು, ಅಸ್ಪತ್ರೆಗಳಲ್ಲಿ ಔಷಧಿಗಳು ಸಿಗುತ್ತಿಲ್ಲವೆಂಬ ಕಾರಣಕ್ಕಾಗಿ. ಆದರೆ, ರಾಜ - ಮಹಾರಾಜರ ಕಾಲದಲ್ಲಿತ್ತು, ಆಗ ಚುನಾಯಿತ ಪ್ರತಿನಿಧಿಗಳೆಲ್ಲರೂ ಹೊಗುತ್ತಿದ್ದರು, ಕೇಳುತ್ತಿದ್ದರು, ಈ ವ್ಯವಸ್ಥೆ ಇದೆಯಲ್ಲ, ಗ್ರಾಮ ಲೆಕ್ಕಿಗ, ರೆವಿನ್ಯೂ ಇನ್ಸಪೆಕ್ಟರ್, ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಡೆಪ್ಯೂಟಿ ಕಮೀಷನರ್, ಗ್ರಾಮ ಪಂಚಾಯಿತಿ ಸದಸ್ಯ, ತಾಲ್ಲೂಕು ಪಂಚಾಯಿತಿ ಸದಸ್ಯ, ಜಿಲ್ಲಾ ಪಂಚಾಯತ್ ಸದಸ್ಯ, ಶಾಸಕ, ಲೋಕಸಭಾ ಸದಸ್ಯ, ಅಧಿಕಾರ ವಿಕೇಂದ್ರೀಕರಣದ ಬಗ್ಗೆ ನಿಮಗೆ ನಂಬಿಕೆ ಇಲ್ಲವೇ? ನೀವು ಅರ್ಜಿ ತೆಗೆದುಕೊಳ್ಳುವುದಕ್ಕೆ ಹೋಗುತ್ತೀರಾ? ಏನಾಯಿತು ಸ್ವಾಮಿ? ತಾವು ಪ್ರಾಮಾಣಿಕವಾಗಿ ಹೇಳಿ : ಅಲ್ಲಿ ತೆಗೆದುಕೊಂಡಂಥ ಅರ್ಜಿಗಳನ್ನು ಅಲ್ಲಿನ ಜಿಲ್ಲಾಧಿಕಾರಿಯವರಿಗೆ ಕೊಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಬಂದಿದ್ದೀರಿ. ಅದೇ ಗ್ರಾಮ ಲೆಕ್ಕಿಗ, ರೆವಿನ್ಯೂ ಇನ್ಸಪೆಕ್ಟರ್ ಅರ್ಜಿದಾರನ ಹತ್ತಿರ 200-300 ರೂಪಾಯಿಗಳನ್ನು ಕಿತ್ತುಕೊಂಡು ಅಕಸ್ಮಾತ್ ಆತನ ಕೆಲಸವನ್ನು ಮಾಡುವ ಹಾಗಿದ್ದರೆ ಮಾಡುತ್ತಾನೆ. ತಮಗೆ ಎಷ್ಟೋ ಸಾವಿರ ಅರ್ಜಿಗಳು ಬಂದಿದೆ. ಅದರ 8-10 ಸ್ಯಾಂಪಲ್‌ಗಳನ್ನು ಕೊಟ್ಟರೆ ತಾವು ಆಶ್ಚರ್ಯಪಡುತ್ತೀರಿ? ನಿಮಗೆ ಸರ್ಟಿಫಿಕೆಟ್ ನಾಡಲು ನಾನು ಯಾರು? ನಾನು ಯಾವಾಗ ಆನಂದ ಪಡುತ್ತಿದ್ದೇನೆಂದರೆ, ಒಂದೆರಡು ಜಿಲ್ಲೆಗಳಿಗೆ 7-8 ತಿಂಗಳಿನ ಆಡಳಿತದಲ್ಲಿ "ನನ್ನ ಬಿ.ಡಿ.ಓ., ನನ್ನ ತಹಶೀಲ್ದಾರೆ, ನನ್ನ ಡಿ.ಸಿ. ಏನಾಗಿದ್ದಾರೆಂದು ನೋಡುತ್ತೇನೆ,

ಸಾಲು ಸಾಲಾಗಿ ಜನರು ಬಂದಿದ್ದನ್ನು ಮಾದರಿಯಾಗಿಟ್ಟುಕೊಂಡು 'ನೋಡಿ ಹೀಗೆ ನಡೆದಿದೆ, ಇನ್ನೂ ಸುಧಾರಣೆಯಾಗಿಲ್ಲ, ನನ್ನ ಯಜಮಾನರಾದ ಹಳ್ಳಿಯ ಜನರು ಯಾರಿದ್ದಾರೆ? ನಮ್ಮನ್ನು ಈ ಕುರ್ಚಿಗೆ ಯಾರು ತಂದಿದ್ದಾರೆ, ನಿಮ್ಮ ಆಡಳಿತ ವೈಖರಿಯಲ್ಲಿ ಬದಲಾವಣೆಯಾಗುತ್ತದೆ ಎಂದು ನೀರಿಕ್ಷೆ ಮಾಡಿದ್ದೆ, ಏನೂ ಬದಲಾವಣೆಯಾಗಿಲ್ಲ, ಇದನ್ನು ಸರಿಪಡಿಸಿ, ಇಂತಹ ದೂರುಗಳು ಬರಬಾರದು. ಕಾನೂನಿನ ಚೌಕಟ್ಟಿನೊಳಗಡೆ ಇತ್ಯರ್ಥವಾಗಬೇಕಾಕದಂಥ ಒಂದು ಅರ್ಜಿ ಏನಾದರೂ

ನನ್ನ ಮುಂದೆ ಬಂದರೆ ಹುಷಾರ್" ಎಂದು ತಾವು ಪ್ರವಾಸ ಹೋಗಿದ್ದಂಥ ಜಿಲ್ಲೆಗಳಲ್ಲಿ ನೀವು ಎಚ್ಚರಿಕೆ ಕೊಟ್ಟು ಬಂದಿದ್ದರೆ, ಈ ದೇಶದ ಜನರು ನಿಮ್ಮನ್ನು ಕೊಂಡಾಡುತ್ತಿದ್ದರು, ಬರೀ ಯಡಿಯೂರಪ್ಪ ಒಬ್ಬನೇ ಅಲ್ಲ. ಅಂದರೆ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ನಿಮಗೆ ನಂಬಿಕೆ ಇಲ್ಲ! ಬಹುಪಾಲು ತಾಲ್ಲೂಕು ಪಂಚಾಯಿತಿ ಜಿಲ್ಲಾಪಂಚಾಯಿತಿಯಲ್ಲಿ ನೀವೇ ತಾನೆ ಗೆದ್ದಿರುವುದು? ಅವರೇನೋ ಬಡಜನರು ಕೆಲಸ ಮಾಡುವುದಿಲ್ಲವೆಂದು ತೀರ್ಮಾನಕ್ಕೆ ಬಂದಿದ್ದೀರಿ? ಅವರ ಬಗ್ಗೆ ನಿಮಗೆ ವಿಶ್ವಾಸವಿಲ್ಲವೆ? ಇದು ನಿಮ್ಮ ಜನತಾದರ್ಶನದ ಸ್ಥಿತಿ. ವೀರಪ್ಪನ್ ಹಿಡಿಯಲು ಎಂದರೆ 7-8 ಕೋಟಿ ಖರ್ಚು ಮಾಡಿರಬಹುದು. ಆದರೆ ಗೃಹ ಸಚಿವರು ವೀರಪ್ಪನ್ ಹಿಡಿಯಿರಿ ಎಂದರೆ ಅಪ್ಪಚ್ಚು • ರಂಜನ್‌ರವರನ್ನು ಹಿಡಿಯಲು ಹೋಗುತ್ತಾರೆ. ಸ್ವಾಮಿ ನಿಮ್ಮ ಜನತಾದಳದ ಪ್ರಧಾನ ಕಾರ್ಯದರ್ಶಿಯವರಾದ ಹರೀಶ್ ಎನ್ನುವರು ಠಾಣೆಯಲ್ಲಿ ಸ್ಫೋಟವನ್ನು ಮಾಡುವ ಬಗ್ಗೆ ಬೆದರಿಕೆಯನ್ನು ಪೋಲೀಸರಿಗೆ ಹಾಕಿರುವ ಬಗ್ಗೆ ವರದಿ ಬಂದಿರಬಹುದು, ಪತ್ರಿಕೆಯಲ್ಲೂ ಬಂದಿದೆ. ನಾನು ಹಳ್ಳಿಯವನು ನನಗೇನೋ ಗೊತ್ತಿಲ್ಲದೆ ಮಾತನಾಡಿದ್ದರೆ ಕಡಿತದಿಂದ ತೆಗೆದು ಹಾಕಿಬಿಡಿ, ಇರುವುದನ್ನು ನಾನು ಹೇಳುತೇನೆ.

ಅಧ್ಯಕ್ಷರು : ಇಲ್ಲಿ ಯಾರು ಸಹ ಲಂಡನ್, ಪ್ಯಾರೀಸ್‌ನಿಂದ ಬಂದವರಲ್ಲ ಎಲ್ಲರೂ ಸಹ ಹಳ್ಳಿಯಿಂದಲೇ ಬಂದಿರುವವರು.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ಗಡಿಪ್ರದೇಶವಾದ ಬೀದರ್, ಕಲ್ಬುರ್ಗಿ, ರಾಯಚೂರು, ಕೋಲಾರ ಇಲ್ಲಿ ಹೆಚ್ಚಾಗಿ ಡಕಾಯಿತಿಯ ಪ್ರಕರಣವಾಗುತ್ತಿದೆ. ಇವತ್ತು ದೇಶದಲ್ಲಿ ಡಕಾಯಿತಿ ಪ್ರಕರಣಗಳಲ್ಲಿ ನಾವು 9ನೇ ಸ್ಥಾನದಲ್ಲಿದ್ದೇವೆ. 164 ಪ್ರಕರಣ ಡಕಾಯಿತಿಯ ಬಗ್ಗೆ ಇದೆ. ಕರ್ನಾಟಕದಲ್ಲಿ ಡಕಾಯಿತಿಯ ಸಂಖ್ಯೆ ತೀವ್ರವಾಗಿ ಹೆಚ್ಚಿದ್ದು 194 ಪ್ರಕರಣವಿದೆ, ಅದರಲ್ಲಿ 107 ಮನೆಗಳ ಡಕಾಯಿತಿಯಾಗಿದ್ದರೆ ಉಳಿದಂಥವುಗಳು ಹೆದ್ದಾರಿ ದರೋಡೆಗಳಾಗಿದೆ. ಹುಬ್ಬಳ್ಳಿಯಲ್ಲಿ ಒಬ್ಬರು ಪೋಲೀಸ್ ಕಸ್‌ಸ್ಟಡಿಯಲ್ಲಿ ಸತ್ತರು. ಇದನ್ನು ಗೃಹಸಚೀವರೇ ಡಿಫೆಂಡ್ ಮಾಡಿಕೊಳ್ಳುತ್ತೀರಿ. ಹುಬ್ಬಳ್ಳಿಯಲ್ಲಿ ಪೋಲೀಸ್ ಕಸ್ಟಡಿಯಲ್ಲಿ ಸಾಯಲು ಯಾವ ಒಬ್ಬರು ಪೋಲೀಸ್ ಅಧಿಕಾರಿ ಕಾರಣರಾಗಿದ್ದರೋ ಅ ಅಧಿಕಾರಿಯನ್ನು ಬಂಧಿಸಲು ನಿಮ್ಮ ಸಿ.ಓ.ಡಿ. ಅಧಿಕಾರಿಗಳು ಏಪ್ರಿಲ್‌ನಿಂದ ಶೋಧ ಮಾಡಲು ಪ್ರಾರಂಭಿಸಿದ್ದಾರೆ, ನಿಮ್ಮ ಪೋಲೀಸ್ ಅಧಿಕಾರಿಗಳು ಅವನನ್ನು ಹಿಡಿಯುವುದಿಲ್ಲ, ಸಾರ್ವಜನಿಕರು ಆ ಪೋಲೀಸ್ ಅಧಿಕಾರಿಯನ್ನು ಹಿಡಿದು ಪೋಲೀಸ್ ಠಾಣೆಗೆ ಕೊಡತಕ್ಕ ಪರಿಸ್ಥಿತಿ ನಮಗೆ ಬಂದಿದೆಯೆಂದರೆ ಹೇಗೆ. ತಮ್ಮ ಕಾಲದಲ್ಲಿ 8-9 ಗಂಟೆ ರಾತ್ರಿಯಲ್ಲಿ ಗಂಡಹೆಂಡತಿಯರು ರಸ್ತೆಯ ಮೇಲೆ ಹೋಗುವುದನ್ನು ನೋಡಿದ್ದೀರೇನು? ಏನಪ್ಪ ಹೀಗೆಂದರೆ, ಪರಿಸ್ಥಿತಿ ರೀತಿ ಇದೆ. 5 ದಿವಸುಳ ಹಿಂದೆ, ನಾನು ತುಂಬಾ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ ಗೃಹ ಸಚಿವರು ಮಫ್ತಿಯಲ್ಲಿ ರಾತ್ರಿಯಲ್ಲಿ, ಬೆಳಗಿನಜಾವ ಏನಾಗುತ್ತಿದೆ, ಪೋಲೀಸ್‌ನವರು ಬೀಟ್ ಮಾಡುತ್ತಿದ್ದಾನೋ ಇಲ್ಲವೋ ಎನ್ನುವ ಬಗ್ಗೆ ನೋಡಲು ಆಗಾಗ್ಗೆ ಹೋಗ ಬೇಕಾಗುತ್ತದೆ.

ಅಧ್ಯಕ್ಷರು : ಹಾಗಾದರೆ ಮಂತ್ರಿಗಳಿಗೆ ಯೂನಿಫಾರಂಇದೆಯೇ? ಅಜ್ಞಾತದಲ್ಲಿ ಹೋಗಬೇಕಾಗುತ್ತದೆಂದರೆ ಸರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾರ್ಮಿಕ ಸಚಿವರ ಮನೆಯಲ್ಲಿ ಕಳ್ಳತನವಾಗಿದೆ. ಸಹಕಾರಿ ಸಚಿವರ ಅಂಗರಕ್ಷಕನ ಕೊಲೆ ರಾತ್ರಿಯಾಗಿದೆ. ಅವನ ಹತ್ತಿರ ಇರತಕ್ಕ ವಾಚು ಒಂದು ಸಾವಿರ ರೂಪಾಯಿ ಇರಬಹುದು ಅದಕ್ಕಾಗಿ ಕೊಲೆಯೇ? ಜೈಲಿನಲ್ಲಿ ಬಲರಾಮನನ್ನು ರೌಡಿಗಳೇ ಹೊಡೆದಾಡಿ ಸಾಯುವ ಸ್ಥಿತಿಗೆ ಬಂದಿರುವುದಾಗಿದ್ದರೆ ನಿಮ್ಮ ಕಾನೂನು ಸುವ್ಯಸ್ಥೆ ಈ ರಾಜ್ಯದಲ್ಲಿ ಬದುಕಿದೆಯೇ? ಆದರೂ ಸಹ

ಗೃಹಸಚಿವರ ಧೈರ್ಯವನ್ನು ಮೆಚ್ಚಬೇಕು. ಇಲ್ಲಿ ಕೊಲೆಯಾಗುತ್ತಿದೆ, ಮಾನಹರಣವಾಗುತ್ತಿದೆ, ಕೊಲೆಸುಲಿಗೆಗಳಾಗುತ್ತಿದೆ ಆದರೂ ಸಹ ನಾನು ದೇವೇಗೌಡರ ಜೊತೆ ರಕ್ಷಕನಾಗಿರಬೇಕು ಎಂದು ಹೋದರೆ ಹೇಗೆ? ನಿಮ್ಮ ಜವಾಬ್ದಾರಿ ಒಬ್ಬರು ದೇವೇಗೌಡರಿಗೆ ರಕ್ಷಣೆಯನ್ನು ಕೊಡುವುದಲ್ಲ, ಇಡೀ ರಾಜ್ಯದ ನಾಲ್ಕೂವರೆ ಕೋಟಿ ಜನರಿಗೆ ರಕ್ಷಣೆ ಕೊಡಲು 24 ಗಂಟೆ ಬಂದು ಕಛೇರಿಯಲ್ಲಿ ಕುಳಿತುಕೊಂಡು ಅಧಿಕಾರಿಗಳ ಜೊತೆ ಸಂಪರ್ಕವನ್ನಿಟ್ಟುಕೊಂಡು, ಕ್ಷಣಕ್ಷಣಕ್ಕೆ ಈ ಪ್ರಜಾತಂತ್ರ ವ್ಯವಸ್ಥೆಯಲ್ಲು ಕಾನೂನು ಸುವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳತಕ್ಕಂಥ ದೊಡ್ಡ ಜವಬ್ದಾರಿಯನ್ನು ಈ ನಾಡಿನ ಜನರಾದ ನಾವು ನಿಮಗೆ ಕೊಟ್ಟಿದ್ದೇವೆ. ಅದನ್ನು ನೀವು ನಿರ್ವಹಿಸದೆ ಈ ರೀತಿಯಾದ ಬೇಜಬ್ದಾರಿಯಾದ ನಡವಳಿಕೆಗಳಾಗುತ್ತದೆಯೆಂದು ಜನರು ಹೇಳುತ್ತಿದ್ದರೂ ಸಹ ನೀವು ಈ ರೀತಿ ವರ್ತಿಸುವುದು ಸರಿಯೇ? ಇವತ್ತು ರಾಜ್ಯದ ರಸ್ತೆಯಲ್ಲಿ ಒಂದು ವರ್ಷಕ್ಕೆ 30 ಸಾವಿರಕ್ಕಿಂತ ಹೆಚ್ಚು ರಸ್ತೆ ಅಪಘಾತವಾಗಿದೆ, 25 ಸಾವಿರಕ್ಕಿಂತ ಹಚ್ಚು ಜನರಿಗೆ ಗಾಯವಾಗಿದೆ, ಮಕ್ಕಳ ಅಪಹರಣವಾಗಿದೆ, ಅಪ್ರಾಪ್ತವಯಸ್ಸಿನ ಹೆಣ್ಣುಮಕ್ಕಳ ಮೇಲೆ ಗುಂಪುಗಾರಿಗೆ ಅತ್ಯಾಚಾರವಾಗಿದೆ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆನ್ನು ಕಾಪಾಡತಕ್ಕ ಪೋಲೀಸರ ಮಕ್ಕಳೇ ಕೆಲವು ಕಡೆ ಇದರಲ್ಲಿ ಶಾಮಿಲಾಗಿರುವ ಬಗ್ಗೆ ವರದಿ ಬಂದಿದೆ ಅದರ ಬಗ್ಗೆ ಹೆಸರನ್ನು ಹೇಳಿ ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸಲು ನಾನು ಬಯಸುವುದಿಲ್ಲ. ನಮ್ಮ ಮನೇಯಲ್ಲಿ ನನ್ನ ತಾಯಿ ಅನ್ನ ಮಾಡಿ ಬೆಂದಿದೆಯೇ ಇಲ್ಲವೋ ಎಂದು ನೋಡಲುಒಂದೆರಡು ಅಗಳನ್ನು ನೋಡುತ್ತಾಳೆ, ಬೆಂದಿದ್ದರೆ ಬಸಿಯುತ್ತಾಳೆ. ನಿಮಗೆ ಸಮಾಧಾನವಾಗಿದ್ದರೆ ನಿಲ್ಲಿಸಿ ಸಾಕಾಗಿದೆಯೆಂದು, ಇಲ್ಲದಿದ್ದರೆ ಇವರನ್ನೆಲ್ಲ ಕಟ್ಟಿಕೊಂಡು ಆಗುವುದಿಲ್ಲ, ನಾವೇನೋ ಅಂದು ಕೊಂಡು ಬಂದೆವು, ಕುಲುಗೆಟ್ಟುಹೋಗಿದೆ, ನಮ್ಮ ದೇವೇಗೌಡರಿಗೆ ಒಂದು ಸಮಸ್ಯೆಯಾಗಿದೆ, ಅದನ್ನು ಇವತ್ತಾದರೂ ಸಹ ಹೇಳುತ್ತೇನೆ.

ಇಡೀ ರಾಜ್ಯ ನಿಮ್ಮ ತಲೆಯಮೇಲೆ ಬಿದ್ದಿದೆ ಎಂದು ತಿಳಿದುಕೊಳ್ಳಬೇಡಿ, ಮಾಂತ್ರಿಮಂಡಲವಿದೆ, ಶಾಸಕರು ಇದ್ದಾರೆ, ವಿರೋಧ ಪಕ್ಷದವರಾದ ನಾವು ನಿಮ್ಮ ವೈರಿಗಳಲ್ಲ, ಅಧಿಕಾರಿಗಳೆಲ್ಲರೂ ಸುಳ್ಳರು-ಕಳ್ಳರಲ್ಲ, ಬಹಳ ವರ್ಷಗಳಿಂದ ಈ ವ್ಯವಸ್ಥೆ ನಡೆದುಕೊಂಡು ಬಂದಿದೆ. ನೀವು ಮುಖ್ಯ ಮಂತ್ರಿಗಳಾಗುವುದಕ್ಕೂ ಮೊದಲು ಈ ರಾಜ್ಯ ನಡೆದಿತ್ತು, ನೀವು ಹೋದಮೇಲೂ ನಡೆಯುತ್ತದೆ. ಆದರೆ ನಿಮ್ಮ ಕಾಲದಲ್ಲಿ ಒಳ್ಳೆಯದಾಗಬೇಕು ಎನ್ನತಕ್ಕ ಕಳಕಳಿಯಿಂದ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗತಕ್ಕ ಕೆಲಸವನ್ನು ಮಾಡದೆ ಒಬ್ಬರೆ ಹೋದರೆ ಹೇಗೆ? ನಮ್ಮ ಸ್ನೇಹಿತ ಸಚಿವರಾರು ಸಹ ಇಲ್ಲಿ ಇಲ್ಲ, ಏನೋ ಯಡಿಯೂರಪ್ಪನವರು ಹೇಳಿಕೊಳ್ಳುತ್ತಾರೆ ಅದನ್ನು ಹೇಳಿಕೊಳ್ಳಲಿ ಎಂದು ಬೇಸರದಿಂದ ಹೊರಟು ಹೋಗಿದ್ದಾರೆ. ಮಂತ್ರಿಮಂಡಲದಲ್ಲೆ ವಿಶ್ವಸವಿಲ್ಲಾ; ಯಾವ ಕೆಲಸವನ್ನು ಸಹ ಬೇರೆಯವರಿಗೆ ಮೊದಲು ಬಿಡುವುದಿಲ್ಲ. ಏಕೆ ಸ್ವಾಮಿ ಆ ರೀತಿ? ತಾವು ಎಲ್ಲಾ ಜವಾಬ್ದಾರಿಯನ್ನು ಏಕೆ ತೆಗೆದುಕೊಳ್ಳುತ್ತೀರ? ಎಲ್ಲಾ ಕಡತಗಳನ್ನು ನೀವು ಒಬ್ಬರೇ ನೋಡಲು ಆಗುತ್ತದೆಯೇ? ನನ್ನ ತಮ್ಮ ಯೋಗ್ಯತೆ ಇಲ್ಲದಿರಬಹುದು, ಜನರು ಗೊತ್ತಿಲ್ಲದೆ ಇಲ್ಲಿ ಕೂರಿಸಿಬಿಟ್ಟಿದ್ದಾರೆ, ಓಟ್ಟು ಕೊಟ್ಟು ನಾನು ಬರೆದಂಥ ಪತ್ರಕ್ಕೆ ಒಂದಕ್ಕೆ ಉತ್ತರವನ್ನು ಕೊಟ್ಟಿದ್ದೀರ? ನಮ್ಮ ಗೃಹ ಸಚಿವರಿಗೇನು ಪತ್ರವನ್ನು ಬರೆದೆ ಅದಕ್ಕೆ ಒಂದಕ್ಕೆ ಉತ್ತರವನ್ನು ಕೋಟ್ಟಿದ್ದಾರೆಯೇ ಸ್ವಾಮಿ ಚುನಾಯಿತ ಪ್ರತಿನಿಧಿಯು ಬರೆದಂಥ ಪತ್ರಕ್ಕೆ ಉತ್ತರವನ್ನು ಕೊಡದಿರತಕ್ಕ, ಸೌಜನ್ಯವಿಲ್ಲದಿರತಕ್ಕ, ಉತ್ಕಟತನದಿಂದ ನಡೆದುಕೊಳ್ಳುತ್ತಿರತಕ್ಕ ನೀವು ಓ ಬಡವರು ಕೊಟ್ಟಂಥ ಅರ್ಜಿಗೆ ಉತ್ತರಸಿಗಬಹುದೆ, ಪರಿಹಾರ ಸಿಗಬಹುದೇ?! ನಮ್ಮ ಪರಿಸ್ಥಿತಿ ಈ ರೀತಿಯಾಗಿಗೆ ಎಂದು ಮಾನ್ಯ ಅಧ್ಯಕ್ಷರಿಗೆ ಪತ್ರವನ್ನು ಬರೇದೆ, ಆದರೆ ತಾವೇನು ಮಾಡಲು ಆಗುತ್ತದೆ? ನಾವು ಕಾನೂನನ್ನು ಮಾಡಿಕೊಂಡಿದ್ದೇವೆ.

ನಮ್ಮ ಅಪ್ಪ ಹೇಳುತ್ತಿದ್ದರು, ಓದಬೇಡವ್ವೋ ತಮ್ಮ ನೀನೂ ಹಾಳಾಗುತ್ತೀಯ, ಓದಿರುವವರ ಹತ್ತಿರ ಸ್ವಲ್ಪ ಕೇಳಿಕೊಂಡು ಕೆಲಸ ಮಾಡು, ಓದುವುದು, ಕಾನೂನನ್ನು ತಿಳಿದುಕೊಳ್ಳುವುದು ತಿನ್ನುವುದೇಗೆ, ಲೂಟಿ ಮಾಡುವುದು ಹೇಗ, ಮುಚ್ಚುವುದೇಗೆ, ಕೊಲೆಗಾರರನ್ನು ರಕ್ಷಣೆ ಮಾಡುವುದೇಗೆ ಎನ್ನುವುದಕ್ಕೆ ಉಪಯೋಗ ಆಗತಕ್ಕ ದೌರ್ಭಾಗ್ಯ ನಮ್ಮ ಸ್ವತಂತ್ರ್ಯ ಭಾರತಕ್ಕೆ ಬಂದಿದೆ. ನಮ್ಮ ದೇಶದ ಇತಿಹಾಸದಲ್ಲಿ ಲಕ್ಷಾಂತರ ಜನರು ಪ್ರಾಣವನ್ನು ತೆತ್ತು ನಮಗೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಮೇಲೆ ಯಾವ ಒಂದು ಪರಿಸ್ಥಿತಿ ಬಂದಿದೆ ಎನ್ನುವುದಕ್ಕೆ ನಾನು ಈ ಮಾತನ್ನು ಈ ಸಮಯದಲ್ಲಿ ಹೇಳುತ್ತಿದ್ದೇನೆ. ಇನ್ನು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ.ಲ್ಲಿ 4 ರಿಂದ 5 ಸಾವಿರ ವರ್ಗಾವಣೆಯಾಗಿದೆ. ಜನರು ಇದರ ಬಗ್ಗೆ ಮಾತನಾಡುತ್ತಾರೆ. ಎಷ್ಟೆಷ್ಟು ವರ್ಗಾವಣೇ ಮಾಡಿದ್ದೀರಿ ಎನ್ನುವ ಬಗ್ಗೆ ಅನಂತರ ಪಟ್ಟಿಯನ್ನು ಕೊಡುತ್ತೇನೆ. ನೌಕರನು ಹೇಳುವುದು ನೀವು ವರ್ಗಾವಣೆ ಮಾಡುವುದು, ಯಾರ್‍ಯಾರು ಕುಳಿತುಕೊಂಡು ನಿಮ್ಮ ಕಛೇರಿಯಲ್ಲಿ ಮಾಡುತ್ತಾರೋ, ನಿಮ್ಮ ಅಧಿಕಾರಿಗಳು ಮಾಡುತ್ತಾರೋ ಅದು ನಿಮಗೆ ಗೊತ್ತಿಲ್ಲ. ನೀವು ಪ್ರವಾಸ ಹೋದಾಗ ಏನು ಮಾಡಬೇಕು? ಏನಾದರು ನಡೆಯಬೇಕಲ್ಲ, ನೀವು ಇರಲಿ ಇಲ್ಲದಿರಲಿ ಇಲ್ಲದಿರಲಿ ಎಲ್ಲಾ ವ್ಯವಹಾರವು ನಡೆಯುತ್ತಿದೆ. ನಿಮಗಿಂತ ಕೆಲಸ ಮಾಡತಕ್ಕವರಿದ್ದಾರೆ, ನೀರಾವರಿ ಇಲಾಖೆಯಲ್ಲಿ ಲೂಟಿಯಾಗಿದೆಯೆಂದು ಹೇಳಿ, ಅಧಿಕಾರಿಗಳ ಮೇಲೆ ಚೀಮಾರಿ ಹಾಕಿದರಲ್ಲ! ಸಭೆ ಕರೆದು ತೋರಿಸಿದರಲ್ಲ! ಆಗ ಅಧಿಕಾರಿಗಳಿಗೆ ನಿಮ್ಮ ಮೇಲೆ ದಾಖಲೆಗಳಿವೆ. ಹುಶಾರ್ ಎಂದು ಹೇಳಿದರಲ್ಲ, ಆ ದಾಖಲೆ ಇದ್ದವರನ್ನು ರಕ್ಷಣೆ ಮಾಡುತ್ತೀರ? ಲೂಟಿ ಮಾಡಿದವರಲಿ; ದಾಖಲೆಗಳನ್ನು ಕೈಯಲ್ಲಿಟ್ಟುಕೊಂಡು ರಕ್ಷಣೆ ಮಾಡುತ್ತೀರ? ತಾವು ಆ ದಾಖಲೆಗಳನ್ನಿಟ್ಟು ಕೊಂಡು ಇವರು ಬ್ಲಾಕ್‌ಮೇಲ್ ಮಾಡುತ್ತಾರೆಂದು ಜನರು ಅಂದುಕೊಂಡು ನಿಮ್ಮ ಮೇಲೆ ಅನುಮಾನ ಪಡುವುದಿಲ್ಲವೆ? ಅವರು ಮಾಡಿರತಕ್ಕದ್ದು ತಪ್ಪು ಎನ್ನುವ ಬಗ್ಗೆ ದಾಖಲೆಗಳಿದ್ದು ಅಪರಾಧವಾಗಿದ್ದರೆ ಅವರನ್ನು ಮನೆಗೆ ಕಳಿಸಿ ನಿಮ್ಮ ಕಾಲದಲ್ಲಿ 4-5 ಜನ ಸರ್ಕಾರಿ ನೌಕರರಿಂದ ಈ ರಾಜ್ಯ ಬದುಕಿದೆಯೇ? ಎಷ್ಟು ಉದ್ದಟತನ? ನಮ್ಮ ಉಡುಪಿಯ ಶಾಸಕರು ಮತ್ತು ಜಯರಾಮ್‌ಶೆಟ್ಟರು ಯಾರೋ ಬಡವರ ಮನೆಯನ್ನು ಕಿತ್ತುಹಾಕಿದ್ದಾರೆಂದು ಹೋದರೆ, ಅವರಿಗೆ ರಕ್ಷಣೆ ಕೊಡಲು ಹೋದರೆ, ಅವರಿಗೆ ಚೀಮಾರಿ ಹಾಕುತ್ತೀರಿ ವಾರನ್ ಮಾಡುತ್ತೀರಿ? ನಮ್ಮ ಉಡುಪಿಯ ಶಾಸಕ ಜಯರಾಮ್ ಶೆಟ್ಟಿ ಮೇಲೆ ಕೇಸ್ ಹಾಕತಕ್ಕ ಉದ್ದಟತನ, ಧರಣಿ ಸತ್ಯಾಗ್ರಹನಡೆಯುತ್ತಿದೆ, ಚೀಮಾರಿ ಹಾಕಿದಿರಿ, ವಾರನ್ ಮಾಡಿದಿರಿ: ಇದು ಗೃಹಸಚಿವರಾದ ನಿಮಗೆ ವಿಶ್ವಾಸ ಮೂಡಿಸುವುದಿಲ್ಲ.

ಉಡುಪಿ ಶಾಸಕರಾದ ಶ್ರೀ ಜವರಾಯಶೆಟ್ಟಿಯವರ ಮೇಲೆ ಕೇಸ್ ಹಾಕುವಂತಹ ಉದ್ದಟತನ ಸಚಿವರಾದ ನಿಮಗೆ ಇದರಿಂದ ಶೋಭೆ ತರುವುದಿಲ್ಲ. ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಅಭಿಮಾನಿಗಳು ಶಾಸಕರು ಕಿತ್ತುತಿನ್ನುವಂತಹ ಕೆಲಸ ಮಾಡುತ್ತಿರಾ, ಇಲ್ಲದ ಸುಳ್ಳು-ಪುಳ್ಳುಕೇಸ್‌ಗಳನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೀರಾ, ಪೋಲೀಸ್ ಕಛೇರಿಯನ್ನು ನಿಮ್ಮ ಪಕ್ಷದ ಕಛೇರಿಯಾಗಿ ಮಾಡಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದೀರಾ. ಏಕೆ 1983 ರಲ್ಲಿ ನಿಮಗೆ ಅಧಿಕಾರ ಕೊಟ್ಟು ಬೆಂಬಲ ಕೊಟ್ಟೆವು ಅಂತಾನಾ? ಜ್ಞಾಪಕ ಇದೆಯಾ ದೇವೇಗೌಡರೇ? ಶಿವಪ್ಪನವರ ಮನೆಗೆ ಬಂದರಲ್ಲಾ ಒಬ್ಬ ಶಾಸಕನನ್ನು ಉಳಿಸಿ ಕೊಳ್ಳಿ ಎಂದು ನಿಮಗೆ ಈಗ ಏಕೆ ಬೇಕು ನಾವು, ಇವತ್ತು ನಾವು ನಿಮಗೆ ವೈರಿಗಳು, ಈ ದೇಶದಲ್ಲಿ ವಿರೋಧ ಪಕ್ಷಗಳೂ ಸಹ ಅಧಿಕಾರ ನಡೆಸುವುದಕ್ಕೆ ಸಾಧ್ಯ ಇದೆ. ಈ ನಾಡಿನ ಜನರಿಗೆ ಸಾಬೀತು ಮಾಡಬೇಕೆಂದು 18 ಜನ ಬಿ.ಜೆ.ಪಿ. ಶಾಸಕರು ಬೇಷರತ್ತಿನಿಂದ ಬೆಂಬಲ ಕೊಟ್ಟು ರಾಮಕೃಷ್ಣ

ಹೆಗಡೆಯವರನ್ನು ಮುಖ್ಯ ಮಂತ್ರಿಯಾಗಿ ಮಾಡಿದ್ದರು. ನಮ್ಮ ಸಂಬಂಧ ನಿಮಗೆ ಸರಿ ಹೋಗಲಿಲ್ಲ, ಆ ಮೇಲೆ ನೀವೇ ಸ್ವತಂತ್ರವಾಗಿ ಗೆದ್ದಿರಿ, ಬೊಮ್ಮಾಯಿಯವರು ಮುಖ್ಯ-ಮಂತ್ರಿ ಆಗ ಬೇಕೆಂದು ಬಡಿದಾಡಿದಿರಿ, ಎಲ್ಲಾ ಹೋಯಿತು. ಈಗಲಾದರೂ ನಾವೆಲ್ಲಾ ಒಂದು ಎಂದು ಹೇಳಿದಿರಿ, ಎಲ್ಲಿದ್ದೀರಿ ಒಂದಾಗಿ? ನೀರಾವರಿ ಇಲಾಖೆಗೆ ಮಾಡಿದಿರಲ್ಲಾ ಇದು ಒಂದು ಉದಾಹರಣೆ ಕೊಡಿ ಸಾಕು. ಸ್ವಜನ ಪಕ್ಷಪಾತಕ್ಕೆ ಇದಕ್ಕಿಂತ ಉದಾಹರಣೆ ಬೇಕೇ? ರಾಮಯ್ಯ ಎಂಬ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರನ್ನು, ಈ ಅವ್ಯವಹಾರದ ಕಾರಣ ಅಮಾನತ್ತಿನಲ್ಲಿಟ್ಟಿದ್ದರು. ಇವರು ನಿವೃತ್ತಿಯಾಗುವುದಕ್ಕೆ ಒಂದು ದಿನ ಮೊದಲು ಇದರ ಔಚಿತ್ಯವೇನು? ಆ ರಿಟೈರ್ಡ್ ಆಗುವಂತಹವರಿಗೆ ಬಾಗೂರು- ನವಿಲೆ ಸುರಂಗ ಮಾರ್ಗ ನಿಗಮದಿಂದ ವೈಅಲೈನ್‌ಮೆಂಟ್ ನಾಲೆಯಲ್ಲಿ ಸುಮಾರು 190 ಲಕ್ಷ ರೂಪಾಯಿಗಳಿಗೆ ಮೀರಿ ನೀರನ್ನು, ತೆಗೆಯುವುಕ್ಕೆ ವೆಚ್ಚ ಮಾಡಿರುವ ಬಗ್ಗೆ ನಿಯಮಗಳಂತೇ ಗುತ್ತಿಗೆಗಳನ್ನು ನಿರ್ವಹಿಸುವುದಿಲ್ಲ ಎಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ನೀರು ಎತ್ತುವುದಕ್ಕೆ ದರವನ್ನು ನಿಷ್ಕರ್ಷೆ ಮಾಡುವಾಗ ಗುತ್ತಿಗೆದಾರರಿಂದಲೇ ತೆಗೆದುಕೊಂಡಿರುವ ಕೊಟೇಷನ್‌ಗಳನ್ನು ನಿಯಮಗಳನ್ನು ಅನುಸರಿಸಿ ವಿತರಿಸದೆ, ವ್ಯವಹಾರದಲ್ಲಿ ಕಲ್ಪಿತ ಆಗಿರುವ ಕೊಟೇಷನ್‌ಗಳನ್ನು ಅದರಲ್ಲಿ ಲಗತ್ತಿಸಲಾಗಿದೆ. ಇದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಇದರಿಂದ ಶ್ರೀ ಹೆಚ್. ರಾಮಯ್ಯ ಅಧೀಕ್ಷಕ ಅಭಿಯಂತರರನ್ನು ಸೇವೆಯಿಂದ ಅಮಾನತ್ತನಲ್ಲಿ ಇಡಲಾಗಿತ್ತು. ಇದು ಸರ್ಕಾರದ ಆಜ್ಞೆ, 60 ಡೇಟೆಡ್ 23.5.95. ತಾವು ಆಜ್ಞೆ ಹೊರಡಿಸುತ್ತೀರಿ, ಸರ್ಕಾರದ ಅಧಿಸೂಚನೆ ಸ.ಲೋಕೋಪಯೋಗಿ ಇಲಾಖೆ, ನೀರಾವರಿ-2 ಸೇವಾ 95 ದಿನಾಂಕ 24.1.95ರಲ್ಲಿ ಕ್ರಮ ಸಂಖ್ಯೆ 14ರಲ್ಲಿ ಹೆಚ್. ರಾಮಯ್ಯನವರರಿಗೆ 31.5.95ರಂದು ನಿವೃತ್ತಿಯನ್ನು ಹೊಂದಲು ನೀಡಿದ್ದ ಅನುಮತಿಯನ್ನು ಇವರ ಮಟ್ಟಿಗೆ ಹಿಂತೆಗೆದುಕೊಳ್ಳಬೇಕೆಂದು ಸಸ್ಪಂಡ್ ಮಾಡಿದ ವ್ಯಕ್ತಿಯನ್ನು ರಿ ಇನ್‌ಸ್ಟೇಟ್ ಮಾಡಿ ಅವರನ್ನು ರಿಟೈರ್ಡ್ ಆದ ಮೇಲೆ ಮುಂದುವರೆಸಿ ಏಕೆ ನಿಮಗೆ ಚೆನ್ನಾಗಿ ಗೊತ್ತಿದೆ ನಿಮಗೆ ಸಾಕ್ಷಿ ಬೇಕಾಗುತ್ತದೆ, ಇದಕ್ಕೋಸ್ಕರ ನನ್ನ ಜೊತೆ ಇದ್ದು ಬಿಡು ಎಂದು ಅರ್ಥ ಬರುವುದಿಲ್ಲವೇ? ನಾನು ಹೇಳಿದ್ದಕ್ಕೆ ಎಂದೊಂದು ಉತ್ತರ ಕೊಟ್ಟರ ಸಾಕು. ಲೋಕೋಪಯೋಗಿ ಇಲಾಖೆಯಲ್ಲಿ ಟಾರ್ ಖರೀದಿ ವ್ಯವಹಾರದಲ್ಲಿ ಅವ್ಯವಹಾರ ನಡೆದಿದೆ ಎಂದು ಸಿ.ಓ.ಡಿ.ಗೆ ನೀವು ಕೊಟ್ಟಿದ್ದೀರಿ, ಪ್ರಾಥಮಿಕ ವರದಿ ಪ್ರಕಾರ, ಮೂರು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಮುಖ್ಯ ಮಂತ್ರಿಗಳು ಸದನಕ್ಕೆ ತಿಳಿಸಿದ್ದೀರಿ. ಸಿ.ಓ.ಡಿ. ತನಿಖೆ ಪೂರ್ಣವಾಗಿದೆ. ಆ ವರದಿಯ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಂದಿದ್ದೀರಿ, ನೀನು ಎಷ್ಟು ತಿಂದೆ ಎಂದು ಲೆಕ್ಕ ತೇಗೇದುಕೊಂಡಿರಾ? ಕರೆದು ಮಾತನಾಡಿಸಿದಿರಾ? ಮನೆಗೆ ಕಳುಹಿಸಿದಿರಾ?

ಇದು ಬಹಳ ಮಜ ಇದೆ. ರಾಜಭವನದಲ್ಲಿ 320 ಕೆ.ವಿ.ಎಂದು 65 ಲಕ್ಷ ರೂಪಾಯಿ ಹೇಗೆ ಆಗುತ್ತದೆ, 520 ಕೆ.ವಿ.ಎ. ಜನರೇಟರ್‌ಗೆ 35 ಲಕ್ಷ ಹೇಗೆ ಆಗುತ್ತದೆ? ವ್ಯತ್ಯಾಸ ಏನು? ಯಾರು ಹೊಡೆದರು, ಏಕೆ ಹೊಡೆದರು? ಜೆ.ಹೆಚ್. ಪಟೇಲರೆ, ನಿಮಗೂ ಪುರಸೊತ್ತಿಲ್ಲ, ಜಿಂದಾಲ್ಗೆ ಏನೋ ಆರೋಗ್ಯ ಸರಿ ಇಲ್ಲ ಎಂದು ನಾಲ್ಕು ದಿವಸ ಹೋದಿರಿ, ಆ ಮೇಲೆ ಏನು ಮಾಡುತ್ತೀರಿ? ಇದೆಲ್ಲಾ ನೋಡುವುದಕ್ಕೆ ಆಗುವುದಿಲ್ಲ, ಪುರಸೋತ್ತಿಲ್ಲ., ಎಂದರೆ ಯಡಿಯೂರಪ್ಪ ಕೇಳಬೇಕು, ಇಲ್ಲಿ ಕುಳಿತಿರುವಂತಹವರು ಜನರ ಪ್ರಗತಿ ಬಗ್ಗೆ ಅಭಿವೃದ್ಧಿ ಕಾರ್ಯದ ಬಗ್ಗೆ ಕೆಲಸ ಕಾರ್ಯಗಳಿಗೆ ಜನ ನಮ್ಮನ್ನು ಕಳುಹಿಸಿದ್ದಾರೆ, ಹೊರತು ಯಾರ‍್ಯಾರು ಎಲ್ಲೆಲ್ಲಿ ಹೊಡೆದಿದ್ದಾರೆ ಏನೇನು ಮಾಡಿದ್ದಾರೆ, ನೀವು ಏನೇನು ಮಾಡಿದ್ದೀರಿ ಅದನ್ನು ಹಿಡಿದುಕೊಂಡು ಸಿ.ಐ.ಡಿ. ಕೆಲಸ ಮಾಡುವುದಕ್ಕೆ ನಾವು ಬಂದಿದ್ದೇವೆಯೇ? ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನ ನಮಗೆ ಆಯ್ಕೆ ಮಾಡಿ ಕಳುಹಿಸಿಕೊಟ್ಟಿರುವುದು

ಒಂದೂ ತಪ್ಪಾಗದಂತೆ ನೋಡಿಕೊಂಡು ನಾವು ನೀವು ಒಂದಾಗಿ ಜನ ಹಿತ ಮಾಡಬೇಕಾದಂತಹ ಸಂದರ್ಭದಲ್ಲಿ, ಈ ರೀತಿ ನೀವು ಕೆಲಸ ಮಾಡುತ್ತಿದ್ದೀರಿ ಕೆಲಸಕ್ಕೆ ಬಾರದಕ್ಕೆ ಎಲ್ಲೆಲ್ಲಿ ಎಷ್ಟೆಷ್ಟು ದುಡ್ಡು ಕೊಟ್ಟಿದ್ದಾರೆ, ಎಂದು ಇದರಲ್ಲಿ ಹೇಳಿದರೆ ಏನು ಉಪಯೋಗವಾಗುತ್ತದೆ. ಎಲ್ಲೆಲ್ಲಿ ಕೊಟ್ಟಿಲ್ಲ ಎಂದು ನಾನು ಏಕೆ ಹೇಳಲಿಕ್ಕೆ ಹೋಗಲಿ. ಈ ರಾಷ್ಟ್ರೀಯ ಹೆದ್ದಾರಿ ಬೆಂಗಳೂರು ಹೊಸೂರು ರಸ್ತೆಯಲ್ಲಿ ವಿದ್ಯುತ್ ಕಂಬ ಸ್ಥಳಾಂತರಿಸಲು ಗುತ್ತಿಗೆ ಕಾಮಗಾರಿಗಳನ್ನು ಸರ್ಕಾರದ ಅನುಮತಿ ಇಲ್ಲದೆ, ಸುಮಾರು ಒಂದು ಕೋಟಿ ರೂಪಾಯಿ ಗುತ್ತಿಗೆದಾರರಿಗೆ ಬಿಡುಗಡೆ ಆಗಿದೆ. ಈ ಬಗ್ಗೆ ತನಿಖೆ ಮಾಡಬೇಕೆಂದು ನಾನು ಒತ್ತಾಯ ಮಾಡಿದೆ. ಆದರೆ ಅದೇ ಗುತ್ತಿಗೆದಾರರು ಇದು ಎರಡು ಮೊದಲನೆಯದು ವಿದ್ಯುತ್ ಕಂಬ ಸ್ಥಳಾಂತರಿಸಲು ಗುತ್ತಿಗೆ ಕಾಮಗಾರಿಗೆ ಸರ್ಕಾರದ ಅನುಮತಿ ಇಲ್ಲದೆ ಒಂದು ಕೋಟಿ ಕೊಟ್ಟಿರುವಂಥದ್ದು, ಎರಡನೆಯದು ಕೇಬಲ್ ಹಾಕುವ ಕಾಮಗಾರಿಕೆ ಸುಮಾರು 5 ಕೋಟಿ ರೂಪಾಯಿ ಕೆಲಸ ಕೊಟ್ಟಿರುವಂಥದ್ದು. ಇದು ಸಾಲದು ಎಂದು ಮತ್ತೆ ಎರಡು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ ಎಂದು ನನಗೆ ತಿಳಿದು ಬಂದಿದೆ. ನಿಮ್ಮ ಕೈ ಕೆಳಗೆ ಒಂದು ವಿಶೇಷ ತನಿಖಾ ದಳ ಇದೆ. ಪರ್ಮಿಷನ್ ಇಲ್ಲವೆ ಕೋಟ್ಯಾಂತರ ರೂಪಾಯಿ ಕೆಲಸ ಮಾಡುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಎಲ್ಲಾ ಕಡತವನ್ನು ಕಳುಹಿಸುತ್ತೇನೆ. ಹೇಗೆ ಬಿಡುತ್ತೀರಿ, ಇಷ್ಟೆಲ್ಲವನ್ನೂ ನೀವು ಹೇಳಿದಂತಹವರು ಹುಬ್ಬಳ್ಳಿ ಅಂಕೋಲ ರಸ್ತೆ ಕಾಮಗಾರಿ ಕೆಲಸಕ್ಕೆ ಆರ್ಬಿಟ್ರೇಷನ್ ನಡೆದು 9 ಕೋಟಿ ರೂಪಾಯಿಗಳನ್ನು ಆರ್ಬಿಟ್ರೇಷನ್ ಅವಾರ್ಡ ಮಾಡುತ್ತೀರಿ. ಈ ಅವಾರ್ಡ ನೀವು ಒಪ್ಪಿಕೊಂಡಿದ್ದೀರಿ ಎಂದು ಕಾಣುತ್ತದೆ. ಇಷ್ಟೊಂದು ಹಣವನ್ನು ಕೊಡುವುದಕ್ಕೆ ಕಾರಣ ಏನು? ಕಳೆದ 8 -10 ವರ್ಷಗಳಲ್ಲಿ ಬೇಗ, ನೀವು ಬಂದ ಮೇಲೆ 8-10 ತಿಂಗಳಲ್ಲಿ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಆರ್ಬಿಟ್ರೇಷನ್‌ಗೆ ಎಷ್ಟು ಹಣವನ್ನು ಈ ರೀತಿ ಗುತ್ತಿಗೆದಾರರಿಗೆ ನೀವು ಕೊಟ್ಟಿದ್ದೀರಿ?

ಇದರಿಂದ ನೂರಾರು ಕೋಟಿ ರೂಪಾಯಿ ನಷ್ಟ ಆಗಲ್ಲವೇ? ಇದರ ಬಗ್ಗೆ ದಯಮಾಡಿ ವಿವರಗಳನ್ನು ತಾವು ಕೊಡಬೇಕು. ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು ಒಬ್ಬರನ್ನು ತಾಂತ್ರಿಕ ಸಲಹಾ ಸಮಿತಿಯ ಕಾರ್ಯದರ್ಶಿಯಾಗಿ ನೇಮಿಸಿಕೊಂಡಿದ್ದೀರಿ. ವಿಶೇಷವಾದ ಸಂದರ್ಭಗಳಲ್ಲಿ ಎಕ್ಸ್‌ಪರ್ಟ್ಸ್ ಇದ್ದರೆ, ಬೇರೆ ಟೆಕ್ನಿಕಲ್‌ಗೋಸ್ಕರ ನಾವು ತೆಗೆದುಕೊಳ್ಳುವುದು ವಾಡಿಕೆಯಾಗಿರುವಂಥದ್ದು. ಇವರು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿದ್ದಾಗ ಮತ್ತು ಬೇರೆ ಕಡೆ ಕೆಲಸ ಮಾಡುವಾಗ, ಕೆಲವು ಅವ್ಯವಹಾರ ಮತ್ತು ಆರ್ಬಿಟ್ರೇಷನ್ ವಿವಾದದಿಂದ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಈ ಮನುಷ್ಯ ಸ್ವಯಂ ನಿವೃತ್ತಿ ಹೊಂದಿದ್ದರು. ಆದರೆ, ನಿಮ್ಮ ಸರ್ಕಾರ ಇಂತಹ ಅಧಿಕಾರಿಯನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದೀರಿ. ಮಾಡಿಯಾಗಿದೆ. ಬೇರೆ ಯಾರು ದಕ್ಷ ಅಧಿಕಾರಿಗಳು ನಿಮ್ಮ ಇಲಾಖೆಯಲ್ಲಿ ಇರಲಿಲ್ಲವೆ ಸ್ವಾಮಿ? ಈ ಮನುಷ್ಯ ವಿಧಾನಸೌಧದಲ್ಲಿ ಗುತ್ತಿಗೆದಾರರನ್ನು ಕರೆದುಕೊಂಡು ಬಂದು ವ್ಯವಹಾರ ನಡೆಸುತ್ತಿದ್ದಾನೆ ಎಂದು ಜನ ಮಾತನಾಡುತ್ತಿದ್ದಾರೆ. ನೀವು ಅಧಿಕಾರಿಗಳು ಸಭೆ ಕರೆದು, ಕಡತ ತರಿಸಿ ನೋಡಿಕೊಂಡಿರುವಂತಹ ವ್ಯಕ್ತಿ ಈ ಕೆಲಸ ಮಾಡುತ್ತಿದ್ದಾನೆ ಎಂದು ಜನ ಇವತ್ತು ಮಾತನಾಡುವಂತಹ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನಿಮ್ಮ ಸರ್ಕಾರದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅಧಿಕಾರಿಗಳನ್ನು ಕೇಳುವವರು ಯಾರೂ ಇಲ್ಲ ಸ್ವಾಮಿ ನಾನೇನಾದರೂ ದೇವೇಗೌಡರು ಸ್ವಜನ ಪಕ್ಷಪಾತ ಮಾಡುತ್ತಿದ್ದಾರೆ ಅಂತ ಹೇಳಿ, ಆ ಪಟ್ಟಿ ಓದಿದರೆ, ಯಾರ್ಯಾರನ್ನು ನೀವು ತೆಗೆದುಕೊಂಡಿದ್ದೀರಾ, ಆ ಪಟ್ಟಿ ಕೊಟ್ಟರೆ ಮನಸ್ಸಿಗೆ ನೋವು ಆಗಬಹುದು ನಿಮಗೆ. ಬೇಡ, ನೀವು ಕೊಡಿ ಅಂದರೆ ಕೊಡುತ್ತೇನೆ. ಸ್ವಾಮಿ ಈ ಪರಿಶಿಷ್ಟ ಜಾತಿ ಅಧಿಕಾರಿಗಳಲ್ಲಿ ಕೆಎಎಸ್ ಕಿರಿಯ

ಶ್ರೇಣಿ ಅಧಿಕಾರಿ ಶಿವಪ್ರಕಾಶ್ ಇವರಿಗೆ ಮೂರು ತಿಂಗಳಲ್ಲೇ, ನಾಲ್ಕು ಸಲ ವರ್ಗಾವಣೆಆದೇಶ ಮಾಡಿದಿರಿ. ಕರ್ನಾಟಕ ಗೃಹ ಮಂಡಲಿ ವಸೂಲಿ ಅಧಿಕಾರಿಯಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾಗಿ, ಮೈಸೂರು ಮಿನರ್ವ ಮಿಲ್ಸ್‌ನ ಜನರಲ್ ಮ್ಯಾನೇಜರ್ ಆಗಿ, ವರ್ಗಾವಣೆ ಮಾಡಿ ಈ ನಿಮಿಷದವರೆಗೆ ಯಾವುದೇ ಹುದ್ದೆಗೆ ಅವರು ಹೋಗಿ ಕುಳಿತುಕೊಳ್ಳುವುದಕ್ಕೆ ಬಿಟ್ಟಿಲ್ಲ ನೀವು.

ನೇತ್ರೆಕರ್ ಎನ್ನುವವರು ಅಡಿಷನಲ್ ಎಸ್‌ಸಿ ಆಗಿ ಬೆಳಗಾಂನಲ್ಲಿ ಇದ್ದರು. ಈ ಎಸ್‌ಸಿ ಆಫೀಸರ್ ಅನ್ನು ಆರು ತಿಂಗಳಿನಲ್ಲಿ ವರ್ಗಾವಣೆ ಮಾಡಿದಿರಿ. ಬಾಬುರಾವ್ ಮುಡಬಿ ಎಂದು ಗೃಹಮಂಡಲಿ ಕಾರ್ಯದರ್ಶಿಯಾಗಿ ಉತ್ತಮ ಸೇವೆ ಮಾಡುತ್ತಿದ್ದರು. ಅಶ್ವಥನಾರಾಯಣ್‌ಗೌಡ ಎನ್ನವವರಿಗೆ ಕೊಡುವುದಕ್ಕೆ ಅವರನ್ನು ಎತ್ತಂಗಡಿ ಮಾಡಿದಿರಿ. ಕೆಲವು ಐಎಎಸ್ ಅಧಿಕಾರಿಗಳು ಹಿಂದೆ ಯಾವಾಗಲೂ ಎರಡನೇ ಬಾರಿಗೆ ಅದೇ ಅದೇ ಹುದ್ದೆಗಳಲ್ಲಿ ಇರಲಿಲ್ಲ. ಎಂ.ಆರ್. ವಿಜಯಕುಮಾರ್ ಯಾರು ಸ್ವಾಮಿ ಅವರನ್ನು ಬೆಂಗಳೂರು ನಗರ ಕಾರ್ಪೋರೇಷನ್‌ಗೆ ಎರಡನೇ ಬಾರಿಗೆ ಜಿಲ್ಲಾಧಿಕಾರಿ ಅಭಿವೃದ್ಧಿ ಇಲಾಖೆಗೆ ವರ್ಗಾವಣೆ ಮಾಡಿಕೊಂಡಿರಿ. ಅಶೋಕ್‌ಕುಮಾರ ಸುನೋಳಿ ಇವರನ್ನು ಎರಡನೇ ಬಾರಿಗೆ ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು ಎಂದು ಹೇಳಿ ವರ್ಗಾಯಿಸಿ ಮತ್ತೆ ಅದನ್ನು ರದ್ದು ಮಾಡಿದಿರಿ. ಹಲವಾರು ಜಿಲ್ಲಾ ಪಂಚಾಯಿತಿಗಳಿಗೆ ಮುಖ್ಯ ಕಾರ್ಯದರ್ಶಿಗಳನ್ನು ಮಾಡಬೇಕಾದರೆ ಉದಾಹರಣೆಗೆ ವಂದಿತಾ ಶರ್ಮ ಎನ್ನುವವರನ್ನು ಮೇ 18ನೇ ತಾರೀಖು ಕೊಡಗು ಜಿಲ್ಲಾ ಪಂಚಾಯಿತಿಗೆ ವರ್ಗಾಯಿಸಿ, ಮೇ 25ಕ್ಕೆ ಮಂಡ್ಯ ಜಿಲ್ಲಾ ಪಂಚಾಯಿತಿಗೆ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಿದಿರಿ. ಬಿ.ಹೆಚ್. ಅನಿಲ್‌ಕುಮಾರ್ ಗುಲ್ಬರ್ಗ ಮುಖ್ಯ ನಿರ್ವಹಣಾಧಿಕಾರಿ ಇವರನ್ನು ವರ್ಗಾವಣೆ ಮಾಡಿದಿರಿ. ಬಿ.ಹೆಚ್ ಅನಿಲ್‌ಕುಮಾರ್ ಗುಲ್ಬರ್ಗ ಮುಖ್ಯ ನಿರ್ವಹಣಾಧಿಕಾರಿ ಇವರನ್ನು ಕೋಲಾರ ಜಿಲ್ಲಾ ಪಂಚಾಯಿತಿಗೆ ನಾಲ್ಕೇ ದಿವಸದಲ್ಲಿ ವರ್ಗಾವಣೆ ಮಾಡಿದಿರಿ. ಬಹಳ ಪ್ರಭಾವದಿಂದ ಯಾರೋ ಸಚಿವರ ಮಗ ಕೆಎಎಸ್ ಮಾಡಿರುವಂತಹ ಬಾಲಕೃಷ್ಣಗೌಡ ಎನ್ನುವವರನ್ನು ನಮ್ಮ ಬ್ಯಾಚ್‌ಗೆ ಸೇರಿದವರು, ಅತ್ಯುತ್ತಮ ಸ್ಥಾನ ಕೊಡಬೇಕು ಎಂದು ವರ್ಗಾವಣೆ ಮಾಡುವಾಗ, ಮತ್ತು ಉನ್ನತ ಸ್ಥಾನ ಕೊಡುವಂತಹ ಪ್ರಯತ್ನ ಮಾಡಿದಿರಿ. ಶ್ರೀಕಂತಯ್ಯ ಎನ್ನುವವರು, ಸಚಿವರ ಆಪ್ತ ಕಾರ್ಯದರ್ಶಿಯಾಗಿದ್ದವರನ್ನು, ಸಚಿವರನ್ನು ಕೇಳದೆ ವರ್ಗಾವಣೆ ಮಾಡಿದಿರಿ. ಆಡೋನಿ ಸೈಯದ್ ಸಲೀಂ, ಲೋಕೋಪಯೋಗಿ ಇಲಾಖೆ ಉಪ ಕಾರ್ಯದರ್ಶಿಯಾಗಿದ್ದರು. ಅಮೀರ್ ಅನ್ನೀಸ್ ರಾಜ್ ಜಿಲ್ಲಾ ವ್ಯವಸ್ಥಾಪಕ ನೊಂದಮಿ ಇಲಾಖೆ, ಡಿ.ಬಿ. ನಾಯಕ್, ಬೆಳಗಾಂ ಕಾರ್ಪೋರೇಷನ್ ಕಮಿಷನರ್ ಇವರನ್ನು ವರ್ಗಾವಣೆ ಮಾಡಿದಿರಿ. ಗುಲ್ಬರ್ಗ ಎಸ್ಸಿ / ಎಸ್‌ಟಿ ಜಿಲ್ಲಾ ವ್ಯವಸ್ಥಾಪಕರಾಗಿದ್ದ ಹೆಚ್. ಶ್ಯಾಮರಾವ್ ಅವರನ್ನು ದಿ: 13.6.95 ರಿಂದ ಗುಲ್ಬರ್ಗ ಆಹಾರ ಮತ್ತು ನಾಗರೀಕ ಸರಬರಾಜು ಸಹಾಯಕರಾಗಿ ನೇಮಿಸಿ ದಿ: 17.6..95ರಂದು ಇದನ್ನು ರದ್ದು ಮಾಡಿದಿರಿ. ಹೀಗೆ ವರ್ಗಾವಣೆಗಳನ್ನು ಮನಸ್ಸಿಗೆ ಬಂದಂತೆ ಬೆಳಿಗ್ಗೆ ಸಾಯಂಕಾಲ ಒಂದೊಂದು ರೀತಿಯಾಗಿ ಮಾಡುತ್ತಿದ್ದೀರಿ. ಒಟ್ಟು 45 ಜನ ಅಸಿಸ್ಟೆಂಟ್ ಕಮಿಷನರ್‌ಗಳು ಇದ್ದಾರೆ. ಇವರಲ್ಲಿ 20 ಜನರನ್ನು ಒಂದೇ ಜನಾಂಗದವರನ್ನು ಮಾಡಿದಿರಿ. ನಿಮ್ಮ ಇಲಾಖೆಯಲ್ಲಿ ಇರುವಂತಹ ಎಲ್ಲಾ ಪ್ರಮುಖ ಸ್ಥಾನಗಳಿಗೂ ಒಂದೇ ಒಂದು ಜನಾಂಗದವರನ್ನು ಮಾಡಿಕೊಳ್ಳುತ್ತೀರಿ ಬಿ.ಎಲ್. ಶಂಕರ್ ಅವರು ಬಹಳ ಪ್ರಾಮಾಣಿಕರು ಅವರನ್ನು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯವರನ್ನಾಗಿ ಮಾಡಿಕೊಂಡಿರಿ. ಕೆ.ಸಿ. ರೆಡ್ಡಿ ಅವರನ್ನು ಬಾರೀ ನೀರಾವರಿ ಮತ್ತು ಸಲಹಾ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿಕೊಂಡಿರಿ. ಸಿದ್ಧಲಿಂಗೆಗೌಡರನ್ನು ನಿರ್ದೇಶಕರು,

ಜಯದೇವ ಹೃದ್ರೋಗ ಸಂಸ್ಥೆಗೆ ಹಾಕಿಕೊಂಡಿರಿ. ಡಾ|| ಅನಂತ ಅವರನ್ನು ಕಿದ್ವಾಯ್ ಸ್ಮಾರಕ ಸಂಸ್ಥೆಗೆ ಹಾಕಿದಿರಿ ವೀರೇಶ್ ಇವರನ್ನು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಉಪಕುಲಪತಿಗಳನ್ನಾಗಿ ಮಾಡಿಕೊಂಡಿರಿ. ಡಾ|| ಹೇಮರೆಡ್ಡಿ ಆರೋಗ್ಯ ಇಲಾಖೆ ನಿರ್ದೇಶಕರನ್ನು ಆಗಿ ಮಾಡಿಕೊಂಡಿರಿ. ಪಾರ್ಥಸಾರಥಿ ಇವರನ್ನು ಮುಖ್ಯಮಂತ್ರಿಗಳ ಕಾರ್ಯದರ್ಶಿಯವರನ್ನಾಗಿ ಮಾಡಿಕೊಂಡಿರಿ.. ಪಾರ್ಥಸಾರಥಿಯವರ ದರ್ಬಾರು ಬಹಳ ನಡೆಯುತ್ತಿದೆ ಎಂದು ಜನ ಮಾತನಾಡುತ್ತಾರೆ. ಕಡಿಮೆ ಮಾಡದೇ ಇದ್ದರೆ ಕಷ್ಟವಾಗಬಹುದು ಏನೋ ಎಂದು ಜನ ಮಾತನಾಡಿಕೊಳ್ಳುತ್ತಾರೆ. ಅದು ಅವರಿಗೆ ಬಿಟ್ಟಿದ್ದುದು, ನಡೆಯುತ್ತದೆ, ಮುಖ್ಯಮಂತ್ರಿಗಳಿಗೆ ಇದ್ದಾಗ ಅವರಿಗೆ ತೊಂದರೆ ಆಗುವುದಿಲ್ಲ ಎಂದು ಇಟ್ಟುಕೊಳ್ಳಿ. ಜನ ಗೊತ್ತಿಲ್ಲದೆ ಏನೇನೋ ಮಾತನಾಡುತ್ತಾರೆ ಎಂದು ಇಟ್ಟುಕೊಳ್ಳಿ.

ಇನ್ನು ಕೊಜೆಂಟ್ರಿಕ್ಸ್ ವಿಚಾರವಾಗಿ ಮಾತನಾಡೋಣ. ಜೆ.ಹೆಚ್. ಪಟೇಲ್‌ರವರಿಗೆ ಆಸಕ್ತಿ ಇದೆಯೇ? ಈ ರಾಜ್ಯದ ಜನರ ಹಿತದೃಷ್ಟಿ ಬಗ್ಗೆ ಜೆ.ಹೆಚ್. ಪಟೇಲ್‌ರವರಿಗೆ ಕಾಳಜಿ ಇರಬೇಕು. ಇಡೀ ರಾಜ್ಯದ ಮುಖ್ಯಮಂತ್ರಿಗಳಾಗಿ ಅವರಿಗೆ ಇರಬೇಕು. ಸ್ವಾಮಿ, ಈ ಕೊಜೆಂಟ್ರಿಕ್ಸ್ ಬಗ್ಗೆ ನನ್ನದೇನೂ ಅಭ್ಯಂತರ ಇಲ್ಲ. ನಿಮ್ಮಲ್ಲಿ ಪ್ರಾಮಾಣಿಕವಾಗಿ ಹೇಳಬೇಕು ಎಂದರೆ ನಮ್ಮ ರಾಜ್ಯಕ್ಕೆ ವಿದ್ಯುತ್ ಬೇಕಾದರೆ, ಕಡಿಮೆ ದರದಲ್ಲಿ ಯಾರು ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ಸಿದ್ಧರಿದ್ದಾರೆ ಅವರಿಗೆ ಉತ್ಪಾದನೆ ಮಾಡುವುದಕ್ಕೆ ಕೊಡಬೇಕು. ಅದರ ಬಗ್ಗೆ ನನ್ನದು ಎರಡು ಮಾತಿಲ್ಲ. 1992ರಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಈ ಕೊಜೆಂಟ್ರಿಕ್ಸ್‌ಗೆ ಎಂಓಯುಗೆ ಸಹಿ ಮಾಡಿದರು. ಮಂಗಳೂರಿನಲ್ಲಿ ವಿದ್ಯುತ್ ಸ್ಥಾವರವನ್ನು ಸ್ಥಾಪನೆ ಮಾಡುವುದಕ್ಕೆ. ಸನ್ಮಾನ್ಯ ವೀರಪ್ಪಮೊಯಿಲಿಯವರು 1994ರಲ್ಲಿ ಈ ಡ್ರಾಫ್ಟ್ ಜೆಪಿಎ ಪವರ್ ಪರಚೇಸ್ ಅಗ್ರಿಮೆಂಟ್ ಬಗ್ಗೆ ತಯಾರು ಮಾಡಿದ್ದರು. ನೀವು ಮಾತನಾಡುವಾಗ ಅದರ ಬಗ್ಗೆ ಬೆಳಕು ಚೆಲ್ಲಬಹುದು. ಅವರೇ ಆ ಕಾಲದಲ್ಲಿ ಅದಕ್ಕೆ ಒತ್ತಾಯ ಮಾಡಲಿಲ್ಲ. ಸಮಾಧಾನವಾಗಿದ್ದರು. ನಿಮಗೆ ಏಕೆ ಈ ತರಾತುರಿ. ಇವರು ಹಾಕಿಕೊಂಡಿದ್ದರು ನಮ್ಮ ವೀರಪ್ಪಮೊಯಿಲಿಯವರು ಮತ್ತು ಬಂಗಾರಪ್ಪನವರು ಇದು ನಮ್ಮದು ಎಂದು. ಇಲ್ಲಾ, ಇದು ಈ ದೇಶದ ಪ್ರಧಾನಿ ಅವರು ಕೇಳಿರುವಂತಹ ಒಂದು ಪ್ರಾಜೆಕ್ಟ್.

(ಈ ಹಂತದಲ್ಲಿ ಮಾನ್ಯ ಎಂ.ಎಸ್. ಪಾಟೀಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ದೇವೆಗೌಡರಿಗೆ ತುಂಬಾ ಒಳ್ಳೆಯ ಸಂಬಂಧ ಇದೆ. ಅದನ್ನು ಹೇಗಾದರೂ ಮಾಡಿ ಮಾಡಬೇಕು ಎಂದು ಒಂದು ಗಡುವು ಕೊಟ್ಟು, ತರಾತುರಿಯಲ್ಲಿ ಮಾಡುವುದಕ್ಕೆ ಹೊರಟಿರಿ. ಜನ ಮಾತನಾಡಿಕೊಳ್ಳುತ್ತಾರೆ ಕೊಜೆಂಟ್ರಿಕ್ಸ್ ಗೌಡರು ಎಂದು. ಹಳ್ಳಿಗಳಲ್ಲಿ ರೈತನ ಮಗ ಗೌಡರು ಎಂದು ಹೇಳಿದರು, ಈಗ ಕೊಜೆಂಟ್ರಿಕ್ಸ್ ಗೌಡರು ಎಂದು ಮಾತನಾಡುವಂತಹ ಪರಿಸ್ಥಿತಿಗೆ ಇವತ್ತು ಬಂದಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲರು ಹಿರಿಯರು, ಅನುಭವಿಗಳು ಇದ್ದಾರೆ, ಅವರನ್ನು ಕನ್‌ವಿನ್ಸ್ ಮಾಡಿ ಮಾತನಾಡೋಣ. ಒಂದು ಮೆಗಾವ್ಯಾಟ್ ವಿದ್ಯುತ್ ಉತ್ಪದನೆಗೆ ಖಾಸಗಿ ವಲಯದಲ್ಲಿ ಇವತ್ತು ತಗಲುವಂತಹ ವೆಚ್ಚ ಮೂರು ಕೋಟಿ ಎರಡು ಲಕ್ಷ ರೂಪಾಯಿ. ಒಂದು ಐದು ಲಕ್ಷ ಹೆಚ್ಚು ಕಡಿಮೆ ಇರಬಹುದು. ಎನ್‌ಟಿಪಿಸಿಯವರು, ಬಿಹೆಚ್‌ಇಎಲ್‌ರವರು, ಟಾಟಾದವರು ಇವರು ಯಾರಿಗಾದರೂ ಕೊಡಿ. ನಮ್ಮ ಕೆಪಿಸಿಯವರು ಇನ್ನೂ ಕಡಿಮೆ ದರದಲ್ಲಿ ಮಾಡುವುದಕ್ಕೆ

ರೆಡಿ ಇದ್ದಾರೆ ಈಗಾಗಲೇ ಮಂಗಳೂರಿನಲ್ಲಿ ಏನು ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಹೊರಟಿದ್ದಾರೆ ಅದೆಲ್ಲಾ ನಮ್ಮದೇ ವ್ಯವಸ್ಥೆ. ಅವರೇನು ದುಡ್ಡು ತರುತ್ತಾರಾ? ಭೂಮಿ ನಮ್ಮದು, ಜಲ ನಮ್ಮದು, ನೆಲ ನಮ್ಮದು. ಅವನು ಇವೆಲ್ಲಾ ಆದಮೇಲೆ ವಿದ್ಯುತ್ ಉತ್ಪಾದನೆ ಆಗುವ ಸಮಯಕ್ಕೆ ಒಂದು 286 ಕೋಟಿ ರೂಪಾಯಿ ತೊಡಗಿಸುತ್ತೇನೆ ಎಂದು ಹೇಳಿದ್ದಾನೆ. ರಾಯಚೂರು ಥರ್ಮಲ್ ಪವರ್ ಸ್ಟೇಷನ್ ಒಂದು ಮೆಗಾವ್ಯಾಟ್‌ಗೆ ಎರಡರಿಂದ 2.5 ಕೋಟಿ ರೂಪಾಯಿಯ ವೆಚ್ಚದಲ್ಲಿ ಮುಂದಿನ ಹಂತದಲ್ಲಿ ಪ್ರಾರಂಭ ಮಾಡುವವರಿದ್ದಾರೆ. ಆದರೆ ಅದೇ ಒಂದು ಮೆಗಾವ್ಯಾಟ್‌ಗೆ 5 ಕೋಟಿ ರೂಪಾಯಿ ಬರುತ್ತದೆ. ಒಂದು ಸಾವಿರ ಮೆಗಾವ್ಯಾಟ್‌ಗೆ 5088 ಕೋಟಿ ರೂಪಾಯಿ ಆಯಿತು. ನಾವು ಬಿಜೆಪಿಯವರು ಕೂಗಿದ ಮೇಲೆ ಬುದ್ಧಿ ಇಲ್ಲದೆ ಚೀರಿದ ಮೇಲೆ ಈಗ ಅದು 4386 ಕೋಟಿ ರೂಪಾಯಿಗೆ ಇಳಿದಿದೆ ಎಂದು ನಾನು ಕೇಳಿದ್ದೇನೆ. ಹೀಗಿದ್ದರೂ ಸಹ ನಮ್ಮವರಿಗೆ ಹೋಲಿಕೆ ಮಾಡಿಕೊಂಡ್ರ ಸುಮಾರು 702 ಕೋಟಿ ರೂಪಾಯಿ ಜಾಸ್ತಿಯಾಗುತ್ತದೆ. ಸಾವಿರ ಮೆಗಾವ್ಯಾಟ್‌ 4385 ಕೋಟಿ ರೂಪಾಯಿ ಎಂದು ನೀವು ಹೇಳಿದರೆ ಒಂದು ಮೆಗಾವ್ಯಾಟ್‌ಗೆ 4 ಕೋಟಿ 3 ಲಕ್ಷ ರೂಪಾಯಿ ಆಯಿತು. ಎಂದರೆ ಎನ್‌ಟಿಪಿಸಿ, ಬಿಹೆಚ್‌ಇಎಲ್, ಟಾಟಾ ಇವರೆಲ್ಲರಿಗಿಂತ ಒಂದು ಮೆಗಾವ್ಯಾಟ್‌ಗೆ ಒಂದು ಕೋಟಿ ಒಂದು ಲಕ್ಷ ರೂಪಾಯಿ ಜಾಸ್ತಿಯಾಯಿತು. ಎಷ್ಟು ಆಯಿತು ಸ್ವಾಮಿ, ಒಂದು ಸಾವಿರ ಮೆಗಾವ್ಯಾಟ್ ಎಂದರೆ ಒಂದು ಸಾವಿರ ನೂರು ಕೋಟಿ ರೂಪಾಯಿ ಈ ನಾಡಿನ ಜನರಿಗೆ ಹೆಚ್ಚು ತೆರಿಗೆ ಬೀಳುವಂತಹ ಈ ವಿದ್ಯುತ್ ಉತ್ಪನ್ನ ಮಾಡುವುದರ ಬಗ್ಗೆ ಪ್ರಧಾನಿಗೆ ಗಡುವು ಕೊಟ್ಟು, ತರಾತುರಿಯಲ್ಲಿ ಮಾಡುವಂತಹ ಉದ್ದೇಶ ಏನು? ಒಂದು ಜವಾಬ್ದಾರಿ ಸ್ಥಾನದಲ್ಲಿ ನೀವು ಕುಳಿತುಕೊಂಡು, ಈ ನಾಡಿನ ಜನರಿಗೆ ಕರೆ ಕೊಡುತ್ತೀರ? ಯಾವುದೇ ಹಣ ಕೈ ಬದಲಾವಣೆಯಾಗಿಲ್ಲ, ನಾನು ಈ ಎಂಓಯು ನೋಡಿಲ್ಲ, ಸಿಪಿಎ ನೋಡಿಲ್ಲ. ಆದರೆ ಇದಕ್ಕೆ ಮಂಜೂರಾತಿ ನೀಡಬೇಕು ಎಂದು ಗಡುವು ಕೊಡುತ್ತೀರಿ. ಜವಾಬ್ದಾರಿ ಇಲ್ಲವೇ ಪಟೇಲ್ ಸಾಹೇಬರೆ? ರಾಜ್ಯದ ಮುಖ್ಯಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾಗಿ ಇಲ್ಲಿ ಕುಳಿತಿರುವಂತಹ ನಾವು ಪ್ರಾರಂಭದಲ್ಲಿ ಎಂಓಯು ಏನು, ಜಿಪಿಎ ಏನು ಎಂದು ಹೇಳಿ ಸ್ವಾಮಿ? ನೀವು ಏನು ಮಾಡುವುದಕ್ಕೆ ಹೊರಟ್ಟಿದ್ದೀರಿ. ಈ ನಾಡಿನ ಜನ ಕೊಡುವಂತಹ ತೆರಿಗೆ ಹಣ ಎಂದು ಹೇಳಿ ನಾವು ನಿಮ್ಮನ್ನು ಕೇಳಿದಾಗ ಅದನ್ನು ಯಾರಿಗೂ ತಿಳಿಸದೆ, ಇಲ್ಲಾ, ಎಂಓಯು ಸಹಿ ಬೇಕು, ಜಿಪಿಎ ಸಹಿ ಆಗಬೇಕು, ಮುಗಿದು ಹೋಗಬೇಕು ಎಂದು ಎಲ್ಲಾ ವ್ಯವಹಾರ ಮಾಡಿದಿರಿ. ಅವನು ಹೇಳಿರುವುದು ಏನು ಈ ವಿದ್ಯುತ್ ಉತ್ಪಾದನೆ ಆದಮೇಲೆ 286 ಕೋಟಿ ರೂಪಾಯಿ ನಾನು ತೊಡಗಿಸುತ್ತೇನೆ ಎಂದು ಹೇಳಿದ್ದಾನೆ. ಈ ಪ್ರಾಜೆಕ್ಟ್‌ನಲ್ಲಿ ಉಳಿದ 93 ಭಾಗ ಹಣವನ್ನು ಕರ್ನಾಟಕ ಸರ್ಕಾರದ ಐಡಿಬಿಐ ನಿಂದ ತಾವೇ ಕೊಡುವುದಕ್ಕೆ ಹೊರಟಿದ್ದೇವೆ. ಇಲ್ಲಿ ಹೊಸ ತಂತ್ರಜ್ಞಾನವನ್ನು ಏನು ಹೊಸದಾಗಿ ಮಾಡುತ್ತಿಲ್ಲ, ಎನ್‌ಟಿಸಿಸಿ ಅಥವಾ ಕೆಪಿಸಿಗೆ ಇಲ್ಲದ ಈ ಸೌಕರ್ಯ್ಯ ಈ ಸೌಲಭ್ಯ ಕೊಜೆಂಟ್ರಿಕ್ಸ್‌ಗೆ ಏಕೆ ಕೊಡುವುದಕ್ಕೆ ಹೊರಟ್ಟಿದ್ದೀರಿ? ಜನಕ್ಕೆ ಅನುಮಾನ ಇರುವುದು ಈ ಸರ್ಕಾರಕ್ಕೆ ಜನರ ಹಿತ ಇಲ್ಲ, ಏನೋ ವ್ಯತ್ಯಾಸ ಆಗಬಹುದು. ಏನೋ ಲಾಭಕ್ಕಾಗಿ ಮಾಡಿರುವುದು ಎಂದು ಸಂಶಯ ಪಡುತ್ತಿದ್ದಾರೆ. ಶ್ರೀ ಜೆ.ಹೆಚ್. ಪಟೇಲರು, ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಪೇರೆಯವರಿಗೆ ಸುಮಾರು 1100 ಕೋಟಿ ರೂಪಾಯಿ ಹೆಚ್ಚು ಕೊಡುವಂತಹ ಈ ವ್ಯವಹಾರದಲ್ಲಿ ಕೈ ಅದಲು ಬದಲು ಆಗುತ್ತದೆ ಎನ್ನುವಂತಹ ಅಪನಂಬಿಕೆ ನಿಮ್ಮ ಮೇಲೆ ಬರಬಾರದು. ಅದಕ್ಕಾಗಿ ಇವತ್ತು ನಾನು ಒತ್ತಾಯ ಮಾಡುತ್ತಿದ್ದೇನೆ. ಆಸಕ್ತಿ

ಏನು ನೀವು ತೋರಿಸಿದ್ದೀರಲ್ಲ, ಈಗ ಹೇಳುತ್ತೀರಿ ಸ್ವಾಮಿ, 31.7.95 ಮುಗಿದು ಹೋಯಿತು. ನಿಮಗೆ ಹಾಗೂ ಪ್ರಧಾನಿಯವರಿಗೆ ಇಷ್ಟು ಒಳ್ಳೆಯ ಸಂಬಂಧ ಇದ್ದರೂ ಅದು ಮಂಜೂರಾತಿಯಾಗಲಿಲ್ಲ. ನೀವು ಗುಡುಗಿದಿರಿ. ಅದನ್ನು ಕೈ ಬಿಡಿ. ಅದರ ಮೇಲೆ ಏಕೆ ಆಸಕ್ತಿ. ಏಕೆ ಇನ್ನು ಕೊಜೆಂಟ್ರಿಕ್ಸ್ ಎಂದು ಹೇಳುತ್ತೀರಿ. ಏಕೆ ನೀವು ದೇಶ ವಿದೇಶಗಳಿಗೆ ಹೋದಾಗ ಇದೇ ಟೀಕೆ ಟಿಪ್ಪಣಿಗಳನ್ನು ಮಾಡಿಕೊಂಡು ಕೊಜೆಂಟ್ರಿಕ್ಸ್ ಹೆಸರು ಹೇಳಿಕೊಂಡು ಕುಳಿತಿದ್ದೀರಿ. ರಾಜ್ಯದ ಹಿತದೃಷ್ಟಿಯಿಂದ ದಯಮಾಡಿ ಹೇಳಿ ಸ್ವಾಮಿ. ಕೊಜೆಂಟ್ರಿಕ್ಸ್ ಏನು ಹೇಳಿ. ಈ ಕಂಪನಿಯವರಿಂದ ನಾನು ವಿವರವನ್ನು ಓದುವುದಕ್ಕೆ ತರಿಸಿಕೊಂಡಿದ್ದೇನೆ.

ನಿಮಗೂ ಶಾಕ್ ಹೊಡೆಸಿಕೊಂಡು ಎಲ್ಲದರಲ್ಲೂ ಅನುಭವ ಇದೆ. ಸ್ವಾಮಿ ಕಳೆದ ಹನ್ನೊಂದು ವರ್ಷಗಳಿಂದ ಅತಿ ಹೆಚ್ಚೆಂದರೆ ಇದುವರೆಗೆ ಮಾಡಿರುವಂತಹ ಅತೀ ದೊಡ್ಡ ಯೋಜನೆ ಎಂದರೆ 200 ಮೆಗಾವ್ಯಾಟ್‌ನ ಒಂದು ಕಲ್ಲಿದ್ದಲು ಯೋಜನೆಯನ್ನು ಈ ಕಂಪನಿಯವರು ರಿಚಿಮಂಟ್ ವರ್ಜಿನಿಯಾ ಮತ್ತು ಯುಎಸ್‌ಎಗಳಲ್ಲಿ ಮಾಡಿದ್ದಾರೆ. ಇವರು ಸಾವಿರ ಮೆಗಾವ್ಯಾಟ್‌ನ ಯೋಜನೆ ಸ್ಥಾಪನೆ ಮಾಡುವುದಕ್ಕೆ ಅನುಭವ ಇದೆಯೇ ಸ್ವಾಮಿ?

5.20 ಪಿ.ಎಂ.

ಬಿ.ಹೆಚ್.ಇ.ಎಲ್‌ನವರು ಇದುವರೆಗೂ 60 ಸಾವಿರ ಮೆಗವ್ಯಾಟ್‌ನ ವಿದ್ಯುತ್ ಸ್ಥಾವರಗಳನ್ನು ಇಲ್ಲಿಯವರೆಗೆ ಸ್ಥಾಪನೆ ಮಾಡಿದ್ದಾರೆ. 25 ಯೋಜನೆಗಳನ್ನು ಹೊರ ದೇಶದಲ್ಲೂ ತೆಗೆದುಕೊಂಡಿದ್ದಾರೆ. ಬಿ.ಹೆಚ್.ಇ.ಎಲ್.ನವರಿಗೆ ಉತ್ಪಾದನೆ ಮಾಡುವುದಕ್ಕೆ ಅವರಿಗೆ ಏಕೆ ಅವಕಾಶ ಕೊಡುವುದಿಲ್ಲ, ಇದಕ್ಕೆ ಕಾರಣವೇನು? ತಮಗೆ ಅಂಕಿಅಂಶಗಳನ್ನು ಕೊಡುವುದಾದರೆ 1950 ಮುಂಚೆ ಈ ಮಹಾತ್ಮಗಾಂಧಿಸ್ಥಾವರದಲ್ಲಿ 1 ಮೆಗವಾಟ್‌ಗೆ 5 ರಿಂದ 8 ಲಕ್ಷ ರೂ.ಗಳು ಅವತ್ತಿನ ಕಾಲದಲ್ಲಿತ್ತು. 1962-63ರಲ್ಲಿ ಲಿಂಗನಮಕ್ಕಿಯಲ್ಲಿ ಮಾಡಿದಾಗ 1 ಮೆಗವಾಟ್‌ಗೆ 15-16 ಲಕ್ಷ ರೂ.ಗಳ ಖರ್ಚು ಬಂತು. 1985-86ರಲ್ಲಿ 35 ಲಕ್ಷ ರೂ.ಗಳಾಯಿತು. 7ನೇ ಯೋಜನೆಯಲ್ಲಿ ವರಾಹಿ ಯೋಜನೆಯನ್ನು ಮಾಡುವಂತಹ ಸಂದರ್ಭದಲ್ಲಿ 1 ಕೋಟಿ ರೂ. ಗಳಾಯಿತು. ರಾಯಚೂರುನಲ್ಲಿ ಥರ್ಮಲ್ ಘಟಕಗಳನ್ನು ಮಾಡುವಂತಹ ಕಾಲದಲ್ಲಿ ಅದು 1 ಕೋಟಿ ರೂ.ಗಳಾಗುತ್ತಾ ಬಂತು. 4ನೇ ಘಟಕಕ್ಕೆ ನೀವು ಶುರು ಮಾಡಿದಾಗ 2.2 ಕೋಟಿ ರೂ.ಗಳು ಇವತ್ತು 1 ಮೆಗಾವಾಟ್ ವಿದ್ಯುತ್‌ಗೆ ಬಂತು. ಬಹುಶಃ ಇಡೀ ದೇಶದಲ್ಲಿ ಅವರೇಜ್ 1 ಮೆಗಾವಾಟ್‌ಗೆ 3 ಕೋಟಿ 2 ಲಕ್ಷ, 3 ಕೋಟಿ, 5 ಲಕ್ಷ, 3 ಕೋಟಿ 10 ಲಕ್ಷ ಇದು 1 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಈಗ ಆಗುತ್ತಿರುವ ಖರ್ಚು. ಇವತ್ತು ಕೊಜೆಂಟ್ರಿಕ್ಸ್‌ಗೆ 4.3 ಕೋಟಿ ಮಾಡಿದರೂ ಸಹ ಸುಮಾರು ಸಾವಿರದ ನೂರು ಕೋಟಿ ರೂ.ಗಳ ಹೆಚ್ಚು ಹಣವನ್ನು ಕೊಟ್ಟಂತೆ ಆಗುತ್ತದೆ. ಅದುದರಿಂದ ನಾನು ಸಲಹೆ ಕೊಡುವುದು ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳಲಿಚ್ಛಿಸುತ್ತೇನೆ. ದಯಮಾಡಿ ಈ ಎಲ್ಲಾ ಸವಲತ್ತುಗಳನ್ನು ನೀವು ಏನು ಕೊಡುತ್ತೀರೋ ಅದನ್ನು ಎನ್.ಕೆ.ಪಿ.ಸಿ. ಅಥವಾ ಕೆ.ಪಿ.ಸಿ.ಯವರಿಗೆ ಕೊಟ್ಟು, ಉತ್ಪಾದನೆಯನ್ನು ಮಾಡುವುದಕ್ಕೆ ವಿಶೇಷವಾದ ಗಮನ ಕೊಡಬೇಕಾದಂತಹ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡದೇ, ಕುಳಿತರೆ, ನಿಂತರೆ ಮಹಾತ್ಮಗಾಂಧಿಯವರು ಸ್ವದೇಶಿ ಸ್ವದೇಶಿ ಬಡಕೊಂಡರು. ಹೋರಾಟ ಮಾಡಿದರು, ನೀವು ವಿದೇಶಿ ವಿದೇಶಿ ಎಂದು ಸ್ವಪ್ನದಲ್ಲಿ, ಎದ್ದ ತಕ್ಷಣ ಕೊಜೆಂಟ್ರಿಕ್ಸ್, ಕೊಜೆಂಟ್ರಿಕ್ಸ್ ಇದು ಇದೆಯಲ್ಲಾ ಇದು ಈ ರಾಜ್ಯದ ಜನರಿಗೆ ನಾಳೆ ಶಾಪವಾಗುವುದಿದೆ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಬೇರೆ ಅನೇಕ ಜನರು ಇದ್ದಾರೆ.

ಅವರ ಶರತ್ತುಗಳು ಏನು, ಎಷ್ಟಕ್ಕೆ ಉತ್ಪನ್ನ ಮಾಡುವುದಕ್ಕೆ ಸಿದ್ಧರಿದ್ದಾರೆ, ಚರ್ಚೆ ಮಾಡಿ ಗ್ಲೋಬಲ್ ಟೆಂಡರ್ ಕರೆಯಿರಿ. ಇದು ನಮ್ಮ ಮನೆಯ ವ್ಯವಹಾರ. ಯಾರನ್ನೋ ಕರೆದು ವ್ಯವಸ್ಥೆ ಮಾಡುವುದು, ನೀನು ಅಷ್ಟು ಮಾಡು, ನಾನು ಇಷ್ಟು ಮಾಡುತ್ತೇನೆ ಎನ್ನುವುದು ಇದು ಆಗುವುದಿಲ್ಲ ಇದನ್ನು ಆಗುವುದಕ್ಕೆ ಬಿಡುವುದಿಲ್ಲ. ದಯಮಾಡಿ ಕೊಜೆಂಟ್ರಿಕ್ಸ್ ಹುಚ್ಚು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಏನಿದೆ ಇದನ್ನು ದಯಮಾಡಿ ಕೈ ಬಿಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಇನ್ನು ಬರಗಾಲದ ಬಗ್ಗೆ ನಾನು ನಿಮ್ಮನ್ನು ಕೇಳಿದ್ದೇನೆ. ನೀವು ನಮ್ಮನ್ನು ಅಪಹಾಸ್ಯ ಮಾಡಿಬಿಟ್ಟಿರಿ. 3ನೇ ಜುಲೈ 1995ರಂದು ನಿಮ್ಮ ಮನೆಯ ಮುಂದೆ ಧರಣಿ ಕುಳಿತುಕೊಂಡು ನಮ್ಮ ರಾಜ್ಯದ ಸ್ಥಿತಿಗತಿಗತಿಗಳು ಹೀಗೆ ಆಗಿದೆ ದಯಮಾಡಿ ಸರಿ ಮಾಡಿ ಎಂದು ವಿನಂತಿ ಮಾಡಿಕೊಂಡೆವು. ನಾವು ಬರಗಾಲದ ಬಗ್ಗೆ ವಾಸ್ತವ ಸ್ಥಿತಿಯನ್ನು ಕೊಟ್ಟೆವು. ಸನ್ಮಾನ್ಯ ಅಧ್ಯಕ್ಷರಿಗೆ ಜುಲೈ 5 1995ರಲ್ಲಿ ನಾವು ಇದರ ಬಗ್ಗೆ ಕಳುಹಿಸಿಕೊಟ್ಟೆವು. ಮಾನ್ಯ ರಾಜ್ಯಪಾಲರಿಗೂ ಕಳುಹಿಸಿಕೊಟ್ಟೆವು. ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದವು. ತಾವು ಏನು ಹೇಳಿದ್ದೀರಿ. ಈ ರಾಜ್ಯದ ಇತಿಹಾಸದಲ್ಲೇ ಒಂದು ವಿರೋಧಪಕ್ಷ ದುಡ್ಡು ಕೇಳಿಕೊಂಡು ಪ್ರಧಾನಮಂತ್ರಿಗಳ ಹತ್ತಿರ ಹೋದದ್ದು ಕಂಡಿರಲಿಲ್ಲ ಎಂದು ದೊಡ್ಡ ಅಪರಾಧ ಅದು ಎಂದು ಬಹಳ ಹಗುರವಾಗಿ ನಮ್ಮ ಬಗ್ಗೆ ಮಾತನಾಡಿದ್ದೀರಿ. ಅದರಲ್ಲಿ ಏನು ತಪ್ಪು ಇದೆ. ನಾವು ಏನಾದರೂ ನಾಳೆ ಅಪಾದನೆ ಬರಬಹುದೆಂದು ಸನ್ಮಾನ್ಯ ಅಧ್ಯಕ್ಷರಿಗೂ ನಿಮಗೆ ಎಲ್ಲರಿಗೂ ಮನವಿ ಕಾಪಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ಒಂದು ಶಬ್ದ ಈ ರಾಜ್ಯದ ಹಿತಕ್ಕೆ ಧಕ್ಕೆ ಬರುವಂತಹ ಮಾತನ್ನು ಆಡಲಿಲ್ಲ. ಒಂದು ಅಧಿಕೃತ ವಿರೋಧಪಕ್ಷವಾಗಿ ಈ ರಾಜ್ಯ ಸರ್ಕಾರಕ್ಕೆ ಸಹಕಾರ ಕೊಡುವ ದೃಷ್ಟಿಯಿಂದ ನಾವು ಹೋದಾಗ, ಈ ರೀತಿ ಹಗುರವಾಗಿ ನೀವು ಹೇಳಿಕೆಯನ್ನು ಕೊಟ್ಟಿರುವಂಥಾದ್ದು ದೆಹಲಿಯಲ್ಲಿದ್ದಾಗ ಪತ್ರಿಕೆಯಲ್ಲಿ ಬರುತ್ತೆ ಎನ್ನುವುದಾದರೆ ಈ ಬಿ.ಜೆ.ಪಿ. ಎಂದು ಕರೆಯುವ ವಿರೋಧ ಪಕ್ಷ ಇಲ್ಲಿ ಕುಳಿತುಕೊಂಡಿರುವಂತಹ ವಿರೋಧ ಪಕ್ಷ ಬೇರೆ ರೀತಿಯ ವಿರೋಧಪಕ್ಷವೆಂದು ಭಾವಿಸಬೇಡಿ. ಏನು ಒಂದು ವಿರೋಧಪಕ್ಷದಲ್ಲಿ ಕೆಲಸ ಮಾಡುವವರ ಬಗ್ಗೆ ಒಂದು ಕಳಂಕವಿತ್ತು, ವಿರೋಧಪಕ್ಷದಲ್ಲಿ ಇದ್ದಂತಹ ನಾಯಕರ ಬಗ್ಗೆ ಯಾವುದೇ ಪಕ್ಷದವರು ಆರೋಪ ಪ್ರತ್ಯಾರೋಪ ಮಾಡುವಂಥಾದ್ದು ಪತ್ರಿಕೆಗಳಲ್ಲಿ ಓದುವಂಥ ಪರಿಸ್ಥಿತಿ ಬಂದಿತ್ತು. ಆಡಳಿತ ಪಕ್ಷದವರು ಏನಾದರೂ ಶಾಮೀಲಾಗಿದ್ದಾರೆ ಎನ್ನುವಂತಹ ಒಂದು ಅಪಾದನೆಯನ್ನು ಮಾಡುವ ಕೆಲವು ಸಂದರ್ಭದಲ್ಲಿ ಏನು ಬಂದಿತ್ತು.

ಅದಕ್ಕೆ ಹೊರತಾಗಿ ಒಂದಷ್ಟು ಪ್ರಾಮಾಣಿಕವಾಗಿ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಂದು ವಿರೋಧಪಕ್ಷವಾಗಿ ನಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ನಿಮಗೆ ಸೈರಣೆ ಇಲ್ಲ, ಸಿಟ್ಟು ಬರುತ್ತದೆ. ಅಕ್ರೋಶ ವ್ಯಕ್ತ ಪಡಿಸುತ್ತಿರಿ, ಬಹುಪರಾಕ್ ಎಂದು ನಿಮ್ಮ ಹಿಂದೆ ಸುತ್ತಬೇಕೆಂದು ಯೋಚನೆ ಮಾಡುವಂತಹ ಪ್ರವೃತ್ತಿ ಏನಾಗಿದೆ, ಅದು ನಿಮಗೆ ಶೋಭೆ ತರುವಂತಹ ಮಾತಲ್ಲ ಎಂದು ಆಈ ಸಂದರ್ಭದಲ್ಲಿ ಹೇಳುತ್ತೇನೆ. ಸ್ವಾಮಿ ಇದು ಧರ್ಮಾನಾ, ನಾವು ಈ ಜಮೀನಿನ ಹಗರಣ ಬಗ್ಗೆ ನಾವು ಮಾತನಾಡಿದರೆ ಮಾನ್ಯ ಜಾಫರ್‌ಷರೀಫ್‌ರವರು ರೈಲ್ವೆ ಇಲಾಖೆಯಲ್ಲಿ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ವಿನಾ ಕಾರಣ ಗೊತ್ತಿದ್ದೋ ಗೊತ್ತಿಲ್ಲದೆಯೋ ನಿಮ್ಮ ಹತ್ತಿರ ದಾಖಲೆ ಇರಬಹುದು. ರಾಜಕಾರಣಕ್ಕೋ, ಮತ್ತೊಂದಕ್ಕೋ ಸತ್ಯನೂ ಇರಬಹುದು ಅಲ್ಲದೆಯೂ ಇರಬಹುದು. ಅವರು ಏನು ಹೇಳಿದರು ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಬಿಡಿ ನನ್ನ ಬಗ್ಗೆ ಪದೇ ಪದೇ ಆರೋಪ ಮಾಡುತ್ತಿದ್ದಾರೆ. ಇದು ಸರಿಯಲ್ಲ ನಾನು ಪ್ರಾಮಾಣಿಕನೊ ಅಲ್ಲವೊ ಎಂಬುದಕ್ಕೆ ಸಿ.ಬಿ.ಐ. ತನಿಖೆಯಾಗಬೇಕೆಂದುಪ ಹೇಳಿದ ಮೇಲೂ ಸಹ ಕ್ಯಾಬಿನೆಟ್ ಸಬ್ ಕಮಿಟಿ ಓಪನ್ ಮಾಡುತ್ತಿರಿ. ಮಂತ್ರಿಗಳು

ಆಗುತ್ತಾರೆ. ಅವರು ವರದಿಯನ್ನು ಕೊಡುತ್ತಾರೆ. ಹಿಂದೆ ಕೊಡಲಿಲ್ಲ. ಅದು ಏನೂ ಆಗಲಿಲ್ಲ. ಎರಡನೆಯವರು ಇನ್ನೊಂದು ಸರ್ಕಾರದವರು ಮಾಡಿದರು ಅವರು ವರದಿಯನ್ನು ಕೊಡಲಿಲ್ಲ. ಡಿವಿಜನಲ್ ಕಮೀಷನರ್ ವರದಿಯನ್ನು ಕೊಟ್ಟರು ರಾಜಶೇಖರ ಮೂರ್ತಿಯವರು ಮನೆಗೆ ಹೋಗಬೇಕಾಯಿತು. ಇಲಾಖಾ ತನಿಖೆ ನೇಮಕ ಮಾಡುವುದಕ್ಕೆ ಅವರನ್ನು ಬೇಡವೆಂದು ಚೀಫ್ ಸೆಕ್ರೆಟರಿ ಲಿನ್ ಅವರನ್ನು ಮಾಡಿದ್ದೀರಿ ಅವರು ವರದಿಯನ್ನು ಕೊಟ್ಟರು ಅದು ನಿಮ್ಮ ಹತ್ತಿರ ಇಲ್ಲವೆ? ನಾನು ನಿಮ್ಮನ್ನು ಕೇಳುತ್ತೇನೆ. ಇದು ಯಾವ ಹೊಸ ಪರಂಪರೆ ನಿಮ್ಮದು? ಯಾವ ಹೊಸ ಸಂಸ್ಕೃತಿ ಕೇಂದ್ರದ ಒಬ್ಬ ಸಚಿವರ ಬಗ್ಗೆ ಈ ರೀತಿ ಭೂ ಹಗರಣ ಆರೋಪ ಬಂದಾಗ ಸಿ.ಬಿ.ಐ. ತನಿಖೆಗೆ ನಾನು ಮುಂದೆ ಬರುತ್ತೇನೆಂದು ಅವರು ಹೇಳಿದಾಗ, ನಿಮ್ಮ ಕೈ ತೊಳೆದುಕೊಂಡು ಪ್ರಾಮಾಣಿಕವಾಗಿ ಸಿ.ಬಿ.ಐ. ತನಿಖೆ ತಾವು ವ್ಯವಸ್ಥೆ ಮಾಡಬೇಕು. ಇಲ್ಲಿದಿದ್ದರೆ. ವರದಿಯನ್ನು ನಾನು ಕೊಡಲೆ ಸ್ವಾಮಿ, ನನಗೆ ಗೊತ್ತಿಲ್ಲ., ನಿಮ್ಮ ದಾಖಲೆಗಳು ಎಲ್ಲಿ ಇದೆ ಅಂಥಾ ನಿಮಗೆ ಬೇಕಾದರೆ ನಿಮ್ಮ ಡಿವಿಜನಲ್ ಕಮೀಷನರ್, ನಿಮ್ಮ ಲಿನ್ ಕೊಟ್ಟಿರುವಂಥ ವರದಿ ಬೇಕೆಂದರೆ ನಾನು ಕೊಡುತ್ತೇನೆ. ನೀವು ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ. ಏಕೆ ತೆಗೆದುಕೊಳ್ಳುವುದಿಲ್ಲ. ಇನ್ನೊಬ್ಬ ಸಚಿವರನ್ನು ಏಕೆ ನೇಮಕ ಮಾಡುತ್ತೀರಿ. ಜಾಲಪ್ಪನವರನ್ನು ಏಕೆ ನೇಮಕ ಮಾಡಿದ್ದೀರಿ. ಎಷ್ಟು ತಿಂಗಳು ಬೇಕು. ಈ ನಾಡಿನ ಜನರು ಅವ್ಯವಹಾರ ಏನಾದರೂ ನಡೆದರೆ. ಭ್ರಷ್ಟಚಾರ ನಡೆದರೆ. ಸರ್ಕಾರದ ಖಜಾನೆ ಲೂಟಿ ಮಾಡುವಂತಹ ಹಗರಣಗಳು ನಡೆದರೆ, ಅವರಿಗೆ ರಕ್ಷಣೆ ಕೊಡುವುದಿಲ್ಲವೆಂದು ನಂಬಿ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ನಾನು ಬಡುಕೊಂಡೆ ರಾಜ್ಯದ ಜನತೆಯನ್ನು ಮುಂದೆ ಯಾರಿಗೆ ಅಧಿಕಾರವನ್ನು ಕೊಡುವುದಕ್ಕೆ ಹೊರಟಿದ್ದಿರಿ, ಹಿಂದೆ 1983ರಲ್ಲಿ ಇವರು ಅಧಿಕಾರದಲ್ಲಿದ್ದಾಗ ನೋಡಿದ್ದಿರಿ, ಗೊತ್ತಿದ್ದೋ, ಗೊತ್ತಿಲ್ಲದೆಯೋ ಕೆಲವು ತಪ್ಪುಗಳು ಆಗಿರಬಹುದು. ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ, ನೀನು, ಏನು ಮಾಡಿದೆ ನಾನು ಏನು ಮಾಡಿದೆ. ಇದು ಆಗಬಹುದು ಬೇಡ್ರಪ್ಪಾ., ಬೇಡ್ರೋ ಅಣ್ಣಾ, ನಿಮಗೆ ಕೈ ಮುಗಿಯುತ್ತೇನೆ. ಒಂದು ಸಾರಿ ನಮಗೆ ಅಧಿಕಾರ ಕೊಡಿ. ಈ ಲೂಟಿ ಮಾಡಿರುವಂತಹ ಫೈಲ್‌ಗಳನ್ನು ತೆಗೆಯುತ್ತೇವೆ. ಅವರನ್ನು ಜೈಲಿಗೆ ಕಳುಹಿಸುತ್ತೇವೆ. ಸಾವಿರಾರು ಕೋಟಿ ರೂ.ಗಳನ್ನು ಲೂಟಿ ಮಾಡಿರುವಂತಹ ಸಂಗತಿಗಳನ್ನು ಹೊರ ತರುತ್ತೇವೆ. ಎನ್ನುವಂತಹ ಪ್ರಯತ್ನವನ್ನು ಮಾಡಿದೇವು. ಜನರು ನಂಬದೇ ನಿಮಗೆ ಓಟು ಕೊಟ್ಟು ಜುಲೈ 2ನೇ ತಾರೀಖಿನಿಂದ 31ನೇ ತಾರೀಖು ಹೋದಾಗ ಜನರು ಕಣ್ಣೀರು ಹಾಕುತ್ತಾರೆ. ಯಡಿಯೂರಪ್ಪನವರೆ. ಎಂತಹ ಅಪರಾಧ ಮಾಡಿಬಿಟ್ಟೆವು.ಎಂಥ ತಪ್ಪು ಮಾಡಿಬಿಟ್ಟೆವು. ಎಂಥವರನ್ನು ಅಧಿಕಾರಕ್ಕೆ ತಂದು ಬಿಟ್ಟೆವು ಎಂದು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಹೊತ್ತಿನಿಂದ, ನಿನ್ನೆಯಿಂದ ಬಹಳ ವಿಶ್ಲೇಷಣೆ ಮಾಡಿಕೊಂಡು ಬೇರೆ ಬೇರೆ ವಿಚಾರಗಳನ್ನು ಮಾತನಾಡುತ್ತಾ ಇದ್ದಾರೆ. ಈಗ ಪ್ರಸ್ತಾಪ ಮಾಡುತ್ತಾ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರೆ. ಅದು ನಮಗೆ ಸಂಬಂಧಪಟ್ಟ ವಿಚಾರಗಳಾಗಿರುವುದರಿಂದ. ತಮ್ಮ ಹತ್ತಿರ ಸ್ಪಷ್ಟೀಕರಣ ತೆಗೆದುಕೊಳ್ಳಬೇಕು. ಮೊದಲನೆಯದಾಗಿ ಮಾನ್ಯ ರಾಜಶೇಖರ ಮೂರ್ತಿಯವರು ಮಾನ್ಯ ಜಾಫರ್‌ಷರೀಫ್ ಅವರ ಮೇಲೆ ಏನೋ ವರದಿಯನ್ನು ಕೊಟ್ಟಿದ್ದಕ್ಕೆ ಮನೆಗೆ ಹೋಗಬೇಕಾಯಿತು ಎಂದು ದಯಮಾಡಿ ತಮಗೆ ರಾಜಶೇಖರಮೂರ್ತಿಯವರ ಮೇಲೆ ಮಮತೆ ಇದ್ದದ್ದಕ್ಕಾಗಿ. ನಮ್ಮ ಪಕ್ಷದ ಮೇಲೆ ವಿಶೇಷವಾದ ಮಮತೆ ಇದ್ದದ್ದಕ್ಕಾಗಿ ಅಭಿನಂದನೆಗಳು., ಆದರ ಜೊತೆಯಲ್ಲಿ ಹಿಸ್ಟಾರಿಕಲಿ ಏನು ನಡೆದಿದೆ ಅದು ಮಾಡಬೇಕು. ವರದಿ ಕೊಟ್ಟಿದ್ದಕ್ಕೆ ಅಲ್ಲ. ಸಬ್ಸಿಕ್ವೆಂಟಲಿ ಇವೆಂಟ್ಸ್ ಏನಾಯಿತು. ಆದರ ಬಗ್ಗೆ ಮಾನ್ಯ ರಾಜಶೇಖರಮೂರ್ತಿಯವರು ಅವರ ರಾಜಿನಾಮೆ ಕೊಟ್ಟರು. ಆದುದರಿಂದ ತಾವು ಅವಿಚಾರವನ್ನು ವಸ್ತು ಸ್ಥಿತಿಗೆ

ವಿರುದ್ಧವಾಗಿ ಹೇಳಿಕೆಯನ್ನು ತಮ್ಮ ಸ್ಥಾನದಲ್ಲಿ ಇದ್ದುಕೊಂಡು ಮಾಡಬಾರದು. ಎರಡನೆಯದಾಗಿ ಪಾಯಿಂಟ್‌ಆಫ್ ಆರ್ಡರ್, ಮಾನ್ಯ ಜಾಫರ್ ಷರೀಫ್‌ರವರು ಈ ಸದನದ ಸದಸ್ಯರಲ್ಲ, ಅವರು ಪಾರ್ಲಿಮೆಂಟರಿ ಸದಸ್ಯರು ಅವರ ವಿಚಾರವಾಗಿ 10-15 ನಿಮಿಷಗಳಿಂದ ಮಾತನಾಡುತ್ತಿದ್ದಾರೆ. ಅವರ ಹೆಸರನ್ನು ತೆಗೆದುಕೊಂಡು ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಹಿಂದೆ ಸುಳ್ಳುಪಳ್ಳು ಹೇಳುತ್ತಿದ್ದೀರಿ ಎಂದು ಜನರು ಮಾತನಾಡುತ್ತಿದ್ದರು. ನಾನು ಹೇಳಿದ್ದೇನೆ ಕಡತ ತೆಗೆಸಿ ನೋಡಿ ಸ್ವಾಮಿ, ನಾನು ಅವರ ಬಗ್ಗೆ ಶುರು ಮಾಡಿದ್ದುದು ಎರಡು ನಿಮಿಷಗಳಿಂದ. 15ನಿಮಿಷಗಳಿಂದ ಮಾತನಾಡುತ್ತಾ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ಹಾಗೆ ಈ ಸದನದಲ್ಲಿ ವಿಷಾದ ಸೂಚಿಸುತ್ತಾ ಸುಳ್ಳು ನಾನು ಹೇಳಿಲ್ಲ, ಅದುದರಿಂದ ದಯಮಾಡಿ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ನಾನು ಒಂದು ಹೇಳುತ್ತೇನೆ. ನಾವು ವೀರಪ್ಪಮೊಯಿಲಿಯವರಂತೆ ಮಾಡಬಾರದನ್ನು ಮಾಡಿ ಸಾರ್ವಜನಿಕವಾಗಿ ಈ ರೀತಿ ಒಂದು ಪಕ್ಷದಲ್ಲಿ ಕುಳಿತುಕೊಳ್ಳುವಂತಹ.....

ಶ್ರೀ ಎಂ. ವೀರಪ್ಪ ಮೊಯಿಲಿ : ಸುಳ್ಳು ಯಾರು ಹೇಳಿದ್ದಾರೆಂದು ನಿನ್ನೆ ಮತ್ತು ಇವತ್ತಿನ ಚರಿತ್ರೆ ಸಿದ್ದಪಡಿಸಿದೆ. ಆದುದರಿಂದ ಅದಕ್ಕೆ ಮತ್ತೊಂದು ಸಾಕ್ಷಿಬೇಕಾಗಿಲ್ಲ. ಯಾರು ಸುಳ್ಳು ಹೇಳುತ್ತಾರೆ. ಯಾರು ಸುಳ್ಳು ಹೇಳುತ್ತಾರೆ ಎನ್ನುವಂಥಾದ್ದು ಆದರಿಂದ ಗೊತ್ತಾಗಿದೆ. ಆದ್ದರಿಂದ ನನ್ನದು ಪಾಯಿಂಟ್ ಆಫ್ ಆರ್ಡರ್ ಇಷ್ಟೆ ಮಾನ್ಯ ಜಾಫರ್‌ಷರೀಫ್‌ರವರು ಪಾರ್ಲಿಮೆಂಟ್ ಸದಸ್ಯರು, ಕೇಂದ್ರ ಸಚಿವರಾಗಿದ್ದಾರೆ. ಅವರ ಹೆಸರು ಹೇಳಿ ಇವತ್ತು ಪ್ರಸ್ತಾಪ ಮಾಡಿ ಅದನ್ನು ವಿಸ್ತಾರ ಮಾಡಿ ಅದರ ಮೇಲೆ ವ್ಯಾಖ್ಯಾನ ಮಾಡತಕ್ಕಂಥ ಪ್ರವೃತ್ತಿ ಏನಿದೆ ಅದು ಇವತ್ತು ನಿಯಮ ಬಾಹಿರವಾಗಿದೆ. ಅದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಮತ್ತು ಅವರು ಹೇಳುವುದೇ ಸರಿ ಅಂಥ ಹೇಳಿದರೆ ಅದು ತಮಗೆ ಬಿಡುವಂತದ್ದು.

ಶ್ರೀ ಬಿ.ಎಸ್. ಯಡಿಯುರಪ್ಪ : ಮಾನ್ಯ ಉಪಸಭಾಧ್ಯಕ್ಷರೆ, ತಾವು ಕಡತ ತರಿಸಿ ನೋಡಿ ನಾನು ನಿನ್ನೆಯಿಂದ ಒಂದು ಹೊಸ ಪದ್ಧತಿ ಬಗ್ಗೆ ಹೇಳಿದ್ದೇನೆ. ಇಲ್ಲಿ ಕುಳಿತವರು, ಅಲ್ಲಿ ಕುಳಿತವರು ಯಾರೂ ದೊಡ್ಡವರಲ್ಲ ಈ ಒಂದು ಕಾನೂನಿನ ಚೌಕಟ್ಟನ್ನು ಮೀರಿ ಒಂದು ಶಬ್ದ ಜಾಫರ್ ಷರೀಫ್‌ರವರ ಬಗ್ಗೆ ಹೇಳಿಲ್ಲ, ನಾನು ಏನು ಹೇಳಿದ್ದೇನೆ, ಅಂಥ ಮಹಾನ್ ವ್ಯಕ್ತಿಯೇ ಸಿ.ಬಿ.ಐ. ತನಿಖೆ ಮಾಡಿ ಎಂದು ಅವರೇ ಕೇಳುತ್ತಿದ್ದಾರೆ, ಇಲ್ಲಸಲ್ಲದ ದೂರು ಆಗುತ್ತಿದೆ. ನೀವು ಬೇಕು ಅಂಥ ಇಲ್ಲಿ ತನಿಖೆ ಮಾಡಿಕೊಂಡು ಅವರು ಕೈಕಟ್ಟುವಂತ ಕೆಲಸ ಮಾಡಿದ್ದೀರಿ ಈಗೇಕೆ ಸ್ವಾಮಿ ಜಾಲಪ್ಪನವರಿಗೆ ಕೊಟ್ಟಿದ್ದೀರಿ, ಅದಾಗಬಾರದು ಡಿಲೇ ಮಾಡಬೇಡಿ ಒಂದು ವಾರದಲ್ಲೇವರದಿ ಕೊಡಬಹುದು ಅಥವಾ ನಮಗೆ ಏಕೆ ಬೇಕು ಅಂಥ ತನಿಖೆಗೆ ಅವಕಾಶ ಮಾಡಿಬಿಡಿ.

ಶ್ರೀ ಎಂ. ವೀರಪ್ಪಮೊಯಿಲಿ : ಡಿವಿಜನಲ್ ಕಮೀಷನರ್ ವರದಿ ತಮ್ಮ ಹತ್ತಿರ ಇದೆ ಎಂದು ಹೇಳಿದಿರಿ, ನಿನ್ನೆ ಬೆಳಗ್ಗೆಯಿಂದ ಇದೆ ಇದೆ ಅಂಥ ಅದನ್ನೆ ಮಾಡುತ್ತಿದ್ದೀರಿ ಅದು ಇವ್ವ ಮೇಲೆ ಕೊಟ್ಟುಬಿಡಿ. ಆ ಧೈರ್ಯ, ಪ್ರಾಮಾಣಿಕತೆ ನಿಮಗೆ ಎಲ್ಲಿದೆ, ನೀವು ಏತಕ್ಕೆ ಹೆದರುತ್ತಿದ್ದೀರಿ?

ಶ್ರೀ ಎಂ. ಶ್ರೀನಿವಾಸ್ : ನಾವು ಮಾಡಬಾರದಂಥ ಮಾಡಿದ ಕೆಲಸಕ್ಕೆ ಇಲ್ಲಿ ಜಾಗ ಸಿಗಲಿಲ್ಲ. ಕೊನೆಗೆ ನಮ್ಮನ್ನು ಅಲ್ಲಿಗೆ ತಳ್ಳಿಬಿಟ್ಟಿರಲ್ಲ...... ವಿರೋಧಪಕ್ಷದ ನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.ಅವರು ಮಾತನಾಡುವುದನ್ನು ನೋಡಿ. ಅವರನ್ನು ಮೂರನೆ ಸ್ಥಾನಕ್ಕೆ ತಳ್ಳಿದ್ದಾರೆ. ಇನ್ನೂ ನಾವು ಜಾಸ್ತಿ ಸುಳ್ಳು ಹೇಳಿದರೆ.....

ಶ್ರೀ ಎಂ. ವೀರಪ್ಪ ಮೊಯಿಲಿ : ಹಿಂದೆ ಹೋದವರು ಅನೇಕಸಾರಿ ಮುಂದೆ ಬಂದಿದ್ದೇವೆ. ಆದರೆ ನಿಮಗೆ ಹಿಂದೆ ಹೋಗಿ ಮುಂದೆ ಬರತಕ್ಕಂಥ ದಾರಿ ಇವತ್ತಿನವರೆಗೂ ಸಿಕ್ಕೇ ಇಲ್ಲ. ಈ ರಾಷ್ಟ್ರದಲ್ಲೂ ಕೂಡ ಸಿಗುವುದಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಯಾರು ಮಾಡದಂತಹ ಕೆಲಸವನ್ನು ತಾವು ಮಾಡಿದ್ದೀರಾ?

ಉಪಾಧ್ಯಕ್ಷರು : ತಾವು ಒಳ್ಳೆಯ ವಿಚಾರವನ್ನು ಮಾತನಾಡುತ್ತಿದ್ದೀರಿ, ಆದರೆ ಈ ಸದನದ ಸದಸ್ಯರಲ್ಲದವರ ವಿಷಯದಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ಯುಕ್ತವಲ್ಲ, ಆದುದರಿಂದ ಅದನ್ನು ಬಿಟ್ಟು ತಾವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಾಯಿಂಟ್ ಸಹ ಅದೇ. ಯಾರು ಈ ಸದನದ ಸದಸ್ಯರಲ್ಲ. ಯಾರು ಸಿ.ಬಿ.ಐ. ತನಿಖೆಗೆ ಒತ್ತಾಯ ಮಾಡುತ್ತಿದ್ದಾರೆ ಅವರನ್ನು ಹಿಡಿದುಕೊಂಡು ಬಂದು ಜಾಲಪ್ಪನವರ ಕೈಗೆ ಕೊಡುವುದು. ಅಕ್ಷಮ್ಯ ಅಪರಾಧ ಎಂದು ನಾನು ಹೇಳುತ್ತಿರುವುದು. ಇದು ನಿಮ್ಮ ಚೌಕಟ್ಟಿಗೆ ಬರುವುದಿಲ್ಲ. ಸಿ.ಬಿ.ಐಗೆ ಕೊಟ್ಟುಬಿಟ್ಟರೆ ತನಿಖೆ ಯಾಗುತ್ತದೆ. ಸತ್ಯಾಸತ್ಯತೆ ಗೊತ್ತಾಗುತ್ತದೆ. ಸ್ವಾಮಿ ಈ ಗೋಪಿನಾಥ್ ಸಾಂಡ್ರರವರ ಬಗ್ಗೆ ಆರೋಪ ಇತ್ತಲ್ಲ, ಆ ಜಮಿನುಗಳನ್ನು ಸರ್ಕಾರಕ್ಕೆ ನೀವು ಮುಟ್ಟುಗೋಲು ಹಾಕಿಕೊಂಡಿರಿ. ಇದು ಸ್ವಾಗತಾರ್ಹ ಸಂಗತಿ. ಆದರೆ ಇದನ್ನು ಏಕೆ ಮಾಡುತ್ತಿಲ್ಲ. ಇದರ ತನಿಖೆಯನ್ನು ಏಕೆ ನಿಧಾನ ಮಾಡುತ್ತಿದ್ದೀರಿ? ನಮಗೆ ಭಯ ಇರತಕ್ಕಂಥದ್ದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರಲ್ಲ ಹದಿಮೂರು ಸಾವಿರ ಎಕರೆ ಈ ರೀತಿ ಕಾನೂನುಬಾಹಿರವಾಗಿ ಪರಭಾರೆಯಾಗಿದೆ. ಕೆರೆಕಟ್ಟೆ. ಸರ್ಕಾರದ ಆಸ್ತಿಗಳು ಇವೆ ಎನ್ನುತ್ತಾರಲ್ಲ, ಆ ತನಿಖೆಯಾದರೆ ಯಾರ್‍ಯಾರ ಬಣ್ಣ ಬಯಲಾಗುತ್ತೋ ಎಂಬ ಭಯ ಈ ಸರ್ಕಾರಕ್ಕೆ ಇರಬಹುದು ಎಂದು ಜನ ನಿಮ್ಮ ಮೇಲೆ ವಿನಾಕಾರಣ ಅಪಾದನೆ ಮಾಡುತ್ತಾ ಮಾತನಾಡುತ್ತಿದ್ದಾರೆ. ನಾಣಯ್ಯನವರೇ ಹೀಗೆ ಅಲ್ಲವೆ ನಾವು ಮಾತನಾಡಬೇಕಾಗಿರುವುದು. ಜನ ಈ ರೀತಿ ಮಾತನಾಡುತ್ತಿದ್ದಾರೆ ಆ ಕಳಂಕ ಬರಬಾರದು ಅಂತ ಇದ್ದರೆ, ಈ ಒಂದು ಚಿನ್ನದಂತೆ ಬೆಲೆ ಬಾಳುವಂಥ ಬೆಂಗಳೂರಿನ ಸುತ್ತಮುತ್ತ ಇರುವಂಥ ಜಮಿನುಗಳನ್ನು ವ್ಯವಸ್ಥಿತವಾಗಿ, ರೈತರಿಗೆ ಹೆದರಿಸಿ ಬೆದರಿಸಿ ಜಮಿನನ್ನು ವಶಪಡಿಸಿಕೊಳ್ಳುತ್ತಿರುವಂತದ್ದು. ಸರ್ಕಾರಿ ಕೆರೆಕಟ್ಟೆಗಳು ಈ ನಾಡಿನ ಜನರ ಮಣ್ಣಿನ ಮಕ್ಕಳ ಆಸ್ತಿ. ಅದನ್ನು ಕಾನೂನುಬಾಹಿರವಾಗಿ ದಾಖಲೆಗಳನ್ನು ಕಿತ್ತು ಕೊಂಡು, ಲೂಟಿ ಮಾಡುವಂಥ ಹಗಲು ದರೋಡೆ ನಮ್ಮ ರಾಜ್ಯದಲ್ಲಿ ಇವತ್ತು ನಡೆಯುತ್ತಿದೆ ಎಂದು ನಿಮ್ಮ ಸಚಿವರಾದಂಥ ಜಾಲಪ್ಪನವರು ಹೇಳುತ್ತಿದ್ದಾರೋ ಒಬ್ಬ ಮುಖ್ಯಮಂತ್ರಿಯಾಗಿ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹದಿಮೂರು ಸಾವಿರ ಎಕರೆ ಹೇಳುತ್ತಿದ್ದಾರೇ.... ನನಗೆ ಅಧಿಕಾರ ಇಲ್ಲವೇನು ಸ್ವಾಮಿ. ಹದಿಮೂರು ಸಾವಿರ ಎಕರೆಯನ್ನು ಯಾರ್‍ಯಾರು ತೆಗೆದುಕೊಂಡಿದ್ದಾರೆ ಲಿಸ್ಟ್ ಹೊರಗಡೆ ತೆಗೆದುಕೊಂಡು ಬನ್ನಿ. ಅದನ್ನು ಗುಟ್ಟಾಗಿ ಇಟ್ಟು ಕೊಳ್ಳುವುದಕ್ಕೆ ಬರುವುದಿಲ್ಲ. ಅದನ್ನು ಇಟ್ಟು ಕೊಂಡು ನಾವು ಹೇಳುತ್ತೇವೆ ಬ್ಲಾಕ್‌ಮೆಲ್ ಮಾಡುತ್ತೀರಿ ಎಂದು ಜನ ತಿಳಿದುಕೊಳ್ಳುವಂಥ ತಪ್ಪು ಅಭಿಪ್ರಾಯಕ್ಕೆ ಅವಕಾಶ ಕೊಡಬೇಡಿ. ಇಲ್ಲಿರುವಂಥ ಯಾರ್‍ಯಾರು ಎಂದು ಹೆಸರು ಬಯಲಾಗಲಿ. ಅದು ಇದೆ ಎನ್ನುವುದಿದ್ದರೆ...ಸದನದ ಒಳಗಡೆ ಕುಳಿತುಕೊಂಡು ನಮ್ಮ ಕಡೆ ಕೈತೋರಿಸಿದರೆ ಏನು ಬಂತು. ಇದು ಗೌರವ ತರುವಂಥ ಸಂಗತಿಯಲ್ಲಿ.....

ದಾಖಲೆಯನ್ನು ನಿಮಗೆ ಕೊಡಲೇ? ಸ್ವಾಮಿ ಇದನ್ನು ಕಳುಹಿಸುತ್ತೇನೆ. ತಾವು ತೆಗೆದುಕೊಳ್ಳಿ. ಏನೋ ಬಹಳ ಕೇಳುತ್ತಿದ್ದಾರೆ....

ಶ್ರೀ ಎಸ್.ಆರ್. ಲಕ್ಷ್ಮಯ್ಯ : ನಮ್ಮ ಊರಿನಲ್ಲಿ ಒಬ್ಬ ವ್ಯಕ್ತಿ ಇದ್ದ, ಹಾವು ಬಿಡುತ್ತೇನೆ, ಹಾವು ಬಿಡುತ್ತೇನೆ, ...ಹಾವು ಬಿಡುತ್ತೇನೆ ಎಂದು ಹೇಳುತ್ತಿದ್ದ. ಕೊನೆಗೆ......

ಶ್ರೀ ಎಂ. ಶ್ರೀನಿವಾಸ್ : ಹಾವು ಬಿಡುತ್ತೇವೆ, ಹಾವು ಬಿಡುತ್ತೇವೆ ಅಂದರಲ್ಲ ಸರ್ಕಾರವನ್ನು, ಮಂತ್ರಿಗಳನ್ನು, ಅಧಿಕಾರಿಗಳನ್ನು, ಛೇರ್‌ಮನ್ನ ಕರೆದುಕೊಂಡು, 20 ಎಕರೆ ಸರ್ಕಾರದ ಜಮೀನು ಲೇಔಟ್ ಮಾಡಿ ಮಾರುತ್ತಿದ್ದಾರೆ. ಬೆಲೆ ಎಷ್ಟು? ಇಪ್ಪತ್ತು ಕೋಟಿಗಳು, ಏನು ಕ್ರಮ ತೆಗೆದುಕೊಂಡಿರಿ? ಇದಾದಮೇಲೆ ಮಾತನಾಡೋಣ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ವಿರೋಧಪಕ್ಷದ ನಾಯಕರು ಹಲವರು ವಿಚಾರಗಳ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಮಾತಿಗೆ ನಾನು ಅಡ್ಡ ಬರುವುದಿಲ್ಲ. ಕೇಳಬೇಕಾಗಿರತಕ್ಕಂಥದ್ದು ನಮ್ಮ ಧರ್ಮ, ಉತ್ತರ ಹೇಳಿಬೇಕಾದಂಥ ಕಾಲದಲ್ಲಿ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ಆದರೆ ಎರಡು ವಿಚಾರಗಳನ್ನು ಎರಡು ಸಲ ಪುನರ್ ಉಚ್ಚಾರ ಮಾಡುತ್ತಾ ಹೇಳಿದರು. ನಾನು ಅವರ ಗಮನಕ್ಕೆ ತರಬಯಸುತ್ತೇನೆ, ಒಂದು ನೀರಾವರಿಗೆ ಸಂಬಂಧಪಟ್ಟಂಥ ವಿಚಾರ ಬಂದಾಗ, ಕೆಲವು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡ ಸಂದರ್ಭದಲ್ಲಿ, ಅವರ ಮೇಲೆ ಗುರುತಾರವಾದ ಅರೋಪಗಳಿದ್ದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಅದನ್ನೆಲ್ಲಾ ಇಟ್ಟುಕೊಂಡು ಬ್ಲಾಕ್‌ಮೆಲ್ ಮಾಡಲಿಕ್ಕೆ ಹೊರಟಿದ್ದಾರೆಂದು ಹೇಳಿಸದರು. ದಯವಿಟ್ಟು ಕೇಳಿ ಹೇಳುತ್ತೇನೆ. ಒಂದು. ಈ ತರಹ ವಿಚಾರಗಳನ್ನು ಇಟ್ಟುಕೊಂಡು ದಾಖಲೆಗಳನ್ನು ಇಟ್ಟು ಕೊಂಡು,ಭೂ ಹಗರಣದ ಬಗ್ಗೆ ಇಟ್ಟುಕೊಂಡು, ಇದನ್ನು ಬ್ಲಾಕ್‌ಮೆಲ್ ಮಾಡಲಿಕ್ಕೆ ಇಟ್ಟುಕೊಂಡಿದ್ದೀರೆಂದು ಹೇಳಿದರು. ಸ್ವಾಮಿ ತಾವು ಮಾತನಾಡುವ ಸಂದರ್ಭದಲ್ಲಿ ನಿಮಗೆ ಮಾತಿನ ವೈಖರಿಯನ್ನು ಮಾತಿನ ಶೈಲಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ನಿಮಗೆ ಅಧಿಕಾರ ಇದೆ. ಆದರೆ ತಾವು ಆಡುವ ಪದಗಳಲ್ಲಿ, ನೀವು ನೇರವಗಿ ಅಪಾದನೆ ಮಾಡುತ್ತಾ ಜನರು ಹೇಳುತ್ತಿದ್ದಾರೆಂದು ಬೆರೆಸುವಾಗ, ಸರ್ಕಾರವನ್ನು ನೀವು ಬ್ಲಾಕಮೆಲ್ ಮಾಡುತ್ತಾ ಇದ್ದೀರಿ ಎಂದು ಹೇಳುವುದಕ್ಕೆ ನೇರವಾಗಿರತಕ್ಕಂಥ ಆರೋಪವನ್ನು ನೀವು ಮಾಡುತ್ತಿದ್ದೀರಿ. ಆದರೆ ನಾನು ಹೇಳುತ್ತಿದ್ದೇನೆ. ತಾವು ನೇರವಾಗಿರತಕ್ಕ ಆರೋಪವನ್ನು ಮಾಡುವಾಗ, ಬ್ಲಾಕ್‌ಮೆಲ್ ಎಂದು ಸಿಗ್ನಲ್ ಹೇಳಿರುವಾಗ, ಜನ ಅಪಾದನೆ ಮಾಡುತ್ತಾ ಇದ್ದಾರೆಂದು ಹೇಳಿದಾಗ, ನಿಮ್ಮ ಮನಸ್ಸಿನಲ್ಲಿ ಇರತಕ್ಕಂಥದ್ದು ಯಾವುದು ಇದೆ. ಮಾನ್ಯ ಸಭಾಧ್ಯಕ್ಷರೆ, ಬಹುಶಃ ಇಂತಹ ಪದಗಳು ಕಡತಕ್ಕೆ ಹೋಗುತ್ತಿರುವಂತಹ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ, ತಾವು ದಯವಿಟ್ಟು ಅಂತಹ ಪದಗಳನ್ನು ಕಡತದಿಂದ ತೆಗೆಸಿ ಹಾಕಬೇಕು, ಇಲ್ಲ ಈ ಬ್ಲಾಕ್‌ಮೆಲ್ ಎಂದು ಯಾವ ಅರ್ಥದಲ್ಲಿ ಹೇಳುತ್ತಿದ್ದಾರೆ, ಅದಕ್ಕೆ ಸಂಬಂಧಪಟ್ಟಿರತಕ್ಕಂಥದ್ದು ಏನಾದರೂ ಇದ್ದರೆ, ಅದನ್ನೂ ಕೂಡ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಾನು ಒಂದು ಸಲಹೆ ಮಾಡಲೇ ಏನು ಮಾತನಾಡಬೇಕು. ಯಾವ ಯಾವ ಶಬ್ದಗಳನ್ನು ಉಪಯೋಗಿಸಬೇಕು ಎಂಬುವುದರ ಬಗ್ಗೆ ಕಾನೂನು ಮಂತ್ರಿಗಳಾದ ತಾವು ಬರೆದುಕೊಟ್ಟುಬಿಡಿ. ನನಗೆ ಸುಲಭವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ನೀವು ಬ್ಲಾಕ್‌ಮೆಲ್ ವಿಚಾರದಲ್ಲಿ ನಾನು ಯಾವ ಪದಕ್ಕೆ ಹೇಳಲಿಲ್ಲ......

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇ ಅಲ್ಲಿ ಕುಳಿತಿರುವಾಗ ಇನ್ನು ರಕ್ಷಣೆ ಎಲ್ಲಿ ಸ್ವಾಮಿ, ಆ ಕಾನೂನು ಎಲ್ಲಿಯವರೆಗೆ ಇದೆ, ಸ್ವಾಮಿ ಅದು ಇಲ್ಲದಿದ್ದರೆ ಏನೇನು ಮಾಡಿ ಬಿಡುತ್ತಿದ್ದಿರೊ. ದೇವರ ದಯೆಯಿಂದ ಈ ಕಾನೂನು, ಈ

ಚೌಕಟ್ಟು, ಆ ಕೋರ್ಟು ಅದು ಇಲ್ಲದಿದ್ದರೆ ಕರ್ನಾಟಕದ ರಾಜ್ಯವನ್ನೆ ಯಾರಿಗಾದರು ಮಾಡಿಕೊಂಡು ಹೋಗಿಬಿಡುತ್ತಿದ್ದರೊ ಏನೊ ಗೊತ್ತಿಲ್ಲ....ನೀವಲ್ಲ ಸ್ವಾಮಿ ನೀವಲ್ಲ...

ಶ್ರೀ ಎಂ.ಸಿ. ನಾಣಯ್ಯ : ಈಗಾಗಲೇ ಮಾತನಾಡಿರುವುದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ನಾನು ಯಾವುದಕ್ಕೂ ಆಕ್ಷೇಪಣೆ ಎತ್ತಿಲಿಲ್ಲ, ನಾನು ಯಾವುದಾಕ್ಕಾದರೂ ಆಕ್ಷೇಪಣೆಯನ್ನು ಎತ್ತಿದ್ದೇನೋ?

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಗಂಭೀರ, ನಿಮ್ಮ ಮೇಲೆ ಏನು ಸ್ವಾಮಿ ಗಂಬೀರ ನಡತೆ, ಕೊಡಲೇ ನಿಮ್ಮದು......

(ಗೊಂದಲ)

ಶ್ರೀ ಎಂ.ಸಿ. ನಾಣಾಯ್ಯ : ನೀವು ಬ್ಲಾಕ್‌ಮೆಲ್ ಮಾಡುತ್ತಿದ್ದೀರಿ, ನೀವು ಪ್ರತಿಯೊಂದು ನನ್ನ ಹತ್ತಿರ ಇದೆ ಎಂದು ಹೇಳುತ್ತಿದ್ದೀರಲ್ಲ ಯಾರಿಗೋಸ್ಕರ ಬ್ಲಾಕ್‌ಮೆಲ್ ಮಾಡುತ್ತಿದ್ದೀರಿ, ಪ್ರತಿಯೊಂದು ನನ್ನ ಹತ್ತಿರ ಇದೆ ನಿಮ್ಮ ಇತಿಹಾಸ ಹೇಳಲೇ, ನಿಮ್ಮ ಕಥೆ ಹೇಳಲೇ ಇದನ್ನು ಯಾರಿಗೆ ಹೇಳುತ್ತಿದ್ದೀರಿ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ.

(ಗೊಂದಲ)

ಯಾರಿಗೆ ಹೇಳುತ್ತಿದ್ದೀರಿ ನಮಗೂ ಕೂಡ ಜವಾಬ್ದಾರಿ ಇದೆ. ಜವಾಬ್ದಾರಿ ಸ್ಥಾನದಲ್ಲಿ ತಾವು ಕುಳಿತಿದ್ದೀರಿ ಯಾರಿಗೆ ಎಂದು ಹೇಳಿ.....ಯಾರ ಇತಿಹಾಸ ನಿಮ್ಮಲ್ಲಿ ಇದೆ, ಯಾರ ಬಗ್ಗೆ ಹೇಳುತ್ತಿದ್ದೇವೆ ಎಂಬ ಸಂಗತಿಯನ್ನು ಹೇಳಿದೆ, ನಿಮ್ಮ ಇತಿಹಾಸ ಹೇಳಲೇ, ನಿಮ್ಮ ಕಥೆ ಹೇಳಲೇ ಎಂದು ಹೇಳುತ್ತಾ ಇರತಕ್ಕಂಥದ್ದು ಇದು ಬ್ಲಾಕ್‌ಮೇಲ್‌ನ ತತ್ವ...... ಕೊಡಿ ಕೊಟ್ಟನಂತರ ಹೇಳಿ, ನಾನು ಅದಕ್ಕೆ ಉತ್ತರ ಹೇಳುತ್ತೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ತಾವು ಏನು ಬೇಕಾದರೂ ಹೇಳಬಹುದು. ಆದರೆ ಅದನ್ನು ಒಂದು ಘನತೆ ಗೌರವದಿಂದ ಹೇಳಿ.

(ಗೊಂದಲ)

ಡಾ|| ಜೀವರಾಜ್ ಆಳ್ವ : ಮಾನ್ಯ ಉಪಾಧ್ಯಾಕ್ಷರೇ, ನಾನು ಈಗ ಮಾತನಾಡುವುದು ನಮ್ಮ ಪಕ್ಷದ ಪರಿಮಿತಿಯಲ್ಲಿ ಸ್ವಲ್ಪ ತಪ್ಪು ಎನಿಸಿದರೂ ಕೂಡ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಸರಿಪಡಿಸಬೇಕೆಂಬ ಒಂದೇ ಒಂದು ಕೋರಿಕೆ ಮೇಲೆ ಈ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗ ಅವಿಶ್ವಾಸ ನಿರ್ಣಯ ಮಂಡನೆಯಾಗಿದೆ. ಈ ಅವಿಶ್ವಾಸ ನಿರ್ಣಯ ಮಂಡನೆ ಅಗುವಾಗ, ತನ್ನ ಜೊತೆಗೆ ಇದ್ದಂತಹ ಸರ್ಕಾರದ ವಿರುದ್ಧ ಸರ್ಕಾರದ ಮಂತ್ರಿ ಮಂಡಲದ ಸದಸ್ಯರೇ ಇರುವಂತಹ ವಿಚಾರಗಳನ್ನು ಸಭೆಯ ಮುಂದೆ ಮಂಡಿಸುವುದು ಅವರ ಬದ್ಧ ಕರ್ತವ್ಯ. ಅದು ಅವರ ಹಕ್ಕು ಕೂಡ ಇದರಿಂದ 'ನಾನು ಹೇಳಲೇ' 'ನಾನು ಮಾಡಲೇ' 'ನಾನು ತೋರಿಸಲೇ' ಎಂಬ ಮಾತುಗಳನ್ನು ಅವರು ಹೇಳಬಾರದು. ಅವರ ಕರ್ತವ್ಯವನ್ನು ಅವರು ಮಾಡಬೇಕು. ಅವರು ಕರ್ತವ್ಯ ಚ್ಯುತಿ ಮಾಡಬಾರದು,

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ಈ ಪ್ರಜಾ-ತಂತ್ರ ವ್ಯವಸ್ಥೆಯಲ್ಲಿ ಯಾವುದನ್ನು ಕೊಡಬೇಕು, ಯಾವ ದಾಖಲೆ ಕೊಡಬೇಕು, ಯಾವಾಗ ಕೊಡಬೇಕು ಎನ್ನುವುದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇನು ಹೇಳಿದೆ. ನನ್ನ ಹತ್ತಿರ ಇರುವ ದಾಖಲೆಗಳಲ್ಲಿ ಕೆಲವನ್ನು ಇಲ್ಲಿಯೇ ಕೊಡುತ್ತಿದ್ದೇನೆ. ಕೆಲವರು ತುಂಬಾ ಆಶಯ ವ್ಯಕ್ತಪಡಿಸಿ ದಾಖಲೆ ಕೊಡಿ ಎಂದು ಹೇಳಿದಂತಹವರಿಗೆ ನೋಟೀಸ್ ಕೊಟ್ಟು ದಾಖಲೆಗಳನ್ನು ಕೊಡುತ್ತೇನೆ. ನನಗೇನು ಭಯ ಎಂದರೆ ನೀವೆಲ್ಲಾ ಒಂದಾಗಿ ಅವಿಶ್ವಾಸ ನಿರ್ಣಯಕ್ಕೆ ವೋಟ್ ಕೊಡುತ್ತೀರಿ ಎನ್ನುವುದಾದರೆ ಹೇಳುವುದನ್ನು ಇವತ್ತೇ ಹೇಳಬಹುದು. ನಾಳೆ,ಇನ್ನು ಇಪ್ಪತ್ತು ದಿವಸಕ್ಕೆ ಏನಾದರೂ ಹೇಳಬೇಕಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆ ಕೊಡುತ್ತೇನೆ, ತಾಳಿ. ನೀವು ಏಕೆ ಹೀಗೆ ಆಡುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ರಾಮಮೂರ್ತಿ ನಗರಲ್ಲಿ ಅನಧಿಕೃತವಾಗಿ ಬಡಾವಣೆಗಳನ್ನು ನಿರ್ಮಿಸಿರುವ ಬಗ್ಗೆ ದಿನಾಂಕ 2.9.94ರಂದು ಅಂದಿನ ಬೆಂಗಳೂರು ವಿಭಾಗದ ವಿಭಾಗಾಧಿಕಾರಿಗಳಾಗಿದ್ದ ಶ್ರೀಮತಿ ವೀಣಾ ಶ್ರೀರಾಮ್‌ರವರು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ರಾಮಮೂರ್ತಿ ನಗರದಲ್ಲಿ ಅನಧಿಕೃತವಾಗಿ ಬಡಾವಣೆಗಳನ್ನು ನಿರ್ಮಿಸಿ ಮನೆಗಳನ್ನು ಮತ್ತು ನಿವೇಶಗಳನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಸಬ್ ರಿಜಿಸ್ಟರ್‌ಗಳು ಹಾಗೂ ಭೂ ಕಬಳಿಕೆ ದಬ್ಬಾಳಿಗಳು, ಸೇರಿಕೊಂಡು ಸುಮಾರು 600 ಎಕರೆಗಳಷ್ಟು ಭೂಮಿಯನ್ನು ಕಬಳಿಸಿರುವ ಬಗ್ಗೆ ವರದಿಯಲ್ಲಿ ತಿಳಿಸಿದ್ದಾರೆ. ಇದರಿಂದ ಸರ್ಕಾರಕ್ಕೆ 100 ಕೋಟಿ ರೂಪಾಯಿಗಳು ಅವತ್ತಿನ ಲೆಕ್ಕದಲ್ಲಿ ನಷ್ಟವಾಗಿದೆ, ಇವತ್ತು ಅದು 150 ಕೋಟಿ ರೂಪಾಯಿಗಳಾಗುತ್ತದೆ. ಈ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಯಾವುದೇ ಕತ್ರಮವನ್ನು ತೆಗದುಕೊಳ್ಳದೇ, ಕೈ ಕಟ್ಟಿ ಕುಳಿತುಕೊಳ್ಳುವಂತಹ ಕಾರಣವೇನು? ಯಾವುದೇ ರಾಜಕೀಯ ಪ್ರಭಾವಿ ವ್ಯಕ್ತಿಗಳು ಅಥವಾ ಇನ್ನಾರದೇ ಒತ್ತಡಕ್ಕೆ ಸರ್ಕಾರ ಮಣಿಯಬಹುದು ಎಂದು ಜನ ಭಾವಿಸುವುದಕ್ಕೆ ಅವಕಾಶ ಮಾಡುವುದಕ್ಕೆ ಕಾರಣವೇನು? ಸರ್ವೆ ನಂಬರ್ ಬೇಕೇ ಸ್ವಾಮಿ ನಿಮಗೆ.

"The following Survey Numbers and the extent noted against each of them have been taken by the Government under Urban Land Ceiling Act; Un-authorised formation of lay-outs, in Ramamurthy Nagar, Krishnarajpuram Hobli, Bangalore South Taluk....

ಸರ್ವೆ ನಂಬರ್ ನಾಲ್ಕನೇ ಒಂದು - 2 ಎಕರೆ 13 ಗುಂಟೆ, ಸರ್ವೆ ನಂಬರ್ 4ನೇ ಎರಡು - 3 ಎಕರೆ 12 ಗುಂಟೆ, ಸರ್ವೆ ನಂಬರ್ 4 : 3 - 23 ಗುಂಟೆ, ಸರ್ವೆ ನಂಬರ್ 10 :1 - 8215.93 ಚದುರ ಮೀಟರ್ಸ್, ಸರ್ವೆ ನಂಬರ್ 60 - 3045.85 ಚದುರ ಮೀಟರ್ಸ್, ಸರ್ವೆ ನಂಬರ್ 66 : 1 - 10,167 ಚದುರ ಮೀಟರ್ಸ್, ಸರ್ವೆ ನಂಬರ್ 71 - 1023.42 ಚದುರ ಮೀಟರ್ಸ್, ಸರ್ವೆ ನಂಬರ್ 75:2 - 900 ಚದುರ ಮೀಟರ್ಸ್, ಸರ್ವೆ ನಂಬರ್ 96 :1 - 4691.48 ಚದುರ ಮೀಟರ್ಸ್. ಸರ್ವೆ ನಂಬರ್ 96 :1 - 5760.74 ಚದುರ ಮೀಟರ್ಸ್, ಸರ್ವೆ ನಂಬರ್ 96.2 - 10,362 ಚದುರ ಮೀಟರ್ಸ್, ಸರ್ವೆ ನಂಬರ್ 96 :5 - 1529.92 ಚದುರ ಮೀಟರ್ಸ್, ಸರ್ವೆ ನಂಬರ್ 127 : 2- 3 ಎಕರೆ 14 ಗುಂಟೆ, ಸ್ವಾಮಿ. ಇದು ಶ್ರೀಮತಿ ವೀಣಾ ಶ್ರೀರಾಮ್‌ರವರು ಕೊಟ್ಟಿರುವಂತಹ ವರದಿ. ನಿಮ್ಮ ಸರ್ಕಾರದಲ್ಲಿ ಇರುವಂತಹ ವರದಿ. ಗೊತ್ತಾಯಿತೇ ಸ್ವಾಮಿ ನಿಮಗೆ. ಈ ವರದಿ ಕೊಟ್ಟ ಮೇಲೂ ಏನೂ ಕ್ರಮ ತೆಗೆದುಕೊಂಡಿಲ್ಲವಲ್ಲ ನೀವು.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಹೇಳುತ್ತಿರುವುದು ಔಟ್ ಆಫ್ ಡೇಟ್ ಇನ್‌ಫರ್‌ಮೇಷನ್.

ಶ್ರೀ ಬಿ.ಎಸ್. ಯಡಿಯೂರಪ್ಪ : ಇರಬಹುದು. ನಾನು ಹೇಳುತ್ತಿರುವುದು ಔಟ್ ಆಫ್ ಡೇಟ್ ಇನ್‌ಫರ್‌ಮೇಷನ್ ಇರಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಅಂಧರು ಕುರುಡರಿಗೆ ಸೈಟು ಕೊಟ್ಟಿದ್ದುದು ಅದು. ಅದೂ ಕೂಡ ಕ್ಯಾನ್ಸಲ್ ಆಗಿದೆ. It was cancelled during my regim.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳಬೇಕೋ ಅದನ್ನು ನಾನು ಹೇಳಿದ್ದೇನೆ. ನನ್ನ ಹತ್ತಿರ ಇರುವ ಇನ್‌ಫರ್‌ಮೇಷನ್ ಔಟ್ ಆಫ್ ಡೇಟೋ, ಹಳೆಯದೋ ಹೊಸದೋ ನನಗೆ ಗೊತ್ತಿಲ್ಲ. ನನ್ನ ಹತ್ತಿರ ಇರುವ ದಾಖಲೆಗಳನ್ನು ನಾನು ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವರದಿ ಬಂದ ಮೇಲೂ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು? ನನ್ನ ಪಾಯಿಂಟ್ ಅದೇ. ಈ ವರದಿ ಹಳೆಯದೇ ಹೊಸದು ಎಂದೇನು ನಾನು ಹೇಳಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಎಲ್ಲಪ್ಪರೆಡ್ಡಿಯವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ..... ನಾನು ಯೀಲ್ಡ್ ಆಗಲಿಲ್ಲ.

(ಗೊಂದಲ)

ಉಪಾಧ್ಯಕ್ಷರು : ನಾನು ಹೇಳುತ್ತೇನೆ, ನೀವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶ್ರೀ ಎಲ್ಲಪ್ಪ ರೆಡ್ಡಿಯವರು ವರದಿ ಕೊಟ್ಟಿದ್ದಾರೆ. ಈ ಒಂದು ಕೊಡಗು ಜಿಲ್ಲೆಯಲ್ಲಿ. ಅಲ್ಲಿರುವಂತಹ ಅಧಿಕಾರಿಗಳು ಅರಣ್ಯ ನಾಶ ಮಾಡುವಂತಹ ಖದೀಮರ ಜೊತೆಗೆ ಶಾಮೀಲಾಗಿ. ಕಂಟ್ರಾಕ್ಟ್‌ದಾರರ ಜೊತೆಗೆ ಶಾಮೀಲಾಗಿ, ಅನೇಕ ಅವ್ಯವಹಾರಗಳನ್ನು ನಡೆಸಿದ್ದಾರೆ ಎಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಇಷ್ಟು ದಿವಸವಾದರೂ ಕೂಡ ಏನ ಕ್ರಮ ತೆಗೆದುಕೊಂಡಿಲ್ಲ. ಅವರ ವರದಿಯ ಪ್ರಕಾರ ಸುಮಾರು 150 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಕೊಡಿಗನ ಅರಣ್ಯದಲ್ಲಿ ಅರಣ್ಯಾಧಿಕಾರಿಗಳಿಂದ ನಿರಂತರ ಅವ್ಯವಹಾರ ಮುಂದುವರೆದುಕೊಂಡು ಹೋಗುತ್ತಿದೆ ಎಂದು ಹೇಳಿ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳಬೇಕೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ನೀವೇನು ಹೇಳುತ್ತಿದ್ದೀರಿ ಎಂದರೆ, ಅಧಿಕಾರಿಗಳಿಗೆ ರಕ್ಷಣೆ ಕೊಡುವುದಿಲ್ಲ, ಅವ್ಯವಹಾರ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಕೆಲವು ಅಧಿಕಾರಿಗಳಿಂದ ಈ ರೀತಿಯ ಪರಿಸ್ಥಿತಿ ಬಂದಿದೆ ನಾವು ತನಿಖೆ ಮಾಡುತ್ತೇವೆ, ಎಂದು ನೀವು ಹೇಳುತ್ತೀರಿ. ಒಳ್ಳೆಯದು ಸ್ವಾಮಿ. ನೀವು ತನಿಖೆ ಮಾಡಿ. ತನಿಖೆ ಮಾಡಿದರೂ ಸಹ,ಅದಕ್ಕೆ ಒಂದು ಗೌರವ ಬರಬೇಕಲ್ಲ. ಅದು ಸಿ.ಓ.ಡಿ. ಇರಲಿ. ಸಿ.ಬಿ.ಐ. ಇರಲಿ, ಲೋಕಾಯುಕ್ತ ಇರಲಿ. ನ್ಯಾಯಾಧೀಶರ ಅಂತಿಮವಾಗಿ ವರದಿ ಮಾಡಿರುವಂಥಾದ್ದು ಇರಲಿ, ತನಿಖಾ ವರದಿ ಬಂದ ತಕ್ಷಣ, ಅದರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಲ್ಲ. ನೀವು ಏನು ಮಾಡಿದಿರಿ?

ಯಾವ ಅಧಿಕಾರಿಗಳು ಅರಣ್ಯ ಲೂಟಿಯಲ್ಲಿ ಶಾಮೀಲಾಗಿದ್ದಾರೆ ಎಂದು ವರದಿಯಲ್ಲಿ ಕೊಟ್ಟಿರುತ್ತಾರೋ. ಅಂಥವರಿಗೆ ನೀವು ಪ್ರಮೋಷನ್ ಕೊಡುತ್ತೀರಿ ಎನ್ನುವುದಾದರೆ ಈ ರಾಜ್ಯ ಸರ್ಕಾರ ಸುಭದ್ರವಾಗಿ ನಿಮ್ಮ ಹತ್ತಿರ ಇರಬಹುದೇ? ಆ ರೀತಿ ವರದಿ ಕೊಟ್ಟಿದ್ದನ್ನು ಉಪಯೋಗಿ ಮಾಡಿಕೊಂಡು 'ಬ್ಲಾಕ್ ಮೇಲ್' ಮಾಡುತ್ತಾರೆ ಅಂತ ಜನ ಅಂದುಕೊಳ್ಳುವ ಪರಿಸ್ಥಿತಿಗೆ ಬರುವುದು ಈ ಸರ್ಕಾರಕ್ಕ ಗೌರವ ತರುತ್ತಾ? ಆ ರೀತಿ ಆಗಬಾರದು ಎಂದು ನಾನು ಹೇಳುತ್ತಿದ್ದೇನೆ. ಆ ಶಬ್ದ ನಾನು 'ಏತಕ್ಕೋಸ್ಕರ ಉಪಯೋಗಿಸಬಾರದು. ಆ ಭಾವನೆ ಬರಬಾರದು ಅಂತಲೇ ನಾನು ನಿಮಗೆ ದಾಖಲೆ ಕೊಡುತ್ತೇನೆ. ನಾಳೆ ನೀವು ಉತ್ತರ ಕೊಡಿ. ಎಲ್ಲಪ್ಪ ರೆಡ್ಡಿಯವರ ವರದಿಯಲ್ಲಿ ಆರೋಪಿಸಿರುವಂತಹ ಶ್ರೀ ಸುಂದರ್ ನಾಯಕ್ ಮತ್ತು ಕೆಲವು ರೇಂಜ್‌ಫಾರೆಸ್ಟ್ ಅಧಿಕಾರಿಗಳಿಗೆ ಸರ್ಕಾರ ಬಡ್ತಿ ನೀಡಿದೆ. ಅವರ ಮೇಲೆ ಆರೋಪಗಳಿಲ್ಲವೇ ಸ್ವಾಮಿ. ಈ ಅವ್ಯವಹಾರದಲ್ಲಿ ಭಾಗಿಗಳಾದ ಡಿ.ಸಿ.ಎಫ್. ಆದ ಶ್ರೀ ಜಿ.ಸಿ. ಪಾಟೀಲ್, ಇವರು ನಿವೃತ್ತಿಯ ಅಂಚಿನಲ್ಲಿ ಇದ್ದಾಗ,. ಅವರ ವಿರುದ್ಧ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿ ಕಳುಹಿಸಿದ್ದರೂ ಸಹ. ಇವರ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ? ಆ ವರದಿಯಲ್ಲಿ ಎ.ಸಿ.ಆರ್.ಗಳು, ಆರ್.ಎಫ್.ಗಳು ಫಾರೆಸ್ಟರ್‌ಬಗ್ಗೆ ಒಂದು ಹಂತದಲ್ಲಿ ಈ ರೀತಿ ಇದೆ.

"All of them appear to have sold themselves to the Timber Lobby" ಎನ್ನುವ ಶಬ್ದವನ್ನು ಅವರು ಉಪಯೋಗ ಮಾಡಿದ್ದಾರೆ. ನಿಮ್ಮ ಕಾನೂನು ಸಚಿವರಾದ ಶ್ರೀ ಎಂ.ಸಿ. ನಾಣಯ್ಯನವರ ಅರ್ಜಿಯನ್ನು ತನಿಖೆ ಮಾಡಿದಾಗ ವರದಿಯಲ್ಲಿ ಹೇಳಿದ್ದಾರೆ. ಆರ್.ಎಫ್.ಓ ಆದ ಶ್ರೀ ಎಂ.ಕೆ. ಕುಟ್ಟಯ್ಯ ಎಂಬುವರು ನೇರವಾಗಿ, ಸಾಗುವಾನಿ ಮರಗಳ ಕಳ್ಳ ಸರಬರಾಜು ಮಾಡಲು ನೆರವಾಗಿರುತ್ತಾರೆ ಎಂದು ತಿಳಿಸಲಾಗಿದ್ದರೂ, ಈವರೆಗೆ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ವೀರಾಜಪೇಟೆಯ ಡೆಪ್ಯುಟಿ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್, ಅಸಿಸ್ಟೆಂಟ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಸರ್ಕಾರಿ ಮತ್ತು ಖಾಸಗಿ ಮರಗಳ ಕಡಿತದಲ್ಲಿ ಭಾಗಿಗಳಾಗಿದ್ದರೂ. ಇವರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ವಿಳಂಬ ಮಾಡುತ್ತಿದೆ. ಎಲ್ಲಪ್ಪರೆಡ್ಡಿ ವರದಿಯಲ್ಲಿ ಇರುವುದನ್ನು ನೇರವಾಗಿ ನಾನು ಆರೋಪ ಮಾಡುತ್ತಿದ್ದೇನೆ. ಯಾರು ಈ ಕಳ್ಳ ಸಾಗಾಣಿಕೆಯನ್ನು ಮಾಡುತ್ತಿರುವಂತಹ ಖದೀಮರಿದ್ದಾರೆ. 'ಕಂಟ್ರಾಕ್ಟುದಾರರು' ಎಂದು ನೀವೇನು ಕರೆಯುತ್ತೀರಿ. ಶಾಮೀಲಾಗಿದ್ದಾರೆಂದು ಹೇಳಿ ಸರ್ಕಾರವೇ ನೇಮಕ ಮಾಡಿದಂತಹವರಿಂದ ಒಂದು ವರದಿ ನಿಮ್ಮ ಕೈಗೆ ಸಿಕ್ಕಿದ ಮೇಲೆ, ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ತಡ ಮಾಡುವಂತಾದ್ದು. ಆ ರೀತಿ ಅಪರಾಧ ಸ್ಥಾನದಲ್ಲಿರುವಂತಹವರಿಗೆ ಪ್ರಮೋಷನ್ ಕೊಡುವಂತಾದ್ದು ಅಕ್ಷಮ್ಯ ಅಪರಾಧ ಎಂದು ಹೇಳಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ನೀವು ಅಲ್ಲಾ ಸ್ವಾಮಿ. ಅದೇ ನಾವು ಕೆಲಸ ಮಾಡುವಂತಹ ರೀತಿ ಎನ್ನುವುದಾದರೆ ನಮ್ಮದೇನು ವಿರೋಧವಿಲ್ಲ. ನನ್ನ ಡ್ಯೂಟಿಯನ್ನು ನಾನು ಮಾಡುತ್ತಿದ್ದೇನೆ.

5.50 ಪಿ.ಎಂ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಪ್ರಸ್ತಾಪಿಸಿದರು. ನಾನೂ ಸಹ ವಿಧಾನ ಪರಿಷತ್ತಿನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿರುತ್ತೇನೆ. ನಾನು ಇದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ 2-3 ಗಂಟೆಗಳ ಕಾಲ ಚರ್ಚೆ ಮಾಡಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ವೀರಪ್ಪಮೊಯಿಲಿಯವರಿಗೆ ಒಂದು ಪತ್ರ ಬರೆದು, ಒಂದು ತನಿಖೆ ನಡೆಸಬೇಕೆಂದು ಕೇಳಿಕೊಂಡೆ. ಇದಾದ ನಂತರ ಅವರೇ ತನಿಖೆಗಾಗಿ ಆಜ್ಞೆ ನಡೆಸಬೇಕೆಂದು ಕೇಳಿಕೊಂಡೆ. ಇದಾದ ನಂತರ ಅವರೇ ತನಿಖೆಗಾಗಿ ಆಜ್ಞೆ ಮಾಡಿದರು. ತನಿಖಾ ವರದಿ ಬಂದ

ನಂತರ ಇದನ್ನು ಸಿ.ಓ.ಡಿ.ಯವರೇ ತನಿಖೆ ಮಾಡಿದ್ದಾರೆ, ಸಿ.ಓ.ಡಿ.ಯವರು ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಚಾರಣೆ ಮಾಡುತ್ತಿದ್ದಾರೆಂದು ನಾನೂ ಕೂಡ ಮುಖ್ಯಮಂತ್ರಿಗಳಿಗೆ ಹೇಳಿ ಪುನಃ ಸಿ.ಓ.ಡಿ. ವಿಚಾರಣೆ ಯಾವುದಿದೆ, ಅದನ್ನೂ ಕೂಡ ಸರ್ಕಾರದ ವತಿಯಿಂದ ತೀವ್ರ ಗತಿಯಿಂದ ಮುಗಿಸಬೇಕೆಂದಾಗ ಅದು ಈಗ ಒಂದು ಹಂತಕ್ಕೆ ಬಂದು ತಲುಪಿದ್ದಾರೆ. ಬಹುಶಃ ಈ ವಿಷಯ ನನಗೆ ಗೊತ್ತಿರುವ ಹಿನ್ನೆಲೆಯಲ್ಲಿ ಹೇಳಿದೆ. ಆದುದರಿಂದ, ಸರ್ಕಾರ ಈ ವರದಿ ಬಗ್ಗೆ, ವರದಿಯನ್ನಿಟ್ಟುಕೊಂಡು ತಿದ್ದುಕೊಳ್ಳುತ್ತೇವೆಂದು, ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಮತ್ತು 'ಬ್ಲಾಕ್‌ಮೇಲ್' ಎಂಬ ಯಾವ ಪದವನ್ನು ಉಪಯೋಗಿಸಿದ್ದೀರಿ, ದಯವಿಟ್ಟು ಅದನ್ನು ಉಪಯೋಗಿಸಬೇಡಿ.

ಡಾ|| ಯು. ಚಿತ್ತರಂಜನ್ : ಸ್ವತಃ ಕ್ರಿಮಿನಲ್ ಕಸ್ಟಡಿಯಲ್ಲಿದ್ದ ಒಬ್ಬನ ವಿರುದ್ಧ ತಯಾರಿಸಲಾಗಿದ್ದ ಎಫ್.ಐ.ಆರ್. ಪ್ರತಿ ನನ್ನ ಬಳಿ ಇದೆ, ಆತ ಫ್ಯಾಕ್ಟರಿಯಲ್ಲಿಲ್ಲ, ಆತನ ಸರ್ವೀಸ್ ರಿಜಿಸ್ಟರ್ ಇಲ್ಲ, ಆತನನ್ನು ಪುನಃ ಅದೇ ಹುದ್ದೆಗೆ ನೇಮಿಸಲಾಗಿದೆ. ನಾನು ಎಫ್‌ಐಆರ್ ಪ್ರತಿಯನ್ನು ಮಾನ್ಯ ಅಧ್ಯಕ್ಷರಿಗೆ ಈ ಮೂಲಕ ಕೊಡುತ್ತಿದ್ದೇನೆ. ಯಾವುದೇ ಸರ್ವೀಸ್ ರಿಜಿಸ್ಟರ್ ಅನ್ನು ಮೇಟೇನ್ ಮಾಡುತ್ತಿಲ್ಲ, ಇದನ್ನು ತಾವು ನೋಟ್ ಮಾಡಿಕೊಳ್ಳಬೇಕು.

ಡಾ|| ಯು. ಚಿತ್ತರಂಜನ್ : ಸ್ವತಃ ಸರ್ಕಾರ ನೇಮಕ ಮಾಡಿದಂಥ ಸಮಿತಿ ವರದಿಯನ್ನು ಕೊಟ್ಟಾದ ಮೇಲೆ ಆ ವರದಿಯ ಆಧಾರದ ಮೇಲೆ, ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಅಂತಹವರನ್ನು ಅಮಾನತ್‌ನಲ್ಲಿಡಿ, ಮತ್ತೆ ಸಿ.ಓ.ಡಿ. ತನಿಖೆಯ ನಂತರ ಅವರು ನಿರಾಪರಾಧಿಗಳೆಂದು ಕಂಡು ಬಂದರೆ, ಅವರಿಗೆ ಕೆಲಸ ಕೊಡುವ ವ್ಯವಸ್ಥೆ ಮಾಡಿ. ಸಿ.ಓ.ಡಿ. ತನಿಖೆಯಲ್ಲಿ ಅವರು ಅಪರಾಧಿಗಳೆಂದು ಕಂಡು ಬಂದಲ್ಲಿ ಅವರನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸುವಂಥ ವ್ಯವಸ್ಥೆ ಮಾಡಿ. ನೀವು ಸಿ.ಓ.ಡಿ. ತನಿಖೆಗೆ ಮಾಡಲು ಒಪ್ಪಿಸುವುದಾಗಿದ್ದರೆ, ನೀವೆ ಸ್ವತಃ ಸಮಿತಿಯಲ್ಲಿ ಅವರು ಅಪರಾಧಿಗಳೆಂದು ಕಂಡು ಬಂದರೂ ಕೂಡ ಅವರನ್ನು ಸೇವೆಯಲ್ಲಿ ಮುಂದುವರೆಸುವಂಥ ಅಗತ್ಯತೆ ಏನಿದೆ ಎನ್ನುವುದನ್ನು ಸ್ಪಷ್ಟ ಮಾಡಬೇಕಾಗಿದೆ.

ಉಪಾಧ್ಯಕ್ಷರು : ಯಡಿಯೂರಪ್ಪನವರೆ, ನಿಮ್ಮ ಸದಸ್ಯರಿಗೆ ಸ್ವಲ್ಪ ಹೇಳಬೇಕು. ಅವರು ಮಾತನಾಡುವುದಕ್ಕಿಂತ ಮೊದಲು ನನ್ನನ್ನು ಕೇಳಿ ಮಾತನಾಡಲಿ. ಅವರು ತಮಗೆ ಇಷ್ಟಬಂದಂತೆ ಮಾತನಾಡಿದರೆ ಹೇಗೆ?

ಡಾ|| ಯು. ಚಿತ್ತರಂಜನ್ : ರೇಂಜ್ ಆಫೀಸ್ ಕಾಂಪೌಂಡ್‌ನಲ್ಲಿ ದಾಸ್ತಾನು ಆದಂತ ಜಪ್ತನ್ನು ಕದ್ದು ಸಾಗಿಸಿದ ಬಗ್ಗೆ ಮೊದಲನೆ ಆರೋಪಿ, ರೇಂಜ್ ಫಾರೆಸ್ಟ್ ಆಫೀಸರ್. ಅದರ ಪ್ರತಿ ಇಲ್ಲಿದೆ ಡಿ.ಎಫ್.ಓ. ಕಛೇರಿಯಲ್ಲಿ ಯಾರು ಸರ್ವೀಸ್ ರಿಜಿಸ್ಟಾರ್ ಅಲ್ಲಿಲ್ಲವೆಂದು ಗೊತ್ತಿತ್ತೋ, ಅದೇ ಮನುಷ್ಯನನ್ನೆ ಪುನಃ ಅಲ್ಲಿಗೆ ವರ್ಗಾವಣೆ ಮಾಡಲಾಗಿದೆ. ಮಾನ್ಯ ಉಸ್ತುವಾರಿ ಮಂತ್ರಿಗಳ ಗಮನಕ್ಕೆ ಇದನ್ನು ತಂದು ಹೇಳಿದಾಗ, ಮಾನ್ಯ ಉಸ್ತುವಾರಿ ಮಂತ್ರಿಗಳು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇದು ಮುಖ್ಯಮಂತ್ರಿಗಳ ಕಛೇರಿಯಿಂದ ಆಗಿದೆ. ನೀವು ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ ಎನ್ನುವಂತಹ ಮಾತನ್ನು ಹೇಳಿದ್ದಾರೆ. ದಾಖಲಾತಿ ಸಮೇತ ಇದನ್ನು ನಿಮಗೆ ಕೊಡುತ್ತಾ ಇದ್ದೇನೆ.

ಉಪಾಧ್ಯಕ್ಷರು : ಕಳುಹಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದು ಎರಡು ಅಂಶ, ಸನ್ಮಾನ್ಯ ನಾಣಯ್ಯನವರ ಬಗ್ಗೆ ನನಗೆ ತುಂಬಾ ಗೌರವವಿದೆ. ವಿಧಾನಪರಿಷತ್ತಿನಲ್ಲಿದ್ದಾಗ, ಎಷ್ಟು ಕಠೋರವಾಗಿ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ನಿಂತು, ನಮಗೆ ಮಾರ್ಗದರ್ಶನ

ಮಾಡಿದಂತಹವರು. ನಿಮ್ಮ ನಾಲಿಗೆ ಅರಿತವಿದೆ, ಪ್ರವಾಹವಾಗಿ ಮಾತನಾಡುತ್ತೀರಿ, ಅದರಿಂದ ತನಿಖೆಗೆ ಬಂದು ನಿಮ್ಮ ಸರ್ಕಾರವೇ ಕ್ರಮ ಕೈಗೊಳ್ಳುವಂತ ಅವಕಾಶ ಸಿಕ್ಕಿದಾಗ, ಅಂತಹವರಿಗೆ ಬಡ್ತಿ ನೀಡತಕ್ಕಂತಹ ಅಕ್ಷಮ್ಯ ಅಪರಾದ, ಆ ಪಾಪಕ್ಕೆ ನೀವು ಬಲಿಯಾಗಬಾರದು ಎಂದು ನಾನು ಹೇಳುತ್ತಿದ್ದೇನೆ. ನಾನು ಇವತ್ತು ಅನೇಕ ಹೆಸರುಗಳನ್ನು ಹೇಳಿದ್ದೇನೆ. ಆ ವ್ಯಕ್ತಿಗಳಿಗೆ ಬಡ್ತಿ ಕೊಟ್ಟಿಲ್ಲ ಯಡಿಯೂರಪ್ಪನವರೆ ಎಂದು ನೀವು ಹೇಳಿದರೆ, ನೀವು ಹೇಳಿದಂಥ ಮಾತಿಗೆ ನಾನು ನನ್ನ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ನಿಮ್ಮ ವರದಿ ನನ್ನ ಕೈಸೇರಿದೆ.

ಆ ವ್ಯಕ್ತಿಗಳಿಗೆ ಬಡ್ತಿ ಕೊಡಬಾರದೆಂದು ಜನರ ಅಪೇಕ್ಷೆ ಇದೆ. ಪಾಪ ಆ ಯಲ್ಲಪ್ಪರೆಡ್ಡಿ ನಿಷ್ಠೂರವಾಗಿ, ಅಲ್ಲಿಗೆ ಹೋಗಿ ಕಾಡು ಮೇಡು ಸುತ್ತಿಕೊಂಡು ಇಷ್ಟೊಂದು ವರದಿಯನ್ನು ಕೊಟ್ಟಿದ್ದಾರೆ. ಆ ವ್ಯಕ್ತಿ ಒಬ್ಬ ಪ್ರಾಮಾಣಿಕ ವ್ಯಕ್ತಿ ಎಂದು ನಿಮಗೆ ಗೊತ್ತಿದೆ, ಇನ್ನೊಂದು ತನಿಖೆ ಈ ಬಗ್ಗೆ ಮಾಡಿಸುತ್ತೀರಿ. ಅಂದರೆ ಡಿಲೇ ಟ್ಯಾಕ್ಟಿಸ್ ಎಂದು ಜನ ಅಂದುಕೊಳ್ಳುತ್ತಾರೆ. ಇದು ಆಗಬಾರದು. ಅಂತಹ ಒಬ್ಬ ಅಧಿಕಾರಿಗೆ ನೀವು ಬಡ್ತಿ ಕೊಟ್ಟರೆ, ಇನ್ನು ಮುಂದೆ ಯಾವುದೇ ಅಧಿಕಾರಿ ಪ್ರಾಮಾಣಿಕವಾಗಿ ತನಿಖೆ ಮಾಡುವಂಥ ರಿಸ್ಕ್ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆ ಕೆಲಸ ನಿಮ್ಮಿಂದ ಆಗಬಾರದೆಂದು ಜನ ನಿರೀಕ್ಷೆ ಮಾಡುತ್ತಿದ್ದಾರೆ, ಅದನ್ನೇ ಮಾಡುತ್ತೇನೆಂದರೆ ನಾನೇನು ಮಾಡಲಿ ಸ್ವಾಮಿ? ಗೋಡಾ ಹೈ ಮೈದಾನ ಹೈ ಮಾಡಿಕೊಳ್ಳಿ. ಇಲ್ಲದ್ದಿದ್ದಕ್ಕೆ ಏನು ಹೇಳುತ್ತೀರಿ ಸ್ವಾಮಿ? ನಮ್ಮ ಜಾಲಪ್ಪನವರು ಭೂ ಆಕ್ರಮಣ ತಡೆಗೆ ವಿಶೇಷ ಜಿಲ್ಲಾಧಿಕಾರಿಯನ್ನು ನೇಮಿಸಿದ್ದಾಗಿದೆ ಎಂದು ಮೇ 12ನೇ ತಾರೀಖಿನಂದು ಹೇಳಿದರು. ಇವತ್ತು ಎಷ್ಟು ಸ್ವಾಮಿ ತಾರೀಖು? ಆಗಸ್ಟ್ 8 ಏತಕ್ಕೆ ಹೇಳಿದ್ದೀರಿ ಅವತ್ತು? ಪತ್ರಿಕೆಯಲ್ಲೂ ಬಂತು, ಪತ್ರಿಕೆಯಲ್ಲಿ ಬಂದರೆ ಸಾಕೇ? ಸ್ವಾಮಿ ಇದು ನಿಜ ತಾನೆ? ಈ ಗುಲ್ಜಾರ್ ಖಾನ್ ಜಮೀನು ಏನಿದೆ, ಈ ತಾತಗುಣಿಯ ರೋರಿಚ್ ಎಸ್ಟೇಟ್‌ಗೆ ಸಂಬಂಧ ಪಟ್ಟಿದ್ದುದು, ಈ ಕೋರಮಂಗಲ ಸರ್ಕಾರದ ಜಮೀನನ್ನು ಕಾನೂನು ಬಾಹಿರವಾಗಿ, ಸಂಬಂಧ ಇಲ್ಲದೆ ಇರತಕ್ಕಂತಹ ವ್ಯಕ್ತಿಗಳಿಗೆ ಖಾತೆ, ಪಹಣಿ ಬದಲಾವಣೆಯಾಗುತ್ತಿದೆ. ಇಷ್ಟು ಕಷ್ಟಪಟ್ಟು ನೀವೆಲ್ಲಾ ಆಯಮ್ಮನಿಗೆ ಸಂಬಂಧಪಟ್ಟಂಥ ಆಸ್ತಿ ವಗೈರೆ, ಬಂಗಾರ ಒಡವೆ ವಸ್ತು, ಕೋಟ್ಯಾಂತರ ರೂಪಾಯಿಗಳನ್ನು ಮಾಡಿದ್ದೀರ.

ಖಾತೆ ಬದಲಾವಣೆಗಳು, ಪಹಣಿ ಬದಲಾವಣೆಗಳು, ಅದರ ಅಧಿಕಾರವನ್ನು, ರೈಟ್ಸನ್ನು ಸಾಬೀತು ಮಾಡುವಂತಹ ಕೆಲಸ ಆಗುತ್ತಿದೆ. ನೀವು ಒಂದು ಕ್ಷಣ ತಡ ಮಾಡಿದರೆ, ಈ ನಾಡಿನ ಜನತೆಗೆ ಸೇರಬೇಕಾದಂಥ ಕೋಟ್ಯಾಂತರ ರೂಪಾಯಿ ಆಸ್ತಿ ಪರಭಾರೆಯಾಗುತ್ತಲ್ಲ; ಇದನ್ನು ನೋಡಿಕೊಂಡು ಕೈಕಟ್ಟಿಕೊಂಡು ಕುಳಿತಿದ್ದೀರಲ್ಲ ಎನ್ನುವ ನೋವು ನನಗೆ ಉಂಟಾಗುತ್ತದೆ ಸ್ವಾಮಿ, ಬೆಂಗಳೂರು ನಗರ ಜಿಲ್ಲೆ ಒಂದರಲ್ಲೆ, ಸುಮಾರು 600 ರಿಂದ 700 ಕೋಟಿ ರೂಪಾಯಿ ಬೆಲೆಬಾಳುವಂಥ ಸರ್ಕಾರದ ಭೂಮಿ ಕಬಳಿಕೆಯಾಗಿದೆ ಎಂದು ಹೇಳಿದ್ದುದು ನಾನಲ್ಲ, ಕಂದಾಯ ಸಚಿವರು ಒಪ್ಪಿಕೊಂಡು, ಈ ರಾಜಕೀಯ ಪ್ರಭಾವದ ತೊಳ್ಬಲದಿಂದ ಹಿಂದೆ ಇದು ಎತ್ತುವರಿಯಾಗಿದೆ. ಯಾವ ರಾಜಕೀಯ ವ್ಯಕ್ತಿಗಳು ಏನೇ ಮಾಡಿದರು ಸಹ ನಾನು ಬಿಡುವುದಿಲ್ಲ, ಅದಕ್ಕಾಗಿ ನಾನು ವಿಶೇಷ ಜಿಲ್ಲಾಧಿಕಾರಿಯನ್ನು ನೇಮಕ ಮಾಡುತ್ತೇನೆಂದು ಮೇ 12ನೇ ತಾರೀಖು ಹೇಳಿದಿರಿ. ಇದದುವರೆವಿಗೂ ಆಗಲಿಲ್ಲ. ಭೂಸುಧಾರಣೆ ನಿಯಮಗಳನ್ನು ಉಲ್ಲಂಘನೆ ಮಾಡಿ, ಜಮೀನುಗಳನ್ನು ಖರೀದಿ ಮಾಡಿರತಕ್ಕಂತಹ ಅನೇಕ ಪ್ರಕರಣಗಳು ನನಗೆ ಗೊತ್ತಿದೆ. ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ. ಆ ಬಗ್ಗೆ ಈವರೆಗೆ ಕ್ರಮ ತೆಗೆಮುಕೊಳ್ಳಲಿಲ್ಲ. ಸರ್ಕಾರಿ ಭೂಮಿ ಅಕ್ರಮ ಪರಭಾರೆ ಮಾಡಿರತಕ್ಕಂತಹ ತಹಸೀಲ್ದಾರನನ್ನು, ಅಮಾನತ್ತು ಮಾಡಿದ್ದೀರಿ. ಅಮಾನತ್ತು ಮಾಡಿದ್ದೀರಿ,

ಏನಾದರೂ ಒಳ್ಳೆಯದು ಮಾಡಬಹುದೆಂದು ಕಾಯುತ್ತಾ ಕುಳಿತರೆ, ಏನು ಆಗಬೇಕೋ ಅದನ್ನು ಮಾಡದೆ, ಮುಂದು ಬಿಟ್ಟುಕೊಂಡು, ಪತ್ರಿಕಾ ಹೇಳಿಕೆಯನ್ನು ಕೊಟ್ಟು, ಜನ ಅದನ್ನು ನೋಡಿಕೊಂಡು ಏನೋ ಈ ಭೂಮಿಯನ್ನು ರಕ್ಷಣೆ ಮಾಡುತ್ತಿದ್ದಾರೆ ಎನ್ನುವಂಥ ಭಾವನೆಯನ್ನು ತಂದು ತೃಪ್ತಿಪಡಿಸತಕ್ಕಂಥ ಕೆಲಸಕ್ಕಲ್ಲ ನಿಮ್ಮನ್ನ ಈ ನಾಡಿನ ಜನ ಅಧಿಕಾರಕ್ಕೆ ತಂದಿದ್ದು ಸ್ವಾಮಿ. ಮುಖ್ಯಮಂತ್ರಿಗಳು ಏಕೋ ಏನೋ ಗೊತ್ತಿಲ್ಲ, ಯಾವ ಕೆಟ್ಟ ಗಳಿಗೆ ಏನೋ ಗೊತ್ತಿಲ್ಲ ಇವತ್ತು ಈ ಪರಿಸ್ಥಿತಿ ಬರುವುದಕ್ಕೆ ಕಾರಣವೇನು? ನಾನು ಇಲ್ಲಿ ನಿಂತುಕೊಂಡು ಆ ಡಿಸೆಂಬರ್ ಕೊನೆಯ ಭಾಗದಲ್ಲಿ ಪ್ರಾಮಾಣಿಕವಾಗಿ, ಸ್ವಾಮಿ, ಕೋರಮಂಗಲದ, ಕ್ರೀಡಾ ಸಮುಚ್ಚಯ ಏನು ಕೊಟ್ಟಿದ್ದೀರಿ, ಇದು ಸೂಕ್ತವಾದ ಸಮಯವಲ್ಲ.

ಆ ಕೆರೆನಲ್ಲಿ ಇದನ್ನು ಕಟ್ಟುವುದನ್ನು ಹೋಗಬೇಡಿ, ಕ್ರೀಡಾ ಪಟುಗಳ ಹೆಸರಿನಲ್ಲಿ ನೀವು ಕಟ್ಟುವುದಕ್ಕೆ ಹೋಗಬೇಡಿ, ಇಲ್ಲಿ ದೊಡ್ಡದಾದ ಒಂದು ಸ್ಪೋರ್ಟ್ಸ್ ಆಟ ಆಡಿಸಿ ಹೆಸರು ತೆಗೆದುಕೊಳ್ಳುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ, ಅವರನ್ನು ಫೈವ್‌ಸ್ಟಾರ್ ಹೋಟಲುಗಳಲ್ಲೂ ತಂದಿಟ್ಟುಕೊಂಡರು. ಹತ್ತು ಹನ್ನೆರಡು ಕೋಟಿ ಖರ್ಚಾಗುವುದಿಲ್ಲವೆಂದು ಮುಖ್ಯಮಂತ್ರಿಗಳಿಗೆ ಹೇಳಿದೆ. ಹುಡ್ಕೋ ಜೊತೆ ಗೃಹಮಂಡಳಿಯವರು ಆ ಅಂದಾಜು ಮಾಡುವ ಕಾಲದಲ್ಲಿಯೇ ಜಾಸ್ತಿಯಾಗಿದೆ, ಅನ್ಯಾಯ ಮಾಡುವುದಕ್ಕೆ ಹೊರಟಿದ್ದಾರೆ, ದಾರಿ ಕೊಡಬೇಡಿ ಎಂದು ಹೇಳಿದೆ, ಮುಖ್ಯಮಂತ್ರಿಗಳು ಹೇಳಿದರು, ಯಡಿಯೂರಪ್ಪನವರೇ ಟೆಂಡರ್ ಒಡೆದಿಲ್ಲ, ಗೊತ್ತಿಲ್ಲದೆ ಮಾತನಾಡುತ್ತೀರಿ. ಆಮೇಲೆ ಮಾತನಾಡಿ, ನೀವು ಪಬ್ಲಿಕ್ ಅಕೌಂಟ್ಸ್ ಕಮಿಟಿ ಛೇರ್‌ಮನ್ ಆಗುತ್ತೀರಿ! ನಿಮ್ಮ ಪಕ್ಷದವರು ಆಗುತ್ತಾರೆ, ತನಿಖೆ ಮಾಡಿಕೊಳ್ಳಿ ರೆಕಾರ್ಡ್‌ಗೆ ಹೋಗಿದೆ, ನಾನು ಓದುವುದಕ್ಕೆ ಹೋಗುವುದಿಲ್ಲ, ಸಮಯವಿಲ್ಲವೆಂದು ಹೇಳಿದೀರಿ. ಸ್ವಾಮಿ, ಇದು ಆಯಿತಲ್ಲಾ, ನೀವು ಶೇಕಡ 42 ಕ್ಕಿಂತ ಹೆಚ್ಚು ಅಂದಾಜು ಕೊಟ್ಟರಲ್ಲ ತುರ್ತು ಆಗಬೇಕೆಂದು, ಏನಿತ್ತು ತುರ್ತು? ಬಡ್ಡಿ ಇಲ್ಲದೆ ಇರುವಂತಹ ದುಡ್ಡನ್ನು 24 ಕೋಟಿ ಕೊಟ್ಟರಲ್ಲಾ, ಕಡಿಮೆ ಬಡ್ಡಿಗೆ ಅಡ್ವಾನ್ಸ್ ಕೊಟ್ಟರಲ್ಲಾ ಏನ್ ಸ್ವಾಮಿ ತುರ್ತು ಇತ್ತು? ಇವತ್ತು ನಾನು ಹೇಳುತ್ತಿದ್ದೇನೆ, ಈಗೇನೋ ಶೇಕಡ 42 ಕ್ಕಿಂತ ಹೆಚ್ಚು ಅಂದಾಜು ಮಾಡಿ, ಬೆಲೆಗಿಂತ ಜಾಸ್ತಿ ಕೊಟ್ಟಿದ್ದೀರಿ, ಇವೆಲ್ಲವೂ ಸಹ ಕೈ ಅದಲು ಬದಲು ಆಗಿದೆ ಎಂದು ಜನ ಮಾತನಾಡುತ್ತಿದ್ದಾರೆ.

ನಿಮ್ಮ ಮೇಲೆ ಕೆಟ್ಟ ಆಪಾದನೆ ಬರಬಾರದು ಅಲ್ಲವೇ ಸ್ವಾಮಿ, ನಾನೇನು ಕೇಳಿದೆ ಸ್ವಾಮಿ ನಿಮಗೆ? ಅವತ್ತು ಏನು ಕೇಳಿದೆ, ತಯಾರು ಮಾಡಿದಂಥ ಆ ಅಂದಾಜನ್ನು ಇಟ್ಟುಕೊಂಡು ಅಲ್ಲೇನಾದರೂ ಕೊರತೆ ಇದೆಯೋ, ತಪ್ಪಿದೆಯೋ ಎಂದು ನೋಡಿದೆ. ಆ ಕೆರೆಯ ಅಂಗಳದ ಮಣ್ಣು ಮುಚ್ಚಲಿಕ್ಕೆ ಇಲ್ಲೇ ಅರಣ್ಯ ಇಲಾಖೆಗೆ ಸೇರಿದಂತ ಕೆರೆಕಟ್ಟೆಗಳನ್ನು ಮಣ್ಣು ತೆಗೆದು, ಪರಿಸರಕ್ಕೆ ಅವ್ಯವಸ್ಥೆ ಮಾಡಿ ಆ ಕೆರೆಗೆ ತುಂಬತಕ್ಕಂಥ ಮಣ್ಣನ್ನೆ ತೆಗೆದುಕೊಂಡು ಹೋಗಿ ತುಂಬಿಕೊಂಡಿರಿ, ಅದಕ್ಕೆ ರಕ್ಷಣೆ ಕೊಟ್ಟೀರಿ. ಸ್ವಾಮಿ, ಈ ಬಗ್ಗೆ ಈ ಸದನದಲ್ಲಿ ನಾನು ಒತ್ತಾಯ ಮಾಡಿದ ಮೇಲೆ ಪಬ್ಲಿಕ್ ಆಕೌಂಟ್ಸ್ ಕಮಿಟಿನಲ್ಲಿ ನೀವು ಮಾಡಿ ಎಂದು ಹೇಳಿದ ಮೇಲೆ, ಸನ್ಮಾನ್ಯ ಅಧ್ಯಕ್ಷರು ಎಸ್ಟಿಮೇಟ್ ಕಮಿಟಿಗೆ ರೆಫರ್ ಮಾಡಿದರು ತುಂಬಾ ಸಂತೋಷ. ನಾವು ಏನು ಕೇಳಿದ್ದೇವೆ ಸ್ವಾಮಿ? ಆ ಕಂಟ್ರಾಕ್ಟರ್ ಮೇಲೆ ನಮ್ಮದು ವಿರೋಧವೇ ಅಲ್ಲಿ ಕಬ್ಬಿಣದ ಬದಲು ಮರ ಉಪಯೋಗಿಸಿದ್ದಾರೆ, ಸಿಮೆಂಟ್ ಮಣ್ಣು ಉಪಯೋಗಿಸಿದ್ದಾರೆ ಎಂದು ಏನು ನಾವು ಹೇಳಿದ್ದೀವೆಯೇ, ಗುಣಮಟ್ಟ ಸರಿಯಿಲ್ಲವೆಂದು ಹೇಳಿದ್ದೇವೆಯೋ ನಾವು ಹೇಳುವಂಥಹದ್ದು ನೀವು ಕೊಟೇಶನ್ ಕರೆಯುವಂಥ ಕಾಲದಲ್ಲಿ ಎಲ್ಲರಿಗೂ ಅವಕಾಶ ಕೊಟ್ಟಿದ್ದರೆ, ಕಡಿಮೆ ಬೆಲೆಗೆ ಆಗಿದ್ದರೆ ನೂರಾರು ಕೋಟಿ

ರೂಪಾಯಿಗಳು ನಮ್ಮ ಸರ್ಕಾರದ ಖಜಾನೆಗೆ ಉಳಿಯುತ್ತಿತ್ತು. ದುಡುಕಿ ಮುಂದೆ ಹೋಗಬೇಡಿ ಎಂದು ಹೇಳಿದ್ದವು.

ಸನ್ಮಾನ್ಯ ವೀರಪ್ಪ ಮೊಯಿಲಿಯವರು ಇದ್ದ ಕಾಲದಲ್ಲಿ ಅಥವಾ ಕಾಂಗ್ರೆಸ್‌ನವರ ಕಾಲದಲ್ಲಿ ಆ ಕಮಿಟಿಯ ಅಧ್ಯಕ್ಷರು ಕಂಟ್ರಾಕ್ಟರ್‌ನ್ನು ಫೈನಲೈಸ ಮಾಡಬೇಕಾಗಿದ್ದರೆ ಮುಖ್ಯಮಂತ್ರಿಗಳೇ ಇದ್ದರು ಏಕೆ? ಇದರಲ್ಲಿ ಅನ್ಯಾಯವಾಗಬಾರದು; ತಪ್ಪಾಗಬಾರದು, ಅವ್ಯವಹಾರ ನಡೆಯಬಾರದು ಎನ್ನುವುದಕ್ಕೋಸ್ಕರ ಮಾಡಿದ್ದೀರಿ. ಏನಾಯಿತು ಸ್ವಾಮಿ? ಬಡ್ಡಿ ಇಲ್ಲದೆ ಅಡ್ವಾನ್ಸ್ ಕೊಡುತ್ತೀರಿ, ಕಡಿಮೆ ಬಡ್ಡಿಗೆ ಕೊಡುತ್ತೀರಿ, ಅಂದಾಜಿಗಿಂತ ಹೆಚ್ಚು ಕೊಡುತ್ತೀರಿ, ಒಂದು ಅಂದಾಜಿನ ಪ್ರಕಾರ ಈ 360 ಕೋಟಿ ರೂಪಾಯಿಗಳ ಯೋಜನೆ ಕೇವಲ 200-220 ಕೋಟಿನಲ್ಲಿ ಮುಗಿಯುತ್ತ ಇತ್ತು, 50 ಕೋಟಿ ಒಂದು ವರ್ಷಕ್ಕೆ ಟ್ರಾಂಜಾಕ್ಷನ್ ಮಾಡಿದ್ದೀರಿ, ಏಕೆ? 50 ಕೋಟಿ ರೂಪಾಯಿ ಟ್ರಾಂಜಾಕ್ಷನ್ ಮಾಡಿದಂತಹವನು ಇಲ್ಲಿ ಬಂದು ಬಿಲ್ಡಿಂಗ್‌ನ್ನು ಕಟ್ಟುತ್ತಾನೆ, ಬೇರೆ ಯಾರೋ 20-30 ಕೋಟಿ ಟ್ರಾಂಜಾಕ್ಷನ್ ಮಾಡಿದವನು ಅಥವಾ ನಿಮಗೆ ಬಬೇಕಾದಂತಹವನು ಎಲ್ಲಿಂದಲಾದರೂ ಯಂತ್ರಗಳನ್ನು ತರುತ್ತಾನೆ. ನಿಮ್ಮ ಅವಧಿಯೊಳಗಡೆ ಕೆಲಸ ಮಾಡುವುದಕ್ಕೆ ಯಾರು ಬೇಕಾದರೂ ಬರುತ್ತಿದ್ದರು. ಎಲ್ಲರಿಗೂ ಅವಕಾಶ ಕೊಡದೆ ನೀವು ಮಾಡಿದಿರಿ, ತನಿಖೆಗೆ ಹೋಯಿತು. ತನಿಖೆಗೆ ಹೋದರೆ ಏತಕ್ಕೋಸ್ಕರ ತನಿಖೆಗೆ ಕಳುಹಿಸಿದ್ದು? ಅಲ್ಲಿ ಈ ಅಂದಾಜು ಏನಿತ್ತು, ಅಂದಾಜನ್ನು ಹೆಚ್ಚು ಮಾಡಿಕೊಡಲು ಕಾರಣವೇನಿತ್ತು? ಅಡ್ವಾನ್ಸ್ ಕೊಡಲು ಕಾರಣವೇನು? ಬಡ್ಡಿ ಇಲ್ಲವೆ ಕಡಿಮೆ ಬೆಲೆಗೆ ಕೊಡಲು ಕಾರಣವೇನು? ಇದನ್ನು ತನಿಖೆ ಮಾಡಿ ಎಂದು ಕಳುಹಿಸಿದ್ದು. ಸ್ವಾಮಿ ಏನಾಯಿತೆಂದರೆ 25-5-95ರಲ್ಲಿ ಮೊದಲನೆ ಸಮಿತಿಯ ಸಭೆಯಾಯಿತು, ಈ ಸಮಿತಿಯಲ್ಲಿ ನಾವು ಏನೇನು ಮಾಡಬೇಕೆಂದು ಚರ್ಚೆ ಮಾಡುತ್ತಾರೆ. 5-6-95ಕ್ಕೆ ಎರಡನೆ ಸಭೆ ಆ ಸಭೆಯಲ್ಲಿ ಸ್ಥಳಕ್ಕೆ ಹೋಗಿ ಬರುತ್ತಾರೆ. ಅದು ಸಮಿತಿಗೆ ಬಿಟ್ಟದ್ದುದು ನಾನು ಟೀಕೆ ಮಾಡುವುದಿಲ್ಲ.

5-6-95ರಂದು ಮೀಟಿಂಗ್ ಹೋಗಿ ಬಂದವರು, ನಮ್ಮ ಸಭಾಧ್ಯಕ್ಷರಿಗೆ ರಿಪೋರ್ಟ್ ಕೊಡುವುದಕ್ಕೆ ಇನ್ನು ನನಗೆ ನಾಲ್ಕು ವಾರ ಅವಧಿ ಬೇಕೆಂದು ಪತ್ರ ಬರೆಯುತ್ತಾರೆ. ಆ ಪತ್ರ ಬರೆದ 24 ಗಂಟೆಯಲ್ಲಿ ಸ್ಪೀಕರ್‌ಗೆ ಪತ್ರ ಬರೆಯುತ್ತಾರೆ.

ಈಗಿನ ಮುಖ್ಯಮಂತ್ರಿಗಳಾಗಲಿ ಹಿಂದಿನ ಮುಖ್ಯಮಂತ್ರಿಗಳಾಗಲೀ ಪುಣ್ಯಕ್ಕೆ ಮುಂದಿನ ಮುಖ್ಯಮಂತ್ರಿಗಳು ಬರಲಿಲ್ಲ. ಇದರಲ್ಲಿ ಏನೂ ಅವ್ಯವಹಾರ ನಡೆದಿಲ್ಲ, ಪತ್ರ ಕೊಡಿ ನನ್ನದೇನೂ ಅಭ್ಯಂತರವಿಲ್ಲ, ಆದರೆ, ಯಾವುದೇ ಸಮಿತಿಯ ಯಾವುದೇ ಅಧ್ಯಕ್ಷ ಅಲ್ಲಿರುವಂಥ ಸದಸ್ಯರ ಪರವಾಗಿ ಆ ಕುರ್ಚಿಯಲ್ಲಿ ಕುಳಿತುಕೊಂಡು ಆ ನಡವಳಿಕೆಯನ್ನು ನಡೆಸಲು ಆ ಕುರ್ಚಿ ಇದೆಯೇ ಹೊರತು, ಅದಕ್ಕಿಂತ ಹೆಚ್ಚಿನ ಅಧಿಕಾರ ಯಾವುದೇ ಸಮಿತಿಯ ಅಧ್ಯಕ್ಷನಿಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಸ್ಪೀಕರ್‌ಗೆ ಆ ರೀತಿ ಪತ್ರ ಬರೆದ ನಂತರ ನಾವೂ ಸಹ ಸ್ಪೀಕರ್‌ಗೆ ಪತ್ರ ಬರೆದವು. ಮತ್ತೆ ಏನು ಪತ್ರ ಬರೆದಿದ್ದೇವೆಂದು ಸದಸ್ಯರಿಂದ ಸದಸ್ಯರಿಂದ ಓದಿಸಿದರು, ಅದು ರೆಕಾರ್ಡ್ ಆಯಿತು. ಸಮತಿಯ ಸದಸ್ಯರು ನಡವಳಿಕೆಗಳನ್ನು ಕೊಡಿ ಅಪ್ಪಾ ನಾವು ಮುಂದೆ ಹೋಗಿ ಏನು ಮಾಡಬೇಕು ಏನು ಕೊರತೆಗಳು ಇದೆ ನೋಡೋಣ, ನಮ್ಮನ್ನು ಕೇಳಿದೆ ಈ ರೀತಿ ವರದಿ ಕೊಡುವುದು ಸರಿಯಲ್ಲ ಎಂದು ಹೇಳಿದಾಗ ಆ ವರದಿಯ ನಡವಳಿಕೆಯನ್ನೂ ಸಹ ಕೊಡದೆ, ಈ ರೀತಿ ಯಾರೋ ಒಬ್ಬ ಜಡ್ಜ್ ಮುಂದೆ ಕೊಲೆಗಾರ ಕೈಕಟ್ಟಿ ನಿಂತುಕೊಳ್ಳುತ್ತಾನೆ, ಆ ಕಡೆ ವಕೀಲ ನಿಂತುಕೊಳ್ಳುತ್ತಾನೆ. ಆರ್ಗ್ಯೂ ಮಾಡುವುದಕ್ಕಿಂತ ಮುಂಚೆ ಜಡ್ಜ್ ಹೇಳುತ್ತಾರೆ: ಇಲ್ಲ, ಈತ ಕೊಲೆಯೇ ಮಾಡಿಲ್ಲ, ಈತ ನಿರಪರಾದಿ ಎಂದು ಚರ್ಚೆ ಮಾಡುವುದಕ್ಕಿಂತ ಮುಂಚೆಯೇ ಹೇಳುತ್ತಾರೆ.

ಆದರೂ ನಾನು ಕೇಸ್ ನಡೆಸುತ್ತೇನೆ ಇದು ಹೇಗೆ ಸಾಧ್ಯ ಸ್ವಾಮಿ, ನೀವೆಲ್ಲವನ್ನೂ ನೋಡಿ ಸದಸ್ಯರಿಗೆ ಮನದಟ್ಟಾದರೆ ನನ್ನದೇನೂ ಅಭ್ಯಂತರ ಇಲ್ಲ. ನಾನ್ಯಾರು ಪ್ರಶ್ನೆ ಮಾಡುವುದಕ್ಕೆ. ಆದರೆ ಇವತ್ತು ಅಧ್ಯಕ್ಷರಿಗೆ ಎಲ್ಲವೂ ಸರಿ ಎಂದು ಮೊದಲೆ ಪತ್ರ ಬರೆಯುವಂತಹದು ಇದು ಯಾರಿಗೂ ಗೌರವ ತರುವಂಥ ಸಂಗತಿಯಲ್ಲ. ನಾವು ಅದನ್ನು ಬೇರೆ ರೀತಿಯಲ್ಲಿ ಪ್ರಿವಿಲೇಜ್ ಆಗಿ ಮೂವ್ ಮಾಡುತ್ತೇವೆ ಚರ್ಚೆ ಮಾಡುತ್ತೇವೆ ಅದು ಬೇರೆ ವಿಷಯ. ಆದರೆ ಈ ರಾಜ್ಯದ ಮುಖ್ಯಮಂತ್ರಿಗಳಿಗಿಂತ ಬಹಳ ಮುಂದೇನೆ ನಾನು ಗಮನವನ್ನು ಕೊಟ್ಟಿದ್ದರೂ ಸಹ ಇದು ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ಆಗುವಂಥ ಸಂದರ್ಭ ಇದೆ ಇದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ ಎಂದು ಮುಖ್ಯಮಂತ್ರಿಗಳಿಗೆ ಹೇಳಿದ್ದೆ ಎಲ್ಲ ಸರಿ ಇದೆ ಎಂದು ನೀವು ಅವಸರದಲ್ಲಿ ನೀವು ಅದನ್ನು ಕಟ್ಟುವುದಾದರೆ ನಮ್ಮ ಒಪ್ಪಿಗೆ ಇಲ್ಲ. ನೀವು ಹೇಳಬಹುದು ನೀವ್ಯಾರಿ ಕೇಳುವುದಕ್ಕೆ, ನಮ್ಮ ಸರ್ಕಾರ ಬಹುಮತವನ್ನು ಇಲ್ಲ. ನೀವು ಹೇಳಬಹುದು ನೀವ್ಯಾರಿ ಕೇಳುವುದಕ್ಕೆ, ನಮ್ಮ ಸರ್ಕಾರ ಬಹುಮತವನ್ನು ಕೊಟ್ಟಿದೆ. ನೀವು ಕೇಳುವುದಕ್ಕೆ ಇರುವವರು, ನಾವು ಅದನ್ನು ಮಾಡುವುದಕ್ಕೆ ಇರುವವರು. ಇದು ಸರಿಯಾದುದಲ್ಲ, ನಾವು ನಿಮ್ಮ ಆಳ್ವಿಕೆ ಸರಿಯಾಗಿ ಇರಬೇಕು ಹೇಳಿದಾಗ, ... ಪ್ರಾರಂಭದಲ್ಲೇ, ಇಲ್ಲೇನು ಕೊರತೆಗಳು ಆಗುತ್ತಿದೆ, ಲೋಪದೋಷಗಳು ಆಗುತ್ತಿದೆ, ಆಪಾದನೆ ಬರಬಹುದು, ಸರ್ಕಾರದ ಖಜಾನೆಗೆ ಬರುವಂಥ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರಕ್ಕೆ ಅವಕಾಶ ಆಗಬಹುದೇನೋ ಎಂಬ ಭಯವನ್ನು ವ್ಯಕ್ತಪಡಿಸಿದಾಗ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಈ ರೀತಿ ತರಾತುರಿಯಲ್ಲಿ ಕಂಟ್ರಾಕ್ಟ್ ಕೊಟ್ಟು ಇವತ್ತು ಏನಾಗಿದೆ ಇದು ಯಾರಿಗೂ ಗೌರವ ತರುವಂಥ ಸಂಗತಿಯಲ್ಲ ಎಂದು ಇವತ್ತು ಜನ ಮಾತನಾಡುತ್ತಿದ್ದಾರೆ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ಆಗುತ್ತಿದೆ ಎಂಬ ಮಾತನ್ನು......

ಶ್ರೀ ಕೆ.ಎನ್. ನಾಗೇಗೌಡ : ಒಂದು ನಿಮಿಷ ಮಾನ್ಯ ಅಧ್ಯಕ್ಷರೇ, ಎಲ್ಲಿಯವರೆಗೆ ತಾವು ಕೊಡಬೇಕೆಂದು ಆದೇಶ ಕೊಡುತ್ತೀರಿ, ಎಲ್ಲಿಯವರೆಗೆ ಸದನ ನಡೆಸಬೇಕೆಂದು ಆದೇಶ ಕೊಡುತ್ತೀರಿ ಎನ್ನತಕ್ಕಂಥದ್ದನ್ನು ಹೇಳಿದರೆ ಬಹಳ ಸಂತೋಷವಾಗುತ್ತದೆ. ಎಷ್ಟು ಗಂಟೆಯವರೆಗೆ ನಾವು ಕುಳಿತುಕೊಳ್ಳಬೇಕು, ನಮ್ಮ ವಿರೋಧಪಕ್ಷದ ನಾಯಕರು ಎಷ್ಟು ಗಂಟೆಯವರೆಗೆ ಮುಗಿಸುತ್ತಾರೆ ಎಂದು ತಾವು ಹೇಳಿದರೆ ನಮಗೆ ಬಹಳ ಸಂತೋಷ ಆಗುತ್ತದೆ ಅಷ್ಟೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾಳೆ ಬೇಕಾದರೆ ಕಂಟಿನ್ಯೂ ಮಾಡಬಹುದು, ಈಗ ಬೇಕಾದರೆ ಅಡ್ಜರ್ನ್ ಮಾಡಬಹುದು ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮಾತನಾಡಬೇಕು, ಅವರು ಪೂರ್ತಿ ಮುಗಿಸುತ್ತಾರೆ. ಅದರ ಜೊತೆಯಲ್ಲಿ ಬೇರೆಯವರು ಕೂಡ ಪಾರ್ಟಿಸಿಪೇಟ್ ಮಾಡುವವರಿದ್ದಾರಲ್ಲ, ಚರ್ಚೆಯಲ್ಲಿ ಭಾಗವಹಿಸುವವರಿದ್ದಾರಲ್ಲ ಅವರಿಗೂ ಕೂಡ ಅವಕಾಶ ಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ. ಅವರೇ ನಾಳೆನೂ ಕಂಟಿನ್ಯೂ ಮಾಡಿದರೆ ಬೇರೆಯವರಿಗೆ ಯಾವ ಅವಕಾಶವೂ ಸಿಗುವುದಿಲ್ಲ. ಕೊನೆಗೆ ನಮ್ಮ ನಮ್ಮ ಅನಿಸಿಕೆಗಳು, ನಮ್ಮ ನಮ್ಮ ಹೇಳಿಕೆಗಳು ನಾವು ಅಲ್ಲಿಗೆ ಇಡಬೇಕಾಗುತ್ತದೆ. ಅದಕ್ಕಾಗಿ ತಾವು ದಯವಿಟ್ಟು ಒಂದು ನಿರ್ಣಯ ತೆಗೆದುಕೊಳ್ಳಬೇಕು. ನಾಳೆ ನಮ್ಮ ಕಡೆ ಕೂಡ ಕೆಲವು ಜನ ಮಾತನಾಡುವವರಿದ್ದಾರೆ. ಇಲ್ಲದಿದ್ದರೆ ಏನಾಗುತ್ತದೆ, ಸೆಶನ್ ಅವರಗೋಸ್ಕರ ಕರೆಸಿದ್ದು, ಅವರು ಮಾತ್ರ ಮಾತನಾಡಬೇಕು ಬೇರೆ ಸದಸ್ಯರಿಗೆ ಅವಕಾಶ ಇಲ್ಲ ಎಂದು ಹೇಳಿದರೆ ಅಷ್ಟೇ ಮಾಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಅಧ್ಯಕ್ಷರೇ, ಸದನದ ಕಾರ್ಯ ಕಲಾಪ ಸಮಿತಿಯಲ್ಲಿ ತೀರ್ಮಾನ ಆಗಿದೆ ನಾಳೆಗೆ ಉತ್ತರ ಮುಗಿದು ಹೋಗಬೇಕು. ಅಷ್ಟೇ ಪ್ರಶ್ನೆ. ಯಾರು ಎಷ್ಟು ಹೊತ್ತು ಮಾತನಾಡುತ್ತಾರೆ ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ವಿರೋಧ ಪಕ್ಷದ ನಾಯಕರು ಎಂಟು ಗಂಟೆ ಮಾತನಾಡುತ್ತೇನೆ ಎಂದು ಹೇಳಿದ್ದಾರೆ. ನಾನು ಬೆಳಿಗ್ಗೆವರೆಗೂ ಕೂಡಡಲು ಸಿದ್ಧನಿದ್ದೇನೆ. ಆದರೆ ಒಂದು ಮಾತ್ರ ಹೇಳುತ್ತೇನೆ ಅದಕ್ಕೂ ಅಪಾರ್ಥ ಕಲ್ಪನೆ ಮಾಡುತ್ತಾರೆ ಏನೋ ಹೆಚ್ಚು ಮಾತನಾಡುತ್ತಿದ್ದರು ಕರ್ಟೆನ್ ಮಾಡಲಿಕ್ಕೆ ಹೋದರು ಎಂದು ಯಾರೂ ಹೇಳಬೇಕಾದುದಿಲ್ಲ. I am prepared to sit for any extent.

SRI M. MALLIKARJUN KHARGE : We are worried about our debate.

ಶ್ರೀ ಹೆಚ್.ಡಿ. ದೇವೇಗೌಡ : ಇಲ್ಲಿ ಒಂದೇ ರಾಜಕೀಯ ಪಕ್ಷ ಇಲ್ಲ. ಅವಿಶ್ವಾಸಮತ ನಿರ್ಣಯ ಎಂದರೆ ಪ್ರತಿಯೊಂದು ರಾಜಕೀಯ ಪಕ್ಷದ ಮುಖಂಡರು ಮಾತನಾಡಬೇಕಾಗುತ್ತದೆ. ಆದುದರಿಂದ ಟೈಮ್ ಅಪೋರ್ಷನ್ ಮಾಡೋದು ನಿಮಗೆ ಸೇರಿದ್ದುದು. ನಾಡಿದ್ದು ಈದ್ ಮಿಲಾದ್ ಹಬ್ಬ ಇರುವುದರಿಂದ ನಾವು ಕೂಡಲಿಕ್ಕೆ ಆಗುವುದಿಲ್ಲ. ನಾಳೆ ಮುಗಿದು ಹೋಗಬೇಕಾಗುತ್ತದೆ. ನಮ್ಮ ಕಡೆ ಪಟೇಲರು ಕೋಜೆಂಟ್ರಿಕ್ಸ್ ವಿಷಯದ ಬಗ್ಗೆ ಮಾತನಾಡಬೇಕಾಗುತ್ತದೆ. ಹೌಸಿಂಗ್ ಮಿನಿಸಟ್ರ್ ಮಾತನಾಡಬೇಕಾಗುತ್ತದೆ. ಹೋಮ್ ಮಿನಿಸ್ಟ್ರ ಮಾತನಾಡುತ್ತಾರೆ ನಾನು ಮಾತನಾಡುತ್ತೇನೆ ಏಕೆಂದರೆ ಇಂಡಿವಿಜ್ಯೂವಲ್ ಚಾರ್ಜ್‌ಸ್ ಇದೆ. ಜಾಲಪ್ಪನವರೂ ಮಾತನಾಡುತ್ತಾರೆ ನಲವತ್ತು ಲಕ್ಷ, ಟ್ರಾನ್ಸ್‌ಫರ್ ವಿಷಯ ಬಂದಿರುವುದರಿಂದ He has to answer ಸದನದಲ್ಲಿ ಯಾರೂ ಹೊಸಬರೇನು ಇಲ್ಲ ಹಳೇಬರು ಇದ್ದೀರಿ ಹಿರಿಯರು ಇದ್ದೀರಿ ಎಷ್ಟು ಜನರ ಮೇಲೆ ಅಪಾದನೆ ಬಂದಿದೆ ಅವರೆಲ್ಲಾ ಮಾತನಾಡಬೇಕಾಗುತ್ತದೆ. ನಮಗೆ ಎಂಟು ಗಂಟೆ ಬೇಡ ಇದೇನು ವಿಶ್ವಸಂಸ್ಥೆ ಅಲ್ಲ. ನಮಗೆ ಕನಿಷ್ಟ ಮೂರರಿಂದ ನಾಲ್ಕು ಗಂಟೆ ಬೇಡವೇ. ನನಗೇಕೆ ಎರಡು ಗಂಟೆ ಬೇಕು. ನನಗೆ ಎಂಟು ಗಂಟೆ ಮಾತನಾಡುವ ಶಕ್ತಿ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನನಗೆ ಅರ್ಧ ಗಂಟೆ ಸಾಕು ಸ್ವಾಮಿ.

ಶ್ರೀ ಹೆಚ್.ಡಿ. ದೇವೇಗೌಡ : ಅವರಿಗೆ ಅರ್ಧ ಗಂಟೆ ಬೇಕು, ಅಮೇಲೆ ಜಾಲಪ್ಪನವರಿಗೆ ಅರ್ಧ ಗಂಟೆ ಗೃಹ ಸಚಿವರಿಗೆ ಒಂದರ್ಧ ಗಂಟೆ, ಹೌಸಿಂಗ್ ಮಿನಿಸ್ಟರ್‌ಗೆ ಅರ್ಧಗಂಟೆ ಹೀಗೆ ಸರ್ಕಾರಕ್ಕೆ ನಾಲ್ಕು ಗಂಟೆಯಾದರೂ ಕೊಡಿ ಅಷ್ಟೆ. ಬಾಕಿ ಯಾರು ಎಷ್ಟು ಬೇಕಾದರೂ ಮಾತನಾಡಿ, ಅಪೋರ್ಶನ್ ಮಾಡಿಕೊಳ್ಳಿ. But, He left to the speaker to aportion the time to each political party ಅದು ನನಗೆ ಸಂಬಂಧ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ರೆಗ್ಯೂಲೇಟ್ ಅಧ್ಯಕ್ಷರು ಮಾಡಬೇಕು. ಈಗ ಬೇಕಾದರೆ ಹೀಗೆ ಫಿಕ್ಸ್ ಮಾಡಿ according to strength ಎಷ್ಟು ಟೈಮ್ ಕೊಡಬೇಕು ಅಷ್ಟು ಕೊಟ್ಟು ಬಿಡಿ. ಅವರಿಗೆ ಎಷ್ಟು ಕೊಡಬೇಕೋ ಅಷ್ಟೇ ಕೊಡಿ ಬೇರೆಯವರಿಗೆ ಎಷ್ಟು ಕೊಡಬೇಕೋ ಅಷ್ಟೇ ಕೊಡಿ. ಮೊದಲಿನಿಂದಲೂ ಪದ್ಧತಿ ನಡೆದುಕೊಂಡು ಬಂದಿದ್ದುದು. ಇಲ್ಲ ಎಂದರೆ ಇದು ಇಷ್ಟಕ್ಕೆ ಮುಗಿದು ಹೋಗುತ್ತದೆ. ಬೇರೆಯವರಿಗೆ ಏನೂ ಅವಕಾಶ ಸಿಗುವುದಿಲ್ಲ.

ಉಪಾಧ್ಯಕ್ಷರು : ಒಂದು ನಿರ್ಣಯ, ಇದನ್ನು ಮುಗಿಸಬೇಕಾದುದು ಮುಗಿಸಲೇಬೇಕು. ಇದರ ಬಗ್ಗೆ ಸದನದ ಕಾರ್ಯ ಕಲಾಪ ಸಮಿತಿಯಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಎಲ್ಲರಿಗೂ ಅವಕಾಶ ಮಾಡಿಕೊಡಬೇಕಾದುದು ನಮ್ಮ ಉದ್ದೇಶ.

ಯಾರಿಗೂ ಅವಕಾಶ ಸಿಗಲಿಲ್ಲ ಎಂದು ಅನಿಸಬಾರದು. ಎಲ್ಲರೂ ತಮ್ಮ ಭಾವನೆಗಳನ್ನು ವ್ಯಕ್ತ ಮಾಡಬಹುದು

ಶ್ರೀ ವಾಟಾಳ್ ನಾಗರಾಜ್ : ಅವಿಶ್ವಾಸ ನಿರ್ಣಯವನ್ನು ವಿರೋಧ ಪಕ್ಷದ ನಾಯಕರು ನಿನ್ನೆ ಮಂಡಿಸಿದ್ದಾರೆ. ಅವರು ಸಾಕಷ್ಟು ಮಾತನಾಡುತ್ತಿದ್ದಾರೆ. ಅವರು ಎಷ್ಟು ಮಾತನಾಡಬೇಕು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಎಷ್ಟು ಬೇಕಾದರೂ ಮಾತನಾಡಲಿ ಅದು ಅವರಿಗೆ ಸೇರಿದ್ದುದು. ಈಗ ನಾಳೆ ಎಷ್ಟು ಹೊತ್ತು ಆದರೂ ಮುಗಿಯಬೇಕು ಎನ್ನುವುದು ಈ ಸದನದ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನ ಆಗಿದೆ. ಈಗ ನಾವು ಹೊಸದಾಗಿ ಅವರದೆಲ್ಲಾ ಮುಗಿದ ಮೇಲೆ, ನಾವು ಕೂಡ ಒಂದು ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ಅವಕಾಶ ಇಲ್ಲ. ಇನ್ನೊಂದು ಮೂರು ದಿವಸ ತೆಗೆದುಕೊಳ್ಳೋಣ ಎಂದರೆ, ಅದಕ್ಕೆ ಇನ್ನೂ ಆರು ತಿಂಗಳು ಕಾಯಬೇಕು. ಅದು ಏನೋ ಗ್ರಹಾಚಾರ ತಪ್ಪಿ ಬಂದು ಬಿಟ್ಟಿದೆ ಈಗ. ಈಗ ನಾವು ಸ್ವಲ್ಪ ಮಾತನಾಡಬೇಕು. ನಮಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಯಾವಾಗ? ಈ ಜನ್ಮದಲ್ಲಿ ಆಗುವುದಿಲ್ಲ. ನೀವು ಎಲ್ಲರಿಗೂ ಅವಕಾಶ ಮಾಡಿಕೊಡುವುದಕ್ಕೆ; ಸಾಧ್ಯವೇ ಇಲ್ಲ, ಏಕೆ ಹೀಗೆ ಹೇಳುತ್ತಿದ್ದೀರಿ? ನೀವು ಏನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ಹೇಳಿ ಬಿಡಿ. ಈಗ ಅವರ ಕಡೆಯವರು ಸುಮಾರು ಮೂರುವರೆ ಡಜನ್ ಕೇಳುತ್ತಿದ್ದಾರೆ ನಮ್ಮಲ್ಲೂ ಎರಡೂವರೆ ಡಜನ್ ನಾವು ಕೇಳುತ್ತಿದ್ದೇವೆ, ನೀವು ಒಬ್ಬೊಬ್ಬರಿಗೆ ಒಂದೊಂದು ನಿಮಿಷ ಕೊಟ್ಟಿರುವೇ ನಾಳೆ ರಾತ್ರಿ ಅರ್ಧ ರಾತ್ರಿ ಮುಗಿಯುತ್ತದೆ.

ಒಬ್ಬ ಮಾನ್ಯ ಸದಸ್ಯರು : ಹೊಸಬರಿಗೆ ಅವಕಾಶವನ್ನೇ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ತಾವು ಅವರಿಗೆ ಎಷ್ಟು ಟೈಮ್ ಅಲಾಟ್ ಮಾಡಿದ್ದೀರಿ ಎಂಬುದು ಗೊತ್ತಾಗಬೇಕು. ಅವರು ಎರಡು ತಾಸು ತೆಗೆದುಕೊಳ್ಳಲಿ, ನಾಲ್ಕು ತಾಸು ತೆಗೆದುಕೊಳ್ಳಲಿ, ಎಂಟು ತಾಸು ತೆಗೆದುಕೊಳ್ಳಲಿ. ಅವರಿಗೆ ಎಂಟು ತಾಸು ನೀವು ಕೊಟ್ಟರೆ, ನಮಗೆ ಆರು ತಾಸುಗಳಾದರೂ ಕೊಡಬೇಕಲ್ಲ according to the strength ಐದು ತಾಸುಗಳಾದರೂ ಕೊಡಬೇಕಲ್ಲ. ಅವರು ಮೂವ್ ಮಾಡಿದ್ದಾರೆ ಎಂದು ಅವರಿಗೆ ಒಂದು ತಾಸು ಹೆಚ್ಚು ಕೊಡಿ. ಆದರೆ ಬೇರೆಯವರಿಗೆ ಅವಕಾಶ ಇಲ್ಲ 7-8 ತಾಸುಗಳನ್ನು ನೀವು ನಿಗದಿ ಮಾಡದೆಹೋದರೆ ಹೇಗೆ ನಡೆಸುವುದು ಸದನ. ಅಂದರೆ ನಮ್ಮ ಸಹಕಾರ ನಿಮಗೆ ಬೇಕಿಲ್ಲವೇ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ವಿರೋಧ ಪಕ್ಷದವರುಗಳು ಮಾತ್ರವಲ್ಲದೇ,ಆಡಳಿತ ಪಕ್ಷದಲ್ಲಿ ಇರುವ ಸದಸ್ಯರು ಕೂಡ ಈ ಬಗ್ಗೆ ಮಾತನಾಡುತ್ತೇವೆ ಎಂದು ಹೇಳುತ್ತಿದ್ದಾರೆ ಬಹಳ ಸಂತೋಷ.

ಉಪಾಧ್ಯಕ್ಷರು : ಈಗ ಇರತಕ್ಕಂಥ ಅವಕಾಶ ನಾಳೆ ಸಾಯಂಕಾಲದವರೆಗೆ. ನಾಳೆ ಸಾಯಂಕಾಲದೊಳಗೆ ಇದನ್ನು ಮುಗಿಸಲೇಬೇಕು.ಇದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೆಗೆದುಕೊಂಡು ತೀರ್ಮಾನ ಇದು. ಈಗಾಗಲೇ ನಿನ್ನೆ 2 ತಾಸು 20 ನಿಮಿಷ ಶ್ರೀಮಾನ್ ಯಡಿಯೂರಪ್ಪನವರು ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ಕಾನೂನು ಮಂತ್ರಿಗಳು ಎಲ್ಲೋ ಹೋಗಿದ್ದಾರೆ. ತಮಗೇನಾದರೂ ನಿಯಮಾವಳಿಗಳಲ್ಲಿ ಅವಕಾಶ ಇದ್ದರೆ. ನಾನು ಈಗ ಏನೇನು ಹೇಳಬೇಕು ಎಂದಿದ್ದೇನೋ ಅದನ್ನೆಲ್ಲಾ ಹೇಳುತ್ತಾ ಹೋದರೆ ರಾತ್ರಿ 12 ಘಂಟೆಯಾಗಬಹುದು. ಅದ್ದರಿಂದ ಅವುಗಳನ್ನೆಲ್ಲಾ ಒಂದು ಪಟ್ಟಿ ಮಾಡಿ ನಾನು ಕೊಟ್ಟರೆ ಅದನ್ನು ರೆಕಾರ್ಡ್‌ನಲ್ಲಿ ಹಾಕುತ್ತೇವೆ ಎಂದು ನೀವು ಹೇಳಿದರೆ ನಾನು ಬರೆದುಕೊಟ್ಟು ಬಿಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು. ಏನೇನು ವಿಷಯ ಹೇಳೇಕು, ಎಷ್ಟು ಹೊತ್ತುಹೇಳಬೇಕು, ಅವರ ಪಕ್ಷಕ್ಕೆ ಕೊಟ್ಟ್ ಸಮಯದಲ್ಲಿ ಪೂರ್ತಿ ಅವರೇ ತೆಗೆದುಕೊಂಡರೂ ಚಿಂತೆಯಿಲ್ಲ ಅಥವಾ ಅದನ್ನು ಹಂಚಿಕೊಂಡರೂ ಚಿಂತೆಯಿಲ್ಲ, ನಮಗೇನೂ ಅಭ್ಯಂತರವಿಲ್ಲ. ನಾವು ಸಮಯವನ್ನು ಆಪ್ೋರೇಶನ್ ಮಾಡಬೇಕು. ಏಕೆಂದರೆ ನಾಳೆ ಎಷ್ಟು ಹೊತ್ತಾದರೂ ಮುಗಿಯಬೇಕು. ಇವೊತ್ತು ನೀವು ರಾತ್ರಿ 12 ಗಂಟೆವರೆಗೂ ನೀವು ಹೇಳಿದರೂ ನಾವೂ ಕೇಳುವುದಕ್ಕೆ ತಯಾರಾಗಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ : ಕೂಡಿ ಎಂದರೇ ಏನು? ಎಲ್ಲಿ ಕುಳಿತುಕೊಳ್ಳವುದು ನಾವು ಮಾತನಾಡಲೇಬಾರದೆ? ಕೂಡಿ, ಕೂಡಿ, ಎಂದರೆ ಹೇಗೆ?

ಶ್ರೀ ಜೆ.ಹೆಚ್. ಪಟೇಲ್ : ಒಟ್ಟಾರೇ ನಾಳೇ ಸಾಯಂಕಾಲದೊಳಗೆ ಇದು ಮುಗಿಯಬೇಕು. ಅದಕ್ಕೆ ಸಮಯ ಸಾಲದು. ತಮ್ಮ ಕೈನಲ್ಲೇ ಇದೆ. ಬಿ.ಜೆ.ಪಿ.ಗೆ ಇಷ್ಟು ಸಮಯ.. ಸಂಖ್ಯಾ ಬಲದ ಮೇಲೆ. ಕಾಂಗ್ರೆಸ್‌ಗೆ ಇಷ್ಟು, ಬಂಗಾರಪ್ಪನವರಿಗೆ ಇಷ್ಟು, ವಾಟಾಳ್‌ರವರಿಗೆ ಇಷ್ಟು ಪ್ರತಿಯೊಬ್ಬರಿಗೂ ಸಮಯ ಫಿಕ್ಸ್ ಮಾಡಿ, 12 ಗಂಟೆಯವರೆಗೂ ಕುಳಿತುಕೊಳ್ಳುತ್ತೇವೆ. ಎಂದು ಏಕೆ ಹೇಳಿದೆ ಎಂದರೆ ಆ ಸಮಯಕ್ಕೆ ತಕ್ಕ ಹಾಗೆ ಉಪಯೋಗವನ್ನು ನೀವು ಮಾಡಿಕೊಂಡರೆ ನಾವು ಈಗಲೇ ಅಡ್‌ಜರ್ನ್ ಮಾಡಿ ಎಂದು ಹೇಳುವುದಿಲ್ಲ, ನಾನು ನಿಮ್ಮ ಮಾತನ್ನು ಕೇಳುವುಗಕ್ಕೆ ತಯಾರಿದ್ದೇವೆ. ಹೇಳುವಾಗ ಅವರು ಸಮಯ ಎಷ್ಟೆಷ್ಟು ಎಂದು ತೀರ್ಮಾನ ತಾವು ಮಾಡಿ, ಅವರಲ್ಲ.

ಉಪಾಧ್ಯಕ್ಷರು : ಈಗಾಗಲೇ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿರತಕ್ಕಂಥ ಸಮಯ 5 ಗಂಟೆ 20 ನಿಮಿಷವಾಗಿದೆ. ನಾವು ಇದರ ಮೇಲೆ ಮಾತನಾಡಿರುವುದು, ಯಡಿಯೂರಪ್ಪನವರೇ

ಶ್ರೀ ಹೆಚ್.ಡಿ. ದೇವೇಗೌಡ : ಶ್ರೀಮಾನ್ ನಂಜೇಗೌಡರು ಲೋಕಸಭಾ ಸದಸ್ಯರಾಗಿದ್ದವರು ಇಲ್ಲೇಯೇ ಇದ್ದಾರೆ, ಒಂದು ಓಟ್ ಆಫ್ ನೋ ಕಾನ್‌ಫಿಡೆನ್ಸ್ ಲೋಕಸಭೆಯಲ್ಲಿ ಮೂವ್ ಮಾಡಿರತಕ್ಕಂಥದ್ದನ್ನು ಒಂದಲ್ಲ, ನಾಲ್ಕಲ್ಲ, ಹತ್ತು ಪ್ರೋಸೀಡಿಂಗ್ಸ್ ನೋಡಿದ್ದೇನೆ.ನಾನು ಮೂರುವರೆ ವರ್ಷ ಅಲ್ಲಿದ್ದಾಗ. ಬೆಳಗ್ಗೆ 11 ಗಂಟೆಗೆ ಮೂವ್ ಮಾಡಿದರೆ, ರಾತ್ರಿ 2 ಗಂಟೆಯಾಗಲೀ, ಮೂರು ಗಂಟೆಯಾಗಲೀ ಸರ್ಕಾರದ ಉತ್ತರವನ್ನೂ ಸೇರಿಸಿ ಒಂದೇ ದಿನದಲ್ಲಿ ಡಿಸ್‌ಪೋಸ್ ಮಾಡಿದ್ದಾರೆ. ನಾನು ನಿನ್ನೆ ಹೇಳಿದೆ. ಕಾಲದ ಮಿತಿಯನ್ನು ನಾನು ಹಾಕುವುದಿಲ್ಲ. ಇದು. ಸ್ಪೀಕರ್ ಮತ್ತು ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಮಾಡಲಿ ಎಂದು ಹೇಳಿದೆ. ನಾಳೆ

ಮಾತ್ರ ಸರ್ಕಾರದ ಉತ್ತರ ತೀರ್ಮಾನ 3 ಗಂಟೆಗೆ ಪ್ರಾರಂಭ. ಆಗಬೇಕಾಗಿರುವುದರಿಂದ ಇದು ಕ್ಲೋಸ್ ಆಗಬೇಕು. ನಮಗೂ ಒಂದು ನಾಲ್ಕೈದು ಗಂಟೆ ಬೇಕಾಗುತ್ತದೆ. 120 ಜನರ ಇರುವುದು ಈ ಕಡೆ, ನೀವು ತೆಗೆದುಕೊಳ್ಳುವ ಮೂರನೇ ಒಂದು ಭಾಗವಾದರೂ ಸಮಯ ನಮಗೆ ಬೇಕಾಗುತ್ತದೆ. ಇದಕ್ಕೆ ಯಾರದು ವಿರೋಧವಿಲ್ಲ, ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇವೊತ್ತೆಲ್ಲಾ ನೀವು ಮಾತನಾಡಿ ನಾಳೆ ಮೂರು ಗಂಟೆಯವರೆಗೂ ಮಾತನಾಡಿ 3 ಗಂಟೆಗೆ ಗೌವರ್ನಮೆಂಟ್ ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡುತ್ತದೆ. 8-30 ಅಥವಾ 9 ಗಂಟೆಗೆ ಮುಗಿದು ಹೋಗುತ್ತದೆ. ದಯಮಾಡಿ ಟೈಮ್ ಅಪ್ಪೋರೆಶನ್ ಮಾಡಿ, ಅದು ನಿಮಗೆ ಸೇರಿದ್ದುದು.

ಶ್ರೀಮಾನ್ ಎಂ. ಮಲ್ಲಿಕಾರ್ಜುನ ಖರ್ಗೆ : ಉಳಿದ ವಿರೋಧ ಪಕ್ಷದ ಅನೇಕ ಮುಖಂಡರು ಸಹಿತ ಮಾತನಾಡುವವರು ಇದ್ದಾರೆ. ಏಕೆಂದರೆ ಇದು ನೋ ಕಾನ್‌ಫಿಡೆನ್ಸ್ ಮೋಶನ್ ಮೇಲೆ, ಬರೇ ಅವರೊಬ್ಬರೇ ಮಾತನಾಡಿದರೆ ಸರಿ ಹೋಗುವುದಿಲ್ಲ. ಚರ್ಚೆಯಲ್ಲಿ ಭಾಗವಹಿಸತಕ್ಕಂಥವರು ಅನೇಕ ಜನ ಸದಸ್ಯರು ಇದ್ದಾರೆ. ಇದಕ್ಕೆ ಟೈಮ್ ನಿಗದಿ ಮಾಡಬೇಕಾಗುತ್ತದೆ. ಈಗಾಗಲೇ 5- 5 -30 ತಾಸು ಬಿ.ಜೆ.ಪಿ. ಯವರು ಮಾತನಾಡಿದ್ದಾರೆ. ವಿರೋಧ ಪಕ್ಷದ ಮುಖಂಹಡರು ಮಾತನಾಡಿದ್ದಾರೆ. ಅದಕ್ಕೆ ಈ ಐದೂವರೆ ತಾಸು ಮಾತನಾಡಿದ ಮೇಲೆ ಪುನಃ ಇನ್ನೂ ಎಷ್ಟು ತಾಸು ಅವರು ಮಾತನಾಡುತ್ತಾರೆ.

ಇಡೀ ಪಕ್ಷದ ವತಿಯಿಂದ ಅವರೊಬ್ಬರೇ ಮಾತನಾಡಿ ಮುಗಿಸಿದರೆ ಸಂತೋಷ. ಈಗ ನೀವು ಅವರಿಗೆ 6 ತಾಸು ಅವರಿಗೆ ಕೊಟ್ಟರೆ, ಬೇರೆಯವರಿಗೂ 6 ತಾಸು ಕೊಡಬೇಕಾಗುತ್ತದೆ. ಏಕೆಂದರೆ ನ್ಯಾಯವಾಗಿರುವುದು. ಇಲ್ಲದೇ ಇದ್ದರೆ ನಾವೆಲ್ಲಾ ಇಲ್ಲಿ ಬಂದು ಉಪಯೋಗವಿಲ್ಲ. ಸುಮ್ಮನೇ ಬಂದು ಕೇಳಿಕೊಂಡು ಹೋಗುವುದಕ್ಕೋಸ್ಕರ ಬಂದ ಹಾಗೆ ಆಗುತ್ತದೆ. ನಾವು ಮಾತನಾಡುವವರಿದ್ದೇವೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ನಿರ್ಣಯ ಮಾಡಿದ ಮೇಲೆ ಅದಕ್ಕೆ ನಾವು ಬದ್ಧರಾಗಿದ್ದೇವೆ. ಅಲ್ಲಿ ಡ್ರಾಫ್ಟ್‌ಬೇಡ, ಬೇರೆ ವಿಷಯಗಳು ಬೇಡ, ಬರೀ ಇದನ್ನೇ ತೆಗೆದುಕೊಳ್ಳೋಣ ಎಂದರೆ ಇದರಲ್ಲೇ ಚರ್ಚೆಯಲ್ಲಿ ಅನೇಕ ವಿಷಯಗಳು ಪ್ರಾಸ್ತಾಪವಾಗುತ್ತವೆ. ಅದಕ್ಕೆ ಮಾತನಾಡೋಣ ಎನ್ನತಕ್ಕಂಥ ಒಂದು ನಿರ್ಣಯದ ಮೇಲೆ ಇವೊತ್ತು ನಾವೆಲ್ಲರೂ ಸುಮ್ಮನೇ ಕೂತು ಕೇಳುತ್ತಿದ್ದೇವೆ. ಅದಕ್ಕೆ ತಾವು ಎಲ್ಲ ಸದಸ್ಯರಿಗೆ ಅವಕಾಶ ಮಾಡಿಕೊಡದೇ ಇದ್ದರೆ. ಪ್ರಮುಖವಾಗಿ ಇದು ಅನ್ಯಾಯವಾದುತ್ತದೆ. ಅದಕ್ಕೆ ತಾವು ದಯವಿಟ್ಟು ಟೈಮ್ ನಿಗದಿ ಮಾಡಿ. ನಮಗೆ ಎಷ್ಟು ಟೈಮ್ ಕೊಡುತ್ತೀರಿ. ಬೇರೆ ಸದಸ್ಯರಿಗೆ ಎಷ್ಟು ಟೈಮ್ ಕೊಡುತ್ತೀರಿ. ಅದನ್ನು ತಾವು ಡಿಸೈಡ್ ಮಾಡಿ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀಮಾನ್ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ನನಗೆ ಒಂದು ತುಂಬಾ ಸಂತೋಷ ಮತ್ತು ಆನಂದದ ಸಂಗತಿ ಎಂದರೆ. ಇವೊತ್ತು ನಾನು ಭಾವಿಸಿದ್ದೆ. ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಂಥ ಕಾಲದಲ್ಲಿ ನನಗೆ ತಿಳಿದ ಮಟ್ಟಿಗೆ, ನಾವು ಯಾರನ್ನು ಹೇಳಬೇಕು ಎಂದಿದ್ದೆವೋ ಬೇರೆ ಬೇರೆ ಸಬ್ಜೆಕ್ಟ್‌ನ್ನು ಹಂಚಿಕೊಂಡು ಎಷ್ಟರಮಟ್ಟಿಗೆ ನಿಮ್ಮನ್ನು ಬಗ್ಗಿಸುವುದಕ್ಕೆ ಸಾಧ್ಯವೋ. ಆ ಕಡೆ ಇರುವ ಸದಸ್ಯರನ್ನು ಕನ್‌ವಿನ್ಸ್ ಮಾಡುವುದಕ್ಕೆ ಸಾಧ್ಯಾನೋ ಕೆಲವೇ ವಿಷಯಗಳನ್ನು ಹಂಚಿಕೊಂಡು ನಾನು ಇಲ್ಲಿ ಮಾತನಾಡುತ್ತಿದ್ದೆ. ಬಹುಶಃ ನಾಳೆ ನಮಗೆ ಪೂರ್ಣವಾಗಿ ಮಾತನಾಡಲು ಬೇಕಾಗಬಹುದು. ಅದಕ್ಕೋಸ್ಕರ ತಮ್ಮ ಕಾಲದಲ್ಲಿ ತುಂಬಾ ಅನುಕಂಪ ತೋರಿಸಿ. ಧಾರಾಳತನದಿಂದ ಯಡಿಯೂರಪ್ಪನವರೇ ನೀವು ಇನ್ನೂ ಹೇಳಬೇಕು ಎಂದು ಅಪ್ಪಣೆ ಕೊಡಿಸಿದರೆ, ನಾಳೆ ಇನ್ನೂ ಅನೇಕ ಸಂಗತಿಗಳನ್ನು ಉಳಿದಂತಹವರು

ಹಂಚಿ ಹೇಳುತ್ತಾರೆ. ನಮಗೆ ನಿಮ್ಮ ಸರ್ಕಾರದ ಮೇಲೆ ಏನೇನು ಚಾರ್ಜಸ್ ಮಾಡಬೇಕು ಎಂದು ಇದೆಯೋ ಅದನ್ನು ಮಾಡಿಕೊಂಡು ಕುಳಿತಿದ್ದೇವೆ. ಈಗ ನಮ್ಮ ಸ್ನೇಹಿತರೇ ಮಾತಾನಾಡಿ, ಕೆಲವು ಸಂಗತಿಗಳನ್ನು ಅವರೂ ಹೇಳುತ್ತಾರೆ ಎಂದರೆ ಖಂಡಿತ ನಮಗೂ ಫಲ ಬಂದಂತೆ ಆಯಿತು. ಖಂಡಿತ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದ್ದರಿಂದ ಇವತ್ತು ಒಂದೇ ಒಂದು ವಿನಂತಿ. ಯಾರು ನೋ ಕಾನ್‌ಫಿಡೆನ್ಸ್ ಮೋಷನ್ ಅನ್ನು ಮೂವ್ ಮಾಡಿದ್ದಾರೆ.ಇವತ್ತು ತವೇನು ಮೂರು ದಿವಸ ಎಂದು ಹೇಳಿ, ಅದು ಮೊದಲನೆಯ ದಿವಸ ಹಾಗೆಯೊಮುಗಿದು ಹೋಯಿತು. ಒಂದು ದಿವಸ ಎಕ್ಸ್‌ಟೆನ್‌ಷನ್ ಕೊಡಬೇಕಾಗುತ್ತದೆ., ಮತ್ತೆ ನಾಳೆ ಪೂರ್ಣ ನಮ್ಮ ಕಡೆಯಿಂದ ಏನೇನು ಮಾತನಾಡಬೇಕಾಗಿದೆ ಅದನ್ನು ಮುಗಿಸಿ ಬಿಡುತ್ತೇವೆ. ಇನ್ನೊಂದು ದಿವಸ ಇಟ್ಟು ಕೊಂಡು ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲು ಮತ್ತು ಉಳಿದವರು ಮಾತನಾಡಲು ಅವಕಾಶ ಕೊಟ್ಟರೆ ಅನುಕೂಲ ಅಗಬಹುದು ಎಂದು ಒಂದು ವಿನಯಪೂರ್ವಕವಾಗಿ ನಿಮ್ಮನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಮ್ಮನ್ನೆಲ್ಲಾ ಕೂರಿಸಿಕೊಂಡೆ ನಾವು ನಿನ್ನೆ ತೀರ್ಮಾನ ತೆಗೆದುಕೊಂಡಿರುವುದು. ಮಾನ್ಯ ಸಭಾ ನಾಯಕರು ಬಹಳ ಸ್ಪಷ್ಟವಾಗಿ ಹೇಳಿದರು 9ನೇ ತಾರೀಖು ರಾತ್ರಿ ಒಳಗಾಗಿ ಉತ್ತರ ಮುಗಿಯಬೇಕು. 10ನೇ ತಾರೀಖು ಸಾರ್ವತ್ರಿಕ ರಜೆ ಇದೆ. ಅವತ್ತು ಸಭೆ ಸೇರುವುದಕ್ಕೆ ಆಗುವುದಿಲ್ಲ, ಮತ್ತೇ ಸ್ವಾತಂತ್ರ ದಿನ ಬರುತ್ತದೆ. ಮಧ್ಯೆ ಮಧ್ಯೆ ಸೇರುವುದಕ್ಕೆ ಆಗುವುದಿಲ್ಲ, ಮಧ್ಯೆ ಮಧ್ಯ ರಜೆ ಬರುವುದರಿಂದ, ಒಟ್ಟಿಗೆ 21ಕ್ಕೆ ಸೇರೋಣ ಎಂದು ಅಂದುಕೊಂಡೆವು. ಉತ್ತರ ಮುಂದಕ್ಕೆ ಹಾಕಿಕೊಳ್ಳೋಣ ಬರೆ ಚರ್ಚೆ ಆಗಬೇಕು ಎಂದು ಹೇಳಿದರೆ ಅದು ನೈತಿಕವಾಗಿ ಸಾಧು ಅಲ್ಲ, ಹಾಗೆ ಮಾಡುವುದು ಬೇಡ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ.

6.20 ಪಿ.ಎಂ.

ನೀವೇ ನಾಲ್ಕಾರು ಜನರು ಬಿಸಿನೆಸ್ ಅಡ್ವೈಸರಿ ಕಮಿಟಿ ಮಿಟಿಂಗ್‌ನಲ್ಲಿ ಒಪ್ಪಿಕೊಂಡಂತೆ ಕಾರ್ಯಕ್ರಮವನ್ನು ನಾವು ನಿಗದಿ ಮಾಡಿದ್ದೇವೆ. ನಿಮಗೆ ಗೊತ್ತಿರುವಂತೆ ಅವರಿಗೂ ಅವಕಾಶ ಮಾಡಿಕೊಡುವಂಥ ಜವಾಬ್ದಾರಿ ನನ್ನ ಮೇಲಿದೆ, ನಾಳೆ ರಾತ್ರಿಯೊಳಗಾಗಿ ಉತ್ತರ ಆಗಬೇಕಾಗಿರುವುದರಿಂದ ಇಷ್ಟು ಸುದೀರ್ಘವಾಗಿ ಎಲ್ಲಾ ವಿರೋಧಪಕ್ಷದವರೂ ಮಾತನಾಡಿದ ಮೇಲೆ ಅವರಿಗೂ ಕೂಡ ಸಾಕಷ್ಟು ಅವಕಾಶವನ್ನು ನಾನು ಕೊಡಲೇಬೇಕಾಗುತ್ತದೆ. ನೀವು ರೈಸ್ ಮಾಡಿರತಕ್ಕ ಎಲ್ಲಾ ವಿಷಯಗಳಿಗೂ ಅವರು ಉತ್ತರವನ್ನು ಕೊಡಬೇಕಾಗುತ್ತದೆ. ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಯಾವ ರೀತಿ ಮಾಡಬೇಕೆಂದು ತಾವು ನನಗೆ ಗೈಡ್ ಮಾಡಿದರೆ ಆರೀತಿ ಮಾಡೋಣ ನಾನೊಬ್ಬನೇ ವಿಶೇಷವಾಗಿ ಇದರಲ್ಲಿ ಮಾಡುವುದು ಏನಿದೆ? ತಾವೇ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ರೆಗ್ಯುಲೇಟ್ ಮಾಡಿದಂತೆ ನಾವು ಮಾಡುವುದಕ್ಕೆ ಬರುವುದಿಲ್ಲ. ತಾವು ಒಂದು ಟೈಂ ಫಿಕ್ಸ್ ಮಾಡಿದರೆ ಒಳ್ಳೆಯದು ಏಕೆಂದರೆ ನಾವು ಟೈಂ ಫಿಕ್ಸ್ ಮಾಡಿ ಹೇಳುವುದಕ್ಕಾಗುವುದಿಲ್ಲ. ವಿರೋಧಪಕ್ಷದ ನಾಯಕರು ಇಷ್ಟು ಮಾತನಾಡಬೇಕು. ಡೆಪ್ಯುಟಿ ಲೀಡರ್ ಇಷ್ಟು ಹೊತ್ತು ಮಾತನಾಡಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲ, ಆದ್ದರಿಂದ 8 ತಾಸು ಚರ್ಚೆಗೆ ಕಾಲಾವಕಾಶ ಇದ್ದರೆ ಅದರಲ್ಲಿ ಇವರು ಐದು ತಾಸು ಮಾತನಾಡಿದ್ದಾರೆ. ಇನ್ನೂ ಎಷ್ಟು ತಾಸು ಉಳಿದಿದೆ., ಬೇರೆಯವರಿಗೆ ಎಷ್ಟು ಹೊತ್ತು ಅವಕಾಶ ಮಾಡಿಕೊಡುತ್ತೀರಿ? ಎಂಬುದನ್ನು ಹೇಳಬೇಕು,. ತಾವು ರೆಗ್ಯೂಲೇಟ್ ಮಾಡಿದರೆ ಅದರಂತೆ ನಾವು ನಡೆದುಕೊಂಡು ಹೋಗುತ್ತೇವೆ. ಇಲ್ಲದೇ ಹೋದರೆ ಅವು ಏನೋ

ಹೇಳುತ್ತಾರೆ. ಇವರು ಏನೋ ಉತ್ತರ ಕೊಡುತ್ತಾರೆ. ಆಮೇಲೆ ಬೇರೆ ಸದಸ್ಯರು ಕೇವಲ ಪ್ರೇಕ್ಷಕರಾಗಿ ಹೋಗಬೇಕಾಗುತ್ತದೆ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ. ತಾವು ಏನು ಅಪ್ಪಣೆ ಕೊಡುತ್ತೀರೋ ಹಾಗೆ ಮಾಡುತ್ತೇವೆ. ಮಾನ್ಯ ಸಭಾ ನಾಯಕರು ತಾವು ನಮ್ಮ ಕಡೆಯವರು ಎಲ್ಲರೂ ಒಟ್ಟಾಗಿಯೇ ಹೋಗಬೇಕಾಗುತ್ತದೆ. ನಾನು ಇಷ್ಟೇ ವಿನಂತಿ ಮಾಡಿಕೊಳ್ಳತಕ್ಕದ್ದು.

ಅಧ್ಯಕ್ಷರು : ನೀವು ನನ್ನ ಅಧಿಕಾರವನ್ನು ಅಷ್ಟು ಅತ್ಯಂತ ಗೌರವದಿಂದ ನೋಡತಕ್ಕದ್ದು ಒಳ್ಳೆಯ ಸಂಪ್ರದಾಯ. ಇದು ನನಗೆ ವೈಯಕ್ತಿಕವಾಗಿ ಬರತಕ್ಕ ಅಧಿಕಾರವಲ್ಲಿ. ನಿನ್ನ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರ ನಾವು ಏನು ಮಾಡಬೇಕೆಂಬುದು ತಮಗೆ ಗೊತ್ತಿದೆ. ನೀವು ಚರ್ಚೆಮಾಡಬೇಕಾಗಿದೆ. ಅದಕ್ಕೆ ಉತ್ತರ ಕೊಡಲು ನಾನು ಸರ್ಕಾರಕ್ಕೆ ಅವಕಾಶ ಕೊಡಬೇಕಾಗಿದೆ. ಅಷ್ಟೇ ಅಲ್ಲ ಬೇರೆ ಪಕ್ಷದವರೂ ಕೂಡ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕೊಡಬೇಕು. ಈಗ ತಾವು ಎಷ್ಟು ಗಂಟೆಕಾಲ ಚರ್ಚೆಮಾಡಿದ್ದೀರಿ. ನಾಳೆ ನಮಗೆ ಎಷ್ಟು ಗಂಟೆಕಾಲ ಉಳಿಯುತ್ತದೆ. ನಾಳೆ ಬೇಕಾದರೆ ಇನ್ನೂ ಅರ್ಧ ಗಂಟೆ ಮುಂಚಿತವಾಗಿ ಸೇರೋಣ. ಯಾವ ರೀತಿಯ ಒಡಂಬಡಿಕೆಗೂ ನಾನು ತಯಾರಿದ್ದೇನೆ. ಇನ್ನೂ ಎಷ್ಟು ಸಮಯವನ್ನು ತಾವು ಬಳಸಿಕೊಳ್ಳಬಹುದೆಂಬುದನ್ನು ತಾವೇ ಯೋಚನೆ ಮಾಡಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ತಾವು ಎಷ್ಟು ಹೊತ್ತಿಗೆ ಹೇಳಿದರೆ ಅಷ್ಟು ಹೊತ್ತಿಗೆ ಕುಳಿತುಕೊಳ್ಳುತ್ತೇವೆ. ನನ್ನ ಒಂದೇ ಒಂದು ಸಂಗತಿ ಎಂದರೆ. ನಾವು ಬೇರೆ ದೃಷ್ಟಿಯಿಂದ ಯೋಚನೆ ಮಾಡಿ ನಾಳೆ ಪೂರ್ಣದಿನ ನಾನು ಚರ್ಚೆಮಾಡುವುದಕ್ಕೆ ಅವಕಾಶ ಸಿಕ್ಕಬಹುದು ಎಂದು. ಆದರೆ ತಾವು ಏನು ಹೇಳುತ್ತೀರಿ ಆ ಅಪ್ಪಣೆಯಂತೆ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಎಂ. ಮಾಲ್ಲಿಕಾರ್ಜುನ ಖರ್ಗೆ : ನಾನು ಏನು ಮಾಡಬೇಕೆಂದು ತಾವು ಹೇಳಿದಿರಿ. ಅದಕ್ಕೆ ನನ್ನ ಸಲಹೆ ಏನೆಂದರೆ ಹಿಂದಿನಿಂದ ನಡೆದುಕೊಂಡು ಬಂದಿರುವ ಪದ್ಧತಿಯ ಪ್ರಕಾರ ವಿರೋಧಪಕ್ಷದವರ ಸ್ಟ್ರೇಂಗ್ತ್‌ನ ಪ್ರಕಾರ ಅಂದರೆ ಇವತ್ತು ಅವರು 40 ಜನರಿದ್ದಾರೆ ಅವರಿಗೆ 4 ತಾಸು ಅವಕಾಶ ಕೊಟ್ಟರೆ ಈ ಕಡೆ ನಾವು 36 ಜನರಿದ್ದೇವೆ. ನಮಗೆ ಮೂರುವರೆ ತಾಸು, ಅದೇ ರೀತಿ ಇನ್ನೂ ಕೆಲವು ಸೀನಿಯರ್ ಮೆಂಬರ್ಸ್‌ಗೆ ಅವಕಾಶ ಕೊಟತಕ್ಕದ್ದು ತಮಗೆ ಬಿಟ್ಟಿದ್ದು, ಏಕೆಂದರೆ. ಅನೇಕಸಾರಿ ಮಾನ್ಯ ವಾಟಾಳ್ ನಾಗರಾಜ್‌ರವರಾಗಲಿ. ಮಾನ್ಯ ಬಂಗಾರಪ್ಪನವರಾಗಲಿ ಅಥವಾ ಬೇರೆಯವರಾಗಲಿ ಟೈಂ ತೆಗೆದುಕೊಳ್ಳುತ್ತಾರೆ. ಆದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಸಂದರ್ಭಾನುಸಾರ ತಾವು ಅವಕಾಶ ಕೊಡುತ್ತೀರಿ.

ಅಧ್ಯಕ್ಷರು : ನಾನೂ ಮತ್ತು ವಾಟಾಳ್ ನಾಗರಾಜ್‌ರವರು ಚೆನ್ನಾಗಿರುವುದು ನಿಮಗೆ ಯಾರಿಗೂ ಸಹಿಸುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ನಾವೂ, ನೀವೂ ಒಂದು ಸಾರಿ ಜಗಳವನ್ನಾದರೂ ಆಡಿಬಿಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ. ನಮ್ಮಲ್ಲೂ ಕೂಡ 36ಜನ ಸದಸ್ಯರಿದ್ದಾರೆ. ಅವರಲ್ಲೂ ಕೂಡ ಸುಮಾರು 4-5ಜನ ಮಾತನಾಡುವವರಿದ್ದಾರೆ. ಕನಿಷ್ಠ 2-3 ಜನರಾದರೂ ಮಾತನಾಡಬೇಕಾಗುತ್ತದೆ. ಆದ್ದರಿಂದ ತಾವು ಸಮಯವನ್ನು

ನಿಗದಿಮಾಡಿ. ಒಬ್ಬರಿಗೆ 6 ತಾಸು ಮಾತನಾಡುವುದಕ್ಕೆ ಅವಕಾಶ ಕೊಟ್ಟು ಇನ್ನೊಬ್ಬರಿಗೆ 1 ತಾಸಿನೊಳಗೇ ಮುಗಿಸು ಎಂದು ಹೇಳಿದರೆ ಅದು ಚೆನ್ನಾಗಿರುವುದಿಲ್ಲ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಚರ್ಚೆ ಮುಂದುವರೆಸಲು ಬಿಡೋಣ. ಅವರು ಮುಗಿಸಲು. ಅನಂತರ ನಾವು ಕೂತು ಚರ್ಚೆ ಮಾಡೋಣ.

ಶ್ರೀ ಹೆಚ್.ಎನ್. ನಂಜೇಗೌಡ : ನಾಳೆ ಇದನ್ನು ಮುಗಿಸೋಣವೆಂದು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಇದಕ್ಕೆ ನಾವೆಲ್ಲರೂ ಜವಾಬ್ದಾರರು. ನಮ್ಮ ಪಕ್ಷದ ನಾಯಕರು ಎಷ್ಟು ಹೊತ್ತು ಮಾತನಾಡುತ್ತಾರೋ ಅವರಿಗೆ ಕಾಲಾವಕಾಶ ಕೊಡಬೇಕಾಗುತ್ತದೆ. ಆದಾದಮೇಲೆ ಬೇರೆಯವರಿಗೆ ತಾವು ಅವಕಾಶ ಕೊಡಿ. ಹಾಗೂ ಕಾಲಾವಕಾಶ ಉಳಿದರೆ ನಾವು ಯಾರಾದರೂ ಮಾತನಾಡುತ್ತೇವೆ. ಇಲ್ಲದಿದ್ದರೆ ಬೇಡ. ನಾವೇ ಮಾತನಾಡಬೇಕೆಂದು ಏನೂ ಇಲ್ಲ. ಇಂಥ ವಿಚಾರದಲ್ಲಿ ಎಲ್ಲರೂ ಭಾಗವಹಿಸಬೇಕಾಗುತ್ತದೆ. ಬೇರೆಯವರು ಮಾತನಾಡಿದೇಮೇಲೆ ಇನ್ನೂ ಅವಕಾಶ ಇದ್ದರೆ ಅನಂತರ ನಾವು ಚರ್ಚೆಮಾಡುತ್ತೇವೆ. ಇಲ್ಲದಿದ್ದರೆ ಬೇಡ. ಯಾರಿಗೂ ಬೇಸರವಾಗುವುದು ಬೇಡ. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸೋಣ.

ಶ್ರೀ ಹೆಚ್.ಡಿ. ದೇವೇಗೌಡ : ಇವತ್ತು ಎಷ್ಟು ಹೊತ್ತಿನವರೆಗೂ ಕುಳಿತುಕೊಳ್ಳಬೇಕೆಂದು ಮೊದಲು ಸಭೆಗೆ ತಿಳಿಯಲಿ. ರಾತ್ರಿ 10-11 ಗಂಟೆಯವರೆಗೂ ಕುಳಿತುಕೊಳ್ಳೋಣವೆಂದರೂ ನಾನು ತಯಾರಿದ್ದೇನೆ. ನಾಳೆ 3 ಗಂಟೆಗೆ ಉತ್ತರ ಪ್ರಾರಂಭಿಸಬೇಕೆಂದರೆ ಕೊನೆಯಲ್ಲಿ ಸರ್ಕಾರ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನು ಅರ್ಧ ಗಂಟೆಯಲ್ಲಿ ನಾನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಯಡಿಯೂರಪ್ಪನವರೇ ತಾವು ಎಷ್ಟು ಹೊತ್ತುಬೇಕಾದರೂ ಮಾತನಾಡಿ. ದಯವಿಟ್ಟು ಅನ್ಯಥಾ ಭಾವನೆ ಮಾಡಬೇಡಿ. ನಾನು ಏನು ಹೇಳಿದೆ ಎಂದರೆ. ರಾತ್ರಿ 12 ಗಂಟೆಯವರೆಗೂ ನಾವು ಕುತುಕೊಳ್ಳುವುದಕ್ಕೆ ಸಿದ್ಧವೆಂದು ನಾನು ನಿನ್ನೆಯೇ ಹೇಳಿದ್ದೇನೆ.ಏಕೆಂದರೆ ಟೈಂ ಗೊತ್ತಾದಮೇಲೆ ಅಪೋರ್ಷನ್ ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತದ. ನನಗೆ ಮತ್ತು ಮಾನ್ಯ ನಂಜೇಗೌಡರಿಗೆ ಗೊತ್ತಿರುವ ಪ್ರಕಾರ ಲೋಕಸಭೆಯಲ್ಲಿ ಪಾರ್ಟಿವೈಸ್ ಟೈಂ ಹಂಚಿಹಾಕುತ್ತಾರೆ. ಸ್ಕಾಮ್‌ನಂಥ ವಿಷಯದಮೇಲೆ ಮಾನ್ಯ ವಾಜಪೇಯಿಯವರು ಅಪೋಸಿಷನ್ ಲೀಡರ್ ಆಗಿ 45 ನಿಮಿಷದಲ್ಲಿ ತಮ್ಮ ಚರ್ಚೆಯಲ್ಲಿ ಮುಗಿಸಿದರು. ಆದರೆ ಮಾನ್ಯ ಯಡಿಯೂರಪ್ಪನವರು ಹೆಚ್ಚು ಹೊತ್ತು ಮಾತನಾಡುವುದಕ್ಕೆ ಅವರ ಹತ್ತಿರ ಹೆಚ್ಚು ಸಾಮಾಗ್ರಿಗಳಿವೆ. ಅವರು ಮಾತನಾಡುವುದನ್ನು ಬೇಡವೆಂದು ನಾನು ಹೇಳುವುದಿಲ್ಲ.ಮಾನ್ಯ ಸದಸ್ಯರು ಇನ್ನೂ ಒಂದಲ್ಲಿ ಎರಡು ಗಂಟೆ ಮಾತನಾಡಲು ರಾತ್ರಿ 11 ಗಂಟೆಯವರೆಗೂ ಕೂತುಕೊಳ್ಳೋಣ. ಇನ್ನೂ 3 ಗಂಟೆ ಉಳಿದ ಸದಸ್ಯರು ಮಾತನಾಡಲಿ. ನಾಳೆಯೂ ಇನ್ನೂ 3 ಗಂಟೆ ಮಾತನಾಡಲಿ. ಆದರೆ ನಾವು ಉತ್ತರ ಕೊಡುವುದಕ್ಕೆ ನಾಳೆ ಮಧ್ಯಾಹ್ನ 3 ಗಂಟೆಗೆ ಅವಕಾಶ ಮಾಡಿಕೊಡಲಿ. ಎಷ್ಟು ಹೊತ್ತು ಬೇಕಾದರು ಇವತ್ತು ನಾನು ಕುಳಿತುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಇದು ತಾವು ಡಿಸೈಡ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಬೇಗನೆ ಮುಗಿಸುತ್ತೇನೆ. ಸಾಧ್ಯವಾದರೆ ತಾವು 5-10 ನಿಮಿಷ ಅಡ್ಜರ್ನ್ ಮಾಡಿ ಕಾಫಿ ಕುಡಿದು ಬಂದು ಮತ್ತೆ ಕುಳಿತುಕೊಳ್ಳುವಾದಾದರೆ ರಾತ್ರಿ 10 ಗಂಟೆಯವರೆಗೂ ಕುಳಿತುಕೊಳ್ಳೋಣ.

ಅಧ್ಯಕ್ಷರು : ಮಾನ್ಯ ನಾಗೇಗೌಡರಿಗೆ, ಅಡ್ಜರ್ನ್ ಮಾಡುವುದಕ್ಕೆ ಮುಂಚೆ ನಿಮಗೆ ಹೇಳುತ್ತೇನೆ. ಮಾನ್ಯ ಸಭಾ ನಾಯಕರು ಉತ್ತರ ಕೊಡುವುದಕ್ಕೆ ಎಷ್ಟು ಸಮಯ ಉತ್ತರ ಕೊಡುವುದಕ್ಕೆ ಅಗತ್ಯ ಇರುತ್ತದೆಯೋ ಅಷ್ಟು ಅವಕಾಶವನ್ನು ನಾವು ಕೊಡಿಸಿಕೊಡುತ್ತೇವೆ. ಅದರಲ್ಲಿ ನಿಮಗೆ ಯಾವುದೇ ಅನುಮಾನವು ಬೇಡ ಮಾನ್ಯ ಖರ್ಗೆಯವರು ನಮಗೂ ಕೂಡ ಸಾಕಷ್ಟು ಅವಕಾಶ ಸಿಗಬೇಕೆಂದು ಏನು ಪ್ರಸ್ತಾಪ ಮಾಡಿದ್ದಾರೆ. ಅದೂ ನನ್ನ ದಮನದಲ್ಲಿದೆ. ಮಾನ್ಯ ಖರ್ಗೆಯವರು ಕೇಳಿದರೆಂದು ಕೇವಲ ಕಾಂಗ್ರೆಸ್ ಪಕ್ಷಕ್ಕೇ ಸೀಮಿತಗೊಳಿಸುವುದಿಲ್ಲ. ಅದೇ ರೀತಿ ಉಳಿದ ವಿರೋದಪಕ್ಷದವರು ಯಾರಿದ್ದಾರೆ ಅವರನ್ನೂ ಗಮನದಲ್ಲಿಟ್ಟುಕೊಂಡು ನಾನು ಎಲ್ಲರಿಗೂ ಪ್ರಾತಿನಿಧ್ಯ ಕೊಟ್ಟು ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ನಂಡಜೇಗೌಡರು ಬಹಳ ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಇವತ್ತು ಅವರು ಮಾತನಾಡಿ ಮುಗಿಸಲಿ ಅನಂತರ ಬೇಕಾದರೆ ನಾವು ಸ್ವಲ್ಪಹೊತ್ತು ಕುಳಿತು ಚರ್ಚೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ನನ್ನ ಒಂದು ವಿನಂತಿ ಏನೆಂದರೆ, ತಾವೇ ತಮ್ಮ ಅಧಿಕಾರವನ್ನು ಉಪಯೋಗಿಸಿ ನಾಳೆಯ ಪ್ರಶ್ನೋತ್ತರ ವೇಳೆಯನ್ನು ಸ್ಥಗಿತ ಗೊಳಿಸಿದರೆ ಇದಕ್ಕೆ ಮಹತ್ವ ಸಿಕ್ಕುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ. ಮುಂದುಗಡೆ ಕುಳಿತುಕೊಂಡು ಭಾಷಣ ಮಾಡಿದವರನ್ನು ನೋಡಿ ಚಪ್ಪಾಳೆಯನ್ನು ತಟ್ಟುವುದಕ್ಕೆ ನಾವು ಇಲ್ಲಿಗೆ ಬರತಕ್ಕದ್ದು. ಪ್ರಶ್ನೋತ್ತರ ವೇಳೆಯೂ ಇಲ್ಲವೆಂದರೆ ನಾವು ಇಲ್ಲಿ ಸುಮ್ಮನೆ ನಿಮ್ಮ ಭಾಷಣವನ್ನು ಕೇಳಿಕೊಂಡು ಹೋಗಬೇಕೆ? ಯುವ ಶಾಸಕರು ತಮಗೆ ಅವಕಾಶ ಸಿಕ್ಕುತ್ತಿಲ್ಲವೆಂದು ನಿರೀಕ್ಷೆ ಮಾಡುತ್ತಿದ್ದಾರೆ.ಕೇವಲ ಹಿರಿಯ ಶಾಸಕರ ಭಾಷಣವನ್ನು ಕೇಳಿಕೊಂಡು. ಹೋಗುವಂಥ ಪರಿಸ್ಥಿತಿ ನಮ್ಮಯುವ ಶಾಸಕರಿಗೆ ಬಂದಿದೆ. ಈ ಸಭೆಯಲ್ಲಿ ನಮಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕುತ್ತಿಲ್ಲವೆಂಬ ಭಾವನೆ ಯುವ ಶಾಸಕರಲ್ಲಿ ಬಂದಿದೆ. ಇಂಥ ಭಾವನೆ ಮುಂದುವರಿಯುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದೆಂದು ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು 94 ವಿಚಾರಗಳನ್ನು ಹೇಳಿದ್ದಾರೆ. ಇನ್ನು 6 ವಿಚಾರಗಳನ್ನು ಹೇಳಿ ಸೆಂಚುರಿ ಮಾಡಿ ಮುಗಿಸುತ್ತಾರೆ. ನೂರು ಏಟುಗಳನ್ನು ಕೊಟ್ಟಂತೆ ಮಾಡಿ ಅವರು ಮುಗಿಸುತ್ತಾರೆ.

ಅಧ್ಯಕ್ಷರು : ಅವರು ಹೊಡೆಯುವುದಕ್ಕೆ ತಯಾರಾಗಿದ್ದಾರೆ. ನೀವು ಹೊಡೆಸಿಕೊಳ್ಳುವುದಕ್ಕೆ ತಯಾರಾಗಿದ್ದೀರಿ. ಆದರೆ ನಮ್ಮ ಗತಿ ಏನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಂಜೇಗೌಡರು ಹೇಳಿದನ್ನು ನಾನು ಒಪ್ಪುತ್ತೇನೆ, ಸೆಂಚುರಿ ಹೊಡೆಯುತ್ತಾರೆ ಹೊಡೆಯಲಿ. ಟೆಸ್ಟ್ ಮ್ಯಾಚಿನಲ್ಲಿ ಸೆಂಚುರಿ ಹೊಡೆದರೆ ಬೆಲೆ ಇರುತ್ತದೆ, ಆದರೆ, ಕಾಂಟಿ ಮ್ಯಾಚ್‌ನಲ್ಲಿ ಹೊಡೆದರೆ ಬೆಲೆಯಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಲ್ಲಿಕಾರ್ಜುನ ಖರ್ಗೆಯವರಿಗೆ ನಾನು ಈಗ ವಿರೋಧ ಪಕ್ಷದಲ್ಲಿದ್ದೇನೆ ಎಂದು ಜ್ಞಾಪಕ ಬಂದಿರುವುದು ಸಂತೋಷದ ಸಂಗತಿ ... ಗೊಂದಲವಿದರು.

ಅಧ್ಯಕ್ಷರು : ತಾವು ಟೆಸ್ಟ್ ಎನ್ನುವುದನ್ನು ಮರೆತು. ಒಂದು ದಿನದ ಪಂದ್ಯವೆಂದು ಫಾಸ್ಟ್ ಸ್ಕೋರಿಂಗ್ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಪರಿಸ್ಥಿತಿ ಏನು? ನೀವು ಬರೆ ಅವರಿಗೆ ನೂರು· ಕೊಟ್ಟರಿ, ನಾಳೆ ಆಡಳಿತ ಪಕ್ಷದ ನಾಯಕರು ಇನ್ನೂರೋ ಮುನ್ನೂರೋ ಅವರು ತೆಗೆದುಕೊಳ್ಳುತ್ತಾರೆ. ನಮ್ಮ ಪರಿಸ್ಥಿತಿ ಏನು? ಏನು ದೇವರೇ ಕಾಪಾಡಬೇಕೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೊಂದು ಪ್ರಮುಖವಾದ ಕಾರಣಕೋಸ್ಕರ ಸ್ವತಃ ಅವರೇ ಅವರ ಮನಸ್ಸಿಗೆ ಪ್ರಶ್ನೆಯನ್ನು ಹಾಕಿಕೊಂಡು, ನನ್ನ ಕೈಲಿ ಈ ವಿಶೇಷವಾದಂಥ ಸಂದರ್ಭದಲ್ಲಿ ನಾನೇನು ಈ ರಾಜ್ಯದ ಜನರಿಗೆ ಭರವಸೆಯನ್ನು ಕೊಟ್ಟೆ ಅದನ್ನು ಮಾಡಲು ಆಗುತ್ತಿಲ್ಲವೆಂದು ಮುಖ್ಯಮಂತ್ರಿಗಳ ಸ್ಥಾನದಿಂದ ನಿರ್ಗಮಿಸುವುದು ಉತ್ತಮವೆಂದು ನಾನು ಭಾವಿಸುತ್ತೇನೆ.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ನಮ್ಮ ಕೈಯಲ್ಲಿ ಕೆಲಸ ಮಾಡಲು ಆಗುವುದಿಲ್ಲ, ನಾವು ಹೊರಗಡೆ ಹೋಗುತ್ತೇವೆಂದು ಹೇಳಿ, ಆ ಕೆಲಸವನ್ನು ಅವರು ಮಾಡಬೇಕೆ, ಅಥವಾ ನೀವು ಮಾಡಿಕೊಳ್ಳಬೇಕೆ ಎನ್ನುವ ಬಗ್ಗೆ ಆತ್ಮಪರಿಶೋದನೆ ಮಾಡಿಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಈಗ ಯಾವ ಪಕ್ಷದಲ್ಲಿದ್ದೀರಿ ನಾಗೇಗೌಡರು ಹಿಂದಿನದನ್ನು ಮರೆತುಂತಿದೆ.ಅವರು ಹಿಂದೆ ಎಲ್ಲಿದ್ದರು. ಈಗ ಎಲ್ಲಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಜನತಾದಳದಲ್ಲಿದ್ದೇನೆ. ಇದರಿಂದ ನಿಮಗೇನಾದರು ತೊಂದರೆ ಇದೆಯೇ? ನೀವು ನಿಮ್ಮಲ್ಲಿಗೆ ನನಗೆ ಅಹ್ವಾನ ಕೊಟ್ಟರಿ, ಅದನ್ನು ನಾನು ತಿರಸ್ಕಾರ ಮಾಡಿದೆ. ಅದನ್ನು ನೀವು ಮರೆಯಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏಕೆ ಆ ಮಾತನ್ನು ಹೇಳಿದೆಯೆಂದರೆ, ಈ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯಗಳ ಮುಖ್ಯಮಂತ್ರಿಗಳಾಗುವುದಕ್ಕೆ ಬಹಳ ಪ್ರಮುಖವಾದ ಕಾರಣ, ಮಣ್ಣಿನಮಗ ನೀರಾವರಿಗೆ ಹಣ ಕೊಡಲಿಲ್ಲವೆಂದು ರಾಜೀನಾಮೆ ಕೊಟ್ಟು ಮಂತ್ರಿ ಪದವಿಯಿಂದ ಹೊರಗೆ ಬಂದಂಥ ಒಬ್ಬರು ವ್ಯಕ್ತಿವಿರೋಧ ಪಕ್ಷದಲ್ಲಿ ಕುಳಿತುಕೊಂಡು ರೈತರು, ಬಡವರು ಎನ್ನುವ ಬಗ್ಗೆ ಹೋರಾಟ ಮಾಡಿ ಕೂಗಿದಂಥ ವ್ಯಕ್ತಿ, ಈ ರಾಜ್ಯದ ಮುಖ್ಯಮಂತ್ರಿಯಾದರೆ ನೀರಾವರಿ ಯೋಜನೆಗೆ ಅನುಕೂಲವಾಗಬಹುದೆ ಎನ್ನತಕ್ಕ ಭ್ರಮೆಯಲ್ಲಿ ಜನರು ತಮಗೆ ಓಟನ್ನು ಕೊಟ್ಟರು, ಆ ಮೂಲಕ ಅಧಿಕಾರವನ್ನು ಕೊಟ್ಟರು ನೀವೆಲ್ಲರೂ ಮಂತ್ರಿಗಳಾಗಲು ಅವಕಾಶ ಸಿಕ್ಕಿತು. ಎರಡು ಸಾವಿರ ವರ್ಷದೊಳಗೆ ಬಚಾವತ್ ತೀರ್ಮಾನದ ಪ್ರಕಾರ, ನೀರಾವರಿ ಯೋಜನೆಯನ್ನು ಪೂರ್ಣ ಮಾಡುತ್ತೇವೆಂದು ಹೇಳತಕ್ಕ ನಮ್ಮ ರಾಜ್ಯದ ಮುಖ್ಯಮಂತ್ರಿಗಳು, ಕಳೆದ 8 ತಿಂಗಳನಲ್ಲಿ, ಪಾಪ ಆ ಕಾಲದಲ್ಲಿ ಇಲ್ಲಿ ಕುಳಿತಿರುವಂಥ ನಮ್ಮ ಕಾಂಗ್ರೆಸ್ ಸ್ನೇಹಿತರೇನು ಹಣವನ್ನು ಅದಕ್ಕಾಗಿ ತೆಗೆದಿಟ್ಟಿದ್ದರೋ, ಅದನ್ನು ಖರ್ಚು ಮಾಡದೆಯೇ ಡಿಸೆಂಬರ್‌ನಲ್ಲಿ ಅಧಿಕಾರಕ್ಕೆ ಬಂದು ಮುಖ್ಯಮಂತ್ರಿಯಾಗಿ ಮಾಡಿದ ಮೊದಲನೆಯ ಕೆಲಸ ಎಲ್ಲಾ ನೀರಾವರಿ ಯೋಜನೆಗಳು ಕರ್ನಾಟಕ ರಾಜ್ಯದಲ್ಲಿ ಬಂಧ್ ಅದು ಹೇಮಾವತಿ ಇರಬಹುದು, ಕಾವೇರಿ, ಕೃಷ್ಣ ಅಥವಾ ಯಾವುದೇ ಇರಬಹುದು ಯಾವ ಬಜೆಟ್‌ನಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೃಷ್ಣ ಜಲಾನಯನ ಪ್ರದೇಶದ ಯೋಜನೆಗೆ ಖರ್ಚು ಮಾಡುತ್ತೇವೆಂದು ಭರವಸೆಯನ್ನು ಏನು ಕೊಟ್ಟಿರೋ ಅದರಲ್ಲಿ ಇದುವರೆಗೆ 50 ಕೋಟಿ ರೂಪಾಯಿಗಳನ್ನು ಸಹ ಖರ್ಚು ಮಾಡಿಲ್ಲ. ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಇನ್ನು ಇನ್ನೂರು ದಿವಸ ಸಹ ಉಳಿದಿಲ್ಲ. ಅಕಸ್ಮಾತ್ ಹಣವನ್ನು ತಂದು ದಿನಕ್ಕೆ

5 ಕೋಟಿಯನ್ನು ಖರ್ಚು ಮಾಡುತ್ತೇವೆಂದರು ಹೇಳಿದರು ಸಹ ಪೂರ್ಣವಾಗುವುದಿಲ್ಲ. ಕಾವೇರಿ ಜಲಾನಯನ ಪ್ರದೇಶದಲ್ಲಿ ನಾನು ಮತ್ತೆ ನನ್ನ ಪಕ್ಷದ ಡಾ। ತಂಗಾರವರು ಮೂರು ದಿವಸ ನೋಡಿಕೊಂಡು ಬಂದಿದ್ದೇವೆ. ಎಲ್ಲಾ ಕೆಲಸಕಾರ್ಯಗಳು ಸ್ಥಗಿತವಾಗಿದೆ. ನಾನು ಕೃಷ್ಣ ಜಲಾನಯನ ಪ್ರದೇಶಕ್ಕೆ ಹೋದಾಗ, ಅಲ್ಲಿನ ಯಾವುದೇ ಒಂದು ಸ್ಥಳದಲ್ಲು ಸಹ ಇವತ್ತು ಒಂದು ಕಿ.ಮಿ. ಕಾಲುವೆ ತೆಗೆಯತಕ್ಕ ಕೆಲಸವೂ ಸಹ ಆಗುತ್ತಿಲ್ಲ. ನೀವು ಬಾಂಡ್ ಮೂಲಕ ಹಣವನ್ನು ತರಿತ್ತೇವೆಂದು ಹೇಳುತ್ತೀರಿ. ಮೊದಲನೆಯ ಹಂತದಲ್ಲಿ 400 ಕೋಟಿ ಎರಡನೆಯ ಹಂತದಲ್ಲಿ 400 ಕೋಟಿ ತರುತ್ತೇವೆ. ಹಣ ಬಂದ ಮೇಲೆ ಅದೆಲ್ಲವನ್ನು ಖರ್ಚು ಮಾಡುತ್ತೇವೆಂದು ರೈತರಿಗೆ ಅವಕಾಶವನ್ನು ತೋರಿಸುತ್ತೀರಿ. ಇವತ್ತು, ನೀರಾವರಿ ಯೋಜನೆಗೆ ಹಣವನ್ನು ಕೊಡಲಿಲ್ಲವೆಂದ ರಾಜೀನಾಮೆಯನ್ನು ಕೊಟ್ಟಂಥ ನೀವು. ಸರ್ಕಾರದ ಖಜಾನೆಯಲ್ಲಿ ಹಣ ತುಂಬಿ ತುಳುಕುತ್ತಿದೆಯೆಂದು ಈ ರಾಜ್ಯದ ಹಣಕಾಸಿನ ಸಚಿವರು ಹೇಳುತ್ತಿರಬೇಕಾದರೆ, ವಿಶ್ವಬ್ಯಾಂಕ್‌ನ ಬಾಂಡ್‌ನ್ನು ತೋರಿಸಿಕೊಂಡು ಆ ರೈತ ಸಮೂದಾಯಕ್ಕೆ ಅನ್ಯಾಯ ಮಾಡತಕ್ಕ ಕೆಲಸವೇಕೆ ಮಾಡುತ್ತೀರಿ? ಹಣ ತುಂಬಿತುಳುಕುತ್ತಿದ್ದರೆ ಖರ್ಚು ಮಾಡಿ, ಬಾಂಬೆ ಬಂದ ಮೇಲೆ ಹೊಂದಾಣಿಕೆ ಮಾಡಿಕೊಳ್ಳಿ. ನೀವೇ ಅಧಿಕಾರದಲ್ಲಿ ಮುಂದುವರೆದರೆ ಎಂದು ಸಾವಿರ ಇಸವಿಗಲ್ಲ ಈ ರೇಟ್‌ನಲ್ಲಿ ಇನ್ನು ಸಾವಿರ ವರ್ಷವಾದರೂ ಸಹ. ಆ ಕೆಲಸ ಮುಗಿಯುವುದಿಲ್ಲ. ನಾನು ಜೇವರ್ಗಿ ಬ್ರಾಂಚ್ ಕೆನಾಲ್ ಕೆಲಸವನ್ನು ನೋಡಲು ಇತ್ತೀಚೆಗೆ ಹೋಗಿದ್ದೇ, ಮಾನ್ಯ ಮುಖ್ಯಮಂತ್ರಿಗಳೆ ಆ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದೀರಿ. ಬೇಕಾದರೆ ಯಡಿಯೂರಪ್ಪ ಸತ್ಯಸಂಗತಿಯನ್ನು ಹೇಳುತ್ತಿದ್ದಾನೆಯೇ ಎಂಬ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ನೋಡಿ. ಅಲ್ಲಿ ಆಗುತ್ತಿರತಕ್ಕ ಕಾಲುವೆಯಲ್ಲಿ, ಜನವರಿಯಲ್ಲಿ ಸ್ಥಗಿತವಾದಂಥ ಕೆಲಸ ಇದುವರೆಗೂ ಸಹ ಆಗಿಲ್ಲ, ಏಕೆ ಎಂದು ಅಧಿಕಾರಿಗಳನ್ನು ಕೇಳಿದರೆ ಅವರೇನು ಹೇಳುತ್ತಾರೆಂದರೆ, ಪೀಸ್ ವರ್ಕ್ ಕೆಲಸ ಮಾಡುತ್ತಿದ್ದೆವು, 9 ಕಿ.ಮಿ. ಕಾಲುವೆ ತೆಗೆದಾಗಿದೆ, ಅದನ್ನು ಸರಿಮಾಡಬೇಕಾಗಿತ್ತು ಸುಮಾರು 8 ಕೋಟಿ ಹಣವಿದೆ, ಆದರೆ ಕೆಲಸ ಮಾಡಿಯೆಂದು ಕ್ಲಿಯರೆನ್ಸ್ ಸಿಕ್ಕಿಲ್ಲವೆಂದು. ಕಾಲುವೆಗಳನ್ನು ತೆಗೆಯಲು ಅಲ್ಲಿ ಸಾವಿರಾರು ಎಕರೆ ಜಮಿನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಯಾರಿಗಾದರೂ ವಿಶೇಷವಾದ ಅಧಿಕಾರವನ್ನು ಕೊಟ್ಟು, ಅಲ್ಲಿಗೆ ನ್ಯಾಯಾಧೀಶರನ್ನು ಲ್ಯಾಂಡ್ ಅಕ್ವಿಜಿಷನ್ ಅಧಿಕಾರಿಯನ್ನಾಗಿ ನೇಮಕ ಮಾಡಿ, ಅಲ್ಲಿ ಮಾರುಕಟ್ಟೆಯ ದರವೇನಿದೆ ಅದನ್ನು ತಿಳಿದುಕೊಂಡು,ಅಲ್ಲಿ ಕಾಲುವೆ ಕೆಲಸವನ್ನು ಮಾಡಿ ಹೊಲಗಳಿಗೆ ನೀರನ್ನು ಕೊಡತಕ್ಕ ಕೆಲಸ ಮಾಡಿ ಎಂದು ಹೇಳಿದರೆ, ನೀವು ಪ್ರಾಜೆಕ್ಟ್‌ಗಳನ್ನು ಕಟ್ಟಿಕೊಂಡು ಕುಳಿತುಕೊಂಡರೆ ಆ ನೀರಿನ ಹಕ್ಕು ಬರುತ್ತದೆಯೇ? ರೈತನ ಹೊಲಕ್ಕೆ ನೀರು ಬರುತ್ತಿದೆಯೋ? ಪಕ್ಕದ ಎಲ್ಲಾ ರಾಜ್ಯದವರು ಸಹ ಬಚಾವತ್ ತೀರ್ಮಾನದ ಪ್ರಕಾರ ಉಪಯೋಗ ಮಾಡಿಕೊಳ್ಳಬೇಕಾಗಿರುವ ನೀರನ್ನು 94-95ನೇ ಸಾಲಿಗೆ ಕೆಲಸವನ್ನು ಮುಗಿಸಿ.ಎರಡು ಸಾವಿರ ವರ್ಷದ ನಂತರ ಬರತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ಪರಿಸ್ಥಿತಿ ಬಂದಿರುವ ಸಮಯದಲ್ಲಿ, ಇವತ್ತು ಕೈಕಟ್ಟಿ ಕೊಂಡು ಮುಂದಿನ ಲೋಕಸಭೆಯ ಚುನಾವಣೆಗೋಸ್ಕರ, ರಾಜ್ಯದಲ್ಲಿ ಪ್ರವಾಸ ಮಾಡಿಕೊಂಡು ರಾಜ್ಯದ ಹಿತಕ್ಕೆ ಧಕ್ಕೆಯನ್ನು ತರತಕ್ಕ ನೀವು, ನಿಮ್ಮ ಸರ್ಕಾರ ಅಧಿಕಾರದಲ್ಲಿ ಮುಂದುವರೆಯ ಬೇಕೆ? ಲೋಕಸಭೆಯಲ್ಲಿ ಉಪಾಧ್ಯಕ್ಷರಾಗಿರುವಂಥ ನಮ್ಮ ಮಲ್ಲಿಕಾರ್ಜುನಯ್ಯನವರು ಹೇಮಾವತಿಯಲ್ಲಿ ಕಾಲುವೆಯ ಕೆಲಸವಾಗಬೇಕು, ತುಮಕೂರಿಗೆ ಕುಡಿಯುವ ನೀರು ಬರಬೇಕು ಎಂದು ಬೇಕಾದ ಹೋರಾಟಗಳನ್ನು ಮಾಡಿದರು. ಆದರೆ ಯಾವುದೋ ಭಿನ್ನಾಭಿಪ್ರಾಯಗಳನ್ನೊ ರಾಜಕಾರಣಕೋಸ್ಕರವೋ, ಸಿಟ್ಟು ಮಾಡಿಕೊಂಡು ತಾವು ಅಲ್ಲಿ ಯಾವುದೇ ಕೆಲಸವಾಗದಂತೆ ನೋಡಿಕೊಳ್ಳುತ್ತಿದ್ದೀರಲ್ಲ,ಇದು ಸರಿಯೇ ಕರ್ನಾಟಕ ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ನೀರಾವರಿ ಕೆಲಸವಾಗುತ್ತಿದೆಯೇ? ನೀರಾವರಿ ಯೋಜನೆಯಲ್ಲಿ ಲೂಟಿಯಾಗುತ್ತಿದೆಯೆಂದು ನೀವೇ ಹೇಳಿ ಪೀಸ್ ವರ್ಕ್

ಮಾಡುತ್ತಿದ್ದರೆ ಸರಿಯಲ್ಲವೆಂದು ತನಿಖೆಯನ್ನು ಮಾಡಿದ್ರಲ್ಲ ಎಷ್ಟು ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದಿರಿ? ನಿಮಗೆ ನಿಜವಾಗಲೂ ರೈತರ ಬಗ್ಗೆ ಕಳಕಳಿ ಇಲ್ಲ, ನಿಮಗೆ.

ಕಳಕಳಿ ಇರತಕ್ಕದ್ದು ರೈತರ ಹೆಸರಿನಲ್ಲಿ ಹೇಗಾದರೂ ಮಾಡಿ ಒಂದು ಸಲ ಮುಖ್ಯಮಂತ್ರಿಯಾಗಿ ಕುಳಿತಿರಬೇಕು, ಅದು ನಿಮ್ಮ ಜೀವನದ ದೊಡ್ಡ ಆಸೆ. ಅದಕ್ಕಾಗಿ ಜನರು ನಿಮಗೆ ಓಟನ್ನು ಕೊಟ್ಟರೆ? ಅದಕ್ಕಾಗಿಯೇ ಅಧಿಕಾರವನ್ನು ಕೊಟ್ಟರೆ? ಅದಕ್ಕಾಗಿಯೇ ನಿಮ್ಮ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಬೇಕೆಂದು ಹೇಳಬೇಕೆ? ನಾನು ಬೀದರ್‌ಗೆ ಹೋಗಿದ್ದೆ, ಕರ್ನಾಟಕ ರಾಜ್ಯದಲ್ಲಿ 50 ಲಕ್ಷ ಟನ್ ಕಬ್ಬನ್ನು ಬೆಳೆಯುತ್ತಾರೆ. ನಮ್ಮ ರಾಜ್ಯದಲ್ಲಿ ಇವತ್ತು ಖಾಸಗಿ ಇರಬಹುದು. ಸಹಕಾರಿ ಸಂಘಗಳಿರಬಹುದು 25ಲಕ್ಷ ಟನ್ ಕಬ್ಬನ್ನು ಕ್ರಶ್ ಮಾಡಲು ನಮ್ಮಲ್ಲಿ ಕಾರ್ಖಾನೆಗಳಿಲ್ಲ. ಬೀದರ್‌ನಲ್ಲಿ ಒಂದೇ ಒಂದು ಕಡೆ ಅಲ್ಲಿನ ಸಹಕಾರಿ ಸಂಘಕ್ಕೆ ಒದಗಿಸಬೇಕಾಗಿದ್ದಂಥ ಸುಮಾರು ಒಂದು ಲಕ್ಷ ಟನ್ ಕಬ್ಬು, ಆ ಕಾರ್ಖಾನೆಯ ಒಪ್ಪಂದಕ್ಕೆ ಸೀಮಿತವಾಗಿ ಯಾವ ಕಬ್ಬನ್ನು ಸಪ್ಲೆ ಮಾಡಬೇಕಾಗಿತ್ತೊ ಅದಕ್ಕೆ ತೊಂದರೆಯಾಗಿದೆ. ಬಹಳ ದುಃಖದ ಸಂಗತಿಯೇನೆಂದರೆ, ಆ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯವರು 14-12-94ರಂದು ಒಂದು ಕರಪತ್ರವನ್ನು ಹೊರಡಿಸುತ್ತಾರೆ. ಅದೇನೆಂದರೆ ಬೀದರ್ ಸಕ್ಕರೆ ಸಹಕಾರಿ ಕಾರ್ಖಾನೆ ತನ್ನ 94-95ನೇ ಸಾಲಿನಲ್ಲಿ ಕಬ್ಬನ್ನು ನುರಿಸುವು ಕೆಲಸವನ್ನು ದಿನಾಂಕ : 17-11-94 ರಂದು ಪ್ರಾರಂಭಿಸಲಾಗಿದ್ದು ಈ ಹಂಗಾಮಿನಲ್ಲಿ ಸುಮಾರು 4 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಮೇಲ್ಪಟ್ಟು ಕಬ್ಬನ್ನು ನುರಿಸಿ ಸರಾಸರಿ ಹತ್ತರಷ್ಟು ಸಕ್ಕರೆಯ ಇಳುವರಿಯನ್ನು ಪಡೆಯುವ ಗುರಿಯನ್ನು ಹೊಂದಿರುತ್ತದೆ. ಆದುದರಿಂದ ಜಿಲ್ಲೆಯ ಎಲ್ಲಾ ರೈತರು ಕಬ್ಬನ್ನು ಬೆಳೆಗಾರರು ತಮ್ಮ ಹೊಲಗಳಲ್ಲಿ ಬೆಳೆದಂತ ಕಬ್ಬನ್ನು ಕಾಯ್ದಿರಿಸಿ ಪೂರ್ತಿ ಕಬ್ಬನ್ನು ಕಾರ್ಖಾನೆಗಳಿಗೆ ಸರಬರಾಜು ಮಾಡಬೇಕೆಂದು ಆದೇಶಿಸಲಾಗಿದೆ. ಆದೇಶ ಕೊಟ್ಟರಿ, ಆದರೆ ಕಬ್ಬನ್ನು ಮಹಾರಾಷ್ಟ್ರದ ಅಥವಾ ಬೇರೆ ಕಾರ್ಖಾನೆಗಳಿಗೆ ತೆಗೆದುಕೊಂಡು ಹೋಗಿ ಕಬ್ಬನ್ನು ಅರೆಸುವ ಅವಕಾಶ ಕೊಡಲಿಲ್ಲ. ಕಬ್ಬು ಅರೆಯೋಣವೆಂಬು ಕಾಯ್ದುಕೊಂಡರು, ಆ ಕಬ್ಬಿಗೆ....

ಶ್ರೀ ಪಿ.ಸಿ. ಸಿದ್ದನಗೌಡರ್ : ತಾವು ಈಲ್ಡ್ ಆಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೆನೆಂದರೆ ಅಲ್ಲ ರೈತರು ಸತ್ಯಾಗ್ರಹ ಮಾಡುತ್ತಿದ್ದರು. ನಮ್ಮ ಲೋಕಸಭಾ ಸದಸ್ಯರಾದ ಶ್ರೀರಾಮಚಂದ್ರ ವೀರಪ್ಪನವರು ಅನಿರ್ದಿಷ್ಟ ಕಾಲ ಧರಣಿ ಕುಳಿತುಕೊಳ್ಳುತ್ತೇನೆಂದು ಹೇಳಿದರು, ಧರಣಿ ಕುಳಿತಿದ್ದರು, ಸತ್ಯಾಗ್ರಹ ನಡೆಯುತ್ತಿತ್ತು. ನಾನು ಮೆರವಣಿಗೆಯಲ್ಲಿ ಹೋಗಿಬಂದೆ, ಮುಖ್ಯ ಮಂತ್ರಿಗಳ ಹತ್ತಿರ ಬಂದು ನಾನು ಮತ್ತು ತಂಗಾ ಅವರು ವಿಚಾರಾವನ್ನು ಪ್ರಸ್ತಾಪ ಮಾಡಿದೆವು, ಪತ್ರ ಬರೆದೆವು. ಸಚಿವರು ಹೇಳಿಕೆ ಕೊಟ್ಟರು,ಎಷ್ಟು ಪ್ರಕ್ಷುಬ್ಧವಾದ ವಾತಾವರಣ ಇತ್ತು ಎಂದರೇ ಜಿಲ್ಲಾಧಿಕಾರಿಗಳು, ಜಿಲ್ಲಾ ಮಂತ್ರಿಗಳು ಬಂದಾಗ, ಬೆಳೆಗಾರರು ಆಕ್ರೋಶಗೊಂಡು ಡಿ.ಸಿ. ಅವರು, ಜಿಲ್ಲಾ ಮಂತ್ರಿಗಳು ಒಳಗಡೆ ಹೋಗುವುದಕ್ಕೆ ಆಗದೆ, ಗೇಟ್ ದಾಟಿ ಒಳಗಡೆ ಬಾರದೆ ಇರುವ ಪರಿಸ್ಥಿತಿ ಇದ್ದಾಗ, ಪರಿಹಾರ ಕೊಡುತ್ತೇವೆಂದು ಘೋಷಣೆ ಮಾಡಿದ ಸರ್ಕಾರ ಈವರೆಗೆ ಒಂದು ಪೈಸೆ ಕೂಡ ಕೊಡಲಿಲ್ಲ. ಕಟ್ಟಿಗೆ ಬೆಂಕಿ ಹಚ್ಚುವ ಪರಿಸ್ಥಿತಿ ಬಂದಾಗ, ಕಬ್ಬು ಅರೆಯುವುದಕ್ಕೆ ಅವಕಾಶ ಕೊಟ್ಟಿರುವುದಿಲ್ಲ. ಯಾರ ಸ್ವಾಮಿ ಇದಕ್ಕೆ ಜವಾಬ್ದಾರರು? ಪರಿಹಾರ ಕೊಡುತ್ತೇವೆಂದು ಮೋಸ ಮಾಡಿದ್ದನ್ನು ಅನ್ಯಾಯ ಮಾಡಿದ್ದನ್ನು ಜನರು ಮೆಚ್ಚ ಬೇಕೆ. ಒಪ್ಪಬೇಕೆ? ಯಾವ ಸರ್ಕಾರಕ್ಕೆ ಇವರು ಹೇಳುತ್ತಾರಲ್ಲ, ಬನ್ನಿ ಬಿ.ಜೆ.ಪಿ. ಸರ್ಕಾರ ಶಿವಸೇನೆ ಸರ್ಕಾರ ಮಹಾರಾಷ್ಟ್ರದಲ್ಲಿದೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಪಾಯಿಂಟ್ ಆಫ್ ಆರ್ಡರ್......

(ಗೊಂದಲ)

ಅಧ್ಯಕ್ಷರು : ಹಾಗೇ ಎದ್ದಾಗ ಅವಕಾಶ ಕೊಡುವುದಿಲ್ಲ. ಅದಕ್ಕೆ ಪಾಯಿಂಟ್ ಆಫ್ ಆರ್ಡರ್ ಅನ್ನಿ ಎಂದು ನಾಗೇಗೌಡರು ಹೇಳಿಕೊಟ್ಟಮೇಲೆ....

ಶ್ರೀ ಕೆ.ಎನ್.ನಾಗೇಗೌಡ : ಏಕೆಂದರೆ ರಾಂಗ್ ಫಿಗರ್ ಕೊಡುತ್ತಿದ್ದಾರೆ. ಮಿಸ್‌ಲೀಡ್ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಅವರು ಸತ್ಯಕ್ಕೆ ದೂರವಾದ ಮಾತನ್ನು ಆಡುತ್ತಿದ್ದಾರೆ. ನಾನು ಬೀದರ್‌ನಿಂದ 4ನೇ ಸಾರಿ ಚುನಾವಣೆಯಲ್ಲಿ ಆರಿಸಿ ಬಂದಿದ್ದೇನೆ. ಕಬ್ಬು ಬೆಳೆಗಾರರ ಸಂಘದವರು ಸತ್ಯಾಗ್ರಹ ಮಾಡುತ್ತಿದ್ದರು. ಇವರು ಒಂದು ದಿನ ಅಲ್ಲಿ ಸತ್ಯಾಗ್ರಹ ಮಾಡಲಿಲ್ಲ. ಬೇರೆ ಜನ ಕಬ್ಬು ಬೆಳೆದವರು ಸತ್ಯಾಗ್ರಹ ಮಾಡಿ.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುವಾಗ ಕೇಳಿ, ಅವರು ಮಾತನಾಡಿ ಆಗಲಿ ಆಮೇಲೆ ನೀವು ಮಾತನಾಡಿ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ನಾವೆಲ್ಲ ಮುಖ್ಯಮಂತ್ರಿಗಳಿಗೆ ಹೇಳಿದೆವು. ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದೆವು.

ಅಧ್ಯಕ್ಷರು : ನಿಮ್ಮದು ಪಾಯಿಂಟ್ ಆಫ್ ಆರ್ಡರ್ ಅಲ್ಲ ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ಸುಮ್ಮನೆ ಅರ್ಥಂಬರ್ಥ ಹೇಳಿ...

(ಗೊಂದಲ)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ನಮ್ಮ ಆಡಳಿತ ಮಂಡಲಿಯ ಸದಸ್ಯರೆಲ್ಲ ಸರ್ಕಾರದಲ್ಲಿ ವಿಚಾರ ಮಾಡಿದ್ದಾರೆ.

ಅಧ್ಯಕ್ಷರು : ಆಯಿತು ದಯವಿಟ್ಟು ಕುಳಿತುಕೊಳ್ಳಿ, ಸರ್ಕಾರ ಉತ್ತರ ಕೊಡುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ ಈ ಸರ್ಕಾರ ಜವಾಬ್ದಾರಿ ಏನು? ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಅಲ್ಲಿರತಕ್ಕ ಮ್ಯಾನೇಜ್‌ಮೆಂಟ್ ನೀವು ನಂಬುತ್ತೀರಾ? ಮಂತ್ರಿಗಳು ನೋಡಿಕೊಂಡು ಬಂದು ಪ್ರಾಮಾಣಿಕವಾಗಿ ಹೇಳಿಕೆ ಕೊಟ್ಟಿದ್ದಾರೆ. ಅಲ್ಲಿರುವಂತ ಪಾದಾಧಿಕಾರಿಗಳು 4 ಎಕರೆ ಹೊಲ ಇಲ್ಲದೆ ಇರತಕ್ಕವರು, ಸಾವಿರ ಎರಡು ಸಾವಿರ ಟನ್ ಕಬ್ಬನ್ನು ರೈತ ಹೆಸರಿನಲ್ಲಿ 3-4ನೂರು ರೂಪಾಯಿಗಳಿಗೆ ಕೊಂಡುಕೊಂಡು ಕ್ರಷ್ ಮಾಡಿ ದುರುಪಯೋಗ ಮಾಡಿಕೊಂಡಿದ್ದು, ಯಾರು ಕಬ್ಬನ್ನು ಹೊರ ರಾಜ್ಯಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಬಿಟ್ಟಾಗ ಕ್ರಷ್ ಮಾಡುವುದಕ್ಕೆ ಅವಕಾಶ ಕೊಡದೆ, ಜಿಲ್ಲಾಧಿಕಾರಿಗಳಿಂದ ಆದೇಶ ಕೊಡಿಸಿದ ಮೇಲೆ ಆ ಕಬ್ಬು ಆ ಕಾರ್ಖಾನೆ ಕೊಳ್ಳಬೇಕಾದ ಅಗ್ರಿಮೆಂಟ್ ಆಗಿರುವಂತ ಕಬ್ಬನ್ನು ರೈತರಿಂದ ಕೊಂಡು ಕೊಳ್ಳುವಂತದ್ದು, ಒಣಗಿ ಬೆಂಕಿ ಹಚ್ಚುವ ಪರಿಸ್ಥಿತಿ ಬಂದಾಗ, ಪರಿಹಾರ ಕೊಡಿಸಿತಕ್ಕದ್ದು, ಆ ಸಹಕಾರ ಸಂಘದ ಸರ್ಕಾರದ ನೈತಿಕ ಹೊಣೆ ಅಲ್ಲವೆಯ ಕಣ್ಣಲ್ಲಿ ನೀರು ಬರುತ್ತದೆ ಸನ್ಮಾನ್ಯ ಅಧ್ಯಕ್ಷರೆ, ಅಲ್ಲಿಗೆ ಹೋಗಿಬರೋಣ. ನಮ್ಮ ಕಡೆಯ ಸದಸ್ಯರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ ನಿಜವಾಗಿ ನಿಮಗೆ ಪ್ರಭಾವ ಇದ್ದರೆ, ನಿಮ್ಮ ಮುಖ್ಯಮಂತ್ರಿಗಳು ನಿಮ್ಮ ಮಾತನ್ನು ಕೇಳಬಹುದೆಂದು ನಂಬಿಕೆ ಇದ್ದರೆ. ನೀವು ಏನು ಸಚಿವರಾಗಿ ಭರವಸೆ ಕೊಟ್ಟು

ಬಂದಿದ್ದೀರಿ ಪರಿಹಾರ ಕೊಡುತ್ತೇವೆಂದು 20-25 ದಿವಸ ಆಯಿತು ಇನ್ನೂ ಕೊಡಲಿಲ್ಲ. ಮುಖ್ಯಮಂತ್ರಿಗಳು ಬೀದರ್‌ಗೆ ಹೋಗಿಬಂದರೂ ಸಹ ಪರಿಹಾರ ಕೊಡಲಿಲ್ಲ. ದುಡ್ಡು ಕೊಡುವ ವ್ಯವಸ್ಥೆ ಮಾಡಲಿಲ್ಲ, ಇವತ್ತು ಸರ್ಕಾರಕ್ಕೆ ಜವಾಬ್ದಾರಿ ಇದ್ದರೆ. ಈ ರಾಜ್ಯದಲ್ಲಿ 50 ಲಕ್ಷ ಟನ್ ಕಬ್ಬು ಏನು ಬೆಳೆಯುತ್ತಿದ್ದಾರೆ. ಕಬ್ಬು ಬೆಳೆಯುವುದರಿಂದ 4 ಕಾಸು ಸಿಕ್ಕಿ ನೆಮ್ಮದಿಯಿಂದ ಇರಬಹುದು ಎಂದು ಭಾವಿಸಿದ್ದರೆ. ತಪ್ಪು. ಕೃಷಿ ಸಚಿವರಾದ ಶ್ರೀ ಬೈರೇಗೌಡರು ಹೇಳಿದರು ನಮ್ಮ ರೈತರು ಭತ್ತ ಬೆಳೆದು ರಾಗಿ ಬೆಳೆದು ಸಾಯುತ್ತಿದ್ದಾರೆ, ಕಮರ್ಷಿಯಲ್ ಕ್ರಾಪ್ ಬೆಳೆಯಿರಿ ಎಂದು, ಕಮರ್ಷಿಯಲ್ ಕ್ರಾಪ್ ಬೆಳೆದು ಬೆಂಕಿ ಹಚ್ಚಿ ಕೊಳ್ಳಬೇಕೆ? ಆ ಕಾರ್ಖಾನೆಗಳು ಖಾಸಗಿಯವರದ್ದು ಇರಬಹುದು ಅಥವಾ ಸಹಕಾರಿ ರಂಗದ್ದು ಇರಬಹುದು. ನಿಮ್ಮ ಪ್ರಭಾವ ಇದೆಯಲ್ಲಿ ಶ್ರೀಮಾನ್ ನರಸಿಂರಾಯರ ಜೊತೆ. ಈ ದೇಶದ ಪ್ರಧಾನಿಯವರ ಜೊತೆ ನಿಮ್ಮಷ್ಟು ಪ್ರಭಾರ ಒಳ್ಳೆಯ ಸಂಬಂಧ ನೀವು ಹೋದ ತಕ್ಷಣ ಕೇಂದ್ರದ ಕ್ಯಾಬಿನೆಟ್ ಸಚಿವರಿದ್ದರೂ ಪಕ್ಕಕ್ಕೆ ಸರಿಸಿ ನಿಮ್ಮನ್ನು ಕರೆದು ಮಾತನಾಡುವ ಸಂಬಂಧ ಇರುವ ಕಾಲದಲ್ಲಿ, ಇವತ್ತು ನೀವು ಈ ರಾಜ್ಯದಲ್ಲಿ ಇರುವಂತ ರೈತರಿಗೆ ಈ ಕಬ್ಬಿಗೆ ಬೇಕಾದ ಕಾರ್ಖಾನೆ ತೆಗೆಸಿ ಹಣದ ವ್ಯವಸ್ಥೆ ಮಾಡಿ. ಹಾಳಾಗಿರುವುದಕ್ಕೆ ಪರಿಹಾರ ಕೊಡದೆ ಇದ್ದಮೇಲೆ ನಾನು ರೈತನ ಪ್ರತಿನಿಧಿ ಎಂದು ಹೇಳಿಕೊಳ್ಳತಕ್ಕದ್ದು ಸರಿಯೇ? ಮಣ್ಣಿನ ಮಗ. ಅವನ ಪರವಾಗಿ ಹೋರಾಟ ಮಾಡುತ್ತಿದ್ದೇನೆಂದು ಹೇಳಿ ಭಾಷಣ ಮಾಡತಕ್ಕದ್ದು, ಶ್ರೀಮಂತರು ನನ್ನ ಮೇಲೆ ಬೀಳುತ್ತಿದ್ದಾರೆ, ನಾನು ನಿನ್ನ ಪರ, ನಿನ್ನ ಪರ ಎಂದು ಭಾಷಣ ಮಾಡುವುದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಅದಕ್ಕೆ ಬೇಕಾದ ಪರಿಹಾರ ಕೊಡುವುದಕ್ಕೆ ಆಗದಿರುವಂತ ನಿಮ್ಮ ಸರ್ಕಾರ ಅಧಿಕಾರದಲ್ಲಿ ಮುಂದುವರೆಯಬೇಕೆ? ಮಹಾರಾಷ್ಟ್ರದ ಬಗ್ಗೆ ಹೇಳಿದರಲ್ಲ,ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ ಶಿವಸೇನೆ ಸರ್ಕಾರ ಇದೆಯಲ್ಲ ಅಲ್ಲಿ ಕಬ್ಬು ಏನಾಯಿತು? ಏನು ಮಾಡಿತು ಎಂಬುದಕ್ಕೆ ಸರ್ಕಾರದ ವರದಿ ತರಿಸಿ. ಅಲ್ಲಿ ಮಳೆ ಬಾರದೆ 45Ë46 ಸಾವಿರ ಟನ್ ಕಬ್ಬು ಒಣಗಿ ಹೋಯಿತು. ನಾವು ಏನು ಮಾಡಿದೆವು? ಒಂದು ಟನ್ನಿಗೆ 400 ರೂಪಾಯಿ ಪರಿಹಾರ ಕೊಟ್ಟು ಕಟಾವು ಮಾಡಿ ಲಾರಿಯಲ್ಲಿ ಸಾಗಿಸಿಕೊಂಡು ಬಂದು ಮೇವು ಆಗಿ ಪರಿಗಣಿಸುವ ತೀರ್ಮಾನ ತೆಗೆದುಕೊಂಡರೆ. ಸದನದ ಹೊರಗಡೆ 4 ನೂರು ಅಲ್ಲ 5-6 ನೂರು ಜಾಸ್ತಿ ದುಡ್ಡು ಕೊಡಬೇಕೆಂದು ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಒತ್ತಾಯ ಮಾಡಿದರು. ಅಂದರೆ ಸರ್ಕಾರ ರೈತರ ಬಗ್ಗೆ ಕಳಕಳಿ ಇರುವ ಸರ್ಕಾರ ಇವತ್ತು ಆ ಕೆಲಸ ಅಲ್ಲಿ ಮಾಡಿದರೆ ಪರಿಹಾರ ಕೊಟ್ಟರೆ, ನೀವೇ ಅಗ್ರಿಮೆಂಟ್ ಮಾಡಿಕೊಂಡು ಕಬ್ಬನ್ನು ಕೊಂಡುಕೊಳ್ಳದೆ ಪರಿಹಾರ ಅವನಿಗೆ ಕೊಡದೆ ದ್ರೋಹ ಮಾಡತಕ್ಕ ಈ ಸರ್ಕಾರ ಇನ್ನೂ ಮುಂದು ವರಿಯಬೇಕೆಂದು ಒಪ್ಪುತ್ತೀರಾ ನಾಣಯ್ಯನವರೇ? ಇಲ್ಲಿ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಇದೆಯಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಎಲ್ಲಿದೆ? ಅದು ನನ್ನ ಕ್ಷೇತ್ರ

ಶ್ರೀ ಬಿ.ಎಸ್. ಯಡಿಯೂರಪ್ಪ : ಗೊತ್ತಿಲ್ಲ. ಯಡಿಯೂರಪ್ಪ, ನೀವೆಲ್ಲ ಮನೆಯಲ್ಲಿ ಕುಳಿತಾಗ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಮುಂದೂಡಿದಾಗ, ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಬೊಬ್ಬೆ ಹೊಡೆಯುವರು ನೀವು ಮನೆಯಲ್ಲಿ ಕುಳಿತಾಗ, ಶಿವಮೊಗ್ಗದಿಂದ ಮಂಡ್ಯ ಮಾರ್ಗವಾಗಿ 400 ಕಿಲೋಮೀಟರ್ 21 ದಿವಸ ಪಾದಯಾತ್ರೆ ಮಾಡಿ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಯಾಗಬೇಕೆಂದು ಹೋರಾಟ ಮಾಡಿದೆವು. ಈ ರಾಜ್ಯದ ರೈತರಿಗೆ ಪರಿಹಾರ ಸಿಕ್ಕಿದರೆ ...

(ಗೊಂದಲ)

ಶ್ರೀಎಂ. ಶ್ರೀನಿವಾಸ್ : ಲಕ್ಷ್ಮಯ್ಯನವರಿಗೆ ರವೀಂದ್ರ ಕಲಾಕ್ಷೇತ್ರಕ್ಕೆ ಕಳುಹಿಸಿದರೆ ಫಸ್ಟ್ ಕ್ಲಾಸ್ ಆಗಿ ನಾಟಕ ಆಡುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ರಾತ್ರಿಯಾಗುತ್ತಾ ಅಗುತ್ತಾ ಆಟ ಜಾಸ್ತಿಯಾಗುತ್ತಿದೆ.

ಅಧ್ಯಕ್ಷರು : ಇನ್ನು ಒಂದು ಹತ್ತು ನಿಮಿಷ ಸುಮ್ಮನಿರಿ....(ಗೊಂದಲ) ಲಕ್ಷ್ಮಯ್ಯನವರು ಎದ್ದರು ಎಂದು ನೀವು ಎದ್ದು ಬಿಟ್ಟರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ತಾಲ್ಲೂಕು ಪಂಚಾಯಿತಿ. ಜಿಲ್ಲಾ ಪಂಚಾಯಿತಿ ಅಸ್ತಿತ್ವಕ್ಕೆ ಬಂತಲ್ಲ ಸ್ವಾಮಿ, ನಿಮ್ಮವರೆಲ್ಲ ಗೆದ್ದರು, ಅಧ್ಯಕ್ಷರು ಇವರೆಲ್ಲ ಆಯ್ಕೆಯಾಯಿತಲ್ಲ. ಅದನ್ನು ಸರಿಯಾಗಿ ನಡೆಯುವುದಕ್ಕೆ ಬಿಟ್ಟಿದ್ದೀರಾ? ಯಾವುದಾದರೂ ಗ್ರಾಮ ಪಂಚಾಯಿತಿಗೆ ಹಣ ಬಿಡುಗಡೆ ಮಾಡಿದ್ದೀರಾ? ಹೇಳುವವರು ಕೇಳುವವರು ಯಾರಾದರೂ ಇದ್ದಾರೆಯೇ? ಕುಡಿಯುವುದಕ್ಕೆ ನೀರು ಇದೆಯೇ? ದಾವಣಗೆರೆಯಲ್ಲಿ ಏನು ಅನಿಷ್ಟ ಕಾಡಿದೆಯೋ ಏನೋ, ನೀವು ಅಧಿಕಾರಕ್ಕೆ ಬಂದಮೇಲೆ ಈ ನಾಡಿಗೆ ನಿಮಗೆ ಬರಗಾಲ ನಂಟು. ಯಾರದ್ದೋ ಪಾಪ ಯಾರೋ ಹೊರಬೇಕು, ನೀವು ಬಂದ ಕಾಲದಲ್ಲೆಲ್ಲ. ಹೀಗೆ. ಈಗಾಲಾದರೂ ಅರ್ಥ ಮಾಡಿಕೊಂಡಿರಬಹುದೆಂದು ನಾವು ತಿಳಿದುಕೊಂಡರೆ ದಾವಣಗೆರೆಯಲ್ಲಿ ನಮ್ಮ ದೇಶದ ಇತಿಹಾಸದಲ್ಲಿ ರಾಜ್ಯದ ಇತಿಹಾಸಸದಲ್ಲಿ ಕೊಡಪಾನದಲ್ಲಿ ಒಂದೊಂದು ಕೊಡಪಾನ ನೀರು ತಂದು 3 ರೂಪಾಯಿಗೆ ಮಾರುವಂತ ಪರಿಸ್ಥಿತಿ. ಬರುತ್ತೀರಾ, ಹೇಳುತ್ತೀರಾ ಸ್ವಾಮಿ?

ಇದಕ್ಕೆಲ್ಲ ತಾವು ಅವಕಾಶ ಕೊಡಬಾರದು, ವಿಜ್ಞಾನ ಯುಗದಲ್ಲಿ ಇವರು ಮೂಢ ನಂಬಿಕೆ ನಂಬಿಕೊಂಡು ಈ ತರಹ ಮಾತನಾಡಬಾರದು.

ಅಧ್ಯಕ್ಷರು : ಏನು ಮೂಢನಂಬಿಕೆ?

6.50 ಪಿ.ಎಂ

ಶ್ರೀ ಎಂ.ಶ್ರೀನಿವಾಸ್ : ರಾಮಕೃಷ್ಣ ಹೆಗಡೆ ಅವರ ಕಾಲದಲ್ಲೂ ಬರಗಾಲ ಬಂದಿತ್ತು.

ಶ್ರೀ ಎಂ. ಆರ್. ಲಕ್ಷ್ಮಯ್ಯ : ಸ್ವಾಮಿ ಬರಗಾಲ ಎಂದು ಸಾಬೀತು ಮಾಡುವವರು ರೆವಿನ್ಯೂ ಅಧಿಕಾರಿಗಳು. ಇವರೂ ಅಲ್ಲ ನಾವೂ ಅಲ್ಲ.

ಶ್ರೀ ಎಂ. ಶ್ರೀನಿವಾಸ್ : ಉಪಮುಖ್ಯಮಂತ್ರಿಗಳು ಹೇಳಿದ್ದಾರೆ, ಸತ್ಯಾಗ್ರಹಕ್ಕೆ ಅವರ ಮನೆ ಮುಂದೆ ಹೋದಾಗ, ಏನೋ ನಮ್ಮ ಕರ್ಮ ನಾವು ಬಂದಾಗಲೆಲ್ಲಾ ಬರಗಾಲ ಬರುತ್ತದೆ ಎಂದು.

ಮಾನ್ಯ ಸದಸ್ಯರೊಬ್ಬರು : ಸನ್ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ಲಕ್ಷ್ಮಯ್ಯನವರು ಮತ್ತು ನೀವು 10 ನಿಮಿಷ ಹೊರಗೆ ಹೋಗಿಬನ್ನಿ. (ಮಾನ್ಯ ಸದಸ್ಯರಾದ ಲಕ್ಷ್ಮಯ್ಯನವರು ತಮ್ಮ ಸ್ಥಾನದಿಂದ ನಿರ್ಗಮಿಸಿದರು).

ಶ್ರೀ ಎಂ. ಶ್ರೀನಿವಾಸ್ : ಕಾಯುತ್ತಿದ್ದರು ಅವರು ನೋಡಿ.

ಅಧ್ಯಕ್ಷರು : ಹತ್ತು ನಿಮಿಷ ಹೋಗಿ ಬನ್ನಿ ಎಂದು ಹೇಳಿದ್ದೇನೆ ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಬಗ್ಗೆ ಬಹಳ ನಿಷ್ಠೆ ಇಟ್ಟುಕೊಂಡಿದ್ದಾರೆ ಅವರು.

ಅಧ್ಯಕ್ಷರು : ನನ್ನ ಬಗ್ಗೆ ಎಲ್ಲರಿಗೂ ನಿಷ್ಠೆ ಇದೆ. ಆದರೆ ಯಾರೂ ನಾನು ಹೇಳಿದಹಾಗೆ ಕೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಅನ್ವಯವಾಗುವುದಿಲ್ಲ ಅದು. ಅಲ್ಲಾ ಸಾರ್ ಒಂದು ಕಡೆ ಬರಗಾಲ. ಕೈಕಟ್ಟಿ ಕೊಂಡು ಕುಳಿತುಕೊಂಡು ಜನತಾ ದರ್ಶನ ಮಾಡಿಕೊಂಡು ಹೊರಟಿದ್ದೀರಿ. ಇನ್ನೊಂದು ಕಡೆ ಕುಡಿಯವ ನೀರಿನ ಹಾಹಾಕಾರ. ಹಣ ಬಿಡುಗಡೆಯಾಗಿದೆ, ಯಥೇಚ್ಛವಾಗಿದೆ ಎಂದು ಹೇಳುತ್ತೀರಿ. ಖರ್ಚು ಮಾಡಿಲ್ಲಿಲ್ಲ. ಬರಗಾಲದಲ್ಲೂ ರಾಜಕಾರಣ. ಸ್ವಾಮಿ.ಎಲ್ಲಿಯವರೆಗೆ ಬಿ.ಜೆ.ಪಿ. ಶಾಸಕರ ಬಗ್ಗೆ ಇವರಿಗೆ ಸೇಡಿ ಎಂದರೆ ಪಾಪ. ಹೊಸನಗರದಿಂದ ನಮ್ಮ ಶಾಸಕರು ಆಯ್ಕೆಯಾಗಿ ಬಂದಿದ್ದಾರೆ. ಸಾಗರ ತಾಲ್ಲೂಕು ಬರಗಾಲ ಹೊಸನಗರ ಸೊರಬ ತಾಲ್ಲೂಕು ಬರಗಾಲ. ನಿಮ್ಮ ಸರ್ಕಾರವೇ ಹಣ ಖರ್ಚು ಮಾಡಿ ಕುಡಿಯುವ ನೀರಿಲ್ಲದೇ ಟ್ರಕ್ಕುಗಳಲ್ಲ ನೀರು ಕೊಟ್ಟಂಥ ಹೊಸನಗರ ತಾಲ್ಲೂಕನ್ನು ರಾಜಕೀಯ ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ಬರಗಾಲದ ಪಟ್ಟಿಯಲ್ಲಿ ಕೈಬಿಡುತ್ತೀರಾ? ವಿರೋಧಪಕ್ಷದ ನಾಯಕರ ಸಭೆಯಲ್ಲಿ, ನಿಮ್ಮ ನಾಯಕಗು ಕರೆದಂಥ ಸಭೆಯಲ್ಲಿ ನಾನು ಅದನ್ನು ವಿವರಿಸಿದ್ದೇನೆ. . ತಿಳಿಸಿದ್ದೇನೆ. ಏನು ಕಾರಣ? ಜನತಾ ದರ್ಶನಕ್ಕೆ ಸನ್ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳು ಬಂದಾಗ ನಮ್ಮ ಶಾಸಕರು ಮಾಡಿದ ಅಪರಾಧ ಅಂದರೆ ಅವರ ಭಾಗದಲ್ಲಿ ಆಗಬೇಕಾದಂಥ ನೀರಾವರಿ ಯೋಜನೆ ಅಗಬೇಕು ಅಂತ ಹೇಳಿ ನೂರಾರು ಜನರನ್ನು ಸಾವಿರಾರು ಜನರನ್ನು ಕರೆದುಕೊಂಡುಪ ಬಂದು ಮನವಿಯನ್ನು ಕೊಟ್ಟರು ಎನ್ನುವ ಸೇಡು. ಸಿಟ್ಟು. ಹೀಗಾದರೆ ಸ್ವಾಮಿ ನಿಮ್ಮ ಅಧಿಕಾರಿಗಳು ವರದಿಯನ್ನು ಕೊಡುತ್ತಾರೆ ಇವತ್ತು ಬರಗಾಲ ಪರಿಸ್ಥಿತಿ ಇಲ್ಲ ನಮ್ಮ ರಾಜ್ಯದಲ್ಲಿ, ಮಳೆಯಾಗಿದೆ, ದುಡ್ಡನ್ನು ಖರ್ಚು ಮಾಡುವ ಅಗತ್ಯ ಇಲ್ಲ ಎಂದು ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಳ್ಳುತ್ತೀರಿ ನೀವು ನಿಮಗೆ ಅನುಕೂಲವಾಗುವ ರೀತಿಯಲ್ಲಿ. ಇದುವರೆಗೆ ಒಂದೊಂದು ತಾಲ್ಲೂಕಿಗೆ 25ಲಕ್ಷ ರೂಪಾಯಿಯಂತೆ ಕೊಡುತ್ತೇವೆ ಎಂದು ಹೇಳಿದವರು 24ರೂಪಾಯಿ ಖರ್ಚು ಮಾಡಲಿಲ್ಲ. ಆರ್.ಎಲ್.ಇ.ಜಿ.ಪಿ.. ಎನ್.ಆರ್.ಇ.ಪಿ. ರೆಗ್ಯುಲರ್ ವರ್ಕೇ. ಅದನ್ನೇ ಬರಗಾಲ ಎಂದು ಹೇಳುತ್ತೀರಿ. ಹಾಸನವನ್ನೇ ತೆಗೆದುಕೊಳ್ಳಿ, ಬೇರೆ ಯಾವುದೂ ಬೇಡ. ಸನ್ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ತೀರ್ಮಾನ ಮಾಡಿದ್ದಾರೆ.

ಆರ್.ಎಲ್.ಇ.ಜಿ.ಪಿ ಎನ್.ಆರ್.ಇ.ಪಿ. ರೆಗ್ಯುಲರ್ ವರ್ಕ್ ನಡೆಯಬೇಕು, ಅದಕ್ಕೂ ಬರಗಾಲಕ್ಕೂ ಸಂಬಂಧ ಇಲ್ಲ, ಹಣವನ್ನು ಬಿಡುಗಡೆ ಮಾಡಬೇಕು ಎಂದು ಹೇಳಿದ್ದಾರೆ. ಸ್ವಾಮಿ, ನಿಮ್ಮ ಉಪಮುಖ್ಯಮಂತ್ರಿಗಳಿದ್ದಾರಲ್ಲ, ನಮ್ಮ ಶಿವಮೊಗ್ಗ ಜಿಲ್ಲೆ ಹೊಳೇಹೊನ್ನೂರು ತಾಲ್ಲೂಕಿನಲ್ಲಿ ಹಿಂದೆಂದೂ ಕಾಣದಂಥ ಸಿಡಿಲು ಅನೇಕಲ್ಲು ಮಳೆಯಿಂದ ತೆಂಗಿನತೋಟ, ಅಡಿಕೆ ತೋಟ ಸರ್ವನಾಶ ಆಯಿತು. ಸುಮಾರು 50 ಭಾಗ ಹರಿಜನಗಿರಿಜನರಿದ್ದಾರೆ ಅಲ್ಲಿ. ಬೆಳೆದಿದ್ದಂಥ ಬೆಳೆ ಸಂಪೂರ್ಣ ನೆಲ ಕಚ್ಚಿಹೋಯಿತು. ಉಪಮುಖ್ಯಮಂತ್ರಿಗಳ ಜೊತೆ ನಾವೂ ಹೋಗಿ ಬಂದಿದ್ದೇವೆ ಮೀಟಿಂಗ್ ಮುಗಿಸಿಕೊಂಡು ಒಟ್ಟಿಗೆ. ಹೋಗಿ ಬಂದಮೇಲೆ, ಇಲ್ಲಿ ಬಂದು ಚರ್ಚೆಯೆಲ್ಲಾ ಆದಮೇಲೆ ಬಡವರಿಗೆ, ರೈತರಿಗೆ 50 ಲಕ್ಷ ರೂಪಾಯಿ ಪರಿಹಾರ ಬಿಡುಗಡೆ ಮಾಡುತ್ತೇವೆಂದು ಉಪಮುಖ್ಯಮಂತ್ರಿಗಳು, ಘೋಷಣೆ ಮಾಡುತ್ತಾರೆ. ಮುಖ್ಯಮಂತ್ರಿಗಳನ್ನು ಪತ್ರಕರ್ತರು ಕೇಳಿದರೆ ಎಲ್ಲಿದೆ ಪ್ರಾವಿಷನ್ ಎಂದು ಹೇಳುತ್ತಾರೆ. ಅಂದರೆ ಉಪಮುಖ್ಯಮಂತ್ರಿಗಳಿಗೆ ಅವರ ಜಿಲ್ಲೆಯಲ್ಲಿ ಪರಿಹಾರ ಎಂದು ಘೋಷಣೆ ಮಾಡಿದ ಹಣವನ್ನು ಕೊಡುವುದಕ್ಕೆ ಆಗದೇ ಇದ್ದಮೇಲೆ ಜೆ.ಹೆಚ್. ಪಟೇಲರು ಈಗ ಉಪಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಸ್ವಾಮಿ? ಪಟೇಲರೇ, ನಿಮ್ಮ ಬಗ್ಗೆ ಕೇಳುತ್ತಿದ್ದೆ, ಹೊಳೇಹೊನ್ನೂರಿನಲ್ಲಿ ನಾವು ನೀವು ಎಲ್ಲಾ ಹೋಗಿಬಂದೆವಲ್ಲಾ ಆನೇಕಲ್ಲು ಮಳೆ ಬಿದ್ದು ಸರ್ವನಾಶ ಆಯಿತು ಎಂದು ಕಣ್ಣೀರು ಹಾಕಿಕೊಂಡು ಬಂದೆವಲ್ಲ, ರೈತರು ಮುತ್ತಿಕೊಂಡಾಗ ನಾವು ನೀವು ಸಂಕಟ ಪಟ್ಟುಕೊಂಡು ಬಂದೆವಲ್ಲಾ, ಒಬ್ಬ ಉಪಮುಖ್ಯಮಂತ್ರಿಗಳು 50 ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದೇವೆ ಎಂದು ಘೋಷಣೆ ಮಾಡಿದಿರಲ್ಲ ನಿಮಗೆ ಶಕ್ತಿ ಇಲ್ಲದಿದ್ದರೆ, ಆ ದುಡ್ಡನ್ನು ಬಿಡುಗಡೆ ಮಾಡಿಸುವುದಕ್ಕೆ ಆಗದೇ ಇದ್ದರೆ ನಿಮ್ಮಿಬ್ಬರಿಗೂ.....

ಶ್ರೀ ಜೆ.ಹೆಚ್. ಪಟೇಲ್ : 24 ಲಕ್ಷ ರೂಪಾಯಿ ಆಗಲೇ ಬಿಡುಗಡೆಯಾಗಿದೆ. ಉಳಿದಿದ್ದನ್ನು ಡೆಪ್ಯುಟಿ ಕಮಿಷನರ್ ರಿಪೋರ್ಟ್ ಕಳುಹಿಸುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಸರಿಹೋಗಿದೆಯಾ ಹಾಗಾದರೆ, ಕೊಟ್ಟಿದ್ದಾರೋ? ಅವರು ಮನೆಯಿಂದ ಈಚೆಗೆ ಬರಲಿಲ್ಲ. 50 ಲಕ್ಷ ಕೊಡುವುದಿಲ್ಲ ಅಂತ ಅವರು, ಕೊಡದೇ ಇದ್ದರೆ ಈಚೆಗೆ ಬರುವುದಿಲ್ಲ ಎಂದು ಇವರು. ನನಗೆಲ್ಲಿ ಭಯ ಅಂತ ಅಂದರೆ ಇದೆಲ್ಲಿ ಹೋಗಿ ಮುಟ್ಟುತ್ತದೋ ಎಂದು ಭಯ ಇತ್ತು. ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಹೋಗ್ರೀ ರೀ ಯಾರೋ ಏನೇನೋ ಹೇಳಿಕೆ ಕೊಟ್ಟಾಗ ನಾವೇನು ಮಾಡುವುದಕ್ಕಾಗುತ್ತದೆ ಎಂದು ಹೇಳಿದ್ದು ಪತ್ರಿಕೆಯಲ್ಲಿ ಬಂತು. ಸಿದ್ದರಾಮಯ್ಯನವರೇ ಓದಿದ್ದೀರಾ ಅದು? ನೀವು ಓದಲಿಲ್ಲ. ಈಗೆಲ್ಲಾ ಸರಿಹೋಗಿದ್ದೀರಾ? ಒಂದು ವಿಚಾರ, ನಾವು ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದ್ದರಿಂದ ಮಂತ್ರಿಗಳಲ್ಲಿ ಏನು ಒಡಕಿತ್ತು ಅದು ಹೋಗಿ ಒಗ್ಗಟ್ಟಾದಿರಿ. ಅದೊಂದು ಸಂತೋಷ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಆಯಿತು, ಒಪ್ಪಿಕೊಳ್ಳೋಣ. ಸನ್ಮಾನ್ಯ ಸಭಾಧ್ಯಕ್ಷರೆ, ಅವರು ಒಂದು ನೋ ಕಾನ್‌ಫಿಡೆನ್ಸ್ ತರುವುದರ ಮುಖಾಂತರ ನಮ್ಮಲ್ಲಿ ಒಗ್ಗಟ್ಟು ಮೂಡಿಸಿದರು. ನಿಮ್ಮನ್ನೆಲ್ಲಾ ಛಿದ್ರ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸನ್ಮಾನ್ಯ ನಾಣಯ್ಯನವರೆ, ನಾವು ಛಿದ್ರವಾಗುವುದು ಇರಲಿ, ಈ ದೇಶದ ಇತಿಹಾಸದಲ್ಲಿ ಏನಾಗುತ್ತಿದೆ, ಯಾರು ಛಿದ್ರ ಆಗುತ್ತಿದ್ದಾರೆ? ನಿಮ್ಮ ಪಕ್ಷಗಳ ಸ್ಥಿತಿ ಏನಾಗುತ್ತಿದೆ ರಾಜ್ಯದಲ್ಲಿ ದೇಶದಲ್ಲಿ? ನಾವು ದೇಶದಲ್ಲಿ ಮೊದಲನೇ ಸ್ಥಾನದಲ್ಲಿದ್ದೇವೆ. ನಾಳೆ ಡೆಲ್ಲಿಯಲ್ಲಿ ಅಧಿಕಾರವನ್ನು ನಾವು ನಡೆಸುತ್ತೇವೆ ಎಂದು ನೀವು ನಿದ್ದೆಗೆಡುತ್ತಿದ್ದೀರಿ. ಈ ದೇಶದಲ್ಲಿ ಮೊದಲನೇ ಸ್ಥಾನದಲ್ಲಿ ಇರುವಂಥದ್ದು ಭಾರತೀಯ ಜನತಾ ಪಾರ್ಟಿ. ನಾಲ್ಕು ರಾಜ್ಯದಲ್ಲಿ ಅಧಿಕಾರ ನಡೆಸುತ್ತಾ ಇರುವಂಥದ್ದು ಭಾರತೀಯ ಜನತಾ ಪಾರ್ಟಿ. ಹರಿಜನ ಮಹಿಳೆ ಮುಖ್ಯಮಂತ್ರಿ ಆಗುವುದಕ್ಕೆ ಹೋದಾಗ ಅದನ್ನು ವಿರೋಧ ಮಾಡಿದಂಥ ನಿಮ್ಮ ನೀತಿ ಏನಿತ್ತು ಅದನ್ನು ನಾಡಿನ ಜನ, ದೇಶದ ಜನ ಧಿಕ್ಕರಿಸುತ್ತಾ ಇರುವಂಥ ಕಾಲದಲ್ಲಿ ಮಾಯಾವತಿ ಎಂಬ ಒಬ್ಬ ಹರಿಜನ ಮಹಿಳೆಯನ್ನು ಈ ದೇಶದಲ್ಲಿ, ಉತ್ತರ ಪ್ರದೇಶದಂಥ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಮಾಡಿದಂಥ ಪಕ್ಷ ಭಾರತೀಯ ಜನತಾ ಪಾರ್ಟಿ. ಇಡೀ ದೇಶದಲ್ಲಿ ಇಂದು ಏನಾಗುತ್ತಿದೆಯೆಂದು ಯಾರನ್ನಾದರೂ ಕೇಳಿ ಸ್ವಾಮಿ. ಕುಂತಲ್ಲಿ ನಿಂತಲ್ಲಿ ಇವತ್ತು ಚಿಂತೆ ಬಿ.ಜೆ.ಪಿ. ಬಗ್ಗೆ. ನಾವು ಚಿಂತೆಯನ್ನೇ ಮಾಡುತ್ತಿಲ್ಲ. ಏಕೆ? ಅವರಿಗೆ ಭಯ ಇದೆ. ನಾನು ರಾಜ್ಯದ ಜನರಿಗೆ ಒಂದು ಮಾತು ಹೇಳಿದ್ದೆ. ಒಂದು ಸಾರಿ ನಮಗೆ ಅಧಿಕಾರ ಕೊಡಿ. ಈ ಪಾಪದ ಫಲದ ಪಾಲು ಏನಿದೆ, ಅನೇಕ ಅವ್ಯವಹಾರಗಳು ನಡೆದು ರಸ್ತೆಯಲ್ಲಿ ತಿರುಗಾಡುವ ಪುಢಾರಿಗಳು ಏನು ಕೋಟ್ಯಾಧಿಪತಿಗಳಾಗಿ ತೆರಿಗೆ ಹಣವನ್ನು ಲೂಟಿ ಮಾಡಿಟ್ಟಿದ್ದಾರೆ, ಅದನ್ನು ವಾಪಸ್ ತಂದು ನಿಮಗೆ ಹಂಚುತ್ತೇವಪ್ಪ, ಕೃಷ್ಣಾ ಬೇಸಿನ್ ಪೂರ್ಣ ಮಾಡುತ್ತೇವೆ ಎಂದು ಹೇಳಿದ್ದೆವು. ದುಡ್ಡಿಗೇನೂ ಫಾರಿನ್‌ಗೆ ಹೋಗಬೇಕಾಗಿಲ್ಲ ಸ್ವಾಮಿ. ಎಂಥ ಪ್ರಭಾವ ಇದೆ. ಇವತ್ತು ಏತಕ್ಕೆ ಬಾಂಡ್ ತೆಗೆದುಕೊಳ್ಳಬೇಕು? ಬಾಂಡ್‌ಗೆ ಏತಕ್ಕೆ ಹೋಗಬೇಕು? ಅರ್ಥ ಇಲ್ಲ. ಒಂದು ಟೆಲಿಫೋನ್ ಮಾಡಿದರೆ ಹತ್ತು ಕೋಟಿ ರೂಪಾಯಿ ಕೊಡುವ ಜನ ಇದ್ದಾರ ಮುಖ್ಯಮಂತ್ರಿಗಳಿಗೆ. ಏನು ಪ್ರಭಾವ ಸ್ವಾಮಿ? ಒಂದು ಟೆಲಿಫೋನ್ ಮಾಡಿದೆ ಹತ್ತು ಕೋಟಿ ರೂಪಾಯಿ ಕೊಡುತ್ತಾರೆಂದು ನಮ್ಮ ಮುಖ್ಯಮಂತ್ರಿಗಳು ಹೇಳಿದರೆ ಒಪ್ಪುತ್ತೇನೆ ನಾನು ಅದನ್ನು. ಆ ಶಕ್ತಿ ಇದ್ದಾಗ

100 ಜನರಿಗೆ ಟೆಲಿಫೋನ್ ಮಾಡಿದರೆ ಕೃಷ್ಣಾ ಬೇಸಿನ್ ಮುಗಿಯಿತು. ಆಗುವುದಿಲ್ಲವೇ? ಸಿದ್ಧರಾಮಯ್ಯನವರೇ ನೀವು ಏತಕ್ಕೆ ಸುಮ್ಮನೆ ಆ ಬಡಬಗ್ಗರಿಗೆಲ್ಲಾ ತೆರಿಗೆ ಹಾಕಿ ಹಣ ವಸೂಲು ಮಾಡುವುದಕ್ಕೆ ಶುರು ಮಾಡಿದ್ದೀರಿ, ದುಡ್ಡಿಲ್ಲದೇ ಪಾಪ. ನಿಮ್ಮ ಕಾಲದಲ್ಲಿ ಏನೆಲ್ಲಾ ಮಾಡಿಬಿಟ್ಟಿರಿ, ಹೇಳುತ್ತೀರಾ ಏನಾದರೂ? ಹೇಳುವುದಕ್ಕೆ ಬರುವುದಿಲ್ಲ. ನೈತಿಕ ಶಕ್ತಿ ಬೇಕು ಅದಕ್ಕೆ.

ಶ್ರೀ ಸಿದ್ದರಾಮಯ್ಯ : ನೀವು ಎಷ್ಟು ನೈತಿಕ ಶಕ್ತಿ ಇದೆ ಎಂದು ಹೇಳುತ್ತಿದ್ದೀರೋ ಅದರ ನೂರರಷ್ಟು ನೈತಿಕ ಶಕ್ತಿಯನ್ನು ನಾವು ಉಳಿಸಿಕೊಂಡಿದ್ದೇವೆ ಈಗ. 10 ಕೋಟಿ ವಸೂಲು ಮಾಡುವುದಕ್ಕೆ ಸಿ.ಎಂ.ಗೆ ಆಗುತ್ತದೆ ಎಂದು ಹೇಳಿದಿರಲ್ಲಾ 2000ನೇ ಇಸವಿಯೊಳಗಡೆ ಈ ಸರ್ಕಾರ ಕೃಷ್ಣಾ ನೀರನ್ನು ಬಳಸಿಕೊಳ್ಳತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆ, ಅದನ್ನು ನಾವು ಮಾಡೇ ಮಾಡುತ್ತೇವೆ ಎಂದು ಘಂಟಾಘೋಷವಾಗಿ ಇವತ್ತೂ ನಾವು ಹೇಳುತ್ತೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನೀವು ಬಂದರೆ ಆಗುತ್ತೆ. ಅದಕ್ಕೆ ಜನ ಈಗ ಹೇಳಿರುವುದು. ನೀವಂತೂ (ಬಿ.ಜೆ.ಪಿ) ಬರುವುದಕ್ಕೆ ಸಾಧ್ಯವೇ ಇಲ್ಲ ಕರ್ನಾಟಕದಲ್ಲಿ. 29 ರಿಂದ 17ಕ್ಕೆ ಬಂದಿದ್ದೀರಿ, 17 ರಿಂದ 7ಕ್ಕೆ ಬಂದಿದ್ದೀರಿ. ನೀವು ಈ ರಾಜ್ಯದಲ್ಲಿ ಅಧಿಕಾರದ ಕನಸನ್ನು ಕಾಣುವುದಕ್ಕೆ ಸಾಧ್ಯ ಇಲ್ಲ.

(ಗೊಂದಲ. ಶ್ರೀ ಕೆ.ಎಸ್. ಈಶ್ವರಪ್ಪನವರು ಗೊಂದಲದ ನಡುವೆ ಏನೋ ಹೇಳಿದರು.)

ಶ್ರೀ ಸಿದ್ದರಾಮಯ್ಯ : ಈ ರಾಜ್ಯದ ಜನರ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ನಾವೇ ಮಾಡಬೇಕು. ನೀವು ಅಧಿಕಾರಕ್ಕೆ ಬರುವುದಕ್ಕೆ ಆಗುವುದಿಲ್ಲ. ನೀವು ಈ ತರಹ ಬೊಗಳೆ ಹೊಡ್ಕೊಂಡು ಕುಳಿತುಕೊಳ್ಳಬೇಕು.

ಶ್ರೀ ಹೆಚ್.ಎನ್. ನಂಜೇಗೌಡ : ನಮ್ಮೂರಿನಲ್ಲಿ ಒಬ್ಬನಿಗೆ ಪಾಪ ಎರಡು ಹೆಣ್ಣುಮಕ್ಕಳು ಆದವು. ಪ್ರಯತ್ನ ಮಾಡಿದ್ದೇ ಮಾಡಿದ. 7 ಹೆಣ್ಣು ಮಕ್ಕಳಾದವು ಗಂಡು ಮಕ್ಕಳಾಗಲಿಲ್ಲ ಹೇಳುತ್ತಾರೆ ಇವರು.

ಶ್ರೀ ಸಿದ್ದರಾಮಯ್ಯ : ನೋಡಿ ಪ್ರಮೀಳಾ ಅವರೇ ಏನು ಹೇಳುತ್ತಾರೆ ಹೆಣ್ಣು ಮಕ್ಕಳ ಬಗ್ಗೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಹಣಕಾಸಿನ ಸಚಿವರಾದ ಸಿದ್ಧರಾಮಯ್ಯನವರು ಹೇಳಿದ್ದುದು, ಬಿ.ಜೆ.ಪಿ. ಯಾವುದೇ ಕಾರಣಕ್ಕೂ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದಿಲ್ಲ ಎಂದು ಹೇಳಿದ ಕಾರಣ ಏನು ಗೊತ್ತೆ? ಜೀವರಾಜ್ ಆಳ್ವ, ನಂಜೇಗೌಡರು ಮತ್ತು ವೈ. ರಾಮಕೃಷ್ಣ ಅವರುಗಳು ಸೇರಿದ ಮೇಲೆ ಇದು ಬೆಳೆಯುವುದಿಲ್ಲ ಎಂದು ಖಾಯಂ ಆಯಿತು.

(ನಗು) (ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ : ನಾವು ಸೇರಿರುವುದರಿಂದ 4 ಇದ್ದದ್ದು 40 ಆಗಿದೆ. ಜೆ.ಹೆಚ್. ಪಟೇಲರು ಬಂದರೆ 150 ಮಾಡಿಕೊಂಡು ಬಿಡುತ್ತೇವೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನೈತಿಕತೆ ಪ್ರಶ್ನೆ ಎತ್ತಿ, ಮಾಯಾವತಿ ಅವರನ್ನು ಕುರಿತು ಒಂದು ಮಾತನಾಡಿದ್ದಾರೆ. ಅದು ವಿಪರೀತವಾದಂಥ ಎರಡು ವಿರೋಧಪಕ್ಷಗಳು. ಒಂದು ಪಕ್ಷದ ಘೋಷಣೆ ಏನಿದೆ? (ಹಿಂದಿ ಭಾಷೆಯ ಸಾಲುಗಳನ್ನು ಉದಾಹರಿಸಿದರು). ಇದೊಂದು ವಾದ. ಮತ್ತೊಂದು ವಾದವೇನೆಂದರೆ, ಮನು ಮತ್ತು ಬ್ರಾಹ್ಮಣ ವಾದವನ್ನು ವಿರೋಧಿಸುವಂಥ ಒಂದು ಪಕ್ಷದ ಬಹುಜನ ಸಮಾಜವಾದಿ ಪಕ್ಷ, ಇವರ ವಿರುದ್ಧವಾಗಿ ಮಂಡಲ ವರದಿಯನ್ನು ವಿರೋಧಿಸುವಂಥ ಮತ್ತೊಂದು ಬಿಜೆಪಿ ಪಕ್ಷ, ಎರಡೂ ಸೇರಿ ಪಕ್ಷವನ್ನು ಮುಖ್ಯಮಂತ್ರಿಗಳ ಸ್ಥಾನಕ್ಕಾಗಿ ಮುಲಯಾಂ ಸಿಂಗ್ ಯಾದವ್‌ರನ್ನು ಬೀಳಿಸುವಂತೆ ಮಾಡಿದವರು ನೈತಿಕ ಪ್ರಶ್ನೆ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಅಧಿಕಾರ, ಹಕ್ಕು ಇದೆಯೇ? ಎಂದು ಹೇಳುವ ಪ್ರಶ್ನೆ ಇದರಲ್ಲಿ ಬರುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಮತ್ತು ಉಪ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರು ಪರಸ್ಪರ ಸ್ನೇಹಿತರು. ನಿನ್ನೆಯಿಂದ ಈ ಸದನದಲ್ಲಿ ನಡೆಯುತ್ತಿರುವುದನ್ನು ಕೇಳುತ್ತಿದ್ದೇನೆ. ನಂಜೇಗೌಡರನ್ನು ಅವರು ಆಗಿಂದಾಗ್ಗೆ ಪ್ರಸ್ತಾಪಿಸುತ್ತಿದ್ದಾರೆ. ಜೆ.ಹೆಚ್. ಪಟೇಲರು ಇತ್ತ ಕಡೆ ಬರುತ್ತಾ ಇದ್ದಾರೆ, ಬಿಜೆಪಿ ಕಡೆಗೆಂದು ಹೇಳಿ. ಇದು ಏನಾದರೂ ಆದರೆ ಮಾನ್ಯ ಸಿದ್ಧರಾಮಯ್ಯನವರ ಭವಿಷ್ಯ ಏನಾಗಬಹುದೆಂದು ನನಗೆ ಚಿಂತೆ. ಮತ್ತು ನಂಜೇಜಗೌಡರು ಹಾಗೂ ಜೆ.ಹೆಚ್. ಪಟೇಲರು ಏನಾದರೂ ಒಡಂಬಡಿಕೆ ಮಾಡಿ ಕೊಂಡಿದ್ದರಾಯೇ? ಹೇಗೆ? ಎನ್ನುವುದು ನನಗೆ ಸ್ವಲ್ಪ ಅನುಮಾನ ಬರುತ್ತಿದೆ. ಏಕೆಂದರೆ, ಈಗಾಗಲೇ ಇದು ಮೂರನೇ ಬಾರಿ ಪ್ರಸ್ತಾಪವಾಗುತ್ತಿದೆ.

ಶ್ರೀ ಜೆ.ಹೆಚ್. ಪಟೇಲ್ : ಶಿವಪ್ಪನವರೇ, ನಂಜೇಗೌಡರಿಗೂ ಒಂದು ಇತಿಹಾಸವಿದೆ. ಅವರಿಗೆ ಯಾವ್ಯಾವ ಪಕ್ಷ ಹೇಗಿದೆ ಎಂದು ಗೊತ್ತು. ಬಿಜೆಪಿ ನಾವು ಬಹಳ ಸಂಬಂಧ ಇದ್ದವರು. ಜನತಾದವರು ಬಿಜೆಪಿ. ಬಿಜೆಪಿ ಜನತಾ ಸಂಬಂಧದಷ್ಟು ಇತಿಹಾಸದಲ್ಲಿ ಬೇರೆ ಕಾಂಗ್ರೆಸ್ ಬಿಜೆಪಿ ಇಲ್ಲ. ಈಗ ಅದು ಶುರುವಾಗಿದೆ. ಆದ್ದರಿಂದ, ನೀವು ಯಾವಾಗಲೂ ಇತಿಹಾಸ ತೆಗೆದು ನೋಡಿದರೂ ಬಿಜೆಪಿ ಬೆಳೆದಿರುವುದು ಜನತಾ ಜೊತೆಗೆ ಇದ್ದಾಗಲೇ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : 1983ರಲ್ಲಿ 18 ಜನ ಇಲ್ಲದಿದ್ದರೆ ಇವೊತ್ತು ರಾಜ್ಯದಲ್ಲಿ ಜನತಾ ದಳದವರು ಅಧಿಕಾರದಲ್ಲಿ ಇರುತ್ತಿರಲಿಲ್ಲ, ಏಕೆ ಮಾತನಾಡುತ್ತೀರಿ ಸ್ವಾಮಿ?

ಶ್ರೀ ಹೆಚ್.ಎನ್. ನಂಜೇಗೌಡ : ಜನತಾ ದಳದಿಂದ ಬಿಜೆಪಿ ಬೆಳೆದಿದೆ ಅಂತಲೇ ನಿಮ್ಮನ್ನು ಈ ಕಡೆ ಕರೆಯುತ್ತಿರುವುದು.

ಶ್ರೀ ಜೆ.ಹೆಚ್. ಪಟೇಲ್ : ಅದಕ್ಕೋಸ್ಕರ ಸ್ವಲ್ಪ ಸಮಯ ಮನಸ್ಸಿಗೆ ಲಘುವಾಗಿರಲಿ ಎಂದು ಹೇಳುತ್ತಿದ್ದೇನೆ. ಬಿಜೆಪಿ ಜನತಾ ಮರದ ಸುತ್ತ ಹಬ್ಬಿಕೊಂಡಿದ್ದ ಒಂದು ಬಳ್ಳಿಯಾಗಿ ಬಂತು. ಅದಕ್ಕೆ ಎಲೆಕ್ಷನ್ ಇಸವಿಯನ್ನು ಹೇಳಲ್ಲ, ಅದೆಲ್ಲಾ ಬೇಡ. ಆದೆಲ್ಲಾ ಬೇಡ. ಆದರೆ, ಈಗ ನೀವು ಬೆಳೆದಿದ್ದೀರಿ. ಇಲ್ಲವೆಂದು ನಾನು ಹೇಳುವುದಿಲ್ಲ, ನೀವು ಬೆಳೆದಿದ್ದೀರಿ. ನಮ್ಮಲ್ಲಿ ಕೆಲವು ಸಲ ಕಳೆ ಫಲಸಲ್ಲೇ ತಿಂದು ಬೆಳೆದು ಬಿಡುತ್ತದೆ, ಈ ತರಹ ಕಳೆ ಆಗಿಬಿಡ್ತು ನಿಮ್ಮನ್ನು ಹಚ್ಚೆ ಕೊಂಡಿದ್ದು. ಕಾಂಗ್ರೆಸ್‌ನವರನ್ನು ನಾನು ಬಯ್ಯುವುದಿಲ್ಲ, ಅವರು ಎಂದೂ ನಿಮ್ಮನ್ನು ಹಚ್ಚಿಕೊಳ್ಳಲಿಲ್ಲ, ಈಗ ಮಾಡುತ್ತಿದ್ದಾರೆ. ಇದು ವ್ಯವಹಾರ ಮಾಡುತ್ತಿದ್ದೀರಿ. ಆ ಮಾತು ಬೇರೆ.

ಆದ್ದರಿಂದ, ಈಗ ನೀವು ಬೆಳೆಯುತ್ತಿರುವುದರ ಬಗ್ಗೆ ಒಂದು ಏನೆಂದರೆ, ನಮ್ಮದು ಒಂದು ತರಹ ತೆಂಗಿನ ಮರವಿದ್ದ ಹಾಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲ, ನಿಮ್ಮ ಪರಿಸ್ಥಿತಿ ನೋಡಿದ ಮೇಲೆ ನಾವು ಅಂಟುಕೊಂಡಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಾ ಸ್ವಾಮಿ ಈಚಲು ಮರವಿದ್ದ ಹಾಗೆ.

ಶ್ರೀ ಜೆ.ಹೆಚ್. ಪಟೇಲ್ : ಈಚಲಮರ ಆಗಲಿ ನೀವು, ಬಳ್ಳಾರಿ ಜಾಲಿ ಅಂತ ಒಂದು ಮರ ಇದೆ. ಅದು ಆರು ತಿಂಗಳಿನಲ್ಲಿ ಬೆಳೆಯುತ್ತದೆ, ನಂತರ ಹಾಗೆಯೇ ಸಾಯುತ್ತದೆ. ನಿಮ್ಮದೂ ಹಾಗೆಯೇ.

ಶ್ರೀ ಕೆ.ಎಸ್. ಈಶ್ವರಪ್ಪ : ಬಳ್ಳಾರಿ ಜಾಲಿಗೆ ಸಾವಿಲ್ಲ, ಬಳ್ಳಾರಿ ಜಾಲಿ ಯಾರ್‍ಯಾರ ಮೈಯಲ್ಲಿ ಕೀವು ಇದೆಯೋ ಅದನ್ನು ತೆಗೆದೂ ತೆಗೆದೂ ವಾಸಿ ಮಾಡುತ್ತದೆ. ನಿಮ್ಮ ಮೈಯಲ್ಲಿ ಕೀವೂ ಬರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿ ಇದೆ ಸಿದ್ಧರಾಮಯ್ಯನವರೇ. ಎಂದರೆ ನಿಮ್ಮಲ್ಲಿ ಕೃತಜ್ಞತೆ ಎನ್ನುವುದು ನಿಮ್ಮಲ್ಲಿ ಉದಾಹರಣೆ ಇದೆಯೇ? ಯಾವುದಾದರೂ ಒಂದು ಉದಾಹರಣೆ ಬಿಜೆಪಿ ಬೆಂಬಲವಿಲ್ಲದಿದ್ದರೆ, ನಾವು ನಿಮ್ಮ ಜೊತೆಗೆ ಬರದಿದ್ದರೆ, ಕೇಂದ್ರದಲ್ಲಿ ಸರ್ಕಾರವನ್ನು ರಚಿಸುತ್ತಿದ್ದೀರಾ? ಕರ್ನಾಟಕದಲ್ಲಿ ನೀವು ಬೆಂಬಲ ಕೇಳದಿದ್ದರೂ ಸಹ 18 ಜನರು ಬೆಂಬಲ ಕೊಡದಿದ್ದರೆ, ನೀವು ಚೆನ್ನಗಿರಿ ಬಿಟ್ಟು ಬೆಂಗಳೂರಿಗೆ ಬರುತ್ತಿದ್ದೀರಾ? ದೇವೇಗೌಡರು ಹೊಳೆನರಸೀಪುರ ಬಿಟ್ಟು ಇಲ್ಲಿಗೆ ಬರುತ್ತಿದ್ದರಾ? ಸ್ವಾಮಿ, ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವೊತ್ತಿನಿಂದ ಇವೊತ್ತಿನವರೆಗೆ ಅದು ಏನೆಲ್ಲಾ ಪರಿಣಾಮವೇನು? ಎಲ್ಲಿದ್ದೀರಿ ನೀವು ಕರ್ನಾಟಕ ಬಿಟ್ಟು? ತಬ್ಬಲಿಗಳಂತೆ ಅಲೆಯುವಂಥ ಒಂದು ಪರಿಸ್ಥಿತಿ. ಯಾವುದೋ ಪಕ್ಷ ಕಟ್ಟಿಕೊಂಡು ಪಾರ್ಟಿಯನ್ನು ಅಪ್ಪಿಕೊಳ್ಳುವ ಪ್ರಯತ್ನ ಮಾಡುವಂತಾದ್ದು ನಿಮ್ಮ ನಾಯಕರಾದ ರಾಮಕೃಷ್ಣ ಹೆಗಡೆಯವರು ಏನೋ ತಮ್ಮ ಕೇಳ್ರೋ ನನ್ನ ಮಾತನ್ನು ಅಂತ ಹೇಳಲಿಲ್ಲವೇನೋ ಕಿವಿಯಲ್ಲಿ ಕರೆದು ಹೇಳಲಿಲ್ಲವೇ ಮೊನ್ನೆ.

ಶ್ರೀ ಎಂ.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೆ,

ಶ್ರೀ ಬಿ.ಎಸ್. ಯಡಿಯೂರಪ್ಪ : ಪುನಃ ಇವರು ಬಂದರಾ?

ಅಧ್ಯಕ್ಷರು : ನೋಡಿ, ಇಡೀ ಸದನದಲ್ಲಿ ಸಮಯದ ಪ್ರಶ್ನೆ ಯಾರಿಗಾದರೂ ಇದ್ದರೆ ಅದು ಲಕ್ಷ್ಮಯ್ಯನವರಿಗೆ. 10 ನಿಮಿಷ ಹೋಗಿ ಬನ್ನಿ ಅಂದೆ. ಕರೆಕ್ಟಾಗಿ 10 ನಿಮಿಷದಲ್ಲಿ ವಾಪಸ್ಸು ಬಂದಿದ್ದಾರೆ.

(ನಗು)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಈ ನಾಡಿನ ಜನ, ಈ ದೇಶದ ಜನ 48 ವರ್ಷದ ಈ ಸ್ವತಂತ್ರ ಭಾರತದ ಸವಿ ಏನು ಇದೆ ಅದನ್ನು ಅನುಭವಿಸಿದ್ದಾರೆ. ಅವರು ಜಾಗೃತರಾಗಿದ್ದಾರೆ. ಪ್ರಜ್ಞಾವಂತರಾಗಿದ್ದಾರೆ. ಯಾವುದೇ ಸರಿ ಯಾವುದು ತಪ್ಪು ಅನ್ನುವ ತೀರ್ಮಾನ ತೆಗೆದುಕೊಳ್ಳುವಂತಹ ಶಕ್ತಿ ಬಂದಿದೆ. ನಮ್ಮನ್ನು ಏನೆಲ್ಲಾ ಮಾಡಿ ತುಳಿಯುವಂತಹ ನೀವು ಪ್ರಯತ್ನ ಮಾಡಿದರೂ ಮೇಲೂ ಸಹ ಜೆ.ಹೆಚ್. ಪಟೇಲರಿಗೆ ಅಂಕಿಅಂಶ ಕೊಡಬೇಕಾಗಿಲ್ಲ. ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇದ್ದರೂ

ಸಹ ಶಾಸಕರ ಸಂಖ್ಯೆಯನ್ನು ತೆಗೆದುಕೊಂಡಾಗ, ಮೊದಲನೇ ಸ್ಥಾನದಲ್ಲಿ ಇರುವಂಥದ್ದು ಇವತ್ತು ಒಂದು ರೀತಿ ನೀವು ಬೇರೆ ಎಲ್ಲಾ ಪಕ್ಷಗಳೂ ಛಿದ್ರಛಿದ್ರವಾಗಿ ಆಗುತ್ತಾ ಇರುವಂಥ ಕಾಲದಲ್ಲಿ, ಆ ರೀತಿ ವಿಶ್ವಾಸರ್ಹವಾದ ಒಂದು ನೇತೃತ್ವ ಕೊಟ್ಟು, ನಾಳೆ ಈ ದೇಶವನ್ನು ಇಂತಹ ಒಂದು ದೇಶದ ಏಕತೆ ಅಖಂಡತೆಗೆ, ಸಮಗ್ರತೆಗೆ ಧಕ್ಕೆ ತರುತ್ತಿರುವಂತಹ ಈ ಒಂದು ದುಷ್ಟ ಶಕ್ತಿಗಳನ್ನು ಸರಿಪಡಿಸುವ ಒಂದು ನಾಯಕತ್ವವನ್ನು ಕೊಡುವ ಶಕ್ತಿ ಇರುವಂತಥಾದ್ದು ಯಡಿಯೂರಪ್ಪನವರೇ ಬಿಜೆಪಿ ಅಂತ ಮನೆಗೆ ಬಂದು ನೀವೇ ಹೇಳಬಹುದಲ್ಲ, ಆ ರೀತಿಯ ಒಂದು ವಿಶ್ವಾಸರ್ಹತೆ, ಆ ರೀತಿ ಈ ನಾಡಿನ ಜನರಿಗೆ ವಿಶ್ವಾಸ ಮೂಡಿಸುವಂಥದ್ದು, ಇದರ ಪರಿಣಾಮ 48 ವರ್ಷದಲ್ಲಿ ಹೇಳಿದ್ದನ್ನೇ ಕೇಳಿ ಕೇಳಿ ಕೇಳಿ ಒಂದೇ ಮಾತು ಪಟೇಲರೆ, ಹೇಳುತ್ತೇನೆ ಪ್ರಾಮಾಣಿಕವಾಗಿ ಹೇಳಿ, ಎಂತಹ ಹಿನ್ನಲೆಯಲ್ಲಿ ಗೋಪಾಲಗೌಡರಂಥ ಹೋರಾಟಗಾರರ ಹಿನ್ನಲೆಯಲ್ಲಿ ಬಂದ ಮೇಲೆ ನಿಮ್ಮಂಥವರು ಅಲ್ಲಿ ಕುಳಿತ ಮೇಲೆ ಈ ರಾಜ್ಯದ ರೈತನ ಭವಿಷ್ಯ ಈ ಸ್ಥಿತಿಗೆ ಬಂದಿದ್ದರೂ ಈ ಉಪಮುಖ್ಯಮಂತ್ರಿ ಸ್ಥಾನ ಮುಖ್ಯವಾಯಿತೇ ಹೊರತು ದೇವೇಗೌಡರವಂಥವರನ್ನು ನಿಮ್ಮ ಪಕ್ಷದಲ್ಲಿ ಕೂರಿಸಿಕೊಂಡು ಮುಖ್ಯಮಂತ್ರಿಗಳು ಆಗಿರುವಂಥ ಈ ಕಾಲದಲ್ಲಿ ನೀವು ಹೇಳಿದ್ದು ಆಗುವಂಥ ಪ್ರಭಾವ ಇರುವಂಥ ಕಾಲದಲ್ಲಿ ಈ ಮಣ್ಣಿನ ಮಕ್ಕಳ ರಕ್ಷಣೆಗೆ ಬರದೆ ಇರುವಂಥ ಸಂದರ್ಭದಲ್ಲಿ ಪ್ರಭಾವ ಇರುವಂಥ ಕಾಲದಲ್ಲಿ ಈ ಮಣ್ಣಿನ ಮಕ್ಕಳ ರಕ್ಷಣೆಗೆ ಬರದೆ ಇರುವಂಥ ಸಂದರ್ಭದಲ್ಲಿ ಇನ್ನೂ ನೀವು ಒಬ್ಬ ಉಪ ಮುಖ್ಯಮಂತ್ರಿಯಾಗಿ ಅಲ್ಲಿ ಕುಂತಿದ್ದೀರಾ ಅಂತ ದುಃಖ ಆಗುತ್ತದೆ ಜೆ.ಎಚ್. ಪಟೇಲರೆ, ನಿಜವಾಗಿಯೂ ಸಹ, ಅಲ್ಲ ಸ್ವಾಮಿ ಇವತ್ತು ಹೋಗಿ ಬನ್ನಿ ಗೊತ್ತಾಗುತ್ತದೆ. ತಾಲ್ಲೂಕು ಆಯಿತು, ಜಿಲ್ಲೆ ಆಯಿತು, ಮತ್ತು ಹಳ್ಳಿಗೆ ಹೋಗುತ್ತೇನೆಂದು ಹೇಳಿದ್ದೀರಲ್ಲಾ ಹೋಗಿ ಸ್ವಾಮಿ ಗೊತ್ತಾಗುತ್ತದೆ.

(ಗೊಂದಲ)

ಈ ರಾಜ್ಯದ ದೇಶದ ಜನ ಸನ್ಮಾನ್ಯ ಅಧ್ಯಕ್ಷರೆ, ಯಾವುದು ಸರಿ ಯಾವುದು ತಪ್ಪು ಎಂದು ತೀರ್ಮಾನ ಮಾಡುವಂಥ ಒಂದು ಪರ್ವಕಾಲ ಬರುತ್ತಾ ಇದೆ. ಈ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಯಾವ ಪರಿಸ್ಥಿತಿ ನಿಮಗೆ ಬರಬಹುದು ಎನ್ನುವುದನ್ನು ನಿಜವಾಗಿಯೂ ಸಹ ನಾನು ಹೇಳುತ್ತೇನೆ ರಾಮಕೃಷ್ಣ ಹೆಗ್ಗಡೆಯಂತ ಮುತ್ಸದ್ದಿ ಮುಂದೆ ರಾಜಕಾರಣದಲ್ಲಿ ಏನು ಪರಿಣಾಮಗಳಾಗಬಹುದು ಎಂಬ ಒಂದು ಕಿವಿಮಾತನ್ನು ಹೇಳಿದ್ದಾರೆ. ನಾವೆಲ್ಲಾ ಒಂದಾಗೋಣ, ಏಕೆ? ಅಧಿಕಾರಕ್ಕೆ ಬರುವುದಕ್ಕಲ್ಲ, ನಾವು ಮಾಡಿದಂಥ ಅನೇಕ ಕೃತ್ಯಗಳು ಏನು ಇವೆ, ಅದರ ಪರಿಣಾಮಗಳು ನಾವು ಎಲ್ಲೆಲ್ಲಿ ಇರಬೇಕಾಗುತ್ತೋ ಹೊಸ ಹೊಸ ಜೈಲುಗಳು ಕಟ್ಟುವಂಥ ಕಾಲ ಬಂದುಬಿಡಬಹುದು ಹೀಗೆ ಬಡಿದಾಡಿಕೊಂಡು ಇದ್ದರೆ ಎನ್ನುವ ಕಿವಿಮಾತನ್ನು ಹೇಳುತ್ತಾ ಇದ್ದಾರೆ ನಿಮಗೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜೈಲು ಅಲ್ಲ. ಜೈಲು ತರಹ ಇರುವ ಅರಮನೆಗಳನ್ನು ಕಟ್ಟಿಸೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವ ಹಕ್ಕು ಇದೆ. ನಾವು ತಪ್ಪು ಮಾಡಿದ್ದರೆ, ಹೇಳಲಿ. ಆದರೆ ರಾಮಕೃಷ್ಣ ಹೆಗಡೆಯವರು ಹೆಸರನ್ನು ಡ್ರಾ ಮಾಡಿ ಯಾವ ಸಂದರ್ಭದಲ್ಲಿ ಹೆಗಡೆಯವರು ಹೇಳಿದರೆಂಬುದನ್ನು ಮರೆತು, ಮತ್ತೊಂದು ಮಾಡುವುದು ಸರಿಯಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಅವರು ಬಹಳ ಕರೆಕ್ಟಾಗಿ ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಅಂದರೆ, ನಮ್ಮ ನಾಯಕರಾದ ಹೆಗಡೆಯವರು ಮುತ್ಸದ್ಧಿಗಳು. ಮುಂದೆ ಎಂತಹ ಸ್ಥಿತಿ ಬರಬಹುದು ಅಂದರೆ, ಬಿ.ಜೆ.ಪಿ. ಅಂತ ಪಕ್ಷ ಏನಾದರೂ ಭಾರತದಲ್ಲಿ ಅಧಿಕಾರಕ್ಕೆ ಬಂದರೆ, ನಾವೆಲ್ಲಾ ಜೈಲಿನಲ್ಲಿರಬೇಕಾಗುತ್ತದೆ ಅಂತ ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೇನು ಮಾತನಾಡಿದೆ. ಇವರು ಏಕೆ ತಪ್ಪು ತಿಳಿದುಕೊಂಡರು. ಅದು ಅನ್‌ಪಾರ್ಲಿಮೆಂಟರಿಯೇ, ನಾನು ಏಕೆ ಅದನ್ನು ಹೇಳಿದೆ ಅಂದರೆ, ಆ ಪಟ್ಟಿಗಳನ್ನು ಮಾಡಿಸುತ್ತಾ ಇದ್ದೇವೆ. ನಿಮ್ಮನ್ನು ಸೂಕ್ತವಾದ ಸ್ಥಳ ಅಂತ ನಾವು ಕೇಂದ್ರದಲ್ಲಿ ಅದಿಕಾರಕ್ಕೆ ಬಂದ ಮೇಲೆ, ಜನ ಆಶೀರ್ವಾದ ಕೊಟ್ಟು ಇಲ್ಲಿ ತಂದ ಮೇಲೆ ತೀವ್ರವಾದಂತಹ ಜೈಲುಗಳನ್ನು ಕಟ್ಟಿ, ನಿಮ್ಮ ಆರೋಪ ಪಟ್ಟಿಗಳನ್ನು ತನಿಖೆ ಮಾಡಿಸಿ, ಕೆಲವರನ್ನಾದರೂ ಅಲ್ಲಿ ಇಡದೇ ಇದ್ದರೆ, ಮತ್ತೆ ನೀವು ಭರವಸೆ ಕೊಟ್ಟ ಹಾಗೆ ನಾವು ಮಾಡುವುದಕ್ಕಾಗುತ್ತದೆಯೇ? ನೀವು ಏನು ಹೇಳಿದಿರಿ, ಬ್ರಷ್ಟಾಚಾರವನ್ನು ನಿರ್ಮೂಲ ಮಾಡುತ್ತೇವೆ ಎಂದು ಹೇಳಿ. ಅನ್ಯಾಯ ಮಾಡುವುದಕ್ಕೆ ಬಿಡುವುದಿಲ್ಲ. ಅವರಿಗೆ ರಕ್ಷಣೆ ಕೊಟ್ಟು ನೀವು ಕುಂತಿದ್ದೀರಲ್ಲ ಆ ಕೆಲಸ ಖಂಡಿತವಾಗಿ ನಾವು ಮಾಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಪಕ್ಷದವರು ಹಲವಾರು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಅವರು ಏನೇನು ಮಾಡಿದ್ದಾರೆಂಬುದನ್ನು ಪಟ್ಟಿ ಮಾಡಿದ್ದೀರೋ ಕೊಡಿ ನೋಡೋಣ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟೊತ್ತು ಚೆನ್ನಾಗಿ ನಡೆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಅವರು ನಿಮ್ಮ ಹಳೆಯ ಸ್ನೇಹಿತರು. ಏನೋ ಹೇಳುವವರು ಇದ್ದಾರೆ. ಸ್ವಲ್ಪ ನೋಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಯಡಿಯೂರಪ್ಪನವರೇ ಸ್ವಲ್ಪ ಕುಳಿತುಕೊಳ್ಳಿ. ನೀವು ಹೀಲ್ಡ್ ಆದರೆ ನಾನು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಶ್ರೀ ಯಡಿಯೂರಪ್ಪನವರು ಈಲ್ಡ್ ಆದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವರು ಮಧ್ಯ ಪ್ರದೇಶದಲ್ಲಿ ಅಧಿಕಾರದಲ್ಲಿದ್ದರು. ರಾಜಾಸ್ಥಾನದಲ್ಲೂ ಅಧಿಕಾರದಲ್ಲಿದ್ದರು..

ಒಬ್ಬ ಮಾನ್ಯ ಸದಸ್ಯರು : ಹಳೇ ಮಾತೇ ಆಯಿತು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಳೇ ಮಾತೆ. ಇವರಿಗೆ ಏನಾಯಿತು ಅಧ್ಯಕ್ಷರೆ ನಾನು ಮಾತನಾಡುವಾಗ? ವಿರೋಧ ಪಕ್ಷದ ನಾಯಕರು ಹೀಲ್ಡ್ ಆಗಿದ್ದಾರೆ. ಇವರಿಗೇನು ನನಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು : ನೀವು ಹೇಳಿ. ಈ ಕಡೆ ನನ್ನ ಕಡೆ ತಿರುಗಿ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಯಾವಾಗಲೂ ಮಾತನಾಡುವುದೇ ಇಲ್ಲ. ಸುಮ್ಮನೇ ಇರುತ್ತಾರೆ. ಬಾಯಿಗೆ ಬಂದ ಹಾಗೆ ಮಾತನಾಡುವುದು. ಆಮೇಲೆ ಏನೇಲ್ಲಾ ಹೇಳುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದೇನು. ಇದು ನಿಮ್ಮ ತಾತನ ಮನೆಯ ಸ್ವತ್ತಾ ಇದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಗೃಹ ಸಚಿವರೆ, ನಾನು ಮಾತನಾಡುವುದು ಇದೆ.

ಅಧ್ಯಕ್ಷರು : ಇರಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಹಾತ್ಮ ಗಾಂಧಿಗೆ...

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಸಚಿವರು ನಿಮ್ಮ ತಾತನ ಮನೆಯ ಸ್ವತ್ತಾ ಅಂತ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಸುಮ್ಮನೆ ಕುಳಿತುಕೊಳ್ಳಿ. ಯಾರು ಹೇಳಿದ್ದುದು, ತೆಗೆಯಿರಿ ರೆಕಾರ್ಡ್ಸ್. ಅವರು ಏನು ಮಾತನಾಡುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ಅಧ್ಯಕ್ಷರೆ, ಈಗ ಇವರು ಮಾನ್ಯ ಯಡಿಯೂರಪ್ಪನವರು ಮಾತನಾಡಲಿ. ನಮ್ಮದೇನೂ ತಕರಾರು ಇಲ್ಲ. ಅವರು ಹೇಳಿದ್ದರಲ್ಲಿ ಏನು ಅರ್ಥ ಇದೆ ಅಂದರೆ, ಏನೋ ಒಂದು ದೊಡ್ಡ ಅಪರಾಧವನ್ನು ನಾವೆಲ್ಲಾ ಮಾಡಿಬಿಟ್ಟಿದ್ದೇವೆ. ನಮಗೆಲ್ಲಾ ಜೈಲಿಗೆ ಹೋಗುವುದೆಲ್ಲಾ ಹೊಸದೇನೂ ಅಲ್ಲ. ಶ್ರೀಮಾನ್ ಹೆಗಡೆಯವರು 2 ಸರಿ ಜೈಲಿಗೆ ಹೋಗಿದ್ದಾರೆ. ಇಲ್ಲಿರುವ ಬಹಳ ಜನ ರೈಲು ನೋಡಿರುವವರೆ. ಆದರೆ ತಾವು ಮಾತನಾಡುತ್ತಿರತಕ್ಕ ಕಾಂಟೆಕಸ್ಟ್ ಏನು ಇದೆ, ನಾವೆಲ್ಲಾ ಒಂದು ದೊಡ್ಡ ಅಪರಾಧ ಮಾಡಿಬಿಟ್ಟಿದ್ದೇವೆ, ಅಧಿಕಾರದಲ್ಲಿದ್ದಾಗ, ಹಲವಾರು ವರ್ಷಗಳಿಂದ, ಈಗ ನಾವು ಅಧಿಕಾರವನ್ನು ಕಳೆದುಕೊಂಡು ಬಿಟ್ಟು, ತಾವು ಅಧಿಕಾರಕ್ಕೆ ಬರುತ್ತೀರಾ, ಬಂದ ಮೇಲೆ ಜೈಲುಗಳನ್ನು ಕಟ್ಟಿಸಿಬಿಟ್ಟು ಒಳಗಡೆ ಹಾಕುತ್ತೇವೆ ಅನ್ನುವ ಹಿನ್ನಲೆಯಲ್ಲಿ ತಾವು ಮಾತನಾಡುತ್ತಾ ಇರತಕ್ಕಂತಹದ್ದು. ನಮ್ಮ ಅಬ್ಜಕ್ಷನ್ ಅದಕ್ಕೇ ಇರತಕ್ಕಂಹದ್ದು. ಆ ರೀತಿ ಇದ್ದರೆ, ಇವರು ಏನಾದರೂ ಹೇಳಬೇಕು. ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಂತಿಂತಹ ಅಪಾದನೆಗಳು ಇವೆ. ಇಂಥಾದ್ದನ್ನು ಮಾಡಿದ್ದೀರಾ, ಜೈಲಿಗೆ ಕಳುಹಿಸಬೇಕು ಅಂತ ಹೇಳಿ. ಒಂದೇ ಅದು ರೆಕಾರ್ಡಿಗೆ ಹೋಗಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಅವರು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. ಎಲ್ಲೋ ಇರುತ್ತರೆ. ಜನಗಳಿಗೆ ಅದು ಸಂದೇಶ ಹೋಗುತ್ತದೆ, ಏನೋ ದೊಡ್ಡ ತಪ್ಪು ಮಾಡಿದ್ದಾರೆ, ಅದಕ್ಕೋಸ್ಕರ ಅದು ಬರುತ್ತದೆ. ಅದಕ್ಕೋಸ್ಕರ ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. He should remove.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಮಾತನಾಡಿದೆ ಅದನ್ನು ಸ್ವಲ್ಪ ಅರ್ಥಮಾಡಿಕೊಳ್ಳಿ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇ ಅಂದರೆ....

ಅಧ್ಯಕ್ಷರು : ನನಗೆ ಅರ್ಥವೇ ಆಗುವುದಿಲ್ಲ. ಇಷ್ಟು ದಿವಸ ಜೊತೆಯಲ್ಲಿದ್ದವರು. ನೀವು - ಸಿಂಧ್ಯರವರು. ಪರಸ್ಪರ ನೀವು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಅವರ ಜೊತೆ ಇದ್ದದ್ದು 24 ವರ್ಷದ ಹಿಂದೆ. ಅವರ ಸಹವಾಸ ಬಿಟ್ಟು 24 ವರ್ಷವಾಯಿತು. ಇವರ ಸಹವಾಸ ನಂಬಿಕೊಂಡು ನಾನು ಜೈಲಿಗೆ ಹೊರಟು ಹೋಗಿದ್ದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ಏನು ಸಿಗುವುದಿಲ್ಲ. ಬರೀ ಹೋರಾಟ ಹೋರಾಟ. ಅಲ್ಲಿ ಮಂತ್ರಿ ಸ್ಥಾನ ಸಿಕ್ಕುತ್ತೆ ಅಂತ ಹೋದರು. ಮಂತ್ರಿಯಾಗಬೇಕು ಅಂತ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಮಾಜದ ವ್ಯವಸ್ಥೆಯೇ ಹಾಗಲ್ಲವೇ ಸ್ವಾಮಿ. ತಂದೆ-ತಾಯಿಗಳ ಹತ್ತಿರ ಬೆಳೆಯುತ್ತಾರೆ. ದೊಡ್ಡವರು ಆಗುತ್ತಾರೆ. ಬೇಕಾದ ಬುದ್ಧಿಶಕ್ತಿಗಳನ್ನು ತುಂಬಿದ ಮೇಲೆ ಸ್ಥಾನಮಾನಗಳು ಸಿಕ್ಕಮೇಲೆ ಅಪ್ಪ-ಅಮ್ಮನನ್ನೇ ಮರೆತು ಬಿಡುವುದಿಲ್ಲವೇ; ಜಗತ್ತಿನಲ್ಲಿ ಇರುವ ವ್ಯವಸ್ಥೆಯೇ ಹಾಗೆ. ಇದಕ್ಕೆ ಸಿಂಧ್ಯಾರವರು ಹೊರತಲ್ಲ. ಬೇಸರ ಮಾಡಿಕೊಳ್ಳುವುದೇ ಇಲ್ಲ; ಸಿಂಧ್ಯಾರವರ ಬಗ್ಗೆ. ಸಮಾಜದ ಸ್ಥಿತಿ ಹಾಗಿರುವಾಗ ಅವರು ಅದಕ್ಕೆ ಹೊರತಾಗಿ ಇರುವುದಕ್ಕೆ ಸಾಧ್ಯವೆ? ಎಲ್ಲೋ ಸರಿ. ಚೆನ್ನಾಗಿ ಇದ್ದೀರಲ್ಲಾ, ಚೆನ್ನಾಗಿರಿ. ನಾನು ಕೊನೆಯದಾಗಿ ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚಿತವಾಗಿ ಒಂದು ಮಾತನ್ನು ಹೇಳುತ್ತೇನೆ. ನಾನು ಹೇಳುತ್ತಿದ್ದೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಬಹಳ ನಿಷ್ಠೆಯನ್ನು ವ್ಯಕ್ತಪಡಿಸಿದ್ದಾರೆ.

(ಗೊಂದಲ)

ಬರುತ್ತೇನೆ, ಹೇಳುತ್ತೇನೆ, ನಾನು ಹೇಳಿದ್ದು ಸರಿಯಲ್ಲ ಅಂತ ಆಮೇಲೆ ನೀವು ಹೇಳಿ. ಯಾವ ರಾಮಕೃಷ್ಣ ಹೆಗಡೆಯವರು ಯಾವುದೇ ಒಂದು ಮಾತು ಅನ್ ಪಾರ್ಲಿಮೆಂಟರಿ ಆಗಿದ್ದರೆ ಅದನ್ನು ಕಡತದಿಂದ ತೆಗೆಯಿರಿ. ಇಲ್ಲ ಕ್ಷಮಾಪಣೆ ಕೇಳು ಅಂತ ಕೇಳಿದರೆ ತಪ್ಪಾಗಿದ್ದರೆ ಕೇಳುತ್ತೇನೆ. ಸುಮ್ಮನೆ ನಾನು ಏನು ಹೇಳುತ್ತೇನೆಂಬುದನ್ನು ಕೇಳದೆ ನೀವು ಮತನಾಡಿದರೆ ಹೇಗೆ? ನಾನು ಏಕೆ ಈ ಒಂದು ಅವಿಶ್ವಾಸ ನಿರ್ಣಯವನ್ನು ತಂದರೆ ಅಂದರೆ, ಅವಿಶ್ವಾಸ ನಿರ್ಣಯ ಇವತ್ತಲ್ಲ, ಯಾವತ್ತು ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾದರೋ, ಅವರು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಗಳಾಗಲೇ ಇಲ್ಲ. ಈ ಒಂದು ದೇಗುಲ ಇದೆಯಲ್ಲಾ ಈ ದೇವಸ್ಥಾನ, ಇದೇ ಸಾಕ್ಷಿ.

ಆ ಕರ್ಮ ಕಾಂಡಕ್ಕೆ. ಈ ವಿಧಾನ ಸೌಧದಲ್ಲಿರುವಂತಹ ರಾಷ್ಟ್ರ ಧ್ವಜವನ್ನು ಕಿತ್ತು ಹಾಕಿ, ಪಕ್ಷದ ಧ್ವಜವನ್ನು ಏರಿಸುವುದಕ್ಕೆ ಹೊದರೆ ಅಂತ ಪತ್ರಿಕೆಯಲ್ಲಿ ಬಂತು. ಯಾರು ಈ ರಾಜ್ಯದ ಮುಖ್ಯಮಂತ್ರಿಗಳನ್ನಾಗಿ ಮಾಡುವುದಕ್ಕೆ ಕಾರಣಕರ್ತರಾದ ರಾಮಕೃಷ್ಣ ಹೆಗಡೆಯವರು ನಾನು ಅವರಿಗೆ ಉಪಕಾರ ಮಾಡುವುದಕ್ಕೆ ಹೋಗಿ... ಏಟು ತಿನ್ನಬೇಕಾಯಿತು. ಅಂತ ದುಃಖ ಪಡುವ ಸ್ಥಿತಿಗೆ ನೀವೆಲ್ಲಾ ತಂದು ಬಿಟ್ಟಿರಿ. ಆ ಘಟನೆಯನ್ನು ಜನ ಮರೆಯುವುದಿಲ್ಲಾ ಸ್ವಾಮಿ. ಅವತ್ತಿನಿಂದಲೇ ನಿಮ್ಮ ಮೇಲೆ ವಿಶ್ವಾಸ ಹೊರಟು ಹೋಯಿತು. ನಾವೆಲ್ಲಾ ಒಂದೇ ಅಂತ ಹೇಳಿದಿರಿ. ದೇವೇಗೌಡರು, ರಾಮಕೃಷ್ಣ ಹೆಗಡೆಯವರು ಬೊಮ್ಮಾಯಿಯವರು. ಆದರೆ ಅವತ್ತು ನಡೆದದ್ದೇನು ಕೇವಲ ಕುರ್ಚಿಗೋಸ್ಕರ

(ಗೊಂದಲ)

ನೀವು ಅವತ್ತೇ ಜನರ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರಾಮಕೃಷ್ಣ ಹೆಗಡೆಯವರು ಏನು ಹೇಳಿದರು ಎಂಬುದನ್ನು ಹೇಳಿ. ಚಿಂದಿ ಚಿಂದಿ ಮಾಡಿ ರಾಮಕೃಷ್ಣ ಹೆಗಡೆಯವರ ಹೆಸರನ್ನು ಹೇಳಿ ಏನು ಪ್ರಯೋಜನಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ದೇವಸ್ಥಾನ ಎಂದು ಹೇಳುವುದಕ್ಕೆ ಹೋಗಿಯೇ ಈ ಪರಿಸ್ಥಿತಿಗೆ ಬಂದಿರುವುದು.

ಶ್ರೀ ಜೆ.ಎಚ್. ಪಟೇಲ್ : ರಾಮಕೃಷ್ಣ ಹೆಗಡೆಯವರಿಗೆ ಅರ್ಥವಾಗುವಷ್ಟು ಸೂಕ್ಷ್ಮತೆಗಳು ಬಿ.ಜೆ.ಪಿ. ಅಂದರೆ ಏನು ಎಂಬುದು ನಿಮ್ಮಿಬ್ಬರಿಗೆ ಅರ್ಥವಾಗುವುದಿಲ್ಲ. ಸುಮ್ಮನೆ ಏಕೆ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾಗಿಯೇ ಅವರಿಗೆ ಕೈ ಕೊಟ್ಟಿರಿ, ಅವತ್ತು.

ಶ್ರೀ ಆರ್.ವಿ. ದೇಶಪಾಂಡೆ : ಮಂಗಳಾರತಿಗೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದುವರೆಗೂ ಆದದ್ದು ಮಂಗಳಾರತಿ ಅಲ್ಲಾ. ದುಃಖಾವಾಗುತ್ತಿರುವಂತಹದ್ದು. ಯಾವ ಜನರಿಗೆ ನಂಬಿಕೆ ಪ್ರಜಾತಂತ್ರದ ವ್ಯವಸ್ಥೆ ಬಗ್ಗೆ ಮಾತನಾಡಿ ಲೋಕ ನಾಯಕ ಜಯಪ್ರಕಾಶ್ ನಾರಾಯಣ್‌ರವರ ಹೆಸರನ್ನು ಹೇಳಿ ಆ ಶಾಸಕಾಂಗ ಪಕ್ಷದ ಸಭೆಯನ್ನು ಕರೆದು, ಶಾಂತ ರೀತಿಯಲ್ಲಿ ಯಾರಾದರು ಮುಖ್ಯಮಂತ್ರಿಗಳಾಗಲಿ, ನಮಗೇನೂ? ನಮಗೆ ಸಂಬಂಧ ಇಲ್ಲ. ಆದರೆ ಅವತ್ತು ನಡೆಯಿತಲ್ಲ ಆ ಘಟನೆ ಜನ ಮರೆತಿದ್ದಾರೆ ಅಂತ ತಿಳಿದುಕೊಂಡಿದ್ದೀರಾ?

ಅಧ್ಯಕ್ಷರು : ಈ ವಿಷಯ ಚರ್ಚೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಚರ್ಚೆಯಾಗಿದೆ. ಈ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕೆ ಅದೂ ಒಂದು ಕಾರಣ. ಅವತ್ತೇ ಈ ನಾಡಿನ ಜನತೆಯ ವಿಶ್ವಾಸ ಕಳೆದು ಕೊಂಡರು. ಅವತ್ತೇ ಈ ನಾಡಿನ ಜನತೆಗೆ ನಿಮ್ಮ ಬಗ್ಗೆ ವಿಶ್ವಾಸ ಇಲ್ಲ ಎಂಬುದನ್ನು ಖಾತರಿ ಮಾಡುಕೊಟ್ಟಿರಿ. ನಾನು ಹೇಳುವಂತಹದ್ದು ಆ ಘಟನೆಯ ಬಗ್ಗೆ ಆವತ್ತಿನ ಕಮಿಷನರ್ ಕೋದಂಡರಾಮಯ್ಯನವರು ಒಂದು ರಿಪೋರ್ಟ್ ಕೊಡಿ ಅಂತ ಹೇಳಿದರು. ಆ ರಿಪೋರ್ಟನ್ನು ಹೊರಗೆ ತೆಗೆಯಲಿಲ್ಲ. ನಾನು ಹೇಳುತ್ತಿಲ್ಲ. ಶ್ರೀರಾಮಕೃಷ್ಣ ಹೆಗಡೆಯವರು ಜನತಾ ದಳದ ಎಲ್ಲ ನಾಯಕರು ಬಂದಂತಹ ಸಂದರ್ಭದಲ್ಲಿ ಒಂದು ಸಭೆಯಲ್ಲಿ ಕಿವಿ ಮಾತು ಹೇಳಿದರು, ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ. ಸ್ವಾಮಿ ಸ್ವಲ್ಪ ನೋಡಿ ಆಡಳಿತದ ವ್ಯವಸ್ಥೆಗಳು ಸರಿಯಾಗಿ ಹೋಗುತ್ತಾ ಇಲ್ಲ. ಸಭೆ ಸಮಾರಂಭ ಅಂತ ಹಚ್ಚಿಕೊಂಡು ಕುಳಿತುಕೊಳ್ಳಬೇಡಿ. ಸರ್ಕಾರ ಕಛೇರಿ ಕಡೆ ಗಮನ ಕೊಡಿ, ಕೊನೆಯಪಕ್ಷದ ಸಮಯಕ್ಕ ಸರಿಯಾಗಿ ಈ ವ್ಯವಸ್ಥೆ ಕಡೆ ಗಮನ ಕೊಡಿ ಅಂತ ಹೇಳಿದರು. ಈ ಕಿವಿ ಮಾತಿನ ಅರ್ಥ ಏನು? ಅವರು ಸೂಕ್ಷ್ಮಾತ್ರಿ ಸೂಕ್ಷ್ಮ ಮತಿಗಳು ಅಂತ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಹೇಳಿದರು. ಅವರು ಸೂಕ್ಷ್ಮವಾಗಿ ಎಲ್ಲವೂ ಸರಿಯಾಗಿ ನಡೆಯುತ್ತಿಲ್ಲ ನೋಡಿ ಅಂತ ಹೇಳಿದರು.

ಶ್ರೀ ಎಂ.ಸಿ. ಮನಗೂಳಿ : ಆಡಳಿತದಲ್ಲಿರತಕ್ಕ ಲೋಪದೋಷಗಳ ಬಗ್ಗೆ ಮಾತನಾಡ ಬೇಕೇ ವಿನಃ ಈಗ ಇರತಕ್ಕಂತಹ ಸಮಯದಲ್ಲಿ ವಿಷಯಾಂತರ ಮಾಡಿ ಮಾತನಾಡಬಾರದು ಅಂತ ವಿರೋಧ ಪಕ್ಷದ ನಾಯಕರಿಗೆ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

7.20 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೊನೆಯಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಈ ಸರ್ಕಾರದ ಬಗ್ಗೆ ಸ್ವತಃ ನಿಮ್ಮ ಪರವಾಗಿ ಹೋರಾಟ ಮಾಡಿ ಅಧಿಕಾರಕ್ಕೆ ತರುವುದಕ್ಕೆ ಕಾರಣಕರ್ತರಾದ ರಾಮಕೃಷ್ಣ ಹೆಗಡೆಯವರು ಒಂದು ಕಿವಿ ಮಾತನ್ನು ಹೇಳಿದರು. ಈ ಸರ್ಕಾರ ಸರಿದಾರಿಯಲ್ಲಿ ಹೋಗುತ್ತಿಲ್ಲ. ನಿಮ್ಮ ನಡವಳಿಕೆಯನ್ನು ಬದಲಾವಣೆ ಮಾಡಿಕೊಳ್ಳಿಯೆಂದು ಸೂಕ್ಷ್ಮವಾದ ಭಾಷೆಯಲ್ಲಿ ಹೇಳಿದರು. "ಯಾರ್ರಿ ನೀವು ಹೇಳುವುದಕ್ಕೆ ನಾನು ತಿಥಿಗಾದರೂ ಹೋಗುತ್ತೇನೆ,

ಮದುವೆಗಾದರೂ ಹೋಗುತ್ತೇನೆ. ಸಮಾರಂಭಕ್ಕಾದರೂ ಹೋಗುತ್ತೇನೆ. ನೀವು ಯಾರು ಕೇಳುವುದಕ್ಕೆ" ಎನ್ನುವ ದಾಟಿಯಲ್ಲಿ ನಿಮ್ಮ ಮುಖ್ಯಮಂತ್ರಿಗಳು ಮಾತನಾಡುತ್ತಾರೆನ್ನುವುದಾದರೆ. ಅಂದರೆ ನಿಮ್ಮ ಮುಖ್ಯಮಂತ್ರಿ ಮಾಡಿದಂತಹ ನಾಯಕರುಗಳ ಬಗ್ಗೆ ವಿಶ್ವಾಸವಿಲ್ಲ, ಈ ನಾಡಿನ ಜನರ ಬಗ್ಗೆ ವಿಶ್ವಾಸವಿಲ್ಲ, ಸಂವಿಧಾನದ ಬಗ್ಗೆ ವಿಶ್ವಾಸವಿಲ್ಲ, ವಿರೋಧಪಕ್ಷಗಳು ಎಂದು ಹೇಳಿದರೆ ಇವತ್ತು ನಮ್ಮ ಕಣ್ಣು ಕಿವಿಯಾಗಿರಬೇಕೆಂದೂ, ಯಡಿಯೂರಪ್ಪನವರೇ ನೀವು ಟೀಕೆ ಮಾಡಿ. ನಮ್ಮ ತಪ್ಪುಗಳನ್ನು ಹೇಳಿ ಸರಿಮಾಡಿಕೊಳ್ಳುತ್ತೇವೆಂದು ಹೇಳಿದಂತಹವರು. ನಾವು ಮಾತನಾಡಿದಂತಹ ಸಂದರ್ಭದಲ್ಲಿ ಒಂದೊಂದು ಮಾತನ್ನು ಸಹ ಯಾವ ಸ್ಪಿರಿಟ್‌ನಲ್ಲಿ ತೆಗೆದುಕೊಂಡು ಒಳ್ಳೆಯ ಆಡಳಿತವನ್ನು ಕೊಡಬೇಕಾದ ನೀವು ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರ ಮೇಲೆ ಇಲ್ಲಸಲ್ಲದ ಸುಳ್ಳು ಕೇಸುಗಳನ್ನು ಹಾಕಿ ಕೊಂಡು, ಶಾಸಕರುಗಳ ಮೇಲೆ ಕೇಸುಗಳನ್ನು ಹಾಕಿಕೊಂಡು. ನಮ್ಮ ಅಭಿಮಾನಿಗಳು ಎಂದು ಹೇಳಿದಂತಹ ಜನರಿಗೆ ಅಲ್ಲಿ ಯಾವುದೋ ಒಂದು ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಬದುಕಲಿಕ್ಕೆ ಇರುವಂತಹ ಮಾರ್ಗಕ್ಕೆ ಅದಕ್ಕೂ ಸಹ ಕಿರುಕುಳ ಕೊಟ್ಟು, ಪಿ.ಜಿ.ಆರ್. ಸಿಂಧ್ಯಾರವರು ಗೃಹಸಚಿವರಾಗಿ ಇವತ್ತು ಮಾಡಬಾರದನ್ನು ಮಾಡುತ್ತಿದ್ದೀರಿ,ನಿಮ್ಮನ್ನು ದೇವರು ಕ್ಷಮಿಸುವುದಿಲ್ಲ. ಆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಆಗುವುದು ಇದೆ. ನಿಮ್ಮಂತಹ ಜನ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನೈತಿಕ ಹಕ್ಕಿಲ್ಲ. ದಯಮಾಡಿ, ಅಧಿಕಾರ ಬಿಟ್ಟು ತೊಲಗಿ ಎನ್ನುವ ಜನರ ಮಾತನ್ನು ನಿಮಗೆ ತಿಳಿಸುವುದಕ್ಕೋಸ್ಕರ ಇಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದೇನೆ, ಈಗಾಲಾದರೂ ನಿಮ್ಮ ಭವಿಷ್ಯದ ದೃಷ್ಟಿಯಿಂದಲಾದರೂ ದಯಮಾಡಿ ನಾಡಿನ ಜನರ ಋಣ ತೀರಬೇಕಾದರೆ ಈ ಅವಿಶ್ವಾಸ ನಿರ್ಣಯಕ್ಕೆ ಈ ಕಡೆಗೆ ಬಂದು ಮುಖ್ಯಮಂತ್ರಿಗಳನ್ನು ಇಳಿಸುವುದಕ್ಕೆ ಸಹಕಾರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತಿನ ತನಕ ನಮ್ಮ ನಾಯಕರು ಸರ್ಕಾರದ ವೈಫಲ್ಯಗಳ ಬಗ್ಗೆ ಹಾಗೂ ಸರ್ಕಾರ ನಡೆಯುತ್ತಿರುವ ದಾರಿಯ ಬಗ್ಗೆ ಹೇಳಿದ್ದಾರೆ. ನನಗೆ ಈ ವಿಚಾರದಲ್ಲಿ ಮಾತನಾಡಲಿಕ್ಕೆ ಅವಕಾಶ ಸಿಕ್ಕಿದೆ. ಆದರೂ ಆ ಕಡೆಯಿಂದ ಒಂದು ಉದ್ಗಾರ ಬಂತು ಇದು ಕೇಳಿದಾಗಲು ಆದರೂ ನನ್ನ ಕರ್ತವ್ಯದ ದೃಷ್ಟಿಯಿಂದ ಎರಡು ವಿಚಾರಗಳನ್ನು ಹೇಳಬೇಕಾದ ಅವಶ್ಯಕತೆಯಿದೆ ಎಂದು ನಾನು ಅಂದು ಕೊಂಡಿದ್ದೇನೆ. ನೇರವಾದ ಯಾವುದೇ ಹೆಚ್ಚಿನ ವಿವರಣೆಗೆ ಹೋಗದೇ, ಮೊದಲನೆಯದಾಗಿ ಜನತಾ ದಳದ ಸರ್ಕಾರ ಬಂದ ನಂತರದಲ್ಲಿ ಏನು ಜನ ನಿರೀಕ್ಷಣೆಯನ್ನು ಮಾಡುತ್ತಿದ್ದರು ಹಾಗೂ ಇಂದಿನ ವಿಚಾರಗಳ ಬಗ್ಗೆ, ಹಿಂದಿನ ಸರ್ಕಾರಗಳ ಅವ್ಯವಹಾರಗಳ ಬಗ್ಗೆ ವಿರೋಧ ಪಕ್ಷದ ಸ್ಥಾನದಲ್ಲಿದ್ದು ಯಾವ ನಾಯಕರು ಮಾತನಾಡಿದ್ದರು ಅವರು ಈ ಸ್ಥಾನದಿಂದ ಆಡಳಿತ ಪಕ್ಷದ ಸ್ಥಾನದಲ್ಲಿ ಕೂತಾಗ ಅದೇ ತಪ್ಪುಗಳು ಆಗುವಂತಹದ್ದು ಒಳ್ಳೆಯದಲ್ಲಿವೆನ್ನುವ ವಿಚಾರವನ್ನು ಅನುಭವಸ್ಥರು ಹೇಳಿದಂತಹ ಮಾತು. ಹೊಸದಾಗಿ ನಾನು ಯಾವುದೇ ವಿಚಾರಗಳನ್ನು ಹೇಳುವುದಕ್ಕೆ ಶಕ್ತನಲ್ಲ. ಆದರೂ ಕೂಡ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿದ್ದಾಗ, ಮುಖ್ಯಮಂತ್ರಿಗಳಾಗಿ ಬಂಗಾರಪ್ಪನವರು ಇದ್ದಂತಹ ಸಮಯದಲ್ಲಿ ವಿರೋಧಪಕ್ಷದ ಸ್ಥಾನದಲ್ಲಿದ್ದಂತಹ ಜನತಾದಳದ ನಾಯಕರು ಯಾವ ಕ್ಲಾಸಿಕ್ ಕಂಪ್ಯೂಟರ್ ಹಗರಣವಾಯಿತು ಎನ್ನುವ ವಿಚಾರವನ್ನು, ಅದರ ಬಗ್ಗೆ ದೊಡ್ಡ ತನಿಖೆಯಾಗ ಬೇಕೆಂದು ದೊಡ್ಡ ಅಪರಾಧವಾಗಿದೆ ಎಂದು ಹೇಳಿದ ವಿಚಾರವನ್ನು ಇದೇ ಸದನದಲ್ಲಿ ಹೇಳಿದರು ಆ ವಿಚಾರವನ್ನು ನಾನು ಓದಿದ್ದೇನೆ. ಆದರೆ ಅದಕ್ಕೆ ಹೋಲಿಕೆಯಾಗುವಂತಹ ಸರ್ಕಾರದ ಬೊಕ್ಕಸವನ್ನು ಹಾಳು ಮಾಡುವಂತಹ ಹಾಗೂ ಜನಗಳ ಒಂದೊಂದು ಪೈಸೆಯ, ತೆರಿಗೆಯ ಹಣವನ್ನು ಕೋಟಿ ಕೋಟಿ ಹಣವನ್ನು

ವ್ಯಯ ಮಾಡುವಂತಹ ಒಂದು ವಿಚಾರವನ್ನು ತಮ್ಮ ಮುಂದಿಡಲಿಕ್ಕೆ ಇಚ್ಛಿ ಪಡುತ್ತೇನೆ. ಮೈಸೂರಿನ ಮಹಾನಗರದ ಹೃದಯ ಭಾಗದಲ್ಲಿರುವ ಗಾಂಧಿ ಚೌಕ ಏನಿದೆ, ಅಲ್ಲಿ ಸುಮಾರು 140ವರ್ಷಗಳ ಕಾಲದ- ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಈ ದೇವಾಲಯದಲ್ಲಿ ಅದಕ್ಕೆ ಸಂಬಂಧಪಟ್ಟ ರೀತಿಯಲ್ಲಿ ಅದೇ ಪ್ರದೇಶದಲ್ಲಿ 12 ಮಳಿಗೆಗಳು. ಇದ್ದು, ಅದನ್ನು ಸರ್ಕಾರ ಮಕ್ಕಾಸಿಚೌಕ ಎನ್ನುವಂತಹ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದರು. ಆಗ ಈವೊಂದು ಪ್ರದೇಶದ ವಿಚಾರದಲ್ಲಿ, ದೇವಾಸ್ಥಾನಕ್ಕೆ ಸೇರಿದಂತಹ ಜಾಗ ಎನ್ನುವಂತಹದ್ದು ಎಲ್ಲ ದಾಖಲೆಯಲ್ಲೂ ಕೂಡ ಸರ್ಕಾರದಲ್ಲಿದೆ. ಜೊತೆಗೆ ಅದಕ್ಕೆ ಸಂಬಂಧಪಟ್ಟ ರೀತಿಯಲ್ಲಿ ತಾವು ಹಿಂದೆ ಯಾವ ಹಣವನ್ನು ಆತುರಾತುರದಲ್ಲಿ ಸರ್ಕಾರ ಕೊಟ್ಟಿತು. ಕೇವಲ ಎರಡು ದಿನದೊಳಗಾಗಿ ವಿಚಾರವನ್ನು ಇಟ್ಟ ಎರಡು ದಿವಸದೊಳಗಾಗಿ ಅಡ್ವಾನ್ಸ್ ಹಣವನ್ನು ಕೊಟ್ಟಿತು ಎಂದು ಕಂಪ್ಯೂಟರ್ ಹಗರಣದಲ್ಲಿ ನಾವು ಹೇಳಿದ್ದೀವಿ, ಕೇವಲ ಕೆಲವೇ ದಿನಗಳ ಅಂತರದಲ್ಲಿ ಈ ವೊಂದು ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಹಣವನ್ನು ಕೊಡುವಂತಹ ಆತುರವನ್ನು ಸರ್ಕಾರ ಮಾಡಿದೆ ಮೊದಲನೆಯದಾಗಿ 140 ವರ್ಷಗಳ ಇತಿಹಾಸಇರುವಂತಹ ಒಂದು ದೇವಸ್ಥಾನದಲ್ಲ ಅದಕ್ಕೆ ಪಕ್ಷಿನರಸಪ್ಪ ಎನ್ನುವಂತಹ ಒಬ್ಬ ಮಾಲೀಕರು ಇದ್ದರು ಅವರು ಮೈಸೂರಿನ ರಾಜರ ಆಸ್ಥಾನದಲ್ಲಿ ಖಜಾಂಚಿ ಯಾಗಿದ್ದವರು. ಅವರು ಈ ಪ್ರದೇಶವನ್ನು ದೇವಸ್ಥಾನದ ಪ್ರದೇಶವೆಂದು ಘೋಷಣೆ ಮಾಡಿ,ಅದು ಸಾರ್ವಜನಿಕರ ಸ್ವತ್ತು ಎಂದು ತಮ್ಮ ರಿಜಿಸ್ಟರ್ಡ್ ವಿಲ್‌ನಲ್ಲೂ ಕೊಟ್ಟಿದ್ದಾರೆ ಇದು 1924ರಲ್ಲಿ ಕೂಡ ಉಚ್ಚನ್ಯಾಯಲಯದಲ್ಲ ಇದರ ಬಗ್ಗೆ ತೀರ್ಪು ಆಗಿ, ಇದು ಖಾಸಗಿ ಸ್ವತ್ತಲ್ಲ. ಸಾರ್ವಜನಿತಕರಾದಂತ ಸ್ವತ್ತು ಇದು ದೇವಸ್ಥಾನಕ್ಕೆ ಸಂಬಂಧಪಟ್ಟಿದ್ದು ಎನ್ನುವಂತಹದ್ದನ್ನು ನ್ಯಾಯಲಯ ಇತ್ಯರ್ಥ ಮಾಡಿದೆ. ಆದರೂ ಕೂಡ ಈಗ ಕೆಲವು ಜನತಾದಳದ ಹಿರಿಯರು ಇಂತಹ ವಿಚಾರದಲ್ಲಿ ಹೊಸ

ಮಾಲೀಕತ್ವವನ್ನು ಸೃಷ್ಟಿಮಾಡಿ ಮಾಲೀಕತ್ವ ಇಲ್ಲಂದತಹ ವ್ಯಕ್ತಿಗಳಿಗೆ ಅವರಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳು ಇಲ್ಲದೇ ಹೋದರೂ, ಆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೋಸ್ಕರವಾಗಿ ಅವರ ಜೊತೆಯಲ್ಲಿ ಅಗ್ರಿಮೆಂಟನ್ನು ಮಾಡಿಕೊಂಡಿದೆ. ಜೊತೆಗೆ ಅಗ್ರಿ ಮೆಂಟನ್ನು ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಯಾರು ಸ್ವಾಧೀನದಲ್ಲಿದ್ದರು ಅವರು ಸರ್ಕಾರಕ್ಕೆ ಬರೆದುಕೊಟ್ಟಿದ್ದಾರೆ, ಈ ಪ್ರದೇಶದಲ್ಲಿರುವ ನಮಗೆ ಆಲ್ಟನೇಟಿವ್ ಅರೇಂಜ್‌ಮೆಂಟ್ ಮಾಡಿದರೆ ಸಾಕು,ಯಾವುದೇ ಪರಿಹಾರ ಬೇಕಾಗಿಲ್ಲವೆನ್ನುವ ವಿಚಾರವನ್ನು ಲಿಖಿತಿ ಮೂಲಕ ತಮಗೆ ಕೊಟ್ಟಿದ್ದಾರ. ಅದಕ್ಕೆ ದಾಖಲಾತಿಗಳು ಕೂಡ ದಾಖಲೆಯಲ್ಲಿದೆ ಅದು. ಆದರೂ ಕೂಡ ಕೇವಲ ಅಲ್ಲಿರುವಂತಹ 12 ಜನ ಯಾರು ಅಲ್ಲಿ ಬಿಸಿನೆಸ್‌ನ್ನು ಮಾಡುತ್ತಿದ್ದಾರೆ, ಅಂತಹವರನ್ನು ಬೇರೆ ಕಡೆಗೆ ಶಿಫ್ಟ್ ಮಾಡುವುದನ್ನು ಬಿಟ್ಟು ಹೊಸ ಮಾಲೀಕತ್ವ ಸೃಷ್ಟಿಯಾಗಿ ಅವರ ಜೊತೆಯಲ್ಲಿ ಅಗ್ರಮೆಂಟನ್ನು ಮಾಡಿಕೊಂಡು, ಯಾವ ಸ್ವಾಧೀನದ ನೀತಿನಿಯಮಗಳಿವೆ ಅದನ್ನು ಮೀರಿ ಅವೈಜ್ಞಾನಿಕವಾದ ರೀತಿಯಲ್ಲಿ ಹಣವನ್ನು ವಿತರಣೆ ಮಾಡುವಂತಹ ಕೆಲಸವನ್ನು ಸರ್ಕಾರದಲ್ಲಿ ನಾವು ಕಂಡಿದ್ದೇವೆ.

ಮೊದಲನೆಯದಾಗಿ ಈವೊಂದು ಮಾಲೀಕತ್ವದ ಬಗ್ಗೆ ಬಂದಾಗ ಸರ್ಕಾರದಲ್ಲಿ ನಡೆದಂತಹ ದಾಖಲೆಗಳು ಕೂಡ ಇದರಲ್ಲಿದೆ. ಜೊತೆಗೆ ಯಾರ್‍ಯಾರಿಗೆ ಎಷ್ಟೆಷ್ಟು ಹಣವನ್ನು ಕೊಡಲಾಗಿದೆ ಅನ್ನುವಂತಹ ವಿಚಾರವನ್ನು ತಮ್ಮ ಮುಂದಿಡಲಿಕ್ಕೆ ಇಚ್ಛಿಪಡುತ್ತೇನೆ. ಯಾವ 12 ಮಳಿಗೆಗಳಿದ್ದವು ಅದನ್ನು ಸ್ವಾಧೀನಮಾಡಿಲಿಕ್ಕೋಸ್ಕರವಾಗಿ ಸರ್ಕಾರದವರು ಯಾವುದೇ ದಾಖಲೆಗಳು ಇಲ್ಲದೆ ಮೈಸೂರಿನ ನಗರಪಾಲಿಕೆ. ವಸತಿಯಿಂದ 1 ಕೋಟಿ 48ಲಕ್ಷ ರೂಪಾಯಿಗಳನ್ನು ಯಾವುದೇ ಸಂಬಂಧಪಡದ ಹಣವನ್ನು ಪಾವತಿ ಮಾಡಲಾಗಿದೆ. ಜೊತೆಗ ಪಾವತಿ ಮಾಡಿದ ನಂತರ ಸರ್ಕಾರದ ದಾಖಲಾತಿಯಲ್ಲಿ ಏನಿದೆ ಅಂದರೆ

ಈ ಪ್ರದೇಶವನ್ನು 1ಕೋಟಿ 48ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಕೊಟ್ಟು ಈಗಾಗಲೇ ಸ್ವಾಧೀನ ಮಾಡಿಕೊಳ್ಳಲಾಗಿದೆ ಎನ್ನುವ ವಿಚಾರವನ್ನು ದಾಖಲೆಯಲ್ಲಿ ತೋರಿಸಲಾಗಿದೆ.

ಆದರೆ ಇವತ್ತಿನವರೆಗೆ ಯಾವುದೇ ಕಾರಣಕ್ಕೂ ಕೂಡ ಆ ಪ್ರದೇಶವನ್ನು ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಜೊತೆಗೆ ಆ ಪ್ರದೇಶದಲ್ಲಿ ಯಾರು ಯಾರು ಇದ್ದರು, ಯಾರು ಯಾರು ಆ ಮಳಿಗೆಗಳಲ್ಲಿ ಬಿಸಿನೆಸ್ ಮಾಡುತ್ತಿದ್ದರು. ಅವರು ಇವತ್ತಿನವರೆಗೂ ಕೂಡ ಬಿಸಿನೆಸ್ ಮಾಡುತ್ತ ಬರುತ್ತಿದ್ದಾರೆ. ಹಾಗೂ ಅಲ್ಲಿರುವಂಥವರನ್ನು ವೆಕೇಟ್ ಮಾಡದೇನೆ ದಾಖಲೆಯಲ್ಲಿ ಮಾತ್ರ ಸ್ವಾಧೀನಾಕ್ಕೆ ತೆಗೆದುಕೊಳ್ಳಲಾಗಿದೆ. ಎನ್ನುವಂಥ ವಿಚಾರವನ್ನು ಅಲ್ಲಿ ನಮೂದಿಸಲಾಗಿದೆ. ಅಂದರೆ ಸರ್ಕಾರಿ ದಾಖಲೆಯ ಪ್ರಕಾರದಲ್ಲಿ ಇವತ್ತು ಆ ಪ್ರದೇಶಕ್ಕೋಸ್ಕರವಾಗಿ, ಈ ಪ್ರದೇಶವನ್ನು ಅಕ್ವೈರ್ ಮಾಡಲಿಕ್ಕೋಸ್ಕರವಾಗಿ ಒಂದು ಕೋಟಿ 48ಲಕ್ಷ ರೂ.ಗಳನ್ನು ಪಾವತಿ ಮಾಡಿ. ಆದರೆ ಇವತ್ತಿನವರೆಗೂ ಕೂಡ ಆ ಪ್ರದೇಶದಲ್ಲಿ ಇದ್ದಂಥವರನ್ನು ಅಲ್ಲಿ ಬಿಸಿನೆಸ್‌ಅನ್ನು ಮಾಡಲಿಕ್ಕೋಸ್ಕರವಾಗಿ ಅವಕಾಶ ಮಾಡಿ ಕೊಟ್ಟಿರುವಂಥಾದ್ದು, ಇದು ಯಾವ ರೀತಿಯಲ್ಲಿ ಸರ್ಕಾರಕ್ಕೆ ಸರಿಯಾದಂಥ ವಿಚಾರ. ಇದು 1 ಕೋಟಿ 48ಲಕ್ಷ ರೂ.ಗಳ ತೆರಿಗೆಗಾರ, ಪ್ರತಿಯೊಬ್ಬ ಮನೆಯವನೂ ಕೂಡ ಒಂದೊಂದು ಪೈಸೆ ಕೊಟ್ಟಂಥ ಹಣವನ್ನು ಈ ರೀತಿಯಾಗಿ ಯಾರು ದುರುಪಯೋಗ ಮಾಡಿಕೊಂಡು ಸಂಬಂಧ ಪಡದೇ ಇದ್ದಂಥವರಿಗೆ ಕೊಡುವಂಥಾದ್ದು ಸೂಕ್ತವೇ ಏನ್ನುವಂಥಾದ್ದು ಮೊದಲನೇ ವಿಚಾರ., ಎರಡನೆಯದು ಸರ್ಕಾರಿ ಅಧಿಕಾರಿಗಳು ಮತ್ತು ಅಲ್ಲಿ ಅಧಿಕಾರದಲ್ಲಿ ಇದ್ದಂಥವರು ಆ ಪ್ರದೇಶವನ್ನು ಸ್ವಾಧೀನ ಮಾಡಿಕೊಂಡಿದ್ದೇವೆ ಎಂದು ಹೇಳಿ ಸರ್ಕಾರಕ್ಕೆ ದಾಖಲಾತಿಯನ್ನು ಕೊಟ್ಟಿರುವಂಥಾದ್ದು ಸೂಕ್ತವಾದಂಥ ವಿಚಾರವೇ. ಇವತ್ತು ನಿಜವಾಗಿಯೂ ಕೂಡ ಆ ಪ್ರದೇಶವನ್ನು ಸ್ವಾಧೀನ ಮಾಡಿಕೊಂಡಾಗಿದ್ದರೆ, ಅಲ್ಲಿ ಇರುವಂಥ ಯಾರು ಬಾಡಿಗೆದಾರರು ಇದ್ದಾರೆ. ಅಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ. ಅವರು ಏತಕ್ಕೋಸ್ಕರವಾಗಿ ಅದೇ ಪ್ರದೇಶದಲ್ಲಿ ಇದ್ದಾರೆ. ಒಂದು ವಿಶೇಷ ಅಂದರೆ ಯಾವ ಸರ್ಕಾರ ಇವತ್ತು ಸ್ವಾಧೀನವನ್ನು ಮಾಡಿಕೊಂಡಿದ್ದೇವೆ ಎಂದು ಹೇಳಿ ದಾಖಲೆಗಳಲ್ಲ ನಮೂದಿಸಿದೆಯೋ, ಇದೇ ಸರ್ಕಾರ ಆ ಪ್ರದೇಶದಲ್ಲಿ ಅಲ್ಲಿ ಯಾರನ್ನು ಹಕ್ಕುದಾರರು ಎಂದು ಹೇಳಿದ್ದಾರೆ ಅಂಥವರು 19-7-95ರವರೆಗೂ ಕೂಡ ಬಾಡಿಗೆಯನ್ನು ಪಡೆಯುತ್ತಾ ಇರುವಂಥ ನಿದರ್ಶನಗಳಿವೆ, ಅದಕ್ಕೆ ರಶೀದಿಗಳು ಕೂಡ ಇವೆ. ಅಂದರೆ ಇವತ್ತು ಸರ್ಕಾರ ದಾಖಲೆ. ಪ್ರಕಾರದಲ್ಲ ಹಣವನ್ನು ಪಾವತಿ ಮಾಡಿದ ನಂತರದಲ್ಲಿ ಈ ಹಣ ಇವತ್ತು ಪಾವತಿ ಆದ ಮೇಲೆ ಇದು ಸರ್ಕಾರದ ಆಸ್ತಿಯಾದರೆ, ಸರ್ಕಾರದ ಆಸ್ತಿಗೆ ಯಾರೋ ಒಬ್ಬ ಖಾಸಗಿ ವ್ಯಕ್ತಿ ಇವತ್ತು ಬಾಡಿಗೆಯನ್ನು ಪಡೆಯುವಂಥ ಔಚಿತ್ಯವಾದರೂ ಏನು ಎನ್ನುವಂಥಾದ್ದು ಮೊದಲನೆಯ ವಿಚಾರ, ಸರ್ಕಾರಿ ದಾಖಲಾತಿಗಳಲ್ಲಿ ಈ ವಿಷಯ ಅಕ್ವೈರ್ ಮಾಡಲಾಗಿದೆ, ಅನ್ನುವಂಥ ವಿಚಾರವನ್ನು ಸೃಷ್ಟಿಸಿರುವುದು. ಇನ್ನೊಂದು ವಿಶೇಷ ಎಂದರೆ ಅಲ್ಲಿ ನಗರಪಾಲಿಕೆ ಅದೇ ಪ್ರದೇಶದಲ್ಲಿ ಯಾವುದನ್ನು ಸರ್ಕಾರ ಅಕ್ವೈರ್ ಮಾಡಿಕೊಂಡಿದೆ ಎನ್ನುವಂಥಾದ್ದು ದಾಖಲೆಯಲ್ಲಿ ಇದೆಯೋ ಅಲ್ಲಿ ನಡೆಯುತ್ತ ಇರುವಂಥ ಒಂದು ಹೋಟೆಲ್‌ಗೆ ಸರ್ಕಾರದವರೇ ಈಗ ಲೈಸೆನ್ಸ್‌ನ್ನು ಕೊಟ್ಟಿದ್ದಾರೆ. ಯಾವ ಬಿಲ್ಡಿಂಗ್‌ನ್ನು ಯಾರ ಪ್ರದೇಶವನ್ನು ಸ್ವಾಧೀನ ಮಾಡಿ ಕೊಂಡಿದೆಯೋ- ಅವರಗೇ ಸರ್ಕಾರದವರು ಇವತ್ತು ಲೈಸೆನ್ಸ್‌ನ್ನು ಕೊಟ್ಟು ಅಲ್ಲಿ ಅಕ್ರಮವಾಗಿ ಇರಲಿಕ್ಕೋಸ್ಕರವಾಗಿ ಅವಕಾಶವನ್ನು ಮಾಡಿಕೊಟ್ಟಿದೆ, ಇದರ ಉದ್ದೇಶವಾದರೂ ಏನು? 1 ಕೋಟಿ 48 ಲಕ್ಷ ರೂ.ಗಳ ಈ ಒಂದು ಹಗರಣ,ಈ ವಿಚಾರದಲ್ಲಿ ಸರ್ಕಾರ ಏನು ಒಂದು ಕ್ರಮವನ್ನು ಕೈಗೊಂಡಿದೆ ಎನ್ನುವುದರ ಬಗ್ಗೆ ನಾನು ತಮ್ಮ ಮುಖಾಂತರ ಸರ್ಕಾರದ

ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ. ಜೊತೆಗೆ ಮೈಸೂರಿನ ಮಹಾನಗರಪಾಲಿಕೆ ಒಂದು ಒಂದು ದೊಡ್ಡ ವಿಚಾರವಾಗಿದೆ. ಕಾರಣ ಸಣ್ಣ ಹಣ ಅಲ್ಲ ಇದು. 1 ಕೋಟಿ, 48 ಲಕ್ಷ ರೂ.ಗಳು ನಿಮಗೆ ಅನ್ನಿಸಬಹುದು, ಹಿಂದಿನ ಸರ್ಕಾರ ಇದ್ದಾಗ ಇದು ಮಾಡಿದ್ದು ಏಕೆ ಈ ಮಾತನ್ನು ಹೇಳುತ್ತಿದ್ದಾರೆ ಎಂದು? ಈ ಒಂದು ವಿಚಾರವನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಈ ನಿರ್ಧಾರವನ್ನು ತೆಗೆದುಕೊಂಡಂಥವರು ಜನತಾ ದಳದವರು ಮೇಯರ್ ಆಗಿದ್ದಾಗಲೇ ಈ ನಿರ್ಧಾರವನ್ನು ತೆಗೆದುಕೊಂಡಿರುವುದರಿಂದ ತಮ್ಮ ಮುಂದೆ ನಾನು ಈ ವಿಚಾರವನ್ನು ನಾನು ಮಂಡನೆಯನ್ನು ಮಾಡುತ್ತಿದ್ದೇನೆ.

ಅಧ್ಯಕ್ಷರು : ನೀವು ಅವಿಶ್ವಾಸ ನಿರ್ಣಯದ ಮೇಲೆ ವಿರೋಧ ಪಕ್ಷದವರಾಗಿ ಮಾತನಾಡುತ್ತಿದ್ದೀರಿ. ಬೇಡಿಕೆಗಳ ಮೇಲೆ ಅಲ್ಲ. ಟ್ರೈನಿಂಗ್ ಸರಿಯಾಗಿ ಆಗಿಲ್ಲ. ಹೇಳಬೇಕು, ನಿಮ್ಮ ನಾಯಕರು ಹೇಗೆ ಹೇಳಿದರು ಹಾಗೆ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನಾಗಿ ಬಿಟ್ಟಿದೆ ಎಂದರೆ ಕಾನೂನು ಅಂತಿದ್ದರಲ್ಲ, ಎಲ್ಲ ತಿಳಿದುಕೊಂಡು ಅವರಿಗೆ ಗಾಬರಿ ಆಗಿದೆ. ಅಲ್ಲ ಸ್ವಾಮಿ ಜನತಾ ಕಾನೂನು ಬಂದು ಬಿಟ್ಟಿದೆಯಲ್ಲ ಈಗ ಒಂದೊಂದು ಶಬ್ದವನ್ನೂ ನೋಡಿಕೊಂಡು ಮಾತನಾಡಿಬೇಕಾಗುತ್ತದೆ. ಅದಕ್ಕೋಸ್ಕರವಾಗಿ ತುಂಬಾ ಎಚ್ಚರಿಕೆಯಿಂದ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಕಾನೂನಿಗೂ ಇದಕ್ಕೂ ಏನು ಸಂಬಂಧ ಇದೆ?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಸಚಿವರು ಜ್ಞಾಪಕ ಮಾಡುತ್ತಿದ್ದಾರೆ. ಕಾರ್ಪೋರೇಷನ್‌ನಲ್ಲಿ ನನ್ನದು ಏನು ಇದೆ ಅದನ್ನೆಲ್ಲಾ ಹೇಳಬೇಕು ಅಂತ ನೀವು ಸುಮ್ಮನೆ ಇದ್ದರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ನನ್ನದು ಏನು ಇದೆ ಎಂದು ಎಲ್ಲರೂ ಹೇಳಲಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಯಡಿಯೂರಪ್ಪನವರಿಗೆ ಪ್ರಾಥಮಿಕ ಜ್ಞಾನ ಇದ್ದಹಾಗೆ ಕಾಣುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ನನಗೆ ಏನೂ ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ : ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕನಾಗಿ ಅವರು ನನ್ನನ್ನು ಮೆಂಬರ್ ಮಾಡಿದ್ದಾರೆ. ಆದ್ದರಿಂದ ಕಾನೂನು ಪ್ರಕಾರ ನಾನು ಶಾಸಕರು ಅಲ್ಲ ಮೆಂಬರ್ ಆಗುವುದು ಎನ್ನತಕ್ಕಂಥಾದ್ದು ಇದೆ. ಮಂತ್ರಿಗಳಾಗಿ ಅಲ್ಲ ಅವರು ಮಾಡಿರುವುದು. ಮೈಸೂರಿನ ಚಾಮುಡ್ವೇಶ್ವರಿ ಕ್ಷೇತ್ರದ ಶಾಸಕರು ಸದಸ್ಯರಾಗಿರುತ್ತಾರೆ ಆದರೆ ಮಂತ್ರಿಯಾಗಿ ಅಲ್ಲ.Not in a capacity of Minister but in the capacity of M.L.A. ಇಷ್ಟೂ ಗೊತ್ತಿಲ್ಲ ಅಂದರೆ ನಾನು ಏನು ಹೇಳುವುದು.

ಅಧ್ಯಕ್ಷರು : ಇರಲಿ, ಸಿದ್ಧರಾಮಯ್ಯನವರೇ, ಹೊತ್ತು ಆಗುತ್ತಾ ಆಗುತ್ತಾ ಜನ ಕೈಗೆ ಸಿಗುವುದಿಲ್ಲ.

ಶ್ರೀ ಎ. ರಾಮದಾಸ್ : ಇದು ನಗರಪಾಲಿಕೆಯ ವಿಚಾರ ಎಂದು ಹೇಳಿದರೆ, ನಗರ ಪಾಲಿಕೆಯಲ್ಲೂ ಕೂಡ ಇದು ಒಂದು ಮಂಡಲ್ ಪಂಚಾಯಿತಿ ಅವ್ಯವಹಾರವಾದರೂ ಸರ್ಕಾರದ ವಿಚಾರ. ಇವತ್ತು ಜನತಾ ದಳದ ಸರ್ಕಾರ ಇರುವಂಥ ಸಮಯದಲ್ಲಿ ಜನತಾ ದಳದ ಸರ್ಕಾರದ ಮೇಯರ್ ಇದ್ದಂಥ ಸಂದರ್ಭದಲ್ಲಿ ಸರ್ಕಾರದ

ಹಣವಾದ್ದರಿಂದ ಇದು 1 ಕೋಟಿ 48ಲಕ್ಷ ರೂ.ಗಳ ಅವ್ಯವಹಾರ ನಡೆದಿದೆ. ಇದಕ್ಕೆ ಸರ್ಕಾರ ಶಾಮೀಲಾಗಿದೆ ಎನ್ನುವಂಥ ವಿಚಾರವನ್ನು ನಾನು/ ಇಲ್ಲ ತರಲಿಕ್ಕೆ ಇಚ್ಛಿಪಡುತ್ತಿದ್ದೇನೆ. ನನ್ನ ಕಳಕಳಿ ಇಷ್ಟೇ. ಜನಸಾಮಾನ್ಯರ ಒಂದೊಂದು ಪೈಸೆ ಹಣವನ್ನು ತೆರಿಗೆ ರೂಪದಲ್ಲ ನಾವು ಇವತ್ತಿನ ದಿವಸ ಸಂಗ್ರಹ ಮಾಡಿ , ಯಾರು ಯಾರೋಗೋ ಸಂಬಂಧ ಪಡದಂಥಾ ವ್ಯಕ್ತಿಗೆ 1ಕೋಟಿ 48 ಲಕ್ಷ ರೂ.ಗಳನ್ನು ಪಾವತಿ ಮಾಡಿದ್ದಾರೆ. ಇನ್ನೊಂದು ವಿಚಾರವನ್ನು ನೋವಿನಿಂದ ಹೇಳಬೇಕಾಗುತ್ತದೆ. ಇಲ್ಲಿ ದೇವಸ್ಥಾನಾದ ಪ್ರದೇಶ ಇದ್ದು,ಅದನ್ನು ಸ್ವಾಧೀನಕ್ಕೆ ಪಡೆದು ಕೊಳ್ಳಲಾಗಿದೆ. ನಾಗರಪಾಲಿಕೆ. ಸ್ವಾಧೀನ ಪಡೆದ ಮೇಲೆ ಸರ್ಕಾರಕ್ಕೆ ತಾನೇ ಬಂದ ರೀತಿಯಲ್ಲಿ ಆಯಿತು. ಆದರೆ ಸ್ವಾಧೀನಕ್ಕೆ ಬಂದ ನಂತರದಲ್ಲಿ ಅಲ್ಲಿ ಇದ್ದಂಥ 100 ಹಳೆಯ ಕಾಲದ ವಿಗ್ರಹಗಳು ಕಾಣೆಸುತ್ತಿಲ್ಲ ಎಂದು ದೇವಸ್ಥಾನದವರು ಹೇಳುತ್ತಿದ್ದಾರೆ. ಆದಕ್ಕೆ ಯಾರು ಜವಾಬ್ದಾರಿ. ಹಿಂದೆ ಯಾವುದೋ ಒಂದು ಟ್ರಸ್ಟ್‌ನವರು ಇದ್ದು ಅವರು ಅದನ್ನು ನಡೆಸುತ್ತಿದ್ದರು.ಇವತ್ತು ಇವರು ಸ್ವಾಧೀನವನ್ನು ಪಡೆದ ಮೇಲೆ....

ಮಾನ್ಯ ಸದಸ್ಯರು : ಅಧ್ಯಕ್ಷರೇ, Point of order, ಇವರು ಇಲ್ಲಿಯವರೆಗೂ ಮಾಡಿದಂಥ ಭಾಷಣ ನನಗೆ ಗೊತ್ತಿದ್ದಹಾಗೆ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟಿಲ್ಲ ಎಂದು ಅನ್ನಿಸುತ್ತದೆ. ದಯವಿಟ್ಟು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳಿದರೆ ಅದು ನಿಜವಾಗಲೂ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಡುವುದಿಲ್ಲ. ದಯವಿಟ್ಟು ಸದನದ ಸಮಯವನ್ನು ತಾವು ಕಾಪಾಡಬೇಕು, ಅವರಿಗೆ ನಿರ್ದೇಶನವನ್ನು ಕೊಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ವಿಷಯಾಂತರ ಆಗಬಾರದು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ. ಇದರಲ್ಲಿ ತಮ್ಮ ಒಂದು ಸಲಹೆಯನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ನಗರ ಪಾಲಿಕೆಯ ಸರ್ಕಾರ ಲೋಕಲ್ ಬಾಡಿ ಆಗಿದ್ದರೂ ಕೂಡ ಅಲ್ಲಿ ಆಡಳಿತಾಧಿರಕಾರಿಗಳು ಇವತ್ತಿನ ದಿವಸ ಇದ್ದಾರೆ. ಆಡಳಿತವನ್ನು ನಡೆಸುತ್ತಿರುವಂಥಾದ್ದು ಸರ್ಕಾರವಾದ್ದರಿಂದ ಈ ಸರ್ಕಾರದವರು ಅಲ್ಲಿ ಈ ಒಂದು ಹಣವನ್ನು ವಿತರಣೆ ಮಾಡಿದಂಥ ವಿಚಾರದಲ್ಲಿ ಏನು ಕ್ರಮವನ್ನು ಕೈಗೊಳ್ಳಲಾಗಿದೆ. ಇವತ್ತು 1 ಕೋಟಿ 48ಲಕ್ಷ ರೂ.ಗಳು ಅಂದರೆ ಸಣ್ಣ ಹಣ ಅಲ್ಲ. ಹಣವನ್ನು ಪಾವತಿ ಮಾಡುವಂಥ ವಿಚಾರ. ಅಲ್ಲಿ 140 ವರ್ಷಗಳ ಕಾಲ ಅಲ್ಲಿ ಇದ್ದಂಥ ವಿಗ್ರಹ 4 ತಿಂಗಳುಗಳ ಕಾಲದಿಂದ ಕಾಣುತ್ತಿಲ್ಲ ಅನ್ನುವಂಥಾದಕ್ಕೆ ಯಾರು ಜವಾಬ್ದಾರಿ? ಅದನ್ನು ಇವತ್ತು ಸರ್ಕಾರದವರು, ಯಾವ ಹಳೆಯ ಶಾಸನಗಳು ಇರಬಹುದು, ದೇವಸ್ಥಾನಗಳು ಇರಬಹುದು. ಅದನ್ನು ರಕ್ಷಣೆ ಮಾಡುವಂಥ ಕೆಲಸದಲ್ಲಿ ಇದ್ದಾಗ ಇದು ಕಳವಾಗಿದೆ ಅಂತ ಹೇಳುತ್ತಿರುವಂಥ ಸಂದರ್ಭದಲ್ಲಿ ಇದನ್ನು ರಕ್ಷಣೆ ಮಾಡುವಂಥವರು ಯಾರು? ಎಂದು ತಮ್ಮ ಮೂಲಕ ಕೇಳಬೇಕಾಗಿದೆ. ಇವತ್ತು ಜೊತೆಗೆ ಇದು ಹೇಳುವಂಥ ಸಮಯ ಬಂದಾಗ ನಗರ ಪಾಲಿಕೆ ಇರಬಹುದು. ಅಭಿವೃದ್ಧಿ ಪ್ರಾಧಿಕಾರ ಇರಬಹುದು. ಸರ್ಕಾರದ ಒಂದು ಅಂಗ ಆಗಿರುವುದರಿಂದ ತಮ್ಮ ವೈಶಮ್ಯತೆಯನ್ನು ಈ ವಿಚಾರದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಸ್ವಾಮಿ. ನಗರಪಾಲಿಕೆಯ ವಿಚಾರವನ್ನು ಹೇಳಿದರೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವನ್ನು ಸ್ವೀಕಾರ ಮಾಡಿದ ಕ್ಷಣದಲ್ಲಿ ಹಿಂದಿನ ಸರ್ಕಾರ ಬಡ ಜನಗಳಿಗೋಸ್ಕರ ಏನು ಮನೆಗಳನ್ನು ಕಟ್ಟಿಸಿ ಕೊಡುವಂಥ 'ಆಶ್ರಯ' ಯೋಜನೆಯಲ್ಲಿ ಏನು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿತ್ತು, ಈ ಸರ್ಕಾರ ಬಂದ ಮೇಲೆ ನಿವೇಶನಗಳ ವಿತರಣೆ ಕೆಲಸವನ್ನು ಸಧ್ಯಕ್ಕೆ ಸ್ಥಗಿತ ಮಾಡುವಂಥ ಒಂದು ಆದೇಶ ಬಂತು. ಆ ನಂತರದಲ್ಲಿ ಮೈಸೂರು ಮಾಹಾನಗರ ಪಾಲಿಕೆಯಲ್ಲಿ 'ಆಶ್ರಯ' ಯೋಜನೆಯಲ್ಲಿ ಹಿಂದೆ ಯಾರಿಗೆ ನಿವೇಶನಗಳನ್ನು ಕೊಡಲಾಗಿತ್ತು ಅಂಥವರನ್ನು ಕೈ ಬದಲಾವಣೆ ಮಾಡಿ, ಸುಮಾರು 200 ಜನಗಳಿಗೆ ಹೀಗೆ ಹಣವನ್ನು ಕಟ್ಟಿಸಿಕೊಂಡಿರುವಂಥಾದ್ದು 3

ತಿಂಗಳಿಂದ ಇದೆ. ನನ್ನ ಪ್ರಶ್ನೆ ಇಷ್ಟೇ. ಸರ್ಕಾರದ ಆಜ್ಞಾ ಬಂದ ನಂತರದಲ್ಲಿ ಆ ಸರ್ಕಾರಿ ಆಜ್ಞೆಗಳಿಗೆ ಅಧಿಕಾರಿಗಳು ಕಿಂಚಿತ್ತೂ ಕಿಮ್ಮತ್ತು ಕೊಡದ ರೀತಿಯಲ್ಲಿ ಇರುವುದರಿಂದ ಸರ್ಕಾರ ಯಾವ ಮಾರ್ಗದಲ್ಲಿ ಹೋಗುತ್ತಿದೆ ಎನ್ನುವಂಥಾದ್ದನ್ನು ಸಭೆಯ ಗಮನಕ್ಕೆ ಇರಲು ಇಚ್ಛೆಪಡುತ್ತೇನೆ.

ನಾನು ಮಾನ್ಯ ಸಭಾನಾಯಕರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನನ್ನ ಆರೋಪ ಇಷ್ಟೆ. ಒಂದು ಹೆಡ್‌ನಲ್ಲಿ ಹಣವನ್ನು ಕೊಟ್ಟನಂತರ, ಆ ಹಣವನ್ನು ಆ ಹೆಡ್ನಲ್ಲೇ ಉಪಯೋಗ ಮಾಡಬೇಕು. ಅದು ಬಿಟ್ಟು ಬೇರೆ ವಿಚಾರಗಳಲ್ಲಿ ಉಪಯೋಗವಾಗಬಾರದು ಎನ್ನುವಂಥ ವಿಚಾರ ಇದೆ. ಆದರೆ ಮೈಸೂರಿನಲ್ಲಿ ಆಶ್ರಯ ಯೋಜನೆಯಲ್ಲಿ ಜನರಿಂದು ಏನು ಹಣವನ್ನು ಸಂಗ್ರಹ ಮಾಡಿದ್ದರು, 1 ಕೋಟಿ 10ಲಕ್ಷ ರೂಪಾಯಿ ಹಣ ಇವತ್ತು ಸರ್ಕಾರದಲ್ಲಿ ದಾಖಲಾಗಿಲ್ಲ. ಸನ್ಮಾನ್ಯ ಸಚಿವರಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಆಶ್ರಯ ಯೋಜನೆಯಲ್ಲಿ ಸಂಗ್ರಹವಾದ 1ಕೋಟಿ 10 ಲಕ್ಷ ರೂಪಾಯಿಗಳನ್ನು ಬೇರೆ ಉಪಯೋಗಕ್ಕೋಸ್ಕರ ಆದೇಶವನ್ನು ಕೊಡಲಾಗಿತ್ತಾ? ಸರ್ಕಾರದ ಅನುಮತಿಯಿಲ್ಲದೆ. ಈ ಹಣವನ್ನು ಯಾವರೀತಿಯಲ್ಲಿ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಲಾಯಿತು? ಜೊತೆಗೆ ಹಿಂದೆ ಸರ್ಕಾರದ ಅದೇಶ ಇದ್ದರೂ ಕೂಡ ಈ ಅಶ್ರಯ ಯೋಜನೆಯಲ್ಲಿ ನಡೆದಂತ ಅಕ್ರಮಗಳು ಏನಿದೆ, ಇದರ ಬಗ್ಗೆ ನಾನು ಸರ್ಕಾರಕ್ಕೆ ತಿಳಿಸುವುದೆಕ್ಕೆ ಇಚ್ಛೆಪಡುತ್ತಿದ್ದೇನೆ. 1 ಕೋಟಿ 10ಲಕ್ಷ ರೂಪಾಯಿಗಳ ಹಣ ಏನಿ0ದೆ ದುರುಪಯೋಗ ಇವತ್ತು ಆಗಿದೆ. ಇದರ ದುರುಪಯೋಗಳಾಗಿದೆ ಎನ್ನುವಂಥ ಆರೋಪವನ್ನು ಮಾಮು ಮಾಡುವುದಕ್ಕೆ ಇಚ್ಛೆಪಟುತ್ತೇನೆ. ಬಡವರ ಹಣವನ್ನು ದುರುಪಯೋಗ ಮಾಡಿದಂಥ ಸರ್ಕಾರ ರಾಜೀನಾಮೆಯನ್ನು ಕೊಡಬೇಕು. ಜೊತೆಗೆ ಎಲ್ಲ ಕಡೆ ನಿವೇಶನಗಳನ್ನು ಹಂಚಿಕೊಂಡು ಬರುತ್ತಿದ್ದಾರೆ. ನಗರಪಾಲಿಕೆ ಇರಬಹದು, ಅಶ್ರಯ ಇರಬಹುದು, ಅಥವಾ ಅಭಿವೃದ್ಧಿ ಪ್ರಾಧಿಕಾರಗಳು ಇರಹುದು. ಅದರೆ ಯಾವುದೇ ಸರ್ಕಾರದಲ್ಲಿ ಭೂಮಿಯನ್ನು ಬಿಟ್ಟು, ಕೆರೆಯೊಳಗೆ ಏನಾದರೂ ನಿವೇಶನಗಳನ್ನು ಕೊಟ್ಟಿದ್ದರೆ ಅದನ್ನು ಈವಾಗ ನೋಡುತ್ತಿದ್ದೇವೆ. ಇದು ಜನರಿಗೆ ಮಾಡುವಂಥ ಮೋಸ-ಅಲ್ಲವಾ? ಯಾವ ಪ್ರದೇಶದಲ್ಲಿ ಭೂಮಿಯೇ ಇಲ್ಲ, ಅ ಕೆರೆಯ ಪ್ರದೇಶದ ಒಳಗೆ ಪರಿಸರವನ್ನು ಕಾಪಾಡುವಂಥ ಪ್ರದೇಶವೆಂದು ಯಾವುದನ್ನು ಘೋಷಣೆ ಮಾಡಿದ್ದೇವೆ, ಕೇವಲ ಪ್ಲಾನ್ ಒಳಗಡೆ ಅದನ್ನು ನಿವೇಶನಗಳನ್ನಾಗಿ ಪರಿವರ್ತನೆ ಮಾಡಿ, ಸುಮಾರು 246 ನಿವೇಶನಗಳನ್ನು ರಚನೆ ಮಾಡಿ ಈಗಾಗಲೇ ಹಂಚಲಾಗಿದೆ ಮತ್ತು ಅವರಿಗೆ ಹಕ್ಕು ಪತ್ರಗಳನ್ನು ನೀಡಲಾಗಿದೆ. ಇದು ಮೋಸ ಅಲ್ಲವಾ?

ಅಧ್ಯಕ್ಷರು : ಕೆರೆ ಎಂದರೆ ಅಚ್ಚುಕಟ್ಟು ಇದೆಯೋ?

ಶ್ರೀ ಎ. ರಾಮದಾಸ್ : ಇಲ್ಲ, ನೀರು ಇರುವಂಥ ಕೆರೆ.

ಅಧ್ಯಕ್ಷರು : ಅಚ್ಚುಕಟ್ಟು ಇದೆಯೋ ಅಂದರೆ, ಕೆರೆ ಹತ್ತಿರ ಸಾಗು ಇದ್ದರೆ, ಅದು ಕೆರೆ ಅಂತ ಕರೆಯುತ್ತಾರೆ. ಸಾಗು ನಿಂತುಹೋಗಿಬಿಟ್ಟು ಕೆರೆಯಲ್ಲಿ ನೀರು ಸ್ಟೋರ್ ಮಾಡದೇ ಇದ್ದರೆ, ಬ್ರಿಜೆಟ್ಟ್ಯಾಂಕೆ ಅಂತ ಕರೆಯುತ್ತಾರೆ, ಆ ಲ್ಯಾಂಡ್‌ನ್ನು ಎಲ್ಲಾ ಫ್ಯಾಲೋ ಅಂತ ಕರೆಯುತ್ತಾರೆ. ಅದು ರೈತರಿಗೆ ಉಪಯೋಗವಾಗುತ್ತಿದ್ದ ಕೆರೆಯೋ?

ಶ್ರೀ ಎ. ರಾಮದಾಸ್ : ರೈತರಿಗೆ ಉಪಯೋಗುವಂಥ ಕೆರೆ. ಟೂರಿಸಂ ಡೆವೆಲಪ್‌ಮೆಂಟ್ ಕಾರ್ಪೊರೇಶನ್‌ನವರು ಅವರನ್ನು ಟೂರಿಸಂ ಸೇಂಟರ್ ಆಗಿ ಮಾಡಬೇಕು, ಪಕ್ಷಿಗಳು ಅಲ್ಲ. ಬೇರೇ ಬೇರೆ ಕಡೆಯಿಂದ ಬರುತ್ತದೆ. ಮಾನ್ಯ

ಸಚಿವರು ಕೂಡ ಅಲ್ಲಿಗೆ ಹೋಗಿ ನೋಡಿ ಅದನ್ನು ಅಭಿವೃದ್ಧಿ ಮಾಡುತ್ತೇವೆಂದು ಎಂದುಹೇಳಿ ಬಂದಿದ್ದಾರೆ. ಆ ಕೆರೆ ಪ್ರದೇಶದಲ್ಲಿ ಹಂಚಲಾಗಿದೆ. ಈ ವಿಚಾರದಲ್ಲಿ ಸರ್ಕಾರ ಜನರಿಗೆ ಮೋಸ ಮಾಡುವುದಲ್ಲವೇ? ಇದು ನೇರವಾಗಿ ಭ್ರಷ್ಟಾಚಾರ ಆಗಲಿಲ್ಲವೇನು ಎನ್ನುವಂಥಾದ್ದನ್ನು ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಚೆ ಪಡುತ್ತಿದ್ದೇನೆ. ಜೊತೆಗೆ.

ಅಧ್ಯಕ್ಷರು : ಬೇಗ ಮುಗಿಸಬೇಕಲ್ಲ.

ಒಬ್ಬರು ಮಾನ್ಯ ಸದಸ್ಯರು : ಈ ಸರ್ಕಾರದ ಮೇಲೆಅವಿಶ್ವಾಸ ಮಾಡುತ್ತಿದ್ದಾರೋ ಅಥವಾ ಹೋದ ಸರ್ಕಾರದ ಮೇಲೆ ಅವಿಶ್ವಾಸ ಮಾಡುತ್ತಿದ್ದಾರೊ ಎಂದು ಗೊತ್ತಾಗಲಿಲ್ಲ. ಹಿಂದಿನ ಸರ್ಕಾರ ಹಂಚಿದಂಥ ನಿವೇಶನಗಳಬಗ್ಗೆ ಈಗ ಮಾತನಾಡುತ್ತಿದ್ದಾರೆ. ನಮ್ಮ ಸರ್ಕಾರ ಬಂದನಂತರ ಯಾವ ಕಮಿಟಿಯೂ ರಚನೆಯೂಗಿಲ್ಲ, ನಿವೇಶನಗಳನ್ನು ಹಂಚಿಲ್ಲ

ಶ್ರೀ ಸಿದ್ದರಾಮಯ್ಯ : ಕೆರೆಯಲ್ಲಿ ಸೈಟುಗಳನ್ನು ಮಾಡಿ ಹಂಚಿದ್ದಾರಲ್ಲ, ಅದು ಒಂದು ವರ್ಷದ ಹಿಂದೆಯೇ ಮಾಡಿ ಹಂಚಿರುವುದು. ಅದನ್ನು ಸೈಟುಗಳನ್ನಾಗಿ ಮಾಡಿ ಕಾನೂನು ವಿರಿದ್ಧವಾಗಿ ಮಾಡಿದ್ದರೆ, ಯಾರು ಅಕ್ರಮ ಮಾಡಿದ್ದಾರೆ, ಅವರ ಮೇಲೆ ಕ್ರಮ ಕೆಗೆದುಕೊಳ್ಳ ಬೇಕು ಎಂದು ಡಿ.ಸಿ.ಯವರಿಗೆ ಈಗಾಗಲೆ ಸೂಚನೆಯನ್ನು ಕೊಟ್ಟಿದೆ. ಡಿ.ಸಿ.ಯವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ.

ಅಧ್ಯಕ್ಷರು : ರಾಮದಾಸ್, ಈಗ ಏನಾಗುತ್ತದೆ ಎಂದರೆ, ಈ ಸರ್ಕಾರದ ಮೇಲೆ ನೀವು ಅವಿಶ್ವಾಸವನ್ನು ಮಂಡಿಸಿದ್ದರೆ, ಅಷ್ಟೇ ಜನ ಡಿಫೆಂಡ್ ಮಾಡುತ್ತಾರೆ. ಹೋದಸಲ ಸರ್ಕಾರದ ಮೇಲೆ ಮಾಡಿದರೆ ಅವರೂ ಇವರ ಜೊತೆಗೆ ಸೇರಿಕೊಳ್ಳುತ್ತಾರೆ. ಅದ್ದಿಂದ ಅದನ್ನು ನಿಮಗೆ ನಾನು ಬಿಡುತ್ತೇನೆ.

ಶ್ರೀ ಎ. ರಾಮದಾಸ್ : ಸ್ವಾಮಿ, ಇವತ್ತು 43ಸಾವಿರ ಜನ ನಿವೇಶನಗಳಿಗೋಸ್ಕರ ಅರ್ಜಿಸಲ್ಲಿಸಿ ಕಾಯುತ್ತಿದ್ದಾರೆ. ಅದರೆ, ನ್ಯಾಯಾಲಯದಲ್ಲಿ ಕಟ್ಟಲೆಗಳು ಏನಿದೆ, ಅವುಗಳಿಗೆ ಸಂಭಂದ ಪಟ್ಟಂತೇ ಜನತಾದಳದ ಕೆಲವು ನಾಯಕರು ಏನಿದ್ದಾರೆ, ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡರು. ನಾನು ಸರ್ಕಾರದ ಮೇಲೆ ಆರೋಪ ಮಾಡತಕ್ಕ ವಿಚಾರ ಇಷ್ಟೆ. 43ಸಾವಿರ ಜನ ನಿವೇಶನಗಳಿಗೋಸ್ಕರ ಕಾದಿರುವಾಗ, ತಾವು ತಮ್ಮ ಪಕ್ಷದ ಕೆಲವು ಹಿರಿಯರು ನ್ಯಾಯಲಯದಲ್ಲಿ ಏನು ಮೊಕದ್ದಮೆಗಳನ್ನು ಹೂಡಲಾಗಿದೆ, ಅವುಗೆಳನ್ನು ವಿತ್‌ಡ್ರಾ ಮಾಡುವುದರ ಬಗ್ಗೆ ಏನೂ ಕಾಳಜಿಯನ್ನು ವಹಿಸಿಲ್ಲ, ಏನು ಕಾಳಜಿಯನ್ನು ವಹಿಸಿದ್ದೀರಿ? 43ಸಾವಿರ ಜನ 9ತಿಂಗಳಿಂದ ಹಣ ಕಟ್ಟಿ ನಿವೇಶನಗಳಿಗಾಗಿ ಕಾಯುತ್ತಿದ್ದಾರೆ. ಇದರ ಬಗ್ಗೆ ಕೋಟಿ ಕೋಟಿ ರೂಪಾಯಿ ಹಣ....

ಶ್ರೀ ಸಿದ್ದರಾಮಯ್ಯ : ರಾಮ್‌ದಾಸ್ ಅವರಿಗೆ ಮಾಹಿತಿಗೋಸ್ಕರ ಹೇಳುತ್ತೇನೆ. ಸೈಟುಗೋಸ್ಕರ ಯಾರು ಕೋರ್ಟಿಗೆ ಹೋಗಿದ್ದಾರೆ, ಇವರು ಮತ್ತು ಹಿಂದೆ ಅಧ್ಯಕ್ಷರು ಇದ್ದರಲ್ಲ, ಗೋವಿಂದರಾಜು ಅವರು. ಅವರು ನೀವು ಚೆನ್ನಾಗಿದ್ದಾಗ ಇದು ಅಗಿರುವುದಲ್ಲಾ? ಸೈಟು ಹಂಚುವುದಕ್ಕೆ ಹೋಗಿರೋದು.....

ಅಧ್ಯಕ್ಷರು : ನೀವು ಬೇಗ ಮುಗಿಸಿ. ನಾನು ಕೆಲವು ಹಿರಿಯ ಶಾಸಕರುಗಳಿಗೆ ವಾಗ್ದಾನ ಕೊಟ್ಟಿದ್ದೇನೇ, ಅದನ್ನು ಈಡೇರಿಸಬೇಕು.

ಶ್ರೀ ಬಿ.ಬಿ. ಶಿವಪ್ಪ : ಹಾಗಲ್ಲ ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ಹೇಳಿದರು. ನೀವು ಮತ್ತು ಹಿಂದಿನ ಅಧ್ಯಕ್ಷರು ಒಂದಾಗಿ ಇದ್ದಾಗ, ಚೆನ್ನಾಗಿದ್ದಾಗ

ಮಾಡಿದ ವಿಚಾರ ಇದು ಎಂದು. ಹಾಗಾದರೆ, ಅವರೇನು ಅವ್ಯವಹಾರ ಮಾಡಿದ್ದಾರೆ, ಅದನ್ನು ಮುಂದುವರೆಸಿಕೊಂಡು ಹೋಗುತ್ತೀರಾ. ನೀವು?

ಶ್ರೀ ಸಿದ್ದರಾಮಯ್ಯ : ಮಾಡಿದ ಅವ್ಯವಹಾರವನ್ನು ಮುಂದುವರೆಸಿರತಕ್ಕಂಥಾದ್ದು ಅಲ್ಲ, ಸೈಟುಗಳನ್ನು ಸರಿಯಾಗಿ ಫಾರ್ಮೇಶನ್ ಮಾಡಿಲ್ಲ, ನಾಗರೀಕ ಸೌಲಭ್ಯಗಳನ್ನು ಸರಿಯಾಗಿ ಕೊಟ್ಟಿಲ್ಲವೆಂದು ಅವರು ಕೋರ್ಟಿಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ, ನಾನು ಕ್ಲಿಯರ್ ಮಾಡುತ್ತೇನೆ. ಈಗ ಅವರು ಹೇಳಿದರು ಅವರ್ಯಾರೋ ಹಿಂದಿದ್ದವರ ಜೊತೆಯಲ್ಲಿ ಇವರು ಮಾಡಿದರು ಅಂತ. ಇವರಿಗೆ ಅದು ಗೊತ್ತಿದೆ. ಇವರು ಏನು ಮಾಡುತ್ತೀದ್ದಾರೆ? ಅದೇಲ್ಲಾ ಅನ್ಯಾಯವಾಗಿ ಹುಶಾರ್. ಬಾ ನನ್ನ ಜೊತೆ ಮಾತನಾಡು- ಅಂತ ಹೇಳಿದ್ದೀರಾ?

(ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಿದೆ ಎಂದರೆ.... ಹಿಂದೆ ಅವರು ಅಧ್ಯಕ್ಷರಾಗಿದ್ದಾಗ ಸೈಟುಗಳನ್ನು ಹಂಚುವುದಕ್ಕೆ ಹೋಗಿ, ನಿರ್ದೇಶನದಾರರು ಕೋರ್ಟಿಗೆ ಹೋಗಿ ಅದು ಸ್ಟೇ ತೇಗೆದುಕೊಂಡು ಬಂದಿದ್ದರು.

ಅಧ್ಯಕ್ಷರು : ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿದ್ಧರಾಮಯ್ಯ : ಜನತಾದಳದವರು ಹೋಗಿದ್ದಾರೆ, ಸ್ಟೇ ತಂದಿದ್ದಾರೆ ಎಂದು ಹೇಳಿದರೆ ಅದರಲ್ಲಿ ಅರ್ಥ ಏನಿದೆ?

ಅಧ್ಯಕ್ಷರು : ಆಯಿತು ಬಿಡಿ ಸಿದ್ಧರಾಮಯ್ಯನವರೇ, ನಾಳೆ ಉತ್ತರ ಹೇಳಿ. ರಾಮದಾಸ್‌ರವರೇ, ಈಗ ನೀವು ಕನ್‌ಕ್ಲೂಡ್ ಮಾಡಿ.

ಶ್ರೀ ಎ. ರಾಮದಾಸ್ : ಮೈಸೂರಿನ ಸ್ಯಾನಿಟೋರಿಯಂಗೆ ಭೇಟಿ ಕೊಟ್ಟಂಥ ಸಮಯದಲ್ಲಿ ಕೆಲವು ವಿಚಾರಗಳು ಬಂದಿದ್ದನ್ನು.....

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದ್ದಾರೆ. 'ನೀವು ಮಾತನಾಡುವುದಕ್ಕೆ ಬನ್ನಿ' ಅಂತ ನಾನು ಹೇಳಿದ್ದೇನೋ ಎಂದು ಹೇಳಿದ್ದಾರೆ ಅದು ರೇಕಾರ್ಡಿಗೆ ಹೋಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಓವರು ಇವತ್ತು ಚೆನ್ನಾಗಿದ್ದಾಗ ಮಾಡಿದ್ದು ಎಂದು ಹೇಳಬಹುದೇ ಇವರ ಬಗ್ಗೆ ಹೇಳಿದರೆ ಇವರಿಗೆ ಕೋಪ ಬರುತ್ತದೆ. ಇವರು ಇನ್ನೊಬ್ಬರ ಮೇಲೆ ಆರೋಪ ಮಾಡಬಹುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರು ಅಧ್ಯಕ್ಷರಾಗಿದ್ದಾಗ ಇದು ನಡೆದಿದ್ದು, ಇದರ ವಿರುದ್ದ ಕೆಲವರು ಕೋರ್ಟಿಗೆ ಹೋಗಿದ್ದಾರೆ. ಜನತಾದಳ ನಾಯಕರು ಕೋರ್ಟಿಗೆ ಹೋಗಿದ್ದಾರೆ ಎಂದು ಹೇಳಿದರೆ ಏನರ್ಥ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಮಾರುತಿರಾವ್ ಪವಾರ್ : ಇದು ನಡೆದಿರುವುದು ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಗೋವಿಂದರಾಜು ಅವರು ಅಧ್ಯಕ್ಷರಾಗಿದ್ದಾಗ ಅಲ್ಲ, ಮಾನ್ಯ ಸೋಮಸುಂದರಂ ಅವರು ಅದ್ಯಕ್ಷರಾಗಿದ್ದಾಗ. ದಯಮಾಡಿ ಇದನ್ನು ಕ್ಲಾರಿಫೈ ಮಾಡಿಕೊಳ್ಳಿ.

ಅಧ್ಯಕ್ಷರು : ಕೆಲವು ಮಾತುಗಳು ಕಡತಕ್ಕೆ ಹೋಗಿರೆ ಎಂದು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವಿಶ್ವಾಸ ನಿರ್ಣಯ ಮಂಡನೆ ಮಾಡಿದಾಗ. ಉತ್ತರ ಕೊಡುವುದಕ್ಕೆ ಅವಕಾಶವಿದೆ. ಇಲ್ಲಿ ಪ್ರತಿ ಹಂತದಲ್ಲೂ ಉತ್ತರ ಕೊಡುವುದಕ್ಕೆ ಎದ್ದುನಿಂತರೆ, ಅವಿಶ್ವಾಸ ನಿರ್ಣಯವಾಗುವುದಿಲ್ಲ. ಇವುಗಳಿಗೆಲ್ಲಾ ನಿಮ್ಮ ಸಭಾನಾಯಕರು ಉತ್ತರ ಕೊಡುತ್ತಾರೆ. ಇಂತಿಂಥಾದ್ದು ಆಗಿದೆ ಎಂದು ಹೇಳುತ್ತಿದ್ದಾರೆ. ಎಲ್ಲವೂ ಸರಿಯಾಗಿದ್ದರೆ. ನಾವೇಕೆ ಅವಿಶ್ವಾಸ ನಿರ್ಣಯ ತರಬೇಕಾಗಿತ್ತು.

ಅಧ್ಯಕ್ಷರು : ಈಗೇನು ಅಕ್ಷೇಪ ವ್ಯಕ್ತಿಮಾಡಿದ್ದೀರಿ, ನಾನು ಎಲ್ಲವನ್ನು ಕೇಳಿದ್ದೇನೆ. ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ಪದಗಳನ್ನು ಬಳಸಿದ್ದಾರೆಂದು ಗೊತ್ತಿದೆ. ಕಡತಗಳನ್ನು ತರಿಸಿಕೊಳ್ಳುತ್ತೇನೆ. ಯಾವುದು ಅಲ್ಲಿರುವುದಕ್ಕೆ ಯೋಗ್ಯ ಅಲ್ಲ,ಅದನ್ನು ತೆಗೆಸುತ್ತೇವೆ. ಯಾರಿಗೂ ಅನುಮಾನ ಬೇಡ. ಇನ್ನು ಎರಡು ನಿಮಿಷದಲ್ಲಿ ನೀವು ಮುಗಿಸಬೇಕು.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ತಾವು ಎಷ್ಟು ಹೇಳಿದರೂ ಅವರು ಮುಗಿಸುತ್ತಾ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರು ರಾಜೀನಾಮೆ ಕೊಡುವುದಕ್ಕೆ ಹೋಗಿದ್ದನ್ನು ಪ್ರಸ್ತಾರ ಮಾಡಲಿಲ್ಲವೆಂದು ಅವರಿಗೆ ಸಿಟ್ಟು ಬಂದಿದೆಯೋ ನಿಮಗೆ......

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಅರೋಗ್ಯ ಸಚಿವರು ಮೈಸೂರಿನ ಬಿ.ಕೆ. ಸ್ಯಾನಿಟೋರಿಯಂಗೆ ಹೋಗಿ, ವ್ಯವಸ್ಥಿತವಾದಂಥ ಪಾಕಶಾಲೆಯ ಉದ್ಘಾಟನೆ ಮಾಡಿ ಬಂದಿದ್ದಾರೆ. ಅಲ್ಲಿಗೆ ಭೇಟಿ ಕೊಟ್ಟು ಬಂದಿದ್ದಾರೆ. ಈ ಸರ್ಕಾರ ಬಂದನಂತರದಲ್ಲಿ ಅಲ್ಲಿಯ ಅಡಿಗೆ ಮನೆಯಲ್ಲಿ 5 ಲಕ್ಷ ರೂಪಾಯಿಗಳಲ್ಲಿ ಆ ಅಡಿಗೆ ಮನೆಯ ವ್ಯವಸ್ಥೆಯಾಗಿದೆ. ಅಲ್ಲಿ ಯಾರ ಕುಕ್ಕರ್ ಇತ್ತೋ, ಅದರ ಬಗ್ಗೆ 5 ಲಕ್ಷ ರೂಪಾಯಿಗಳ ವ್ಯವಸ್ಥೆಯಾಗಿದ್ದು, ಅದನ್ನು ವಿಸ್ತಾರ ಮಾಡಲಾಯಿತು. ಆದರೆ ಅದು 15 ದಿವಸಗಳಲ್ಲಿ ಸುಟ್ಟು ಹೋಗಿದೆ. ಇನ್ನೊಂದು ಕಾರ್ಯವನ್ನೇ ಮಾಡುತ್ತಾ ಇಲ್ಲ. ಆಲ್ಲಿ ದಾಖಲೆಗಳೇ ಇಲ್ಲ ಯಾವ ಕಂಪನಿಯಿಂದ ತಂದು ಇನ್‌ಸ್ಟಾಲ್ ಮಾಡಲಾಗಿದೆ, ಎಂಬುದೂ ಗೊತ್ತಿಲ್ಲ. ರಿಪೋರ್ಟ್ ಯಾರ ಮೇಲೆ ಕೊಡಬೇಕೆಂಬುದಕ್ಕೆ ದಾಖಲೆಗಳು ಇಲ್ಲ, ಇದು ಸರ್ಕಾರದ ಬೊಕ್ಕಸದ ಹಣ ಅಲ್ಲವೇ? ಇವತ್ತು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳಿಗೂ ಶವದ ಪೆಟ್ಟಿಗೆಗಳನ್ನು ಕೊಡುತ್ತಿದ್ದಾರೆ. ಈ ಶವದ ಪೆಟ್ಟಿಯ ಮೌಲ್ಯ ಒಂದೊಂದಕ್ಕೆ ಒಂದು ಲಕ್ಷದ ಹತ್ತುಸಾವಿರ ರೂಪಾಯಿಗಳು. ಮೈಸೂರಿನಲ್ಲಿ ಶವದ ಪೆಟ್ಟಿಗೆಯನ್ನು ಎಲ್ಲಾ ಆಸ್ಪತ್ರೆಗಳಿಗೆ ಕಳುಹಿಸಿಕೊಡಲಾಗಿದೆ. ಹಾಗೆಯೇ ಸ್ಯಾನಿಟೋರಿಯಂಗೂ ಕೂಡ ಎರಡು ಕಳುಹಿಸಿದ್ದಾರೆ.ಅದರ ಮೌಲ್ಯ 2 ಲಕ್ಷದ 30 ಸಾವಿರ ರೂಪಾಯಿಗಳು,. ಆದರೆ ಇವತ್ತು ಆಸ್ಪತ್ರೆಯ ದಾಖಲೆಗಳಲ್ಲಿ ಯಾವ ಕಂಪನಿಯಿಂದ ಬಂದಿದೆ ಎಂಬ ವಿಚಾರ ಇಲ್ಲ. ಜೊತೆಗೆ ಯಾವ ಏಜೆನ್ಸಿಯಿಂದ ಬಂದಿದೆ ಎಂಬ ವಿಚಾರವೂ ಅದರಲ್ಲಿ ಇಲ್ಲ. ಎರಡನೆಯದು ನಾನು ತಮ್ಮ ಮುಖಾಂತರ ಸಭಾನಾಯಕರನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಆಸ್ಪತ್ರೆಗಳಲ್ಲಿ 4 ಲಕ್ಷದ 80 ಸಾವಿರ ರೂಪಾಯಿಗಳ ಮೆಡಿಸನ್‌ಬೇಕೆಂದು ಇಂಡೆಂಟ್ ಮಾಡಿ 8 ತಿಂಗಳಾಗಿದೆ. ಸರ್ಕಾರ ಇದನ್ನು ಸರಬರಾಜು ಮಾಡಿದೆಯೇ? ಅದರ ಬದಲು ಇವತ್ತು ಸರ್ಕಾರ ಜನಸಾಮಾನ್ಯರಿಗೆ ಬೇಕಾದ ಮೆಡಿಸಿನ್ ಕೊಡುವದಕ್ಕಾಗದೇ. ಶವದ ಪೆಟ್ಟಿಗೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಜೊತೆಗೆ ಅಲ್ಲ Pyrolator ಎಂಬ ಒಂದು

ಇನ್‌ಸ್ಟ್ರುಮೆಂಟನ್ನು ಕಳುಹಿಸಿಕೊಟ್ಟಿದ್ದಾರೆ. ಅದರ ಬೆಲೆ 4 ಲಕ್ಷ ರೂಪಾಯಿಗಳು. ಒಂದೊಂದು ಆಸ್ಪತ್ರೆಗೆ 4 ಲಕ್ಷ ರೂಪಾಯಿಗಳ Pyrolator ಕಳುಹಿಸಿಕೊಟ್ಟಿದ್ದಾರೆ. ಒಂದು ಆಶ್ಚರ್ಯ. ಸನ್ಮಾನ್ಯ ಸಭಾನಾಯಕರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಆಸ್ಪತ್ರೆಗಳಲ್ಲಿ ಶವದ ಪೆಟ್ಟಿಗೆಗೆ ಇಂಡೆಂಟ್ ಮಾಡಿಲ್ಲ, ನಮಗೆ ಬೇಕು ಎಂದು ಅವರು ಬರೆದುಕೊಟ್ಟಿಲ್ಲ.

ಶ್ರೀ ಎನ್. ರಾಜಣ್ಣ : ಪಾಯಿಂಟ್ ಆಫ್ ಆರ್ಡರ್ Whether it is cold storage of just an ordinary box?

ಶ್ರೀ ಎ. ರಾಮದಾಸ್ : ಶವವನ್ನು ಪೆಟ್ಟಿಗೆಯಲ್ಲಿ ಹಾಕಿ, ಬೆಂಕಿ ಹಾಕುವಂಥ ಒಂದು ಇನ್‌ಸ್ಟ್ರುಮೆಂಟ್‌ಗೆ ಇಂಡೆಂಟ್ ಹಾಕಿಲ್ಲ, ಇದು ಬೇಕು ಎಂದು ಯಾವುದೇ ಆಸ್ಪತ್ರೆಯವರೂ ಇಂಡೆಂಟ್ ಹಾಕಿಲ್ಲ, ಆದರೂ ಒಂದೊಂದು ಆಸ್ಪತ್ರೆಗೆ ಲಕ್ಷಾಂತರ ರೂಪಾಯಿಗಳ ವೆಚ್ಚ ಮಾಡಿದ್ದಾರೆ. ಇದನ್ನು ಕಳುಹಿಸಿಕೊಡತಕ್ಕ ಅವಶ್ಯಕತೆ ಸರ್ಕಾರಕ್ಕೆ ಏನಿತ್ತು? ಇವತ್ತು ಇದರಲ್ಲ ನಡೆದಿರತಕ್ಕ ಅಕ್ರಮಗಳೇನು ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಭ್ರಷ್ಟಾಚಾರ ನಡದಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಅಲ್ಲಿ ಬಡ ಜನರು, ಕ್ಷಯ ರೋಗಿಗಳು ಅಲ್ಲಿ ಬರುತ್ತಿದ್ದಾರೆ. 4 ಲಕ್ಷ 80 ಸಾವಿರ ರೂಪಾಯಿಗಳ ಮೆಡಿಸನ್ ಬೇಕು ಎಂದು 7 ತಿಂಗಳ ಹಿಂದೆ ಇಂದೆಂಟ್ ಹಾಕಿದರೂ ಕೂಡ ಕೊಡುವಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ, ಜನಸಾಮಾನ್ಯರ ಹಿತವನ್ನು ನೀವೇನು ಕಾಪಾಡುತ್ತೀರಿ. ಅದಕ್ಕೋಸ್ಕರ ನೀವು ಜನಗಳ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಜೊತೆಗೆ ಎಲ್ಲಾ ಜಿಲ್ಲಾ ಕೇಂದ್ರಗಳಿಗೂ ಇಂತಹ ಇನ್‌ಸ್ಟ್ರುಮೆಂಟನ್ನು ಕಳುಹಿಸಿರುವುದರಿಂದ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದುರುವಂತಾದ್ದು ತಮ್ಮ ಸರ್ಕಾರದಲ್ಲಿ ಆಗಿದೆ. ಇದರ ಅವಶ್ಯಕತೆ ಏನಿತ್ತು? ಆದ್ದರಿಂದ, ನಾವು ಅವರ ರಾಜಿನಾಮೆಯನ್ನು ಕೇಳುತ್ತಿದ್ದೇವೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಸಭಾನಾಯಕರಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಜೊತೆಗೆ ಒಂದು ಸಂಗತಿಯನ್ನು ಹೇಳುತ್ತೇನೆ. ಆರೋಗ್ಯ ಇಲಾಖೆ ಯಾವ ರೀತಿ ನಡೆಯುತ್ತಾ ಇದೆಯೆಂದರೆ. ಬೆಂಕಿಗೆ ಹಾಕುವಂಥ ರೋಗಿಗಳ ಡಬ್ಬವನ್ನು ತೆಗೆದುಕೊಂಡು ಹೋಗಿ ಹೊರಗಡೆ ಬಿಸಾಡುವಂತಾದ್ದಕ್ಕೆ 18 ಜನ ಕೆಲಸಗಾರರು ಇದ್ದಾರೆ. ಆದರೆ, ಅವರ ಈ ಡಬ್ಬಗಳನ್ನು ದೂರ ಹಾಕದೇ, ಅಲ್ಲಿಯೇ ಪಕ್ಕದಲ್ಲಿ ಬಿಸಾಡಿ. ಉಗುಳುವಂಥ ಡಬ್ಬವನ್ನು ತೊಳೆದು, ಐಸ್‌ಕ್ರೀಂ ಅಂಗಡಿಗಳಿಗೆ ಕೊಟ್ಟಿರತಕ್ಕ ನಿದರ್ಶನಗಳು ಮೈಸೂರು ಜಿಲ್ಲೆಯಲ್ಲಿ ನಡೆದಿವೆ. ಸಂಬಂಧಪಟ್ಟ ಇಚ್ಛೆಪಡುತ್ತೇನೆ. ಜನರಲ್ ಆಸ್ಪತ್ರೆಯ ಪಕ್ಕದಲ್ಲಿ ಕೊಳೆತು ನಾರುತ್ತಿರುವ, ಕೊಳಕು ಪದಾರ್ಥಗಳು ಬಿದ್ದಿದ್ದು, ಜನಸಾಮಾನ್ಯರ ಬಗ್ಗೆ ಇವರಿಗೆ ಕಾಳಜಿ ಇಲ್ಲವೆ, ಇರುವಂಥ ಸರ್ಕಾರ ಮುಂದುವರಿಯಬೇಕೇ? ಜನಗಳಲ್ಲಿ ಈ ಸರ್ಕಾರದ ಬಗ್ಗೆ ವಿಶ್ವಾಸವಿಲ್ಲವೆಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ. ಮತ್ತೆ ನಾಳೆ ಬೆಳಗ್ಗೆ ಪುನಃ 9-00 ಗಂಟೆಗೆ ಸಮಾವೇಶಗೊಳ್ಳುತ್ತದೆ.

ಸದನವು ಸಂಜೆ 7-57ಕ್ಕೆ ಮುಕ್ತಾಯವಾಗಿ. 9-8-95 ರಂದು ಬೆಳಗ್ಗೆ 9-00 ಗಂಟೆಗೆ. ಸಮಾವೇಶಗೊಳ್ಳಲು ತೀರ್ಮಾನಿಸಿತು.

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)